ತೈತ್ತಿರೀಯೋಪನಿಷದ್ಭಾಷ್ಯ ವಾರ್ತಿಕಗಳು

ಪ್ರಕಾಶಕರು :
ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ.
1991

रामचरितमानस में रोग तथा उनकी चिकित्सा

काशी हिन्दू विश्वविद्यालय

की

पी-एच० डी० उपाधि के लिये प्रस्तुत

शोधप्रबन्ध

निर्देशक :-

डा० कामताप्रसाद शुक्ल, पी-एच० डी०

रीडर-कायचिकित्सा,

चिकित्सा विज्ञान संस्थान

काशी हिन्दू विश्वविद्यालय, वाराणसी।

सह-निर्देशक :-

डॉ० विजयपाल सिंह, एम० ए० (हिन्दी-संस्कृत),

पी-एच० डी०, डी० लिट्०

आचार्य एवं अध्यक्ष-हिन्दी विभाग,

काशी हिन्दू विश्वविद्यालय, वाराणसी।

सुदामा दूबे

प्रस्तुतकर्त्ता

सुदामा दूबे

शोधछात्र

हिन्दी विभाग

पंजीयन सख्या १५४७१२

काशी हिन्दू विश्वविद्यालय, वाराणसी।

१९८३

ಮುನ್ನುಡಿ

ಅಧ್ಯಾತ್ಮಪ್ರಕಾಶಕಾರ್ಯಾಲಯದ ಸಂಸ್ಥಾಪಕರಾದ ಬ್ರಹ್ಮೀಭೂತ ಶ್ರೀಶ್ರೀ ಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳವರು "ಅನುಶಾಂಕರವೇದಾಂತ ಗ್ರಂಥಾವಳಿ' ಎಂಬ ಮಾಲಿಕೆಯಲ್ಲಿ ಶ್ರೀ ಸುರೇಶ್ವರಾಚಾರ್ಯರವರ 'ನೈಷ್ಕರ್ಮ್ಯ ಸಿದ್ಧಿ'ಯನ್ನು ಕನ್ನಡ ಅನುವಾದಸಮೇತ ಸಿದ್ಧಗೊಳಿಸಿ ಕಾರ್ಯಾಲಯದ ಮೂಲಕ ಬಹಳ ಹಿಂದೆಯೇ ಪ್ರಕಾಶಗೊಳಿಸಿದ್ದರು. ಅನಂತರ ಅವರಿಗೆ ಶ್ರೀ ಸುರೇಶ್ವರರ ಉಳಿದ ಕೃತಿಗಳಾದ ತೈತ್ತಿರೀಯವಾರ್ತಿಕ, ಬೃಹದಾರಣ್ಯಕವಾರ್ತಿಕಗಳನ್ನೂ ಕನ್ನಡಿಸಿ ಪ್ರಕಟಿಸಬೇಕೆಂಬ ಉದ್ದೇಶವಿತ್ತು. ಆದರೆ ಅದು ನೆರವೇರಲಿಲ್ಲ. ಈಚೆಗೆ ಶ್ರೀ ಶೃಂಗೇರಿದಕ್ಷಿಣಾಮ್ನಾಯ ಶಾರದಾಪೀಠದವರು ಬೃಹದಾರಣ್ಯಕವಾರ್ತಿಕವನ್ನು ಕನ್ನಡಾನುವಾದಸಹಿತ ಭಾಗಭಾಗವಾಗಿ ಹೊರಕ್ಕೆ ತಂದಿರುತ್ತಾರೆ. ಈ ಸತ್ಕಾರ್ಯವು ಇನ್ನೂ ಮುಂದುವರೆಯುತ್ತಿದೆ.

ಈ ನಡುವೆ 'ಅಧ್ಯಾತ್ಮಪ್ರಕಾಶ'ಮಾಸಪತ್ರಿಕೆಯಲ್ಲಿ ಸ್ವತಂತ್ರಪುಟಗಳಾಗಿ ಪ್ರಕಟವಾಗುತ್ತಿದ್ದ ಮಹಾನಾರಾಯಣೋಪನಿಷತ್ತು ಪೂರೈಸಿದ ಅನಂತರ ಅದರ ಸ್ಥಾನದಲ್ಲಿ ಮತ್ತೊಂದು ಗ್ರಂಥವನ್ನು ಅಳವಡಿಸಬೇಕಾಗಿ ಬಂದದ್ದರಿಂದ ತೈತ್ತಿರೀಯವಾರ್ತಿಕವನ್ನು ಸರಳಾನುವಾದದೊಡನೆ ಪ್ರಕಟಿಸಲು ಆರಂಭಿಸಿ 1991ನೇ ಫೆಬ್ರವರಿ ಸಂಚಿಕೆಗೆ ಪೂರ್ಣಗೊಳಿಸಲಾಯಿತು. ಪತ್ರಿಕೆಯ ಫಾರಂಗಳ ಪುನರ್ಮುದ್ರಣರೂಪವಾಗಿ ಈ ಗ್ರಂಥವು ಈಗ ಹೊರಬಂದು ವಾಚಕರ ಕರಕಮಲವನ್ನು ಅಲಂಕರಿಸಿದೆ.

ಶ್ರೀ ಸುರೇಶ್ವರಾಚಾರ್ಯರ ವಾರ್ತಿಕಗಳು ಬಹಳ ಕ್ಲಿಷ್ಟವಾಗಿಯೂ ಅರ್ಥಪೂರ್ಣವಾಗಿಯೂ ಇದ್ದುಕೊಂಡಿದ್ದು ಶಂಕರವೇದಾಂತಸಿದ್ಧಾಂತವನ್ನು–ವಜ್ರವನ್ನು ಸಾಣೆಹಿಡಿದಂತೆ– ಚೆನ್ನಾಗಿ ಆಳವಾಗಿ ಚಿಂತನೆಮಾಡಿ ವಿಷಯಗಳನ್ನು ಅನುಭವಪೂರ್ಣವಾಗಿ ಹೊರಪಡಿಸುತ್ತವೆ. ಶಬ್ದಪ್ರಯೋಗಗಳು, ಶ್ಲೋಕಗಳ ಸರಣಿ, ನಿಗೂಢವಾದ ಅರ್ಥತಾತ್ಪರ್ಯಗಳಿಂದ ಕೂಡಿರುವ ಈ ವಾರ್ತಿಕಗಳು ಭಾಷ್ಯಗ್ರಂಥಗಳ ಅಂತರಂಗವನ್ನು ಚೆನ್ನಾಗಿ ವಿಶದೀಕರಿಸಿ ಜಿಜ್ಞಾಸುಗಳನ್ನು ಉದ್ಧಾರ ಮಾಡುತ್ತವೆ. ಆದರೆ ಇವುಗಳನ್ನು ಅರಗಿಸಿಕೊಳ್ಳಲು ಸಾಮಾನ್ಯರಿಂದ ಆಗಲಾರದು. ಚೆನ್ನಾಗಿ ಶಾಸ್ತ್ರಜ್ಞಾನವಿದ್ದು ಗುರುಸಂಪ್ರದಾಯಗಳನ್ನು ಅನುಸರಿಸುವ ಸೂಕ್ಷ್ಮಮತಿಗಳಾದ ಮುಮುಕ್ಷುಗಳಿಗೆ ಮಾತ್ರ ಇವು ಕರಗತವಾಗಬಲ್ಲವು. ಆದ್ದರಿಂದ ಸಾಧಾರಣಮಟ್ಟದ ಪಾಂಡಿತ್ಯವುಳ್ಳ ನಾನು ಈ ಅನುವಾದವನ್ನು ಯಾವ ಪಂಡಿತರ ಸಹಾಯವೂ ಇಲ್ಲದೆ ಸಿದ್ಧಗೊಳಿಸಬೇಕಾಗಿ ಬಂದದ್ದರಿಂದ

ಯಥಾಶ್ರುತಾನುವಾದವನ್ನು ಮಾಡಿ ಹೆಚ್ಚಿನ ವಿಚಾರಗಳನ್ನು ವಿದ್ವಾಂಸರ ಪರಿಶೀಲನೆಗೇ ಒಪ್ಪಿಸಿರುತ್ತೇನೆ. ಅನುವಾದಕಾಲಕ್ಕೆ ಸಾಕಷ್ಟು ಆನಂದಗಿರೀಯ ವ್ಯಾಖ್ಯಾನದ ಸಹಾಯವನ್ನೂ ಪಡೆದಿರುತ್ತೇನೆ. ಹೀಗಿದ್ದರೂ ಅನುವಾದದಲ್ಲಿ ದೋಷಗಳೇನಾದರೂ ಕಂಡುಬಂದಲ್ಲಿ ಪ್ರಾಜ್ಞರಾದವರು ತಿಳಿಸಿ ಉಪಕರಿಸಬೇಕಾಗಿ ಬೇಡುತ್ತೇನೆ.

ತೈತ್ತಿರೀಯೋಪನಿಷದ್ಭಾಷ್ಯದ ಮೇಲೆ ನಮ್ಮ ಪೂಜ್ಯಗುರುಗಳು ಆನಂದವಲ್ಲಿ-ಭೃಗುವಲ್ಲಿಗಳಿಗೆ 'ಭಾಷ್ಯಾರ್ಥವಿಮರ್ಶಿನೀ' ಎಂಬ ಸಂಸ್ಕೃತವ್ಯಾಖ್ಯಾನವನ್ನೂ ಬರೆದು ಪ್ರಕಾಶಗೊಳಿಸಿದ್ದಾರೆ. ವಾರ್ತಿಕಾರ್ಥನಿರ್ಣಯಕ್ಕೆ ಈ ವಿಮರ್ಶಿನೀವ್ಯಾಖ್ಯಾನವೂ ಸಹಾಯಕವಾಗಬಹುದೆಂತ ಭಾವಿಸಿರುತ್ತೇನೆ. ವಿದ್ವಾಂಸರು ಈ ಸಂಗತಿಯನ್ನು ಪರಿಶೀಲಿಸಬೇಕಾಗಿ ಬೇಡುತ್ತೇನೆ.

ಕನ್ನಡದಲ್ಲಿ ತೈತ್ತಿರೀಯೋಪನಿಷದ್ಭಾಷ್ಯವಾರ್ತಿಕವು ಬೇರೆಲ್ಲಿಯೂ ಪ್ರಕಟವಾಗಿರುವಂತೆ ಕಂಡುಬಂದಿಲ್ಲ. ಆದ್ದರಿಂದ ಈ ಅನುವಾದವು ವಾರ್ತಿಕಾಭ್ಯಾಸಿಗಳಿಗೆ ಕಿಂಚಿತ್ತಾದರೂ ಸಹಾಯಕವಾಗಬಹುದೆಂತ ಆಶಿಸುತ್ತೇನೆ.

ಶ್ರೀಶಂಕರಭಗವತ್ಪಾದರವರ ಸಾಕ್ಷಾತ್ ಶಿಷ್ಯರಾದ ಶ್ರೀ ಸುರೇಶ್ವರಾಚಾರ್ಯರವರ ಕೃತಿಯೊಂದನ್ನು ಕನ್ನಡಿಸುವ ಮೂಲಕ ಅಳಿಲುಸೇವೆಯನ್ನು ಮಾಡಲು ಅನುಗ್ರಹಿಸಿರುವ ಶ್ರೀ ಭಗವತ್ಪಾದಶಂಕರಾಚಾರ್ಯಸದ್ಗುರುಗಳನ್ನು ವಂದಿಸಿ ಈ ಮುನ್ನುಡಿಯನ್ನು ಪೂರ್ಣಗೊಳಿಸುತ್ತೇನೆ.

ಇತಿ– ಸಜ್ಜನ ವಿಧೇಯ,

ತಾ|| 5-2-1991 ಲೇಖಕ.

ವಿಷಯಾನುಕ್ರಮಣಿಕೆ

ತೈತ್ತಿರೀಯೋಪನಿಷದ್ಭಾಷ್ಯವಾರ್ತಿಕಗಳು

ಮಂಗಳ

ಗುರುವಂದನೆ

ಶಾಂತಿಪಾಠವಿವರಣೆ

ಶೀಕ್ಷಾಧ್ಯಾಯ

ಸಂಹಿತೋಪಾಸನೆ

ಮೇಧಾಕಾಮನಿಗೆ ಜಪ

ಶ್ರೀಕಾಮನಿಗೆ ಮಂತ್ರಗಳು

ವ್ಯಾಹೃತಿಬ್ರಹ್ಮೋಪಾಸನೆ

ಮನೋಮಯಾತ್ಮನ ಉಪಾಸನೆ

ಪಾಂಕ್ತೋಪಸನೆ

ಓಂಕಾರೋಪಾಸನೆ

ಸ್ವಾಧ್ಯಾಯಪ್ರವಚನಗಳು

ತ್ರಿಶಂಕುವಿನ ಆರ್ಷದರ್ಶನ

ಶಿಷ್ಯಾನುಶಾಸನ

ಉಪಸಂಹಾರ

ಬ್ರಹ್ಮವಲ್ಲಿ

ಉಪೋದ್ಘಾತ

ಭೃಗುವಲ್ಲಿ

॥ ಓಮ್ ॥

ಶ್ರೀ ಸುರೇಶ್ವರಾಚಾರ್ಯ ವಿರಚಿತ

ತೈತ್ತಿರೀಯೋಪನಿಷದ್ಭಾಷ್ಯವಾರ್ತಿಕಗಳು

ಮಂಗಳ

ಸತ್ಯಂ ಜ್ಞಾನಮನಂತಮೇಕಮಮಲಂ ಧ್ವಸ್ತಾಂಧಕಾರಂ ಪರಂ
ನಿರ್ದ್ವೈತಂ ಹೃದಿ ಪದ್ಮಮಧ್ಯನಿಲಯಂ ನಿಃಶೇಷಧೀಸಾಕ್ಷಿಣಮ್ ।
ವೇದಾಂತೋಪನಿವಿಷ್ಟಬೋಧವಿಷಯಂ ಪ್ರತ್ಯಕ್ತಯಾ ಯೋಗಿನಾಂ
ಭಕ್ತ್ಯಾ ತಂ ಪ್ರಣಿಪತ್ಯ ವೇದಶಿರಸೋ ವಕ್ಷ್ಯಾಮಿ ಸದ್ವಾರ್ತಿಕಮ್ ॥

೧. ಸತ್ಯಜ್ಞಾನಾನಂತಸ್ವರೂಪವೂ ಏಕವೂ ದೋಷರಹಿತವೂ (ಅಜ್ಞಾನವೆಂಬ) ಕತ್ತಲೆಯನ್ನು ನಾಶಗೊಳಿಸಿರುವದೂ ದ್ವೈತವಿಲ್ಲದ್ದೂ ಹೃದಯಕಮಲ ಮಧ್ಯದಲ್ಲಿ ವಾಸಿಸುತ್ತಿರುವದೂ ಎಲ್ಲಾ ಬುದ್ಧಿವೃತ್ತಿಗಳಿಗೂ ಸಾಕ್ಷಿಯಾಗಿರುವದೂ ವೇದಾಂತಗಳಲ್ಲಿ ಅಡಗಿರುವ ತಿಳಿವಳಿಕೆಗೆ ಗೋಚರವಾಗತಕ್ಕದ್ದೂ ಯೋಗಿಗಳಿಗೆ ಅಂತರಂಗದಲ್ಲಿ (ಕಾಣಬರತಕ್ಕದ್ದೂ) ಆದ ಪರಬ್ರಹ್ಮವನ್ನು ಭಕ್ತಿಯಿಂದ ನಮಸ್ಕರಿಸಿ ಉಪನಿಷತ್ತಿಗೆ (ತೈತ್ತಿರೀಯೋಪನಿಷತ್ತಿನ ಮೂರು ವಲ್ಲಿಗಳಿಗೆ) ಶ್ರೇಷ್ಠವಾದ ವಾರ್ತಿಕವನ್ನು (ರಚಿಸಿ) ಹೇಳುವೆನು.

ಗುರುವಂದನೆ

ಯಸ್ಯೇದಂ ಸಕಲಾಮಲೇಂದುಕಿರಣಪ್ರಖ್ಯೈರ್ಯಶೋ ರಶ್ಮಿಭಿಃ
ವ್ಯಾಪ್ತಂ ಯಶ್ಚ ಕೃಪಾಲುತಾಪರವಶಶ್ಚಕ್ರೇ ಹಿತಂ ದುಃಖಿನಾಮ್ ।
ಯದ್ವಾಣೀ ಕುಲಿಶಾವರುಗ್ಣಮತಯಃ ಪೇತುರ್ದಿಶಃ ತಾರ್ಕಿಕಾಃ
ಭಕ್ತ್ಯಾ ಪೂಜ್ಯತಮಂ ಪ್ರಣಮ್ಯ ತಮಹಂ ತದ್ಭಾಷ್ಯನೀತೌ ಯತೇ ॥

೨. ಜಗತ್ತೆಲ್ಲವೂ ಯಾವ ಮಹಾಮಹಿಮರಾದ ಭಾಷ್ಯಕಾರರ–ಸಂಪೂರ್ಣವಾಗಿ ಮೋಡ, ಮಂಜು– ಮುಂತಾದ ಅಡೆತಡೆಗಳಿಲ್ಲದ ಸ್ವಚ್ಛವಾದ ಚಂದ್ರರಶ್ಮಿಗಳಂತಿರುವ–ಯಶೋರೂಪವಾದ ಕಿರಣಗಳಿಂದ ವ್ಯಾಪ್ತವಾಗಿರುವದೋ ಯಾರು ಕೃಪಾಪರವಶರಾಗಿ ಸಂಸಾರದುಃಖಿತರಾದವರ ಹಿತಕ್ಕಾಗಿ (ಭಾಷ್ಯಗಳನ್ನು) ರಚಿಸಿದರೋ ಮತ್ತು ಯಾರ ವಾಕ್ಯರತ್ನಗಳೆಂಬ ವಜ್ರಾಯುಧದ ಏಟುಗಳಿಂದ ಗಾಯಗೊಂಡ ಬುದ್ಧಿಯುಳ್ಳ ತಾರ್ಕಿಕರು ದಿಕ್ಕಾಪಾಲಾಗಿ ಬಿದ್ದುಹೋದರೋ ಅಂಥ ಪೂಜ್ಯತಮರಾದ (ಗುರುವರ್ಯರನ್ನು) ಭಕ್ತಿಯಿಂದ ನಮಸ್ಕರಿಸಿ ಅವರ ಭಾಷ್ಯದ ವ್ಯಾಖ್ಯಾನವನ್ನು ಮಾಡಲು ಯತ್ನಿಸುವೆನು.

ಗ್ರಂಥಾರಂಭ

ತೈತ್ತಿರೀಯಕಸಾರಸ್ಯ ಮಯಾಚಾರ್ಯಪ್ರಸಾದತಃ |
ವಿಸ್ಪಷ್ಟಾರ್ಥರುಚೀನಾಂ ಹಿ ವ್ಯಾಖ್ಯೇಯಂ ಸಂಪ್ರಣೀಯತೇ ||

೩. ತೈತ್ತಿರೀಯಶಾಖೆಗೆ ಸೇರಿದ ಉಪನಿಷತ್ತುಗಳ ಭಾಷ್ಯ(ಸಾರ)ಕ್ಕೆ, ಗುರುಗಳ ಅನುಗ್ರಹವನ್ನು ಪ್ರಾರ್ಥಿಸಿ, ಆ ಭಾಷ್ಯದ ವಿಶೇಷವಾದ ಹಾಗೂ ಖಚಿತವಾದ ಅರ್ಥವನ್ನು ಬಯಸುವವರಿಗಾಗಿ ಈ ವ್ಯಾಖ್ಯಾನವನ್ನು ನಾನು (ವಾರ್ತಿಕರೂಪದಲ್ಲಿ) ರಚಿಸುವೆನು.

ದುರಿತಕ್ಷಯಹೇತೂನಿ ನಿತ್ಯಾನಿ ಬ್ರಾಹ್ಮಣೇ ಯಯುಃ |
ಕಾಮ್ಯಾನಿ ಚೇಹ ಕರ್ಮಾಣಿ ದೃಷ್ಟಾದೃಷ್ಟಫಲಾನಿ ತು ||
ವಿದ್ಯಾ ಪ್ರಸ್ತೂಯತೇಽಥೋರ್ಧ್ವಂ ಯಥಾಭೂತಾರ್ಥಬೋಧಿನೀ |
ಕರ್ಮೋಪಾದಾನಹೇತೂಂಸ್ತಾನ್ ಸೈವೋಚ್ಛೇತುಮಲಂ ಯತಃ ||

೪–೫. ಪಾಪಗಳನ್ನು ಪರಿಹರಿಸಿಕೊಳ್ಳುವದಕ್ಕಾಗಿ ನಿತ್ಯವೂ ಮಾಡಬೇಕಾದ, ಹಾಗೂ ಇಷ್ಟಾರ್ಥಪ್ರಾಪ್ತಿಸಾಧನವಾದ– ಎಂದರೆ ದೃಷ್ಟಾದೃಷ್ಟಫಲಗಳನ್ನು ಕೊಡುವವುಗಳಾದ ಕರ್ಮಗಳನ್ನು ಹಿಂದಿನ ಬ್ರಾಹ್ಮಣಭಾಗಗಳಲ್ಲಿ ತಿಳಿಸಿದ್ದಾಗಿದೆ. ಇನ್ನುಮುಂದೆ ಯಥಾಭೂತ– ಎಂದರೆ ಪರಮಾರ್ಥವಾದ ವಸ್ತುವನ್ನು ತಿಳಿಸುವ ವಿದ್ಯೆಯನ್ನು (ಪ್ರತಿಪಾದಿಸುವ) (ವೇದಭಾಗ)ವನ್ನು ವಿವರಿಸಲಾಗುವದು. ಏಕೆಂದರೆ ಕರ್ಮಗಳನ್ನು ಸ್ವೀಕರಿಸುವದಕ್ಕೆ ಕಾರಣವಾದ ಅವಿದ್ಯಾದಿಗಳನ್ನು ಕಿತ್ತುಹಾಕಲು ಅದೇ (ವಿದ್ಯೆಯೇ) ಸಮರ್ಥವಾಗಿರುತ್ತದೆಯಲ್ಲವೆ ?

ವಿವರಣೆ : ಮೀಮಾಂಸಕರ ಮತದಂತೆ ವೈದಿಕಕರ್ಮಗಳು ನಿತ್ಯ, ನೈಮಿತ್ತಿಕ, ಕಾಮ್ಯ– ಎಂದು ಮೂರು ವಿಧ. ಸಂಧ್ಯಾವಂದನಾದಿಗಳು ನಿತ್ಯಕರ್ಮಗಳು ; ಅಮಾವಾಸ್ಯೆ, ಸಂಕ್ರಮಣ, ಗ್ರಹಣಾದಿಗಳಲ್ಲಿ ಮಾಡುವಂಥವು ನೈಮಿತ್ತಿಕಗಳು ; ಮಳೆಬರುವದಕ್ಕಾಗಿ, ಪುತ್ರಸಂತಾನಕ್ಕಾಗಿ ಇತ್ಯಾದಿ ಕಾರಣಗಳಿಂದ ಮಾಡುವಂಥವು ದೃಷ್ಟಫಲವುಳ್ಳ ಕಾಮ್ಯಕರ್ಮಗಳು. ಸ್ವರ್ಗಫಲಪ್ರಾಪ್ತಿಗಾಗಿ ಮಾಡುವ ಜ್ಯೋತಿಷ್ಟೋಮಾದಿಯಾಗಗಳು ಅದೃಷ್ಟಫಲವುಳ್ಳ ಕಾಮ್ಯಕರ್ಮಗಳು. ಇಂಥವುಗಳನ್ನೆಲ್ಲ ವೇದದ ಕರ್ಮಕಾಂಡಭಾಗದಲ್ಲಿ ತಿಳಿಸಲಾಗಿದೆ. ಆದರೆ ಈ ಯಾವ ಕರ್ಮಗಳಿಂದಲೂ ನಿತ್ಯವಾದ ಮೋಕ್ಷವು ಸಿಗಲಾರದು. ಮೋಕ್ಷಕ್ಕೆ ಸಾಧನವಾಗಿರುವದು ಬ್ರಹ್ಮವಿದ್ಯೆಯೊಂದೇ ಆಗಿದೆ. ಅದು ಕರ್ಮಗಳನ್ನು ಮಾಡುವದಕ್ಕೆ ಕಾರಣವಾದ ಕಾಮವನ್ನೂ ಕಾಮಕ್ಕೂ ಮೂಲವಾದ ಅವಿದ್ಯೆಯನ್ನೂ ತೆಗೆದುಹಾಕಲು ತಕ್ಕದ್ದಾಗಿದೆ. ಆದ್ದರಿಂದ

ಮೋಕ್ಷವನ್ನು ಬಯಸುವವರಿಗಾಗಿ ವೇದಗಳ ಕಡೆಯಭಾಗಗಳಾದ ವೇದಾಂತಗಳಲ್ಲಿ ಬ್ರಹ್ಮವಿದ್ಯೆಯನ್ನು ಪ್ರಸ್ತಾಪಿಸಲಾಗಿದೆ.

ಸ ಯಥಾಕಾಮು ಇತ್ಯೇವಂ ಯೋಽಕಾಮುಶ್ಚೇತಿ ಸಾದರಮ್ |
ಕಾಮಾಕಾಮ್ಯೈಕಹೇತೂ ನೋ ಬಂಧಮೋಕ್ಷೌ ಶ್ರುತಿರ್ಜಗೌ ||

೬. ಶ್ರುತಿಯು "ಸ ಯಥಾಕಾಮಃ" ಎಂದು ಕಾಮವನ್ನು ಬಂಧಕಾರಣವಾಗಿಯೂ "ಯೋ ಅಕಾಮಃ" ಎಂಬುದಾಗಿ ಕಾಮವಿಲ್ಲದಿರುವಿಕೆಯನ್ನು ಮುಕ್ತಿಕಾರಣವಾಗಿಯೂ ಹೇಳಿರುತ್ತದೆ.

ಅಪವಿದ್ಧದ್ವಯೋ ತತ್ವೇ ಸರ್ವದೈವಾತ್ಮರೂಪಕೇ |
ವಿಪರ್ಯಯೋಽನಭಿಜ್ಞಾನಾತ್ ತತಃ ಕಾಮಃ ಕ್ರಿಯಾಸ್ತತಃ ||

೭. ಯಾವಾಗಲೂ (ಜಿಜ್ಞಾಸುವಿನ) ಆತ್ಮರೂಪವೇ ಆಗಿದ್ದು ಕಾಮ-ಅಕಾಮಗಳೆಂಬ ದ್ವಂದ್ವಗಳನ್ನು ದಾಟಿರುವ ಬ್ರಹ್ಮವಸ್ತುವಿನಲ್ಲಿ ಅಜ್ಞಾನದಿಂದಾಗಿರುವ ತಪ್ಪುತಿಳಿವಳಿಕೆಯಿಂದ ಕಾಮವೂ ಕರ್ಮಗಳೂ ಸಂಭವಿಸಿರುತ್ತವೆ.

ವಿವರಣೆ : ಬ್ರಹ್ಮವು ಅನಾತ್ಮವಲ್ಲ. ಆದ್ದರಿಂದ ಆತ್ಮನಾಗಿರುವ ಅದು ನಿತ್ಯಪ್ರಾಪ್ತವೇ ಆಗಿದೆ. ಆದರೆ ಹಾಗೆಂತ ತಿಳಿವಳಿಕೆಯಿಲ್ಲದವರ ದೃಷ್ಟಿಯಿಂದ ನೋಡಿದರೆ- ಅದೇ ತನಗಿಂತ ಬೇರೆಯಾಗಿಯೂ ಅಪ್ರಾಪ್ಯವಾಗಿಯೂ ಭಿನ್ನಭಿನ್ನ ವಸ್ತುಗಳಾಗಿಯೂ ಕಂಡುಬರುತ್ತದೆ. ಕನಸಿನಲ್ಲಿ ಮಾವಿನಹಣ್ಣನ್ನು ಕಂಡವನಿಗೆ ಅದನ್ನು ತಿನ್ನಬೇಕೆಂಬ ಆಸೆಯಾಗಬಹುದಷ್ಟೆ! ಆದರೆ ಆ ಹಣ್ಣೆಂಬುದು ಕನಸು ಕಾಣುವವನ ಸ್ವರೂಪಕ್ಕಿಂತ ಬೇರೆಯಲ್ಲ. ಆದರೂ ಆ ತತ್ತ್ವವು ಆಗ ತಿಳಿಯದೆ ಹಣ್ಣಿನ ಬಯಕೆಯೂ ಅದರ ಪ್ರಾಪ್ತಿಗಾಗಿ ಕರ್ಮವೂ ಸಂಭವಿಸುತ್ತದೆ. ಅದರಂತೆಯೇ ಆತ್ಮನನ್ನರಿಯದೆ ಇರುವಾಗ ಆ ನಿಮಿತ್ತವಾಗಿ ಕಾಮ-ಕರ್ಮಗಳು ಸಂಭವಿಸುವವು, ಇದೇ ಸಂಸಾರವು- ಎಂದರ್ಥ.

ಯದಜ್ಞಾನಾತ್ ಪ್ರವೃತ್ತಿರ್ಯಾ ತಜ್ಜ್ಞಾನಾತ್ ಸಾ ಕುತೋ ಭವೇತ್ |
ತಸ್ಮಾತ್ ಸರ್ವಪ್ರವೃತ್ತೀನಾಮಲಂ ವಿದ್ಯೋಪಶಾಂತಯೇ ||

೮. ಯಾವ ವಸ್ತುವನ್ನರಿಯದ್ದರಿಂದ ಅದರ ಪ್ರಾಪ್ತಿಗಾಗಿ ಪ್ರವೃತ್ತಿಯುಂಟಾಗುವದೋ ಅದು ತಿಳಿಯಲ್ಪಟ್ಟದ್ದೇ ಅದರ ಪ್ರವೃತ್ತಿಯು ಹೇಗಾದೀತು? (ಆಗಲಾರದು). ಆದ್ದರಿಂದ ಎಲ್ಲಾ ಪ್ರವೃತ್ತಿ (ವ್ಯಾಪಾರ)ಗಳಿಗೂ ನಿಲುಗಡೆಯೆಂದರೆ ಆತ್ಮವಿದ್ಯೆಯೇ.

ವಿವರಣೆ : ಕಪ್ಪೆಯಚಿಪ್ಪನ್ನು ಅರಿಯದೆ ಬೆಳ್ಳಿಯೆಂದು ತಪ್ಪಾಗಿ ತಿಳಿದಾಗ ಬೆಳ್ಳಿಯ ಆಸೆಯಿಂದ ಪ್ರವೃತ್ತಿಯುಂಟಾಗುವದು. ಆದರೆ ಅದು ಬೆಳ್ಳಿಯಲ್ಲ,

ಕಪ್ಪೆಯಚಿಪ್ಪು'– ಎಂದು ಯಥಾರ್ಥಜ್ಞಾನವಾದರೆ ಬೆಳ್ಳಿಗಾಗಿ ಪ್ರವರ್ತಿಸುವದು ನಿಂತೇಹೋಗುವದು. ಹೀಗೆ ಪ್ರವೃತ್ತಿಗಳಿಗೆ ನಿಲುಗಡೆಯು ಯಥಾರ್ಥಜ್ಞಾನವೇ –ಎಂದಾಯಿತು. ಏಕೆಂದರೆ ಜ್ಞಾನವುಂಟಾದಕೂಡಲೆ ಅಜ್ಞಾನವು ಹೋಗಿಬಿಡುವದರಿಂದ ಕಾಮುಕರ್ಮಗಳು ಇಲ್ಲವಾಗುವವು.

ಮೋಕ್ಷಾರ್ಥೀ ನ ಪ್ರವರ್ತೇತ ತತ್ರ ಕಾಮ್ಯನಿಷಿದ್ಧಯೋಃ |
ನಿತ್ಯನೈಮಿತ್ತಿಕೇ ಕುರ್ಯಾತ್ ಪ್ರತ್ಯವಾಯಜಿಹಾಸಯಾ ||
ಇತಿ ಮೀಮಾಂಸಕಂಮನ್ಯೈಃ ಕರ್ಮೋಕ್ತಂ ಮೋಕ್ಷಸಾಧನಮ್ |
ಪ್ರತ್ಯಾಖ್ಯಾಯಾತ್ಮವಿಜ್ಞಾನಂ ತತ್ರ ನ್ಯಾಯೇನ ನಿರ್ಣಯಃ ||

೯–೧೦. ಮೋಕ್ಷವನ್ನು ಬಯಸುವವನು ಕಾಮ್ಯ–ನಿಷಿದ್ಧಕರ್ಮಗಳಲ್ಲಿ ತೊಡಗಬಾರದು. ಆದರೆ ಪ್ರತ್ಯವಾಯ(ದೋಷ)ಪರಿಹಾರಕ್ಕಾಗಿ ನಿತ್ಯನೈಮಿತ್ತಿಕ ಕರ್ಮಗಳನ್ನು ಮಾಡುತ್ತಿರಬೇಕು– ಹೀಗೆಂದು ಮೀಮಾಂಸಕರು ತಾವೆಂಬ ಅಹಂಕಾರವುಳ್ಳವರು ಕರ್ಮವು ಮೋಕ್ಷಸಾಧನವೆಂದು ವಾದಿಸಿರುತ್ತಾರೆ. ಅದನ್ನು ತೆಗೆದುಹಾಕಿ ನ್ಯಾಯಪೂರ್ವಕವಾಗಿ ಆತ್ಮಜ್ಞಾನವೇ ಮೋಕ್ಷಕಾರಣವೆಂದು ನಿಶ್ಚಯಿಸಲಾಗಿದೆ.

ವಿವರಣೆ : ಮೀಮಾಂಸಕರಲ್ಲಿ ಕೆಲವರು ಹೇಳುವದೇನೆಂದರೆ: ಮೋಕ್ಷಕ್ಕಾಗಿ ಜ್ಞಾನವೇನೂ ಅವಶ್ಯವಿಲ್ಲ. ಏಕೆಂದರೆ ತನ್ನಲ್ಲಿ ತಾನು ನೆಲೆನಿಲ್ಲುವದೇ ಮೋಕ್ಷವೆಂದಾದಲ್ಲಿ ಅದು ಹೀಗೂ ಸಂಭವಿಸಬಹುದು. ಮೋಕ್ಷಾರ್ಥಿಯು ಕಾಮ್ಯ–ಪ್ರತಿಷಿದ್ಧಕರ್ಮಗಳನ್ನು ಕೈಬಿಟ್ಟಲ್ಲಿ ಶುಭಾಶುಭಫಲಗಳುಂಟಾಗುವದಿಲ್ಲ. ಇನ್ನು ನಿತ್ಯನೈಮಿತ್ತಿಕಗಳನ್ನು ಮಾಡುತ್ತಲೇಇದ್ದರೆ ಪ್ರತ್ಯವಾಯದೋಷವೂ ಬರುವದಿಲ್ಲ, ಪ್ರತ್ಯವಾಯವೆಂದರೆ ಮಾಡಬೇಕಾದದ್ದನ್ನು ಮಾಡದೆ ಬಿಟ್ಟರೆ ಬರುವ ದೋಷ. ಉದಾಹರಣೆಗೆ ಕಚೇರಿಯಲ್ಲಿ ಕೆಲಸದಮೇಲೆ ಹಾಜರಾಗಿದ್ದರೂ ಹಾಜರಿ ಪುಸ್ತಕದಲ್ಲಿ ರುಜುಮಾಡದೆ ಇದ್ದರೆ ತಪ್ಪಾಗುವದು. ಇದನ್ನು ಪ್ರತ್ಯವಾಯಕ್ಕೆ ಹೋಲಿಸಬಹುದು. ಹಾಗೆ ದೋಷವು ಬಾರದೆಇರಲು ನಿತ್ಯನೈಮಿತ್ತಿಕಗಳನ್ನು ಮಾಡುತ್ತಿರಬೇಕು. ಇನ್ನು ಪ್ರಾರಬ್ಧಕರ್ಮವನ್ನು ಅನುಭವಿಸುತ್ತಿರುವದರಿಂದಲೇ ಕ್ಷಯಗೊಳಿಸಿಕೊಳ್ಳಬಹುದು. ಹೀಗೆ ಎಲ್ಲಾ ವಿಧವಾದ ಕರ್ಮಗಳಿಂದಲೂ ಬಿಡುಗಡೆಯಾಗಲು ಪ್ರಯತ್ನವೇ ಇಲ್ಲದೆ ಮೋಕ್ಷವು ತಾನೇ ದೊರಕಲೇಬೇಕು. ಹೀಗಿರುವಲ್ಲಿ ಮೋಕ್ಷಕ್ಕೆ ಬ್ರಹ್ಮವಿದ್ಯೆಯ ಅವಶ್ಯಕತೆಯೇನಿದೆ ? ಎಂಬ ಆಕ್ಷೇಪವನ್ನು ಈಗ ಪರಿಹರಿಸಲಾಗುವದು.

ನೈತದೇವಂ ಭವೇನ್ನ್ಯಾಯ್ಯಂ ವಿರುದ್ಧಫಲದಾಯಿನಾಮ್ |
ಸಂಭವಾತ್ ಕರ್ಮಣಾಂ ಪುಂಸೋ ಭೂಯಸಾಂ ಶಾಸ್ತ್ರದರ್ಶನಾತ್ ||

ಅನಾರಬ್ಧಫಲಾನೀಹ ಸನ್ತಿ ಕರ್ಮಾಣಿ ಕೋಟಿಶಃ |
ತದ್ಯ ಇಹೇತಿ ವಚಸೋ ಗಮ್ಯತಾಂ ಕರ್ಮಣಾಂ ಸ್ಥಿತಿಃ ||

೧೧-೧೨. (ಕರ್ಮಗಳಿಂದಲೇ ಮೋಕ್ಷವಾಗುವದೆಂಬುದು) ಹೊಂದುವ ದಿಲ್ಲ. ಏಕೆಂದರೆ ನ್ಯಾಯವಿರುದ್ಧವಾಗಿರುತ್ತದೆ. ಹೇಗೆಂದರೆ ವಿರುದ್ಧಫಲಗಳನ್ನು ಉಂಟುಮಾಡುವ ಅನೇಕ ಕರ್ಮಗಳು (ಸಂಚಿತವಾದವುಗಳು) ಮನುಷ್ಯರಿಗೆ ಇದ್ದುಕೊಂಡಿರುವ ಸಂಭವವಿದೆ. ಹಾಗೆಂದು ಶಾಸ್ತ್ರದಲ್ಲಿಯೂ ಕಂಡುಬಂದಿದೆ. ಇನ್ನು ಫಲವನ್ನು ಕೊಡಲು ಆರಂಭವೇ ಆಗದಿರುವ ಕೋಟಿಗಟ್ಟಲೆ ಕರ್ಮಗಳೂ ಇವೆ. 'ತದ್ಯ ಇಹ....' ಎಂಬ ಶ್ರುತಿವಚನದಿಂದ ಸೂಚಿಸಲ್ಪಡುವ ಕರ್ಮಗಳ ಇರುವಿಕೆಯು ಇದನ್ನು (ತಿಳಿಸುತ್ತದೆ).

ವಿವರಣೆ : ಮನುಷ್ಯನು ಮಾಡಿದ ಕರ್ಮಗಳೆಲ್ಲವೂ ಒಂದೇ ಜನ್ಮದಲ್ಲಿ ಒಟ್ಟಿಗೆ ಫಲವನ್ನು ನೀಡಿ ಕ್ಷಯಿಸಿಹೋಗಲಾರವು. ಹಾಗಿದ್ದರೆ ಕರ್ಮಕ್ಷಯದಿಂದ ಮುಕ್ತಿಯೆಂದು ಹೇಳಬಹುದಾಗಿತ್ತು. ಆದರೆ ಪಾಪ-ಪುಣ್ಯಗಳ ರೂಪವಾದ ವಿರುದ್ಧಫಲಗಳುಳ್ಳ ಕರ್ಮಗಳು ಒಟ್ಟಿಗೆ ಸವೆಯಲಾರವು. ಮತ್ತು ಫಲಾರಂಭ ಮಾಡದೆ ಇರುವ ಕರ್ಮಗಳೆಷ್ಟಿವೆಯೋ ಲೆಕ್ಕಕ್ಕೆ ಸಿಗುವದಿಲ್ಲ. ಶ್ರುತಿಯಲ್ಲಿ ಕೂಡ ಒಳ್ಳೆಯ ಕರ್ಮವನ್ನು ಮಾಡಿದವನು ಒಳ್ಳೆಯ ಬ್ರಾಹ್ಮಣಾದಿಜನ್ಮಗಳನ್ನೂ ಕೆಟ್ಟಕರ್ಮಗಳನ್ನು ಮಾಡಿದವನು ಹಂದಿ-ಮೊದಲಾದ ಜನ್ಮಗಳನ್ನೂ ಹೊಂದುವ ನೆಂದು ತಿಳಿಸಿರುವದರಿಂದ ಒಂದೇ ಹುಟ್ಟಿನಲ್ಲಿ ವಿರುದ್ಧಫಲಗಳನ್ನು ಕೊಡುವ ಕರ್ಮಗಳೆಲ್ಲವೂ ಒಟ್ಟಿಗೆ ಫಲವನ್ನು ಕೊಟ್ಟು ಕ್ಷಯಿಸಿಹೋಗುವವು- ಎಂದು ಹೇಳುವದು ನ್ಯಾಯವಿರುದ್ಧವಾಗುವದು. ಏಕಕಾಲದಲ್ಲಿ ಯಾವ ಜೀವನೂ ನಾಯಿಯಾಗಿಯೂ ಮಹಾರಾಜನಾಗಿಯೂ ಇದ್ದುಕೊಂಡು ಫಲವನ್ನು ಅನು ಭವಿಸಲಾರನು. ಆದ್ದರಿಂದ ಒಂದೇ ಜನ್ಮದಲ್ಲಿ ಸಕಲಕರ್ಮಕ್ಷಯವಾಗುವ ದೆಂಬುದು ನ್ಯಾಯವಿರುದ್ಧವಾಗಿದೆ.

ನ ಚೈಕದೇಹೇ ಭೋಗೋಽಸ್ತಿ ಬ್ರಹ್ಮಹತ್ಯಾಶ್ವಮೇಧಯೋಃ |
ವಿರುದ್ಧಫಲಹೇತುತ್ವಾನ್ಮೂಢಸಾತ್ತ್ವಿಕದೇಹಯೋಃ ||
ಸಪ್ತಜನ್ಮಾನುಗಂ ಕಾರ್ಯಮೇಕಸ್ಯಾಪೀಹ ಕರ್ಮಣಃ |
ಶ್ರೂಯತೇ ಧರ್ಮಶಾಸ್ತ್ರೇಷು ಕಿಮುತಾನೇಕಕರ್ಮಣಾಮ್ ||

೧೩-೧೪. ಬ್ರಹ್ಮಹತ್ಯೆಯೆಂಬ ಮಹಾಪಾಪಕರ್ಮದ ಫಲವನ್ನೂ ಅಶ್ವ- ಮೇಧಯಜ್ಞವೆಂಬ ಮಹಾಪುಣ್ಯಕರ್ಮದ ಫಲವನ್ನೂ ಒಂದೇ ದೇಹದಲ್ಲಿ ಅನು ಭವಿಸುವದು ಆಗಲಾರದು. ಏಕೆಂದರೆ ಪಾಪಫಲವು ಮೂಢದೇಹದಲ್ಲಿಯೂ ಪುಣ್ಯಫಲವು ಸಾತ್ತ್ವಿಕದೇಹದಲ್ಲಿಯೂ ಭೋಗಿಸತಕ್ಕವುಗಳಾಗಿದ್ದು ಪರಸ್ಪರ

ವಿರುದ್ಧಗಳಾಗಿವೆ. ಇನ್ನು ಒಂದೇ ಕರ್ಮದಫಲವೇ ಏಳುಜನ್ಮಗಳವರೆಗೂ ಮುಂದು ವರೆದು ಬರುವದೆಂದೂ ಧರ್ಮಶಾಸ್ತ್ರಗಳಲ್ಲಿ ಹೇಳಿರುತ್ತದೆ. ಹೀಗಿರುವಲ್ಲಿ ಅನೇಕ ಕರ್ಮಗಳು ಅನೇಕಜನ್ಮಗಳನ್ನು ಆರಂಭಮಾಡುವವೆಂದು ಹೇಳುವದೇನಿದೆ ?

ಅನಾರಬ್ಧೇಷ್ಟಕಾರ್ಯಾಣಾಂ ನಿತ್ಯಂ ಚೇತ್ ಧ್ವಸ್ತಯೇ ಮತಮ್ ।
ನೈವಂ ಸ್ವಾತ್ಮಾ ಕ್ರಿಯಾಹೇತುಂ ಯತೋಽನರ್ಥಂ ನಿಹನ್ತಿ ತತ್ ॥
ಪಾಪಸ್ಯ ಕರ್ಮಣಃ ಕಾರ್ಯಂ ಪ್ರತ್ಯವಾಯಗಿರೋಚ್ಯತೇ ।
ನಿತ್ಯೈರ್ವಿರೋಧಾತ್ತದ್ಧಾನಿಃ ನ ತ್ವಿಷ್ಟಫಲದಾಯಿನಃ ॥

೧೫-೧೬. ನಿತ್ಯಕರ್ಮಗಳು ಫಲಾರಂಭವನ್ನೇ ಮಾಡದಿರುವ ಸಂಚಿತ ಕರ್ಮಗಳನ್ನು ನಾಶಮಾಡುವದರಿಂದ ಮೋಕ್ಷಹೇತುಗಳು ಎನ್ನಬಹುದಲ್ಲವೆ ? ಎಂದರೆ ಹಾಗಲ್ಲ. ಕ್ರಿಯಾಹೇತುವಲ್ಲದ ಆತ್ಮನನ್ನು ಅವು ಪ್ರಾಪ್ತಿಮಾಡಿಕೊಡ ಲಾರವು. ಏಕೆಂದರೆ ನಿತ್ಯಕರ್ಮಗಳು ಪ್ರತ್ಯವಾಯವೆಂಬ ಅನರ್ಥವನ್ನು ಕಳೆಯು ವವು– ಎಂದೇ ಒಪ್ಪಲಾಗಿದೆ. ಪಾಪಕರ್ಮಗಳ ಫಲವನ್ನು 'ಪ್ರತ್ಯವಾಯ' ಎಂಬ ಮಾತಿನಿಂದ ಕರೆಯುತ್ತಾರೆ. ನಿತ್ಯಕರ್ಮಗಳಿಗೂ ಪ್ರತ್ಯವಾಯಕ್ಕೂ ವಿರೋಧ ವಿರುವದರಿಂದ ಅದು ನಿತ್ಯಕರ್ಮದಿಂದ ನಾಶವಾಗಬಹುದು. ಆದರೆ ಅನಾರಬ್ಧ ಫಲವುಳ್ಳ ಸಂಚಿತವಾದ ಶುಭಕರ್ಮವನ್ನು ನಿತ್ಯಕರ್ಮವು ಎಂದಿಗೂ ಕಳೆಯ ಲಾರದು. ಏಕೆಂದರೆ ಅವೆರಡಕ್ಕೆ ವಿರೋಧವಿಲ್ಲ.

ಕಾಮಶ್ಚ ಕರ್ಮಣೋ ಹೇತುಃ ತಸ್ಯೋಚ್ಛಿತ್ತೇರ್ನ ಸಂಭವಃ ।
ಪ್ರತ್ಯಗ್ಬೋಧಮೃತೇ ಯಸ್ಮಾದಸಮ್ಯಗಿದಮುಚ್ಯತೇ ॥

೧೭. ಕರ್ಮಕ್ಕೆ ಕಾರಣವು ಕಾಮವು. ಪ್ರತ್ಯಗಾತ್ಮನ ಅರಿವುಂಟಾಗದೆ ಅದು ನಾಶವಾಗುವ ಸಂಭವವಿಲ್ಲ. ಆದ್ದರಿಂದ (ಕಾಮವು ನಾಶವಾಗದೆ ಕರ್ಮಗಳು ನಿಶ್ಶೇಷವಾಗಿ ತೊಲಗಲಾರವಾದ್ದರಿಂದ) ನೀವು ಹೇಳುವದು ಸರಿಯಾಗಿಲ್ಲ.

ಯದ್ಯನ್ಯನಾತ್ಮಫಲಂ ತಸ್ಮೈ ಕರ್ಮ ಸರ್ವಂ ವಿಧೀಯತೇ ।
ಆಪ್ತತ್ವಾದಾತ್ಮನಃ ಕರ್ಮ ನೈವ ಸ್ಯಾದಾಪ್ತಯೇ ತತಃ ॥

೧೮. (ಮುಕ್ತಿಯು) ಆತ್ಮನಿಗಿಂತ ಬೇರೆಯಾದ ಫಲವೆಂದಾಗಿದ್ದರೆ ಅದಕ್ಕಾಗಿ ಎಲ್ಲಾ ಕರ್ಮಗಳನ್ನೂ ವಿಧಿಸಬಹುದಾಗಿತ್ತು. ಆದರೆ ಹಾಗಿಲ್ಲ. ಆತ್ಮನು ನಿತ್ಯಪ್ರಾಪ್ತನಾಗಿಯೇ ಇರುವದರಿಂದ ಅವನ ಪ್ರಾಪ್ತಿ(ರೂಪವಾದ ಮುಕ್ತಿ)ಗೆ ಕರ್ಮವು ಬೇಕೇಇರುವದಿಲ್ಲ.

ನಿತ್ಯಾನಾಂ ಚಾಕ್ರಿಯಾಽಭಾವಃ ಪ್ರತ್ಯವಾಯಸ್ತತಃ ಕುತಃ ।
ನ ಹ್ಯಭಾವಾದ್ ಭವೇದ್ಭಾವೋ ಮಾನಂ ಯಸ್ಮಾನ್ನ ವಿದ್ಯತೇ ॥

೧೯. ನಿತ್ಯಕರ್ಮಗಳನ್ನು ಮಾಡದೆ ಇರುವದೆಂಬುದು ಅಭಾವರೂಪವಾಗಿದೆ. ಆದ್ದರಿಂದ ಪ್ರತ್ಯವಾಯವೆಂಬ ದೋಷವು ಆದರಿಂದ ಹುಟ್ಟುವದು ಹೇಗಾದೀತು ? ಏಕೆಂದರೆ ಅಭಾವ(ಇಲ್ಲದ್ದರಿಂದ)ದಿಂದ ಭಾವವು (ಇರುವದು) ಹುಟ್ಟುತ್ತದೆ– ಎಂದರೆ ಅದಕ್ಕೆ ಪ್ರಮಾಣವೇ ಇರುವದಿಲ್ಲ.

ವಿವರಣೆ : ನಿತ್ಯಕರ್ಮಗಳನ್ನು ಮಾಡದಿದ್ದರೆ ಪ್ರತ್ಯವಾಯವೆಂಬ ದೋಷವು ಹುಟ್ಟುವದೆಂದು ಮೀಮಾಂಸಕರು ಹೇಳುತ್ತಾರೆ. ಮನುಸ್ಮೃತಿಯಲ್ಲೂ 'ಅಕುರ್ವನ್ ವಿಹಿತಂ ಕರ್ಮ' ಎಂಬ ಶ್ಲೋಕದಲ್ಲಿ ಈ ಸೂಚನೆಯಿದೆ. ಆದರೆ ಈ ಸಂದರ್ಭದಲ್ಲಿ ನಿತ್ಯಕರ್ಮಗಳ ಮಾಡದಿರುವಿಕೆ– ಎಂಬ ಅಭಾವದಿಂದ ಪ್ರತ್ಯವಾಯವೆಂಬ ಭಾವಪದಾರ್ಥವು ಹುಟ್ಟುತ್ತದೆ– ಎಂದು ಅಕ್ಷರಾರ್ಥಮಾಡಿದರೆ ಪ್ರಮಾಣವಿರುದ್ಧವಾಗುವದು. ಏಕೆಂದರೆ ಅಭಾವದಿಂದ ಭಾವವು ಹುಟ್ಟುವದು ಎಲ್ಲಿಯೂ ಕಂಡಿಲ್ಲ. ಆದ್ದರಿಂದ ಹಿಂದೆ ಮಾಡಿದ್ದ ಪಾಪಗಳಿಂದ ಬಂದೊದಗುವ ಪ್ರತ್ಯವಾಯವೆಂಬ ದೋಷಕ್ಕೆ ಈಗ ನಿತ್ಯಕರ್ಮಗಳನ್ನು ಮಾಡದೆ ಇರುವದೆಂಬುದು ನಿಮಿತ್ತವು– ಎಂದರ್ಥಮಾಡಿದರೆ ಸರಿಯಾಗುತ್ತದೆ. ಮನುಸ್ಮೃತಿ ವಾಕ್ಯಕ್ಕೂ ಅಕುರ್ವನ್–ಎಂಬಲ್ಲಿ ವಿಹಿತಕರ್ಮಗಳನ್ನು ಮಾಡದೆಇರುವ ನಿಮಿತ್ತದಿಂದ ಮನುಷ್ಯನು ಹಾಳಾಗುವನು– ಎಂದರ್ಥಮಾಡಬೇಕು. ಹೀಗೆ ನಿತ್ಯಾಕರಣವು ಹೇತುವಲ್ಲವಾದ್ದರಿಂದ ಅದು ಪ್ರತ್ಯವಾಯವನ್ನುಂಟುಮಾಡಲಾರದು. ಆದ್ದರಿಂದ ಪ್ರಯತ್ನವಿಲ್ಲದೆ ಮೋಕ್ಷವು ಸಿಗುವದು–ಎಂಬ ವಾದವು ಸರಿಯಲ್ಲ.

ಪೂರ್ವೋಪಚಿತಕರ್ಮಭ್ಯಃ ತಸ್ಮಾತ್ ಕರ್ತಾರಮೇತಿ ಯಾ ।
ಪ್ರತ್ಯವಾಯಕ್ರಿಯಾ ತಸ್ಯಾ ಲಕ್ಷಣಾರ್ಥಃ ಶತಾ ಭವೇತ್ ॥

ನಿತ್ಯಾನಾಮಕ್ರಿಯಾ ಯಸ್ಮಾತ್ ಲಕ್ಷಯಿತ್ವೈವ ಸತ್ವರಾ ।
ಪ್ರತ್ಯವಾಯಕ್ರಿಯಾಂ ತಸ್ಮಾತ್ ಲಕ್ಷಣಾರ್ಥೇ ಶತಾ ಭವೇತ್ ॥

ಸರ್ವಪ್ರಮಾಣಕೋಪಃ ಸ್ಯಾದಭಾವಾತ್ ಭಾವಸಂಭವೇ ।
ತಸ್ಮಾದಯತ್ನತಃ ಸ್ಥಾನಮಾತ್ಮನೀತ್ಯತಿ ಪೇಲವಮ್ ॥

೨೦–೨೨. ಆದ್ದರಿಂದ ಹಿಂದೆ ಮಾಡಿದ ಕರ್ಮಗಳಿಂದ ಕರ್ತೃವನ್ನು ಬಂದು ಸೇರುವ ಪ್ರತ್ಯವಾಯವೆಂಬ ಕ್ರಿಯೆಯನ್ನು 'ಶತೃ ಎಂಬ ಪ್ರತ್ಯಯವು ಲಕ್ಷಣಾರ್ಥದಲ್ಲಿ ಸೂಚಿಸುತ್ತಿದೆ. ನಿತ್ಯಕರ್ಮಗಳನ್ನು ಮಾಡದಿರುವಿಕೆಯೆಂಬುದನ್ನು ನೆಪವಾಗಿಟ್ಟುಕೊಂಡು ಪ್ರತ್ಯವಾಯಕ್ರಿಯೆಯು ಕೂಡಲೆ (ಕರ್ತೃವನ್ನು) ಸೇರುವದು– ಎಂಬಿದನ್ನೂ ವರ್ತಮಾನಕಾಲಸೂಚಕವಾದ ಶತೃಪ್ರತ್ಯಯವು ತಿಳಿಸುತ್ತದೆ. (ಹಾಗಿಲ್ಲವಾದರೆ) ಅಭಾವದಿಂದ ಭಾವವುಂಟಾಗುವದೆಂದಾಗಿ ಎಲ್ಲಾ ಪ್ರಮಾಣಗಳಿಗೂ ವಿರೋಧವಾಗುವದು. ಆದ್ದರಿಂದ ಏನೂ ಪ್ರಯತ್ನವಿಲ್ಲದೆ

(ಕರ್ಮಗಳ ವಿನಿಯೋಗದಿಂದಲೇ) ಮೋಕ್ಷವು ಸಿಗುತ್ತದೆ ಎಂದರೆ ಹುಡುಗಾಟಿಕೆಯ ಮಾತಾಗುವದು.

ವಿವರಣೆ : ಮನುಸ್ಮೃತಿಯ ಶ್ಲೋಕದಲ್ಲಿ 'ಅಕುರ್ವನ್ ವಿಹಿತಂ ಕರ್ಮ' ಎಂಬಲ್ಲಿ ಅಕುರ್ವನ್– ಎಂದು ವರ್ತಮಾನಕಾಲವಾಚಕವಾದ 'ಶತೃ' ಎಂಬ ಪ್ರತ್ಯಯವಿದೆ. ವ್ಯಾಕರಣನಿಯಮದಂತೆ ಅಕುರ್ವನ್–ಮಾಡದೆ ಇರುವವನಾಗಿ ಎಂದರ್ಥ. ಈ ಮಾಡದೆಇರುವಿಕೆಯೆಂಬುದು ಅಭಾವವಾದ್ದರಿಂದ ಇದು ಪ್ರತ್ಯವಾಯಃವೆಂಬ ದೋಷಕ್ಕೆ ಕಾರಣವಾಗುವದಿಲ್ಲ. ಇದನ್ನು ಹಿಂದಿನ ವಿವರಣೆಯಲ್ಲಿ ತಿಳಿಸಿದೆ. ಪ್ರತ್ಯವಾಯಫಲವು ಕರ್ತೃಗಾಮಿಯಾದ್ದರಿಂದ ಅದು ಕರ್ತೃವು ಹಿಂದೆ ಮಾಡಿದ್ದ ಕರ್ಮಗಳ ಕಾರಣದಿಂದಾಗಿದೆ. ಅದನ್ನೇ 'ಅಕುರ್ವನ್' ಎಂಬ ಶತೃಪ್ರತ್ಯಯವುಳ್ಳ ಶಬ್ದವೂ ಸೂಚಿಸುತ್ತದೆ. ಆದ್ದರಿಂದ ನಿತ್ಯಕರ್ಮಗಳ ಅನುಷ್ಠಾನದಿಂದ ಪ್ರತ್ಯವಾಯಪರಿಹಾರವೆಂಬುದು ಸಿದ್ಧವಾದರೂ "ಮೋಕ್ಷಕ್ಕಾಗಿ ಏನೇನೂ ಪ್ರಯತ್ನಮಾಡಬೇಕಿಲ್ಲ ; ವಿದ್ಯೆಯನ್ನು ಪಡೆದುಕೊಳ್ಳುವ ಆವಶ್ಯಕತೆಯಿಲ್ಲ– ಎಂಬಿದು ತಪ್ಪುಸಿದ್ಧಾಂತವಾಗುವದು" ಎಂದಭಿಪ್ರಾಯ.

ನಿರ್ಧೂತಾತಿಶಯಾ ಪ್ರೀತಿಃ ಕರ್ಮಹೇತುರಿತಿ ತ್ವಯಾ |
ಯದಭಾಣಿ ತದನ್ಯಾಯ್ಯಂ ಯಥಾ ತದಭಿಧೀಯತೇ ||

೨೩. (ಪೂರ್ವಪಕ್ಷಿಯು) ನಿರ್ಧೂತಾತಿಶಯಾ– ಎಂದರೆ ನಿರತಿಶಯವಾದ ಆನಂದವೆಂಬುದೇ ಸ್ವರ್ಗವು– ಅದು ಕರ್ಮಸಾಧ್ಯವಾದ್ದರಿಂದ ಕರ್ಮವೇ ಮೋಕ್ಷಕಾರಣವು– ಎಂದು ಹೇಳಿದ್ದನಲ್ಲವೆ ? ಅದು ಹೇಗೆ ನ್ಯಾಯವಲ್ಲ– ಎಂಬಿದನ್ನು ಈಗ ತಿಳಿಸಲಾಗುವದು.

ಮುಕ್ತೇಃ ಕೌಟಸ್ಥ್ಯರೂಪತ್ವಾನ್ನ ತಸ್ಯಾಃ ಕರ್ಮ ಸಾಧನಮ್ |
ಸ್ವರ್ಗಾದಿವದನಿತ್ಯಾ ಸ್ಯಾತ್ ಯದಿ ಸ್ಯಾತ್ಕರ್ಮಣಃ ಫಲಮ್ ||

೨೪. ಮುಕ್ತಿಯು ಕೂಟಸ್ಥ–ಅವಿಕ್ರಿಯಸ್ವರೂಪವಾಗಿರುವದರಿಂದ ಅದಕ್ಕೆ ಕರ್ಮವು ಎಂದಿಗೂ ಸಾಧನವಲ್ಲ. ಮುಕ್ತಿಯು ಕರ್ಮದ ಫಲದಂತೆಯೇ ಒಂದು ಫಲವು ಎಂದಾದರೆ ಸ್ವರ್ಗಾದಿಫಲಗಳಂತೆ ಅದೂ ಅನಿತ್ಯವಾಗಬೇಕಾಗುವದು.

ಅನಿತ್ಯಫಲದಾಯಿತ್ವಂ ಜ್ಞಾನಹೀನಸ್ಯ ಕರ್ಮಣಃ |
ಕೂಟಸ್ಥಫಲದಾಯಿತ್ವಂ ವಿದ್ಯೇತಸ್ಯೇತಿ ಚೇನ್ಮತಮ್ ||

ನೈವಮಾರಭ್ಯಮಾಣಸ್ಯ ಹ್ಯನಿತ್ಯತ್ವಸಮನ್ವಯಾತ್ |
ನ ಚ ಪ್ರಾಪ್ತಮನಿತ್ಯತ್ವಂ ವಿದ್ಯಾ ವಾರಯಿತುಂ ಕ್ಷಮಾ ||

೨೫–೨೬. ಜ್ಞಾನದೊಡಗೂಡದೆಇರುವ ಕರ್ಮವು ಅನಿತ್ಯಫಲವನ್ನು ಕೊಡುತ್ತದೆ. ಆದರೆ ಜ್ಞಾನದೊಡನೆ ಸೇರಿದ ಕರ್ಮವು ಕೂಟಸ್ಥ(ನಿತ್ಯ)ವಾದ

ಫಲವನ್ನು ಕೊಡುತ್ತದೆ ಎಂಬಿದು ನಿನ್ನ ಅಭಿಪ್ರಾಯವಾದರೆ ಅದು ಸರಿಯಲ್ಲ. ಏಕೆಂದರೆ ಯಾವದು ಹೊಸದಾಗಿ ಉಂಟಾಗುವದೋ ಅದು ಅನಿತ್ಯವೆಂಬುದು ಪ್ರಸಿದ್ಧವು. ಮೋಕ್ಷವು ಕರ್ಮಫಲವಾಗಿ ಹೊಸದಾಗಿ ಉಂಟಾಗುವದೆಂದರೆ ಅನಿತ್ಯವೆಂದೇ ಆಗುವದು. ಹೀಗೆ ಪ್ರಾಪ್ತವಾದ ಷ್ಟ ವಿದ್ಯೆಯು ಎಂದಿಗೂ ತಡೆಯಲಾರದು. ಆದ್ದರಿಂದ ಜ್ಞಾನದೊಡನೆ ಕೂಡಿದ ಕರ್ಮದಿಂದ ಲೂ ಮುಕ್ತಿಯಿಲ್ಲ.

ಪ್ರಧ್ವಂಸಾಭಾವವಚ್ಚೇತ್ ಸ್ಯಾತ್ ಕರ್ಮಕಾರ್ಯಮಪಿ ಧ್ರುವಮ್ |
ಭಾವಾತ್ಮಕತ್ವಾತ್ ಮೋಕ್ಷಸ್ಯ ನೈವ ಮಯ್ಯುಪಪದ್ಯತೇ ||

೨೭. ಕಾರ್ಯವಾದರೂ ನಿತ್ಯವಾಗಿರುವ ಪ್ರಧ್ವಂಸಾಭಾವದಂತೆ ಮೋಕ್ಷವೂ ಕಾರ್ಯವಾದರೂ ನಿತ್ಯವಾಗಬಹುದಲ್ಲ? ಎಂದರೆ ಹಾಗಿಲ್ಲ. ಮೋಕ್ಷವು ಭಾವ ಪದಾರ್ಥವು. ಪ್ರಧ್ವಂಸಾಭಾವದಂತೆ ಅಭಾವವಲ್ಲ. ಆದ್ದರಿಂದ ಅದು ನಮ್ಮ ಪಕ್ಷದಲ್ಲಿ ಹೊಂದುವದಿಲ್ಲ.

ಕಾರ್ಯಂ ಪ್ರಧ್ವಂಸತೋಽನ್ಯದ್ಯತ್ತದನಿತ್ಯಂ ಕ್ರಿಯೋತ್ಥಿತೇಃ |
ಘಟಾದಿವತ್ ಪ್ರತಿಜ್ಞಾಯಾಂ ವಿಶಿಷ್ಟತ್ವಾದದೋಷತಾ ||

೨೮. ಪ್ರಧ್ವಂಸಾಭಾವಕ್ಕಿಂತ ಬೇರೆಯಾದ ಯಾವದೇ ಕಾರ್ಯವು ಕ್ರಿಯೆಯಿಂದ ಹುಟ್ಟುವದರಿಂದ ಅದು ಅನಿತ್ಯವೇ ಸರಿ. ಕಾರ್ಯವಾದ್ದರಿಂದ– ಎಂಬ ಹೇತುವು ಭಾವರೂಪವಾಗಿರುವದರಿಂದ ಅನಿತ್ಯವು– ಎಂಬ ಪ್ರತಿಜ್ಞೆಯಲ್ಲಿ ವ್ಯಾಪ್ತಿಭಂಗದ ದೋಷವೇನಿಲ್ಲ.

ಪ್ರಧ್ವಂಸಾತ್ ಶಕಲಾದಿ ಸ್ಯಾತ್ತಚ್ಚಾನಿತ್ಯಂ ಘಟಾದಿವತ್ |
ಕಲ್ಪನಾಮಾತ್ರತೋಽಭಾವೋ ನೈವಾರಭ್ಯಃ ಸ ಕರ್ಮಭಿಃ ||

೨೯. (ಗಡಿಗೆಯು) ಒಡೆದರೆ ಚೂರುಗಳಾಗುವವು. ಅವು ಕೂಡ ಮಡಕೆಯೇ ಮುಂತಾದವುಗಳಂತೆ ಅನಿತ್ಯವೇ ಆಗಿವೆ. ಆದ್ದರಿಂದ ಪ್ರಧ್ವಂಸಾಭಾವವೆಂಬುದು ಕಲ್ಪನಾಮಾತ್ರವು. ಅದು ಕರ್ಮಗಳಿಂದ ಎಂದೂ ಹುಟ್ಟುವದಿಲ್ಲ.

ವಿವರಣೆ : ವೈಶೇಷಿಕರು ಅಭಾವವೂ ಒಂದು ಪದಾರ್ಥವೆಂದು ಒಪ್ಪಿರುತ್ತಾರೆ. ಅದರಲ್ಲಿ ಪ್ರಧ್ವಂಸಾಭಾವವು (ಗಡಿಗೆಯು ಒಡೆದುಹೋದಮೇಲಿನಸ್ಥಿತಿಯು) ಆದಿಯುಳ್ಳದ್ದೂ ಅನಂತವೂ ಆಗಿದೆ– ಎಂದೂ ಒಪ್ಪಿರುತ್ತಾರೆ. ಅವರ ಮತದಂತೆ ಪೂರ್ವಪಕ್ಷಿಯು ಪ್ರಧ್ವಂಸಾಭಾವವನ್ನು ಉದಾಹರಿಸಿ ಮೋಕ್ಷವೂ ಸಾದಿಯಾದರೂ ನಿತ್ಯವಾಗಬಹುದಲ್ಲ? ಎಂದು ಕೇಳಿದ್ದಕ್ಕೆ ಸಿದ್ಧಾಂತಿಯು 'ಹಾಗಾಗಲಾರದು. ಮೋಕ್ಷವು ಅಭಾವರೂಪವಲ್ಲ; ಮತ್ತು ಪ್ರಧ್ವಂಸಾಭಾವ

ವೆಂಬುದೂ ಒಂದು ಪದಾರ್ಥವೇನಲ್ಲ; ಅದು ವಿಕಲ್ಪಮಾತ್ರವು ; ಅದು ತಾನೇ ಇಲ್ಲದ್ದಾಗಿರುವಾಗ ಇನ್ನೊಂದಕ್ಕೆ ಹೇಗೆ ದೃಷ್ಟಾಂತವಾದೀತು ?' ಎಂದು ಉತ್ತರಿಸಿರುತ್ತಾನೆ.

ಆವಿರ್ಭಾವತಿರೋಭಾವೈರ್ಧರ್ಮಿಣ್ಯಾಂ ಮೃದಿ ಸರ್ವದಾ ।
ಧರ್ಮಾ ಘಟಾದಯಃ ಸರ್ವೇ ವರ್ತಂತೇ ನ ತ್ವಭಾವಗಾಃ ॥
ನಾಸ್ತ್ಯಭಾವಸ್ಯ ಸಂಬಂಧಃ ಕ್ರಿಯಯಾ ವಾ ಗುಣೇನ ವಾ ।
ನಿರಾತ್ಮಕತ್ವಾನ್ನೈವಾಲಂ ಸಂಬದ್ಧುಂ ಕೇನಚಿತ್ ಕ್ವಚಿತ್ ॥
ತಸ್ಮಾತ್ ಸ್ಯಾತ್ ಕಲ್ಪನಾಮಾತ್ರೋ ವ್ಯವಹಾರಪ್ರಸಿದ್ಧಯೇ ।
ಪ್ರಧ್ವಂಸಾದಿರಭಾವೋಽಯಂ ಶಿಲಾಪುತ್ರಾದಿವನ್ಮೃಷಾ ॥

೩೦–೩೨. ಧರ್ಮಿಯಾದ ಮಣ್ಣಿನಲ್ಲಿ ಧರ್ಮವಾದ ಘಟಾದಿಗಳು ಯಾವಾಗಲೂ ತೋರುತ್ತಿರುವವು ಹಾಗೂ ಅಡಗುತ್ತಿರುವವು. ಅಷ್ಟೇ ಹೊರತು ಅವು ಅಭಾವವನ್ನು ಹೊಂದುವದಿಲ್ಲ. (ವಿರೋಧಿಕಾರ್ಯಗಳು ಉಂಟಾದಾಗ ಅವು ಕಾಣದೆಹೋಗುವವು : ಎಂದರೆ ಮಣ್ಣಿನಿಂದ ಕಪಾಲಗಳು ಹುಟ್ಟಿದಾಗ ಘಟವು ತೋರಲಾರದು. ಏಕೆಂದರೆ ಒಂದೇ ಕಾರಣದಿಂದ ಏಕಕಾಲಕ್ಕೆ ಎರಡು ಕಾರ್ಯಗಳು ತೋರಿಕೊಳ್ಳುವದಿಲ್ಲ.) ಇನ್ನು ಅಭಾವವೆಂಬುದು ನಿರಾತ್ಮಕವಾದ್ದರಿಂದ ಅದು ಕ್ರಿಯೆಯೊಡನೆ ಆಗಲಿ, ಗುಣದೊಡನೆಯಾಗಲಿ– ಸಂಬಂಧವುಳ್ಳದ್ದಾಗಲಾರದು. ಅದು ಏತರೊಡನೆಯೂ ಜೋಡಿಯಾಗಲು ತಕ್ಕದ್ದಲ್ಲ. ಆದ್ದರಿಂದ ಅದು ಕಲ್ಪನಾಮಾತ್ರವೇ ಸರಿ. ವ್ಯವಹಾರನಿರ್ವಹಣೆಗಾಗಿ ಅಭಾವವನ್ನು ಪ್ರಾಗಭಾವ, ಪ್ರಧ್ವಂಸಾಭಾವ– ಎಂದು ಕರೆಯಬಹುದು. ಕಲ್ಲಿನ ಗೊಂಬೆ–ಎನ್ನುವಾಗ ಗೊಂಬೆಯು ಹೇಗೆ ಕಲ್ಲಿಗಿಂತ ಬೇರೆಯಿಲ್ಲವೋ ಗೊಂಬೆಯೆಂಬುದು ಕಲ್ಪನೆಯೋ ಹಾಗೆಯೇ ಪ್ರಧ್ವಂಸಾದ್ಯಭಾವಗಳೂ ಕಲ್ಪನೆಗಳೇ ಆಗಿವೆ.

ತಸ್ಮಾದವಿದ್ಯಾದ್ಯುಚ್ಛಿತ್ತೌ ಸ್ಯಾದವಸ್ಥಾನಮಾತ್ಮನಿ ।
ನ ಚಾವಿದ್ಯಾಪ್ರಹಾಣಂ ಸ್ಯಾತ್ ಬ್ರಹ್ಮವಿದ್ಯಾಮೃತೇ ಕ್ವಚಿತ್ ॥
ತಸ್ಮಾದ್ವಿದ್ಯಾಪ್ತಯೇ ಜ್ಞೇಯಾ ಪ್ರಾರಬ್ಧೋಪನಿಷತ್ ಪರಾ ।
ಸೈವಾವಿದ್ಯಾಪನುತ್ತ್ಯರ್ಥಾ ವಿದ್ಯಾ ಚೈವಾತ್ಮಗಾಮಿನೀ ॥

೩೩–೩೪. ಆದ್ದರಿಂದ ಅವಿದ್ಯೆಯೇ ಮುಂತಾದದ್ದು ನಾಶವಾಗಲು ಆತ್ಮನಲ್ಲಿ ನೆಲೆನಿಲ್ಲುವದೆಂಬುದು ಸಾಧ್ಯವಾಗುವದು. ಆದರೆ ಬ್ರಹ್ಮವಿದ್ಯೆಯನ್ನು ಬಿಟ್ಟರೆ ಬೇರೆ ಯಾವದರಿಂದಲೂ ಅವಿದ್ಯಾನಾಶವಾಗಲಾರದು. ಹೀಗಿರುವದರಿಂದ ವಿದ್ಯೆಯನ್ನು ಪಡೆಯುವದಕ್ಕಾಗಿ ಪರಮವಾದ ಉಪನಿಷತ್ತು ಪ್ರಾರಂಭವಾಗಿದೆ. ಅವಿದ್ಯೆಯನ್ನು ಕಳೆಯಲು ಅದೇ ಸಮರ್ಥವು. ಮತ್ತು ವಿದ್ಯೆಯು ಆತ್ಮನನ್ನೇ ಕುರಿತು ಹೊರಟಿರುತ್ತದೆ.

ವಿದ್ಯಾಸಂಶೀಲಿನಾಂ ಯಸ್ಮಾತ್ ಗರ್ಭಜನ್ಮಾದ್ಯಶೇಷತಃ |
ಉಪಮೃದ್ನಾತಿ ವಿದ್ಯೇಯಂ ತಸ್ಮಾದುಪನಿಷದ್ಭವೇತ್ ||
ಉಪೇತ್ಯ ವಾ ನಿಷಣ್ಣಂ ತಚ್ಛ್ರೇಯ ಆತ್ಯಂತಿಕಂ ಯತಃ |
ತಸ್ಮಾದುಪನಿಷದ್ ಜ್ಞೇಯಾ ಗ್ರಂಥಸ್ತು ಸ್ಯಾತ್ತದರ್ಥತಃ ||

೩೫-೩೬. ವಿದ್ಯೆಯನ್ನು ಅಭ್ಯಾಸಮಾಡುವವರಿಗೆ ಗರ್ಭ, ಜನ್ಮಾದಿ (ದೋಷಗಳನ್ನು) ಸಂಪೂರ್ಣವಾಗಿ ಇದು ನಾಶಗೊಳಿಸುತ್ತದೆ. ಆದ್ದರಿಂದ ಉಪನಿಷತ್ತೆಂದು ಹೆಸರಾಗಿದೆ. ಅಥವಾ ಆತ್ಯಂತಿಕವಾದ ನಿಃಶ್ರೇಯಸವು ಇದರಲ್ಲಿ ಅಡಗಿ ಕುಳಿತಿರುತ್ತದೆಯಾದ್ದರಿಂದಲೂ ಉಪನಿಷತ್ತೆನಿಸಿರುವದು. (ಈ ವಿದ್ಯೆಯನ್ನು ಪ್ರತಿಪಾದಿಸುವ) ಗ್ರಂಥಕ್ಕೂ ಉಪನಿಷತ್ತೆಂಬ ಹೆಸರಿದೆ.

ಶಾಂತಿಪಾಠವಿವರಣೆ

ಪ್ರಾಣವೃತ್ತೇಸ್ತಥಾ ಚಾಹ್ನೋ ದೇವತಾ ಯಾಽಭಿಮಾನಿನೀ |
ಮಿತ್ರಃ ಶಂ ನಃ ಸುಖಂ ಭೂಯಾದಿತಿ ಬ್ರಹ್ಮೇಹ ಯಾಚ್ಯತೇ ||

೩೭. ಪ್ರಾಣವೃತ್ತಿಗೂ ಹಗಲಿಗೂ ಅಭಿಮಾನಿಯಾದ ಯಾವ ದೇವತೆಯು ಮಿತ್ರನೆನಿಸಿ ಪ್ರಸಿದ್ಧನಾಗಿರುವನೋ ಆವನು ನಮಗೆ ಸುಖವನ್ನುಂಟುಮಾಡಲಿ ! ಎಂದು ಬ್ರಹ್ಮ (ಸನ್ನಿಧಿ)ಯಲ್ಲಿ ಪ್ರಾರ್ಥಿಸಲಾಗಿದೆ.

ರಾತ್ರೇರಪಾನವೃತ್ತೇಶ್ಚ ವರುಣಶ್ಚಾಭಿಮಾನಭಾಕ್ |
ಶಂ ನೋ ಭವತು ಸರ್ವತ್ರ ಚಕ್ಷುಸ್ಥಶ್ಚಾರ್ಯಮಾ ರವಿಃ ||

೩೮. ರಾತ್ರಿಗೂ ಅಪಾನವೃತ್ತಿಗೂ ಅಭಿಮಾನಿಯಾದ ದೇವತೆಯು ವರುಣನು. ಕಣ್ಣಿನಲ್ಲಿರುವ ಅದರ ಅಭಿಮಾನಿದೇವತೆಯು ಅರ್ಯಮನೆಂಬ ಹೆಸರಿನ ಸೂರ್ಯನು. ಆವನೂ ಕೂಡ ಎಲ್ಲೆಲ್ಲಿಯೂ ನಮಗೆ ಸುಖವನ್ನುಂಟುಮಾಡಲಿ.

ಬಲೇ ತು ಭಗವಾನಿಂದ್ರೋ ವಾಚಿ ಬುದ್ಧೌ ಬೃಹಸ್ಪತಿಃ |
ವಿಷ್ಣುಶ್ಚೋರುಕ್ರಮಃ ಶಂ ನೋ ವಿಸ್ತೀರ್ಣಕ್ರಮಣೋ ಹ್ಯಸೌ ||

೩೯. ಬಲಾಭಿಮಾನಿಯಾದ ಇಂದ್ರನೂ ಮಾತು ಹಾಗೂ ಬುದ್ಧಿಗೆ ಅಭಿಮಾನಿಯಾದ ಬೃಹಸ್ಪತಿಯೂ ವಿಸ್ತೀರ್ಣವಾದ ಪಾದವಿಕ್ಷೇಪವುಳ್ಳ ಉರುಕ್ರಮನೆನಿಸಿದ ವಿಷ್ಣುವೂ ನಮಗೆ ಸುಖವನ್ನುಂಟುಮಾಡಲಿ !

ಅಧ್ಯಾತ್ಮದೇವತಾಃ ಸರ್ವಾಃ ಮಿತ್ರಾದ್ಯಾಃ ಶಂ ಭವನ್ತು ನಃ |
ಸುಖಕೃತ್ಸು ಹಿ ತಾಸು ಸ್ಯಾದ್ವಿಘ್ನೋಪಶಮನಂ ಧ್ರುವಮ್ ||

೪೦. ಮಿತ್ರನೇ ಮೊದಲಾದ ಅಧ್ಯಾತ್ಮದೇವತೆಗಳೆಲ್ಲರೂ ನಮಗೆ ಸುಖಕರರಾಗಲಿ ; ಅವರುಗಳು ಸುಖಪ್ರದರಾದರೆ ವಿಘ್ನಪರಿಹಾರವು ಖಂಡಿತವಾಗಿ ಆಗುವದು.

ಶ್ರವಣಂ ಧಾರಣಂ ಚೈವಮುಪಯೋಗಶ್ಚ ಸಿಧ್ಯತಿ |
ಜ್ಞಾನಸ್ಯಾಪ್ರತಿಬಂಧೇನ ಪ್ರಾರ್ಥನೀಯಮತೋ ಭವೇತ್ ||

೪೧. ಮತ್ತು (ಆ ದೇವತೆಗಳ ಪ್ರಸಾದದಿಂದ) ಬ್ರಹ್ಮವಿದ್ಯಾಶ್ರವಣವೂ ಧಾರಣವೂ ಉಪಯೋಗವೂ ಸಿದ್ಧಿಸುವದು. ಜ್ಞಾನಕ್ಕಿರುವ ಅಡ್ಡಿಗಳು ತೊಲಗುವವು. ಆದ್ದರಿಂದ ಅವರನ್ನು ಪ್ರಾರ್ಥಿಸುವದು ತಕ್ಕದ್ದಾಗಿದೆ.

ಬ್ರಹ್ಮವಿದ್ಯೋಪಸರ್ಗಾಣಾಂ ಶಾಂತ್ಯರ್ಥಂ ವಾಯುರೂಪಿಣೇ |
ಬ್ರಹ್ಮಜಿಜ್ಞಾಸುನಾ ಕಾರ್ಯೋ ನಮಸ್ಕಾರೋಕ್ತಿಕರ್ಮಣೇ ||

೪೨. ಬ್ರಹ್ಮವಿದ್ಯೆಗೆ ಅಡ್ಡಿಯನ್ನುಂಟುಮಾಡುವ ತೊಂದರೆಗಳ ಪರಿಹಾರಕ್ಕಾಗಿ ವಾಯುರೂಪನಾದ (ದೇವತೆಗೆ) ವಾಚಿಕವಾಗಿ ನಮಸ್ಕಾರವೂ ಶಾರೀರಕವಂದನೆಯೂ ಬ್ರಹ್ಮಜಿಜ್ಞಾಸುವಾದವನಿಂದ ಮಾಡಲ್ಪಡಬೇಕು.

ಸರ್ವಕ್ರಿಯಾಫಲಾನಾಂ ಹಿ ಬ್ರಹ್ಮಾಧೀನತ್ವಹೇತುತಃ |
ವಾಯವೇ ಬ್ರಹ್ಮಣೇ ತಸ್ಮೈ ಪ್ರಹ್ವೀಭಾವೋಽಸ್ತು ಸರ್ವದಾ ||

೪೩. ಎಲ್ಲಾ ಕರ್ಮಗಳ ಫಲವೂ ಬ್ರಹ್ಮದ ವಶದಲ್ಲಿರುವ ಕಾರಣದಿಂದ ವಾಯುರೂಪವಾದ ಬ್ರಹ್ಮಕ್ಕೆ ಯಾವಾಗಲೂ ನಮಸ್ಕಾರವಿರಲಿ !

ಪಾರೋಕ್ಷ್ಯೇಣ ನಮಸ್ಕೃತ್ಯ ಪ್ರತ್ಯಕ್ಷೇಣ ನಮಸ್ಕ್ರಿಯಾ |
ಪರೋಕ್ಷಸಾಕ್ಷಾದ್ರೂಪಾಭ್ಯಾಂ ವಾಯುರೇವಾಭಿಧೀಯತೇ ||

೪೪. (ಸೂತ್ರಾತ್ಮನೆನಿಸಿದ) ಬ್ರಹ್ಮಕ್ಕೆ ಮೊದಲು ಪರೋಕ್ಷವಾಗಿ ನಮಸ್ಕರಿಸಿ ಅನಂತರ ('ನಮಸ್ತೇ ವಾಯೋ') ಎಂದು ಪ್ರತ್ಯಕ್ಷವಾಗಿಯೂ ನಮಸ್ಕರಿಸಲಾಗಿದೆ. ಹೀಗೆ ಪರೋಕ್ಷಪ್ರತ್ಯಕ್ಷರೂಪಗಳೆರಡರಿಂದಲೂ ವಾಯುವೇ ಹೇಳಲ್ಪಟ್ಟಿದೆ.

ಪ್ರತ್ಯಕ್ಷಂ ಬ್ರಹ್ಮ ಹೇ ವಾಯೋ ತ್ವಮೇವಾಸೀತಿ ಸಂಸ್ತುತಿಃ |
ತ್ವಾಮೇವಾತೋ ವದಿಷ್ಯಾಮಿ ಸಾಕ್ಷಾತ್ತ್ವಮುಪಲಭ್ಯಸೇ ||

೪೫. ಎಲೈ ವಾಯುವೆ, ನೀನು ಪ್ರತ್ಯಕ್ಷವಾಗಿ ಬ್ರಹ್ಮವೇ ಆಗಿರುವೆ–ಎಂದು ಸ್ತುತಿಸಲಾಗಿದೆ. ಆದ್ದರಿಂದ ನಿನ್ನನ್ನೇ ಹೇಳುತ್ತಿದೇನೆ. ಏಕೆಂದರೆ ನೀನು ಸಾಕ್ಷಾತ್ತಾಗಿ ಕಂಡುಬರುತ್ತಿರುವೆ.

ಯಥಾ ಶಾಸ್ತ್ರಂ ಯಥಾಕಾರ್ಯಂ ಬುದ್ಧ್ಯಾ ಸುಪರಿನಿಶ್ಚಿತಮ್ |
ಋತಂ ತತ್ ತ್ವದಧೀನತ್ವಾತ್ ವದಿಷ್ಯಾಮೀತಿ ಸಂಗತಿಃ ||

೪೬. ಶಾಸ್ತ್ರದಲ್ಲಿ ಹೇಳಿರುವಂತೆ ಹಾಗೂ ಹೇಗೆ ಮಾಡಬೇಕೆಂದು ಅರಿತು ಬುದ್ಧಿಯಲ್ಲಿ ಚೆನ್ನಾಗಿ ನಿಶ್ಚಯಿಸಲ್ಪಟ್ಟಿದೆಯೋ ಅದು ನಿನ್ನ ಅಧೀನವಾಗಿದ್ದು ಋತವೆನಿಸುತ್ತದೆ. ಅದನ್ನು ನುಡಿಯುವೆನು- ಎಂದು ಸಂಬಂಧಮಾಡಿಕೊಳ್ಳಬೇಕು.

ಪ್ರಯೋಗಸ್ಥಂ ತದೇವರ್ತಂ ಸತ್ಯಮಿತ್ಯಭಿಧೀಯತೇ |
ತದಪಿ ತ್ವದಧೀನತ್ವಾತ್ ವದಿಷ್ಯಾಮ್ಯೇವ ಸಾಂಪ್ರತಮ್ ||

೪೭. ಅದೇ ಋತುವು ಬಳಕೆಯಲ್ಲಿ ಇದ್ದುಕೊಂಡರೆ ಸತ್ಯವೆನಿಸುವದು. ಅದುಕೂಡ ನಿನ್ನ ಅಧೀನವಾದುದರಿಂದ ಈಗ ನಾನು ನಿನ್ನನ್ನೇ ಸ್ತುತಿಸುವೆನು.

ವಿದ್ಯಾರ್ಥಿನಾ ಸ್ತುತಂ ಸನ್ಮಾಂ ಬ್ರಹ್ಮಾವತು ಗುರುಂ ಚ ಮೇ |
ವಿದ್ಯಾಗ್ರಹಣವಕ್ತೃತ್ವಶಕ್ತಿಭ್ಯಾಂ ನೌ ಸದಾವತು ||

೪೮. ವಿದ್ಯೆಯನ್ನು ಬಯಸುವ ನಾನು ಸ್ತುತಿಮಾಡಿದ ಬ್ರಹ್ಮವು ನನ್ನನ್ನೂ ನನ್ನ ಗುರುವನ್ನೂ ಕಾಪಾಡಲಿ ; ನನಗೆ ವಿದ್ಯೆಯನ್ನು ಗ್ರಹಿಸುವ ಶಕ್ತಿಯನ್ನೀಯುವ ಮೂಲಕವೂ ಗುರುವಿಗೆ ಪಾಠವನ್ನು ಹೇಳಿಕೊಡುವ ಶಕ್ತಿಯನ್ನು ಕೊಡುವ ಮೂಲಕವೂ ಅದು ನಮ್ಮಿಬ್ಬರನ್ನೂ ಸದಾ ಕಾಪಾಡಲಿ.

ವಿದ್ಯಾಪ್ರಾಪ್ತ್ಯುಪಸರ್ಗಾಣಾಂ ತ್ರಿಃ ಶಾಂತಿರಭಿಧೀಯತೇ |
ಆಚಾರ್ಯಶಿಷ್ಯಯೋಃ ತಸ್ಯಾಂ ಬ್ರಹ್ಮ ಜ್ಞಾತುಂ ಹಿ ಶಕ್ಯತೇ ||

೪೯. ಆಚಾರ್ಯ, ಶಿಷ್ಯರಿಬ್ಬರಿಗೂ ಬ್ರಹ್ಮವಿದ್ಯೆಯ ಪ್ರಾಪ್ತಿಗೆ ಅಡ್ಡಿಯಾಗಬಹುದಾದ ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕರೂಪವಾದ ಮೂರು ವಿಧವಾದ ದೋಷಗಳ ಪರಿಹಾರವೂ ಆಗಲೆಂದು ಮೂರುಬಾರಿ ಶಾಂತಿಯನ್ನು ಹೇಳಿರುತ್ತದೆ. ಅದು (ವಿಘ್ನಶಾಂತಿಯು) ಲಭಿಸಲಾಗಿ ಬ್ರಹ್ಮವನ್ನು ಅರಿಯುವದು ಸಾಧ್ಯವಾಗುತ್ತದೆ.

ಶೀಕ್ಷಾಧ್ಯಾಯ

ಅರ್ಥಜ್ಞಾನಪ್ರಧಾನತ್ವಾತ್ ವೇದಾಂತಾನಾಂ ವಿಪಶ್ಚಿತಾಮ್ |
ಪಾಠೇ ತ್ವಯತ್ನೋ ಮಾ ಪ್ರಾಪದಿತಿ ಶಿಕ್ಷಾಭಿಧೀಯತೇ ||

೫೦. ವೇದಾಂತಗಳಲ್ಲಿ ಅರ್ಥಜ್ಞಾನವೇ ಪ್ರಧಾನವಾದುದರಿಂದ ವಿದ್ವಾಂಸರಿಗೆ ಉಪನಿಷತ್‌ಪಾಠದಲ್ಲಿ ಆಲಸ್ಯವುಂಟಾಗದೆ ಇರಲಿ- ಎಂಬ ಕಾರಣದಿಂದ ಶಿಕ್ಷೆಯನ್ನು ಹೇಳಲಾಗುವದು.

ಶಿಕ್ಷ್ಯತೇ ಜ್ಞಾಯತೇ ಸಾಕ್ಷಾದ್ವರ್ಣಾದ್ಯುಚ್ಚಾರಣಂ ಯಯಾ |
ಸ್ಯಾದ್ವಾ ಕರ್ಮಣಿ ಶಿಕ್ಷೇತಿ ವ್ಯಾಖ್ಯಾಸ್ಯಾಮೋಽಧುನಾ ತು ತಾಮ್ ||

೫೧. ಯಾವದರಿಂದ ವರ್ಣವೇ ಮುಂತಾದವುಗಳ ಉಚ್ಚಾರಣೆಯು ಶಿಕ್ಷ್ಯತೇ– ತಿಳಿಯಲ್ಪಡುವದೋ ಅದು ಶಿಕ್ಷೆಯು. ಅಥವಾ ಶಿಕ್ಷಣವೆಂಬ ಕರ್ಮ ವನ್ನು ತಿಳಿಸುವದೇ ಶಿಕ್ಷೆಯು. ಅದನ್ನು ಈಗ ವಿವರಿಸುವೆವು.

ಅಕಾರಾದಿರ್ಭವೇದ್ವರ್ಣ ಉದಾತ್ತಾದಿಃ ಸ್ವರಸ್ತಥಾ |
ಹ್ರಸ್ವದೀರ್ಘಪ್ಲುತಾ ಮಾತ್ರಾ ಪ್ರಯತ್ನಶ್ಚ ಬಲಂ ಸ್ಮೃತಮ್ ||

೫೨. ವರ್ಣವೆಂದರೆ ಅಕಾರಾದಿಗಳು. ಸ್ವರಗಳೆಂದರೆ ಉದಾತ್ತಾದಿಗಳು. ಮಾತ್ರೆಗಳೆಂದರೆ ಹ್ರಸ್ವದೀರ್ಘಪ್ಲುತಗಳು. ಬಲವೆಂದರೆ ಪ್ರಯತ್ನವು.

ಸಮತಾ ಸಾಮವರ್ಣಾನಾಂ ವೈಷಮ್ಯಸ್ಯ ವಿವರ್ಜನಮ್ |
ಸಂತಾನಃ ಸಂಹಿತಾ ತು ಸ್ಯಾತ್ ಇತಿ ಶಿಕ್ಷೋಪದಿಶ್ಯತೇ ||

೫೩. ಸಾಮವೆಂದರೆ ವರ್ಣಗಳನ್ನು ಸಮ (ನಡುವಿನ ಧ್ವನಿ)ಯಿಂ ಉಚ್ಚರಿಸುವದು. ಮತ್ತು ವೈಷಮ್ಯವನ್ನು ಬಿಡುವದು. ಇನ್ನು ಸಂತಾ ವೆಂದರೆ ಅಕ್ಷರಗಳು ಎಡಬಿಡದೆ ಇರುವ ಸಂಹಿತೆ– ಎಂದರ್ಥ. ಹೀಗೆ ಶಿಕ್ಷೆಯನ್ನು ಉಪದೇಶಿಸಲಾಗಿದೆ.

ಸಂಹಿತೋಪಾಸನೆ

ಸೂಕ್ಷ್ಮಾರ್ಥಾನುಪ್ರವೇಶಾಯ ಬಹಿಷ್ಪ್ರವಣಚೇತಸಾಮ್ |
ಸಂಹಿತಾವಿಷಯಂ ತಾವತ್ ಸ್ಥೂಲೋಪಾಸನಮುಚ್ಯತೇ ||

೫೪. ಹೊರಮುಖವಾಗಿ ಹರಿಯುವ ಮನಸ್ಸುಳ್ಳವರಿಗೆ ಸೂಕ್ಷ್ಮವಾದ ಅರ್ಥವನ್ನು ಒಳಹೊಗಲು ಅನುಕೂಲವಾಗಲೆಂದು ಮೊದಲು ಸಂಹಿತಾವಿಷಯಕ ವಾದ ಸ್ಥೂಲವಾದ ಉಪಾಸನೆಗಳನ್ನು ಹೇಳಲಾಗುವದು.

ಸಂಹಿತಾದಿನಿಮಿತ್ತಂ ಯದ್ಯಶಃ ತನ್ನೌ ಸಹಾಸ್ತ್ವಿತಿ |
ಆಚಾರ್ಯಶಿಷ್ಯಯೋಸ್ತದ್ವದ್ಬ್ರಹ್ಮವರ್ಚಸಮಾವಯೋಃ ||

೫೫. ಸಂಹಿತೋಪಾಸನೆಯೇ ಮುಂತಾದದ್ದರ ನಿಮಿತ್ತವಾದ ಯಾವ ಯಶಸ್ಸು ಇದೆಯೋ ಅದು ನಮ್ಮಿಬ್ಬರಿಗೂ ಉಂಟಾಗಲಿ. ಹಾಗೆಯೇ ಆಚಾರ್ಯ –ಶಿಷ್ಯರುಗಳಾದ ನಮಗೆ ಬ್ರಹ್ಮವರ್ಚಸ್ಸೂ ಉಂಟಾಗಲಿ.

ಯಶಃ ಖ್ಯಾತಿಃ ಪ್ರಕಾಶಃ ಸ್ಯಾತ್ ವೃತ್ತಸ್ವಾಧ್ಯಾಯಹೇತುಜಮ್ |
ಬ್ರಹ್ಮವರ್ಚಸಮಿತ್ಯಾಹುಸ್ತೇಜೋ ಯತ್ತನ್ನಿಬನ್ಧನಮ್ ||

೫೬. ಯಶಸ್ಸೆಂದರೆ ಈವರೆಗೆ ಮಾಡಿರುವ ವೇದಾಧ್ಯಯನನಿಮಿತ್ತವಾದ ಖ್ಯಾತಿಯು ಅಥವಾ ಪ್ರಕಾಶವು ಎಂದರ್ಥ. ಶ್ರುತಿಸ್ಮೃತ್ಯುಕ್ತಕರ್ಮಾನುಷ್ಠಾನ

ದಿಂದಲೂ ವೇದಾಧ್ಯಯನದಿಂದಲೂ ಉಂಟಾದ, ಚರ್ಮವನ್ನು ವ್ಯಾಪಿಸಿರುವ ತೇಜಸ್ಸನ್ನು ಬ್ರಹ್ಮವರ್ಚಸ್ಸೆಂದೂ ಕರೆಯುವರು.

ಶಿಷ್ಯಸ್ಯಾಶೀರಿಯಂ ಜ್ಞೇಯಾ ನಾಚಾರ್ಯಸ್ಯ ಕೃತಾರ್ಥತಃ |
ಅನಾಪ್ತಪುರುಷಾರ್ಥಾನಾಂ ಆಶೀರ್ವಾದೋ ಹಿ ಯುಜ್ಯತೇ ||

೫೭. ಈ ಪ್ರಾರ್ಥನೆಯು ಶಿಷ್ಯನು ಮಾಡತಕ್ಕದ್ದು. ಆಚಾರ್ಯನು ಮಾಡುವದಲ್ಲ. ಏಕೆಂದರೆ ಆಚಾರ್ಯನು ಕೃತಾರ್ಥನಾಗಿರುತ್ತಾನೆ. ಯಾರು ಇನ್ನೂ ಪುರುಷಾರ್ಥವನ್ನು ಪಡೆದುಕೊಂಡಿಲ್ಲವೋ ಅವರು ಪ್ರಾರ್ಥಿಸುವದು ಯುಕ್ತವಾಗಿದೆ.

ವೇದಾಧ್ಯಯನವಿಜ್ಞಾನಾದನಂತರಮಿದಂ ಯತಃ |
ನೇದೀಯಃ ಸಂಹಿತಾಜ್ಞಾನಮತಸ್ತದಭಿಧೀಯತೇ ||

೫೮. ವೇದಾಧ್ಯಯನವು ಪೂರೈಸಿದ ಅನಂತರ ಈ ಸಂಹಿತಾಜ್ಞಾನವು ಪ್ರಾಪ್ತವಾಗುತ್ತದೆ. ಏಕೆಂದರೆ ಹತ್ತಿರವಾಗಿದೆ. ಅದ್ದರಿಂದ ಅದನ್ನು ಹೇಳಲಾಗುವದು.

ಸಂಹಿತಾವಿಷಯಂ ಜ್ಞಾನಮಿಹೋಪನಿಷದುಚ್ಯತೇ
ಪಂಚಾಧಿಕರಣಾಂ ತಾಂ ತು ವ್ಯಾಖ್ಯಾಸ್ಯಾಮೋಽಧುನಾ ಸ್ಫುಟಮ್ ||

೫೯. ಸಂಹಿತಾವಿಷಯವಾದ ಉಪಾಸನೆಯು ಇಲ್ಲಿ ಉಪನಿಷತ್ತೆಂದು ಕರೆಯಲ್ಪಟ್ಟಿದೆ. ಐದು ಅಧಿಕರಣಗಳುಳ್ಳ ಆ (ಉಪನಿಷತ್ತನ್ನು) ಇಲ್ಲಿ ಸ್ಫುಟವಾಗಿ ವ್ಯಾಖ್ಯಾನಮಾಡಲಾಗುವದು.

ವಿವರಣೆ : ವೇದಾಧ್ಯಯನಾನಂತರ ವೇದಾರ್ಥವನ್ನು ವಿಚಾರಮಾಡಬೇಕು. ಅದರಲ್ಲಿಯೂ ಪರಬ್ರಹ್ಮದ ಜ್ಞಾನ, ಉಪಾಸನೆಗಳನ್ನು ತಿಳಿಸುವಾಗ, ಅಧ್ಯಯನಕರ್ತೃವಿಗೆ ಅವರೆಗೆ ಬುದ್ಧಿಯು ಗ್ರಂಥವನ್ನು ನೆನಪಿಡುವದರಲ್ಲೇ ಕೇಂದ್ರೀಕೃತವಾಗಿದ್ದು ತಟ್ಟನೆ ಅರ್ಥಜ್ಞಾನಕ್ಕಾಗಲಿ ಮಾನಸಿಕವಾದ ಚಿಂತನೆಗಾಗಿ ಸಿದ್ಧವಾಗಿರುವದಿಲ್ಲ. ಅದ್ದರಿಂದ ಸಂಹಿತಾಧ್ಯಯನಕಾಲಕ್ಕೆ ಪಠಿಸುವ ಶಬ್ದಗಳಲ್ಲಿಯೇ ಸಂಧಿವಿಭಾಗಮಾಡಿ ಹಿಂದುಮುಂದಿನ ಅಕ್ಷರಗಳನ್ನು ಲೋಕ, ಜ್ಯೋತಿಷಾದಿರೂಪದಿಂದ ಚಿಂತಿಸಿದರೆ ಮುಂದೆ ಬ್ರಹ್ಮಚಿಂತನೆಗೆ ಸಹಾಯವಾಗುತ್ತದೆ. ಅದಕ್ಕಾಗಿ ಮೊಟ್ಟಮೊದಲು ಸಂಹಿತೋಪಾಸನೆಯನ್ನು ಹೇಳಿದೆ–ಎಂದರ್ಥ. "ಇಷೇ ತ್ವೋರ್ಜೇ ತ್ವಾ...." ಎಂಬಿದು ಸಂಹಿತೆ. ಇಲ್ಲಿ 'ತ್ವೋರ್ಜೇ' ಎಂಬುದನ್ನು ತ್ವಾ–ಊರ್ಜೇ ಎಂದು ವಿಭಾಗಮಾಡಬೇಕು. ತ್ವಾ–ಎಂಬಲ್ಲಿರುವ ಆಕಾರವನ್ನು ಪೃಥಿವಿಯೆಂದೂ ಊರ್ಜೇ ಎಂಬಲ್ಲಿರುವ ಊಕಾರವನ್ನು ದ್ಯುಲೋಕವೆಂದೂ ಆ ಎರಡಕ್ಷರಗಳೂ ಸಂಧಿಯಾಗಿ ಸಂಹಿತಾಕಾಲಕ್ಕೆ 'ಓ' ಎಂದಾಗುವದ

ರಿಂದ ಅದನ್ನು ಆಕಾಶವೆಂದೂ ಚಿಂತಿಸಬೇಕು-ಎಂದರ್ಥ. ಹೀಗೆಯೇ ಮುಂದಿನ ಪರ್ಯಾಯಗಳಲ್ಲಿಯೂ ತಿಳಿಯಬೇಕು.

ಅಧಿಲೋಕಮಧಿಜ್ಯೋತಿರಧಿವಿದ್ಯಮಧಿಪ್ರಜಮ್ |
ಅಧ್ಯಾತ್ಮಂ ಚೇತಿ ಲೋಕಾದೇರ್ಮಹತ್ತ್ವಾದ್ ತದ್ವಿದೋ ಜಗುಃ |
ತಾ ಮಹಾಸಂಹಿತಾಸ್ಸರ್ವಾ ಇತಿ ತಾ ಯ ಉಪಾಸತೇ ||

೬೦. ಅಧಿಲೋಕ, ಅಧಿಜ್ಯೋತಿಷ, ಅಧಿವಿದ್ಯ, ಅಧಿಪ್ರಜ, ಅಧ್ಯಾತ್ಮ-ಎಂದು ಲೋಕಾದಿ ಮಹಾವಸ್ತುವಿಷಯಗಳನ್ನು ಪ್ರಸ್ತಾಪಿಸಿರುವದರಿಂದ ಇವುಗಳನ್ನು ಮಹಾಸಂಹಿತೋಪಾಸನೆಗಳೆಂದು ಬಲ್ಲವರು ಹೇಳುತ್ತಾರೆ.

ವಿವರಣೆ : ಪೃಥಿವೀ, ದ್ಯುರಾದಿಗಳು ಲೋಕಗಳು. ಅಗ್ನಿ, ಆದಿತ್ಯಾದಿಗಳು, ಜ್ಯೋತಿಗಳು. ವಿದ್ಯೆ ಎಂದರೆ ವಿದ್ಯೆಗೆ ಕಾರಣನಾದ ಆಚಾರ್ಯ ಹಾಗೂ ಶಿಷ್ಯನು. ಪ್ರಜೆ-ಎಂದರೆ ಸಂತಾನಕ್ಕೆ ಕಾರಣರಾದ ಮಾತಾಪಿತೃಗಳು. ಅಧ್ಯಾತ್ಮವೆಂದರೆ ನಮ್ಮ ಶರೀರದ ಒಳಗಿರುವ ಕರಣಗಳು- ಎಂದರೆ ಮಾತನಾಡುವದಕ್ಕೆ ಸಾಧನವಾದ ದವಡೆ, ಹಲ್ಲು, ನಾಲಿಗೆ- ಇತ್ಯಾದಿಗಳು. ಇವೆಲ್ಲವೂ ಮಹಾವಸ್ತುಗಳೇ ಸರಿ. ಇಂಥ ಮಹಾವಸ್ತುಗಳ ಭಾವನೆಯನ್ನು-ಸಂಹಿತಾಪಾಠಕಾಲಕ್ಕೆ ಒದಗುವ ಸಂಧಿವಿಶಿಷ್ಟವಾದ ಪದಗಳಲ್ಲಿ ಹಿಂದೆ ತಿಳಿಸಿದಂತೆ ವಿಭಾಗಮಾಡಿಕೊಂಡು ಪೂರ್ವೋತ್ತರಾಕ್ಷರಗಳಲ್ಲಿ ಅನುಸಂಧಾನಮಾಡುವದೇ ಸಂಹಿತೋಪಾಸನೆಯೆನಿಸುವದು.

ದೃಷ್ಟಿಕ್ರಮವಿಧಾನಾರ್ಥಾಸ್ತ್ವಥಶಬ್ದಾಃ ಅಮೀ ಸ್ಮೃತಾಃ |
ಲೋಕಾದೀನಧಿಕೃತ್ಯೋಕ್ತೇರಧಿಲೋಕಾದ್ಯತೋ ಭವೇತ್ ||

೬೧. ಪ್ರತಿಯೊಂದು ಪರ್ಯಾಯದಲ್ಲಿಯೂ ಇರುವ 'ಅಥ' ಎಂಬ ಶಬ್ದವು ಆಯಾ ಕ್ರಮದಲ್ಲೇ ಉಪಾಸಿಸಬೇಕೆಂಬುದನ್ನು ತಿಳಿಸುತ್ತದೆ. ಮತ್ತು ಲೋಕವೇ ಮುಂತಾದವುಗಳನ್ನುದ್ದೇಶಿಸಿ ಹೇಳಿರುವದರಿಂದ ಅಧಿಲೋಕ, ಅಧಿಜ್ಯೌತಿಷ-ಇತ್ಯಾದಿ ಹೆಸರುಗಳನ್ನು ಹೊಂದಿದೆ.

ಪೃಥಿವ್ಯಗ್ನಿರಥಾಚಾರ್ಯೋ ಮಾತಾ ಯಾ ಚಾಧರಾ ಹನುಃ |
ಪೂರ್ವಂ ಸ್ಯಾತ್ ಸಂಹಿತಾರೂಪಂ ದಿವಾದಿತ್ಯಾದ್ಯಥೋತ್ತರಮ್ ||

೬೨. ಪೃಥಿವಿ, ಅಗ್ನಿ, ಆಚಾರ್ಯ ತಾಯಿ, ಕೆಳದವಡೆ- ಈ ವಸ್ತುಗಳ ಭಾವನೆಯನ್ನು ಸಂಹಿತೆಯ ಹಿಂದಿನ ಅಕ್ಷರದಲ್ಲಿ ಮಾಡಬೇಕು. ಹಾಗೆಯೇ ದ್ಯುಲೋಕ, ಆದಿತ್ಯ, ಶಿಷ್ಯ, ತಂದೆ, ಮೇಲುದವಡೆ- ಈ ವಸ್ತುಗಳ ದೃಷ್ಟಿಯನ್ನು ಮುಂದಿನ ಅಕ್ಷರದಲ್ಲಿ ಮಾಡಬೇಕು.

ಪೂರ್ವೋ ವರ್ಣಃ ಪೂರ್ವರೂಪಮುತ್ತರಶ್ಚೋತ್ತರಂ ಸ್ಮೃತಮ್ ||
ಸಂಹಿತಾಯಾ ಇತಿ ಜ್ಞೇಯಂ ತತೋಽನ್ಯಾ ಕಾತ್ರ ಸಂಹಿತಾ ||
ಸಂಧಿಃ ಸ್ಯಾನ್ಮಧ್ಯಮಂ ಛಿದ್ರಂ ಆಕಾಶಾದಿಸ್ತಥೈವ ಚ ||

೬೩-೬೪. ಸಂಹಿತೆಯ ಹಿಂದಿನ ಅಕ್ಷರವು ಪೂರ್ವರೂಪವೆಂದೂ ಮುಂದಿನ ಅಕ್ಷರವು ಉತ್ತರರೂಪವೆಂದೂ ತಿಳಿಯಬೇಕು. ಇಷ್ಟೇ ಹೊರತು ಸಂಹಿತೆ ಯೆಂಬುದು ಬೇರೆಯಾಗಿ ಇಲ್ಲ. ಎರಡು ಅಕ್ಷರಗಳ ನಡುವಣ ಛಿದ್ರವೇ ಸಂಧಿಯು. ಅದರಲ್ಲಿ ಆಕಾಶ, ಜಲ, ವಿದ್ಯೆ, ಪ್ರಜೆ, ವಾಕ್–ಈ ಭಾವನೆಗಳನ್ನು ಮಾಡಬೇಕು.

ಸಂಧತ್ತೇ ಯೇನ ಸಂಧಾನಂ ವಾಯ್ವಾದಿರಿಹ ಕೀರ್ತ್ಯತೇ |
ಇತೀಮಾ ಇತಿ ವಾಕ್ಯೇನ ಪ್ರದರ್ಶ್ಯನ್ತೇ ಯಥೋದಿತಾಃ ||

೬೫. ಹಿಂದಿನ ಮತ್ತು ಮುಂದಿನ ಅಕ್ಷರಗಳ ಸಂಬಂಧಕಾರಣವಾದ ಯತ್ನ ವಿಶೇಷವೇ ಸಂಧಾನವೆನಿಸುವದು. ಇದರಲ್ಲಿ ವಾಯು, ವಿದ್ಯುತ್ತು, ಪ್ರವಚನ, ಪ್ರಜನನೇಂದ್ರಿಯ, ನಾಲಗೆ– ಈ ವಸ್ತುಗಳ ಭಾವನೆಯನ್ನು ಮಾಡಬೇಕು. ಹೀಗೆ ಸಂಹಿತೋಪಾಸನಪ್ರಕಾರಗಳು ಹೇಳಲ್ಪಟ್ಟಿವೆ– ಎಂದು ಇತೀಮಾ ಎಂಬ ವಾಕ್ಯದಿಂದ ತಿಳಿಸಲ್ಪಟ್ಟಿದೆ.

ವೇದೋಪಾಸ್ತೇ ತು ಯಸ್ತ್ವೇತಾಃ ಫಲಂ ತಸ್ಯೇದಮುಚ್ಯತೇ
ಶಾಸ್ತ್ರಾರ್ಪಿತಧಿಯೋಪೇತ್ಯ ಹ್ಯಾತಾದಾತ್ಮ್ಯಾಭಿಮಾನತಃ ||
ಚಿರಾಸನಂ ಭವೇದರ್ಥೇ ತದುಪಾಸನಮುಚ್ಯತೇ ||

೬೬. ಯಾವನು ಈ ಐದು ಪ್ರಕಾರದ ಉಪಾಸನೆಗಳನ್ನೂ ಸಮುಚ್ಚಯ ದಿಂದ ಮಾಡುತ್ತಾನೋ ಮತ್ತು ಶಾಸ್ತ್ರವು ತಿಳಿಸಿಕೊಟ್ಟ ಪ್ರಕಾರದಿಂದ ಆಯಾ ದೇವತೆಯೇ ತಾನೆಂಬ ತಾದಾತ್ಮ್ಯಾಭಿಮಾನದಿಂದೊಡಗೂಡಿ ನಿರಂತರವೂ ಅದ ರಲ್ಲಿಯೇ ನೆಲೆಗೊಂಡು ಚಿಂತಿಸುವನೋ ಅದನ್ನು ಉಪಾಸನೆಯೆನ್ನುವರು. ಅವನಿಗೆ (ಮುಂದೆ) ಫಲವನ್ನು ಹೇಳಲಾಗುವದು.

ಸಂಧೀಯತೇಽಸೌ ಸ್ವರ್ಗಾದ್ಯೈಃ ಪ್ರಜಾದಿಭಿರಸಂಶಯಮ್ |
ಮಹತೀಃ ಸಂಹಿತಾ ವೇದ ಯೋ ಯಥೋಕ್ತಾಃ ಸಮಾಹಿತಃ ||

೬೭. ಫಲವನ್ನು ಬಯಸಿ ಈ ಮಹತ್ತಾದ ಸಂಹಿತೆಗಳ ಉಪಾಸನೆಯನ್ನು ಕೈಗೊಳ್ಳುವವನಿಗೆ ಸ್ವರ್ಗ, ಪ್ರಜಾದಿರೂಪವಾದ ಫಲಗಳು ದೊರಕುವವು. ನಿಷ್ಕಾಮನಾಗಿ ಸಮಾಹಿತನಾಗಿ ಮಾಡಿದವನಿಗೆ ಅವು ಬ್ರಹ್ಮವಿದ್ಯೆಯೆಂಬ ಹೆಚ್ಚಿನ ಪ್ರಯೋಜನವನ್ನೇ ಉಂಟುಮಾಡುವವು.

ಮೇಧಾಕಾಮನಿಗೆ ಜಪ

ಯಶ್ಛಂದಸಾಮಿತಿ ಜ್ಞಾನಂ ಮೇಧಾಕಾಮಸ್ಯ ಭಣ್ಯತೇ |
ಆವಹಂತೀತಿ ತಪ್ವತ್ ಸ್ಯಾತ್ ಶ್ರೀಕಾಮಸ್ಯೇಹ ಲಿಂಗತಃ ||

೬೮. 'ಯಶ್ಛಂದಸಾಂ' ಎಂಬ ಮಂತ್ರಗಳ ಜಪವು ಮೇಧಾಕಾಮನಾದವ ನಿಗೆ ಹೇಳಲ್ಪಟ್ಟಿದೆ. ಹಾಗೆಯೇ 'ಆವಹಂತೀ' ಎಂಬ ಮಂತ್ರಗಳು ಶ್ರೀಕಾಮ

ನಾದವನಿಗೆ ಜಪಾರ್ಥವಾಗಿ ಹೇಳಲ್ಪಟ್ಟಿದೆ ಏಕೆಂದರೆ ಮಂತ್ರದಲ್ಲಿ ಹಾಗೆ ಸೂಚನೆಯಿದೆ.

ಛಂದಶ್ಶಬ್ದಾಸ್ತ್ರಯೋ ವೇದಾಸ್ತತ್ಪ್ರಧಾನತ್ವಕಾರಣಾತ್ |
ಋಷಭೋ ವಿಶ್ವರೂಪಶ್ಚ ಸರ್ವವಾಗ್ವ್ಯಾಪ್ತಿಕಾರಣಾತ್ ||

೭೯. ಛಂದಶ್ಶಬ್ದದಿಂದ ಮೂರು ವೇದಗಳು ಹೇಳಲ್ಪಡುತ್ತವೆ. ಆ ಮೂರು ವೇದಗಳಲ್ಲಿಯೂ ಓಂಕಾರವು ಪ್ರಧಾನವಾಗಿರುವದರಿಂದ ಋಷಭನೆಂದರೆ ಓಂಕಾರವು– ಎಂದರ್ಥ. ಅದು ವಾಕ್‌ಪ್ರಪಂಚವನ್ನೆಲ್ಲ ವ್ಯಾಪಿಸಿರುವದರಿಂದ ವಿಶ್ವರೂಪನೆನಿಸಿರುತ್ತದೆ.

ಅಮೃತೇಭ್ಯೋಽಸೌ ವೇದೇಭ್ಯಃ ಪ್ರತಿಭಾತಃ ಪ್ರಜಾಪತೇಃ |
ಓಂಕಾರಸ್ಯ ಹಿ ನಿತ್ಯತ್ವಾನ್ನಾಂಜಸೋತ್ಪತ್ತಿರುಚ್ಯತೇ ||

೭೦. ಅಮೃತರೂಪವಾದ ವೇದಗಳಿಂದ ಪ್ರಜಾಪತಿಬ್ರಹ್ಮನಿಗೆ ಅದು ಹೊಳೆಯಿತು. ಇಷ್ಟೇ ಹೊರತು ಓಂಕಾರವು ನಿತ್ಯವಾಗಿರುವದರಿಂದ ಅದಕ್ಕೆ ನಿಜವಾದ ಹುಟ್ಟೆಂಬುದನ್ನು ಹೇಳಲಾಗುವಂತಿಲ್ಲ.

ಓಂಕಾರಃ ಸರ್ವಕಾಮೇಶಃ ಸ ಇಂದ್ರಃ ಪರಮೇಶ್ವರಃ |
ಮೇಧಯಾ ಪ್ರಜ್ಞಯಾ ಮಾಂ ಸ ಸ್ಪೃಣೋತು ಪ್ರೀಣಯತ್ವಿತಿ ||

೭೧. ಸರ್ವಕಾಮಗಳಿಗೂ ಒಡೆಯನೂ ಇಂದ್ರನೂ ಪರಮೇಶ್ವರನೂ ಆದ ಓಂಕಾರವು ನನ್ನನ್ನು ಮೇಧೆಯಿಂದಲೂ ಪ್ರಜ್ಞೆಯಿಂದಲೂ ಬಲಗೊಳಿಸಲಿ.

ಅಮೃತತ್ವೈಕಹೇತೋಃ ಸ್ಯಾಮಾತ್ಮಜ್ಞಾನಸ್ಯ ಧಾರಣಃ ||
ವಿಚಕ್ಷಣಂ ಚ ಮೇ ಭೂಯಾಚ್ಛರೀರಂ ದೇವ ಸರ್ವದಾ |
ಮನಃ ಪ್ರಹ್ಲಾದಿನೀ ಮೇ ಸ್ಯಾಜ್ಜಿಹ್ವಾ ಮಧುರಭಾಷಿಣೀ ||

೭೨–೭೩. ಅಮೃತತ್ವಕ್ಕೆ ಕಾರಣವಾದ (ಬ್ರಹ್ಮಜ್ಞಾನವನ್ನು) ಎಲೈ ದೇವನೆ, ನಾನು ಧರಿಸುವಂತಾಗಲಿ ! ನನ್ನ ಶರೀರವು ಯಾವಾಗಲೂ ಯೋಗ್ಯವಾದದ್ದಾಗಲಿ. ಮನಸ್ಸು ಆಹ್ಲಾದವುಳ್ಳದ್ದಾಗಲಿ ; ನಾಲಗೆಯು ಮಧುರವಾದ ಮಾತುಗಳನ್ನಾಡುತ್ತಿರಲಿ !

ಕರ್ಣಾಭ್ಯಾಂ ಚೈವ ವೇದಾರ್ಥಂ ಭೂರಿ ವಿಶ್ರುಣುಯಾಮಹವಮ್ |
ಬ್ರಹ್ಮಣಶ್ಚಾಪಿ ಕೋಶಸ್ತ್ವಮಸೇರಿವ ಪರಾತ್ಮನಃ ||

೭೪. ನಾನು ಎರಡು ಕಿವಿಗಳಿಂದಲೂ ಬಹಳವಾಗಿ ವೇದಾರ್ಥವನ್ನು ಕೇಳುವಂತಾಗಲಿ. ಕತ್ತಿಗೆ ಒರೆ (ಚೀಲ) ಹೇಗೋ ಹಾಗೆ ನೀನು ಪರಾತ್ಮನಾದ ಬ್ರಹ್ಮನಿಗೆ ಕೋಶದಂತಿರುವೆ.

ಅಪವಿದ್ಧೈಷಣಾ ಯಸ್ಮಾತ್ ತ್ವಯಿ ಪಶ್ಯಂತಿ ತತ್ಪರಮ್ |
ಅಭಿಧಾನಪ್ರತೀಕತ್ವದ್ವಾರೇಣಾಸ್ಯೋಪಲಬ್ಧಯೇ ||
ತ್ವಮೇವ ಹೇತುತಾಂ ಯಾಸಿ ತಸ್ಮಾತ್ ಕೋಶಸ್ತ್ವಮುಚ್ಯಸೇ ||

೭೫. ಬಯಕೆಗಳನ್ನು ತ್ಯಾಗಮಾಡಿದವರು ನಿನ್ನಲ್ಲಿ ಆ ಪರಬ್ರಹ್ಮವನ್ನು ಕಂಡುಕೊಳ್ಳುವರು. ನೀನು ಅಭಿಧಾನವೆಂಬ ಪ್ರತೀಕನಾಗಿದ್ದುಕೊಂಡು ಆ ಬ್ರಹ್ಮದ ಪಡೆಯುವಿಕೆಗೆ ದ್ವಾರನಾಗಿ ಕಾರಣನಾಗಿರುವೆ. ಆದ್ದರಿಂದ ನಿನ್ನನ್ನು ಕೋಶವೆನ್ನುವರು.

ಲೌಕಿಕಪ್ರಜ್ಞಯಾ ಯಸ್ಮಾನ್ಮೇಧಯಾ ಪಿಹಿತಸ್ತತಃ |
ನೋಪಾಸತೇ ಪರಾಕ್ಚಿತ್ತಾಸ್ತ್ವಾಂ ದೇವಮಮೃತಪ್ರದಮ್ ||

೭೬. ವಿಷಯಾಭಿನಿವೇಶವೆಂಬ ಲೌಕಿಕಪ್ರಜ್ಞೆಯಿಂದ ನೀನು ಮುಚ್ಚಲ್ಪಟ್ಟಿರುವೆಯಾದ್ದರಿಂದ ಬಹಿರ್ಮುಖಚಿತ್ತರಾದವರು ಅಮೃತಪ್ರದನಾದ ನಿನ್ನನ್ನು ಚಿಂತಿಸುವದಿಲ್ಲ.

ರಾಗದ್ವೇಷಾದಿಹೇತುಭ್ಯಃ ಶ್ರುತಂ ಗೋಪಾಯ ಮೇ ಪ್ರಭೋ ||
ಯೇನ ಶ್ರುತೇನ ಸಂಪನ್ನಸ್ತ್ವಾಮೇವ ಪ್ರವಿಶಾಮ್ಯಹಮ್ |
ಪ್ರಾಪಯಂತ್ಯಾವಹಂತೀತಿ ವಿಸ್ತಾರಾರ್ಥೋತ್ತರಾ ಕ್ರಿಯಾ ||

೭೭-೭೮. ಎಲೈ ಪ್ರಭುವೆ, ರಾಗದ್ವೇಷಾದಿಗಳೇ ಮುಂತಾದ ಕಾರಣಗಳಿಂದ ನಾನು ಕೇಳಿದ್ದನ್ನು ಕಾಪಾಡು (ನಾನು ಮಾಡಿರುವ ಬ್ರಹ್ಮಶ್ರವಣವನ್ನು ಅನುಷ್ಠಾನಮಾಡುವಲ್ಲಿ ರಾಗದ್ವೇಷಾದಿಗಳು ನನಗೆ ಅಡ್ಡಿಯುಂಟುಮಾಡದೆ ಇರಲಿ). ಇದರಿಂದ ನಾನು ಶ್ರುತಸಂಪನ್ನನಾಗಿ ನಿನ್ನನ್ನೇ ಒಳಹೊಗುವೆನು. ಇನ್ನು ಆವಹಂತೀ-ಮುಂತಾದ ಕ್ರಿಯೆಗಳು ಶ್ರೀಕಾಮನಾದವನಿಗೆ ಹೋಮಾರ್ಥವಾಗಿ ವಿಸ್ತರಿಸಲ್ಪಡುವವು.

ಶ್ರೀಕಾಮನಿಗೆ ಮಂತ್ರಗಳು

ಕುರ್ವಾಣಾಮುಭಯಂ ದೇವ ಚಿರಮಾವಹ ಮೇ ಶ್ರಿಯಮ್ |
ತತೋ ವೇದಾರ್ಥವಿಜ್ಞಾನಾದನ್ನಪಾನಾಂತದಾಯಿನೀಮ್ ||

೭೯. ಎಲೈ ದೇವನೆ, ವಸ್ತ್ರಾದಿಗಳ ತರುವಿಕೆಯನ್ನೂ ಅದರ ಅಭಿವೃದ್ಧಿಯನ್ನೂ ಉಂಟುಮಾಡುವವಳಾದ ಶ್ರೀದೇವಿಯನ್ನು ನಿರಂತರವೂ ಕರೆದುತರುವವನಾಗು. ವೇದಾರ್ಥವಿಜ್ಞಾನದಿಂದಾರಂಭಿಸಿ ಅನ್ನಪಾನಗಳವರೆಗಿನ ಸಂಪತ್ತನ್ನು ದಯಪಾಲಿಸುವ ಶ್ರೀಯನ್ನು (ತರುವವನಾಗು– ಎಂದರ್ಥ).

ವಿವರಣೆ : ಮೊದಲು ಮೇಧೆಯನ್ನು ದಯಪಾಲಿಸು ಎಂದು ಕೇಳಿ ಅನಂತರ ಸಂಪತ್ತನ್ನು ಕೊಡುವಂತೆ ಕೇಳಲಾಗಿದೆ. ಮೇಧೆ ಎಂದರೆ ವಿದ್ಯಾಧಾರಣಶಕ್ತಿಯು.

ಯಾವನು ವಿದ್ಯಾಸಂಪನ್ನನೋ ಅವನಿಗೇ ಸಂಪತ್ತಿನ ಆವಶ್ಯಕತೆಯಿರುವದು. ಏಕೆಂದರೆ ಅವನು ತಾನು ಅಧ್ಯಯನಮಾಡಿರುವ ವೇದಗಳಲ್ಲಿ ಹೇಳಿರುವ ಕರ್ಮ ಗಳನ್ನು ಆಚರಿಸಲು ಧನವು ಬೇಕಾಗುತ್ತದೆ. ಹಾಗಿಲ್ಲದೆ– ಎಂದರೆ ಮೇಧೆಯೇ ಇಲ್ಲದವನಿಗೆ ಸಂಪತ್ತು ಮಾತ್ರ ದೊರಕಿದರೆ ಅದನ್ನು ಅವನು ದುರುಪಯೋಗ ಪಡಿಸಿಕೊಂಡು ಅನರ್ಥವನ್ನೇ ಹೊಂದುವನು– ಎಂದರ್ಥ.

ಲೋಮಶಾಂ ಪಶುಭಿರ್ಯುಕ್ತಾಂ ಪ್ರತ್ಯೇಕಂ ಸರ್ವದೇತಿ ಚ |
ಮಂತ್ರಾಂತಜ್ಞಾಪನಾರ್ಥಾಯ ಸ್ವಾಹಾಕಾರೋಽಯಮುಚ್ಯತೇ ||

೮೦. ಆಡು, ಹಸು– ಮುಂತಾದ ಪ್ರಾಣಿಗಳಿಂದ ಕೂಡಿದ ಸಂಪತ್ತನ್ನು ಯಾವಾಗಲೂ ಕೊಡುವವನಾಗು–ಎಂದರ್ಥ. ಇಲ್ಲಿ ಸ್ವಾಹಾಕಾರವನ್ನು ಆಯಾ ಮಂತ್ರಗಳ ಕೊನೆಯಲ್ಲಿ ಜೋಡಿಸಿಯೇ ಹೇಳಿರುವುದರಿಂದ ಅವೆಲ್ಲವೂ ಪ್ರತ್ಯೇಕ ವಾದ ಹೋಮಮಂತ್ರಗಳೆಂದು ತಿಳಿಯಬೇಕು.

ತಥೈವ ಚೋತ್ತರತ್ರಾಪಿ ಸ್ವಾಹಾ ತತ್ಸಂಭವಾದ್ ಭವೇತ್ |
ದೈವೇನ ಮಾನುಷೇಣೈವ ವಿತ್ತೇನಾಮುತ್ರಕ್ಯೈಹಿಕಮ್ ||
ಕರ್ಮ ಕರ್ತುಮಲಂ ಯಸ್ಮಾತ್ ಪ್ರಾರ್ಥ್ಯತೇ ತೇನ ತದ್ದ್ವಯಮ್ ||

೮೧. ಹಾಗೆಯೇ ಮುಂದಿನ ಮಂತ್ರಗಳಲ್ಲಿಯೂ ಹೋಮಮಂತ್ರಜ್ಞಾಪ ನಕ್ಕಾಗಿ ಸ್ವಾಹಾ– ಎಂದು ಸೇರಿಸಲಾಗಿದೆ. ಇನ್ನು ದೈವ– ಮಾನುಷ ಎಂಬ ಎರಡು ವಿಧವಾದ ವಿತ್ತ (ಐಶ್ವರ್ಯ)ಗಳ ಸಹಾಯದಿಂದ ಇಹಪರಗಳಲ್ಲಿ ಫಲ ವನ್ನು ಕೊಡುವಂಥ ಕರ್ಮವನ್ನು ಮಾಡಲು ಸಾಧ್ಯವಾಗುವದರಿಂದ ಅವೆರಡನ್ನೂ ಕೇಳಿಕೊಳ್ಳಲಾಗಿದೆ.

ಆಯಂತೂದ್ದಿಶ್ಯ ಮಾಂ ಸರ್ವ ಅಧೀತಿಶ್ರವಣಾರ್ಥಿನಃ |
ಪ್ರಕೃಷ್ಟಾರ್ಥ್ಯರ್ಥಂ ಪ್ರಮಾಯನ್ತು ಯತ್ನತೋ ಬ್ರಹ್ಮಚಾರಿಣಃ ||
ಸಂಭೂಯ ಕೋಟಿಶಶ್ಚೈವ ಮಾಮೇವಾಯಂತು ಸತ್ವರಾಃ ||

೮೨–೮೩. 'ಆ ಮಾಯಂತು' ಎಂಬ ಮಂತ್ರಾರ್ಥವೇನೆಂದರೆ: ವೇದಶ್ರವ ಣಾರ್ಥಿಗಳು ಎಲ್ಲರೂ ನನ್ನನ್ನು ಉದ್ದೇಶಿಸಿ ಬರುವವರಾಗಲಿ. ಉತ್ಕೃಷ್ಟವಾದ ಅರ್ಥ (ಶ್ರವಣ)ಕ್ಕಾಗಿ ಬ್ರಹ್ಮಚಾರಿಗಳು ಸದುದ್ದೇಶದಿಂದ ಬರುವವರಾಗಲಿ. ಮತ್ತು ಕೋಟಿಗಟ್ಟಲೆ ಒಟ್ಟುಗೂಡಿಕೊಂಡು ನನ್ನನ್ನೇ ಜಾಗ್ರತೆಯಾಗಿ ಬಳಿಸಾರಲಿ.

ಜನೇಽಸಾನಿ ಯಶಶ್ಚೇತಿ ಪೂರ್ವಸ್ಯೈತತ್ ಪ್ರಯೋಜನಮ್ |
ವಸ್ಯಸೋಽಹಂ ಸಕಾಶಾಚ್ಚ ಶ್ರೇಯಾನ್ ಸ್ಯಾಂ ಗುಣತೋಽಧಿಕಃ ||
ವಸೀಯಸೋ ವಸ್ಯಸ ಇತೀಲೋಪಶ್ಛಾಂದಸೋ ಭವೇತ್ ||

೮೪. (ಬಹಳಜನ ಬ್ರಹ್ಮಚಾರಿಗಳು ನನ್ನ ಬಳಿಗೇಕೆ ಬರಬೇಕೆಂದರೆ : ಅವರೆಲ್ಲ ನನ್ನಿಂದ ವಿದ್ಯೆಯನ್ನು ಗ್ರಹಣಮಾಡಿದ್ದೇ ಆದರೆ) ಜನಗಳ ಗುಂಪಿನಲ್ಲಿ ನಾನು ಯಶೋವಂತನಾಗುವೆನು– ಹೀಗೆಂದು ಹಿಂದೆ ಕೇಳಿಕೊಂಡಿರುವವರ ಪ್ರಯೋಜನವು ಇದು (ಎಂದು ತಿಳಿಯಬೇಕು). ವಸ್ಯಸಃ ಎಂಬಿದು ವಸೀಯಸಃ ಎಂಬಿದರ ರೂಪಾಂತರವು. ಅತಿಶಯವಾದ (ವಸು) ಐಶ್ವರ್ಯವುಳ್ಳವನಿಗಿಂತಲೂ ನಾನು ಗುಣಗಳಿಂದ ಹಿರಿಯನಾಗಿ ಶ್ರೇಯೋವಂತನಾಗಲೆಳಸುವೆನು. ಇಲ್ಲಿ ವಸೀಯಸಃ ಎಂಬಿದರ ಈಕಾರಲೋಪವು ವೈದಿಕಪ್ರಯೋಗವೆಂದು ತಿಳಿಯಬೇಕು.

ಈಯಸುನ್ ವಸಿತುರ್ವಾ ಸ್ಯಾತ್ ಸ್ಯಾದ್ವಾ ವಸುಮತಃ ಪರಃ |
ಅಭೀಷ್ಟೋಽತಿಶಯೋ ಯಸ್ಮಾತ್ ಸಜಾತೀಯಾದ್ ಗುಣೋನ್ನತೇಃ ||

೮೫. ವಾಸವುಳ್ಳ ಪುರುಷನ ಅಥವಾ ಧನವಂತನಾದ ಮನುಷ್ಯನಿಗಿಂತ ವಸೀಯಾನ್–ಎಂದರೆ ಹೆಚ್ಚಿನ ಗುಣವಿಶೇಷವುಳ್ಳವನು ನಾನಾಗುವೆನು–ಎಂಬರ್ಥದಲ್ಲಿ ವಸಿತಾ ಎಂಬ ಪದದಮೇಲೆ ಈಯಸುನ್–ಎಂಬ (ತದ್ಧಿತಪ್ರತ್ಯಯವು) ಬಂದಿದೆ–ಎಂದು ತಿಳಿಯಬೇಕು. ಏಕೆಂದರೆ ಸಜಾತೀಯವಾದ ವಸ್ತುಗಳಲ್ಲಿ ಹೆಚ್ಚಿನ ಗುಣವುಳ್ಳದ್ದು ಶ್ರೇಷ್ಠವೆಂಬುದು ವಿವಕ್ಷಿತವಾಗಿದೆ.

ವಿವರಣೆ : ಸಂಸ್ಕೃತವ್ಯಾಕರಣದಲ್ಲಿ ನಾಮಪದದಮೇಲೆ ಬರುವ ವಿಶೇಷಾರ್ಥಸೂಚಕಪ್ರತ್ಯಯಗಳನ್ನು ತದ್ಧಿತಪ್ರತ್ಯಯಗಳೆನ್ನುವರು. ಈಯಸುನ್ ಎಂಬಿದು ಇಂಥದ್ದೊಂದು ಪ್ರತ್ಯಯವು. ಮೂಲದಲ್ಲಿರುವ ವಸ ಎಂಬಿದು ವಸೀಯಸಃ ಎಂಬಿದರ ವೈದಿಕರೂಪವು. ಆದ್ದರಿಂದ 'ವಸೀಯಸಃ' ಎಂಬುದು ವಸಿತಾ ಎಂಬ ಪದದಮೇಲೆ ಈಯಸುನ್ ಪ್ರತ್ಯಯವು ಬಂದು ಷಷ್ಠೀವಿಭಕ್ತಿಯಲ್ಲಿ ಆಗಿರುವ ರೂಪವು. ವಸುಮಂತರಲ್ಲಿ ಶ್ರೇಷ್ಠನು ವಸೀಯಾನ್ ಎಂದಭಿಪ್ರಾಯ.

ಬ್ರಹ್ಮಣಃ ಕೋಶಭೂತಂ ತ್ವಾಂ ಭಗವನ್ ಪ್ರವಿಶಾಮ್ಯಹಮ್ |
ಮಾಂ ಚ ಸರ್ವಾತ್ಮಭಾವೇನ ಪ್ರವಿಶೇಶ ಪ್ರಸೀದ ಮೇ ||
ಐಕಾತ್ಮ್ಯಮಾವಯೋರಸ್ತು ಭೇದಹೇತುಂ ವಿನಾಶಯ |
ಅನಂತಭೇದೇ ತ್ವಯ್ಯೇವ ನಿಮೃಜೇ ದುಷ್ಕೃತಂ ತತಃ ||

೮೬–೮೭. ಬ್ರಹ್ಮಕ್ಕೆ ಕೋಶದಂತಿರುವ ಭಗವಂತನೆ, ನಿನ್ನನ್ನು ನಾನು ಪ್ರವೇಶಿಸುವೆನು. ಎಲೈ ಈಶನೆ, ನೀನುಕೂಡ ಸರ್ವಾತ್ಮಭಾವದಿಂದ ನನ್ನನ್ನು ಒಳಹೊಗುವವನಾಗು. ನನಗೆ ಪ್ರಸನ್ನನಾಗು. ನಮ್ಮಿಬ್ಬರಿಗೂ ಏಕಾತ್ಮತ್ವವು ಸಿದ್ಧಿಸಲಿ. ಭೇದಕ್ಕೆ ಕಾರಣವಾಗಿರುವದನ್ನು ನಾಶಗೊಳಿಸುವವನಾಗು. ಅನಂತರ ಅನಂತಭೇದಗಳಿಂದ ತೋರಿಕೊಳ್ಳುವ ನಿನ್ನಲ್ಲಿ ನಾನು ಪಾಪಗಳನ್ನು ತೊಳೆದುಕೊಳ್ಳುವೆನು.

ದ್ರುತಮಾಪೋ ಯಥಾ ಯಂತಿ ನಿಮ್ನೇನ ಮಕರಾಲಯಮ್ ।
ತಥೈವಾಯಾಂತು ಮಾಂ ಸರ್ವೇ ಸಮಂತಾದ್ ಬ್ರಹ್ಮಚಾರಿಣಃ ॥
ಯಸ್ಮಿನ್ನಹಾನಿ ಜೀರ್ಯಂತೇ ಸೋಽಬ್ದೋಽಹರ್ಜರ ಉಚ್ಯತೇ ।
ಅಹರ್ಜರೇ ಯಥಾ ಮಾಸಾಃ ಯನ್ತಿ ಸಂವತ್ಸರಾತ್ಮನಿ ॥

೮೮-೮೯. ನೀರು ಹೇಗೆ ವೇಗವಾಗಿ ಕೆಳಕ್ಕೆ ಹರಿಯುತ್ತಾ ಸಮುದ್ರವನ್ನು ಕುರಿತು ಹೋಗುವವೋ ಹಾಗೆಯೇ ಎಲ್ಲಾ ಕಡೆಯಿಂದಲೂ ಬ್ರಹ್ಮಚಾರಿಗಳು ಸರ್ವರೂ ನನ್ನನ್ನು ಕುರಿತು ಬರುವವರಾಗಲಿ. ಹಗಲುಗಳನ್ನು ಜೀರ್ಣಿಸಿಕೊಳ್ಳುವ ಸಂವತ್ಸರವು ಅಹರ್ಜರವೆನಿಸುವದು. ಅದರಲ್ಲಿ ಮಾಸಗಳು ಒಂದುಗೂಡುವಂತೆ (ನನ್ನನ್ನು ಬ್ರಹ್ಮಚಾರಿಗಳು ಬಂದು ಸೇರಲಿ).

ಆಸನ್ನಗೃಹಪರ್ಯಾಯಃ ಪ್ರತಿವೇಶ ಇಹೋಚ್ಯತೇ ।
ಪ್ರತಿವೇಶ ಇವಾಸಿ ತ್ವಂ ಸರ್ವದುಃಖಾಪನೋದಕೃತ್ ॥
ಪ್ರತಿಪ್ರಾಣಿಪ್ರವೇಶಾದ್ವಾ ಪ್ರತಿವೇಶೋಽಸಿ ಕೀರ್ತ್ಯಸೇ ।
ಮಾಂ ಪ್ರತ್ಯತಃ ಪ್ರಭಾಹಿ ತ್ವಂ ಪ್ರಮಾಪದ್ಯಸ್ವ ಚಾಂಜಸಾ ॥

೯೦-೯೧. ಸಮೀಪದಲ್ಲೇ ಇರುವ ಮತ್ತೊಂದು ಮನೆಯನ್ನು ಪ್ರತಿವೇಶ ವೆನ್ನುವರು. (ಎಲೈ ಓಂಕಾರನೆ), ನೀನು ಬ್ರಹ್ಮಕ್ಕೆ ಪ್ರತಿವೇಶದಂತಿರುವವನಾಗಿ ಎಲ್ಲಾ ದುಃಖಗಳನ್ನೂ ಕಳೆಯುವವನಾಗಿರುವೆ. ಅಥವಾ ಎಲ್ಲಾ ಪ್ರಾಣಿಗಳೂ ನಿನ್ನಲ್ಲಿ ಪ್ರವೇಶಿಸಿರುವವಾದ್ದರಿಂದ ನೀನು ಪ್ರತಿವೇಶನೆನಿಸಿರುವೆ. ಆದ್ದರಿಂದ ನನಗಾಗಿ ಕೂಡಲೆ ಪ್ರಕಾಶಗೊಳ್ಳುವವನಾಗು. ನನ್ನನ್ನು ಹೊಂದುವವನಾಗು.

ವ್ಯಾಹೃತಿಬ್ರಹ್ಮೋಪಾಸನೆ

ಉಪಾಸನಮಥೇದಾನೀಂ ವ್ಯಾಹೃತ್ಯಾತ್ಮನ ಉಚ್ಯತೇ ।
ಸ್ವಾರಾಜ್ಯಫಲಸಿಧ್ಯರ್ಥಂ ಮಹಿಮಾತೋಽಸ್ಯ ಕೀರ್ತ್ಯತೇ ॥

೯೨. ಇನ್ನು ಈಗ ವ್ಯಾಹೃತ್ಯಾತ್ಮಕಬ್ರಹ್ಮದ ಉಪಾಸನೆಯನ್ನು ಹೇಳ ಲಾಗುವದು. ಇದರ ಫಲವು ಸ್ವಾರಾಜ್ಯಸಿದ್ಧಿಯು. ಅದ್ದರಿಂದ ಇದರ ಮಹಿಮೆ ಯನ್ನು ಕೀರ್ತನಮಾಡಲಾಗುವದು.

ಭೂರ್ಭುವಃಸ್ವರಿತಿ ಜ್ಞೇಯಾಃ ಪ್ರಸಿದ್ಧಾಃ ವ್ಯಾಹೃತೀರ್ನರೈಃ ।
ತಿಸ್ರಸ್ತಾಸಾಂ ಚತುರ್ಥೀ ತು ಮಹ ಇತ್ಯೃಷಿರಭ್ಯಧಾತ್ ॥

೯೩. ಭೂಃ, ಭುವಃ, ಸುವಃ– ಎಂದು ಪ್ರಸಿದ್ಧವಾದ ಮೂರು ವ್ಯಾಹೃತಿ ಗಳನ್ನು ಮನುಷ್ಯರು ಅರಿತುಕೊಳ್ಳಬೇಕು. ಈ ಮೂರರ ಜೊತೆಗೆ ನಾಲ್ಕನೆಯ ದಾಗಿ 'ಮಹಃ' ಎಂಬಿದನ್ನೂ (ವ್ಯಾಹೃತಿಯೆಂದು) ಋಷಿಯು ಹೇಳಿರುತ್ತಾನೆ.

ಮಹಾಚಮಸಗೋತ್ರತ್ವಾತ್ ಗೋತ್ರಾರ್ಥಸ್ತದ್ಧಿತೋ ಭವೇತ್ |
ಮಾಹಾಚಮಸ್ಯೋऽತಃ ಸಾಕ್ಷಾನ್ಮಹೋ ವೇದಯತೇ ಪರಾಮ್ ||

೧೪. ಮಹಾಚಮಸಗೋತ್ರದಲ್ಲಿ (ಹುಟ್ಟಿದವನಾದ್ದರಿಂದ) ಗೋತ್ರಾರ್ಥದಲ್ಲಿ ತದ್ಧಿತಪ್ರತ್ಯಯವು ಬಂದು ಮಾಹಾಚಮಸ್ಯನೆನಿಸಿರುತ್ತಾನೆ. ಆದ್ದರಿಂದ ಆ ಹೆಸರಿನ ಋಷಿಯೂ ಮಹಃ ಎಂಬ ಹೆಚ್ಚಿನ ವ್ಯಾಹೃತಿಯನ್ನು ಕಂಡುಹಿಡಿದವನಾಗಿರುವನು.

ಉಪಾಸನಾಂಗತಾರ್ಷೋऽಯಮೃಷಿನಾಮಗ್ರಹೋ ಭವೇತ್ |
ಆರ್ಷೇಯಸ್ಮೃತಿಸಂಮಿಶ್ರಮುಪಾಸನಮಿಹೋಚ್ಯತೇ ||

೧೫. ಋಷಿಯ ಹೆಸರನ್ನು ಇಲ್ಲಿ ಸ್ಮರಿಸಿರುವದು ಉಪಾಸನೆಗೆ ಅಂಗವೆಂದು ತಿಳಿಯಬೇಕು. ಋಷಿಯನ್ನು ಸ್ಮರಿಸಿ ಮಾಡುವಂಥ ಉಪಾಸನೆಯನ್ನೇ ಇಲ್ಲಿ ಹೇಳಿದೆ.

ಚತುರ್ಥೀ ವ್ಯಾಹೃತಿರ್ಯೇಯಂ ಬ್ರಹ್ಮೇತ್ಯೇವಮುಪಾಸ್ಯತಾಮ್ |
ಮಹತ್ತ್ವಾದ್ ಬ್ರಹ್ಮ ಸಾ ಜ್ಞೇಯಾ ಆತ್ಮಾ ಚಾಪ್ನೋತಿ ಯೇನ ಸಾ ||

೧೬. ನಾಲ್ಕನೆಯದಾದ ಯಾವ ಈ ವ್ಯಾಹೃತಿಯುಂಟೋ ಇದನ್ನು ಬ್ರಹ್ಮವೆಂದು ಉಪಾಸನೆಮಾಡತಕ್ಕದ್ದು. ಇದು ಮಹತ್ತಾದ್ದರಿಂದ ಬ್ರಹ್ಮವೆಂದೂ ಎಲ್ಲವನ್ನೂ ವ್ಯಾಪಿಸಿರುವದರಿಂದ ಆತ್ಮನೆಂದೂ ತಿಳಿಯಬೇಕು.

ಆದಿತ್ಯಚಂದ್ರಬ್ರಹ್ಮಾನ್ನಭೂತೇನ ವ್ಯಾಪಿನಾ ಯತಃ ||
ಲೋಕದೇವಾದಯೋ ವ್ಯಾಪ್ತಾ ಆತ್ಮಾ ತೇನ ಮಹೋ ಭವೇತ್ |
ದೇವತಾಗ್ರಹಣಂ ಚಾತ್ರ ಪರಿಶಿಷ್ಟೋಪಲಕ್ಷಣಮ್ ||

೧೭–೧೮. ಆದಿತ್ಯ, ಚಂದ್ರ, ಬ್ರಹ್ಮ, ಅನ್ನ– ಎಂಬ ದೇವತೆಗಳನ್ನೊಳಗೊಂಡ ಮಹಃ– ಎಂಬಿದು ಲೋಕ, ದೇವಾದಿಗಳನ್ನೂ ವ್ಯಾಪಿಸಿಕೊಂಡಿದೆಯಾಗಿ 'ಮಹಃ' ಎನಿಸಿರುತ್ತದೆ. ಇಲ್ಲಿ ದೇವತೆಗಳನ್ನು ಗ್ರಹಿಸಿರುವದು ಉಳಿದ ಲೋಕಾದಿಗಳನ್ನು ತೆಗೆದುಕೊಳ್ಳಬೇಕೆಂಬುದಕ್ಕೆ ಹೆಗ್ಗುರುತಾಗಿದೆ.

ಲೋಕಾ ದೇವಾಸ್ತಥಾ ವೇದಾಃ ಪ್ರಾಣಾಶ್ಚಾಂಗಾನಿ ಸರ್ವಶಃ |
ಮಹ ಇತ್ಯಸ್ಯ ಜ್ಞೇಯಾನಿ ವ್ಯಾಹೃತ್ಯಾತ್ಮನ ಏವ ಹಿ ||

೧೯. ಲೋಕಗಳು, ದೇವತೆಗಳು, ವೇದಗಳು, ಪ್ರಾಣಗಳು–ಈ ಎಲ್ಲವೂ ಎಲ್ಲಾ ರೀತಿಯಿಂದಲೂ ವ್ಯಾಹೃತ್ಯಾತ್ಮಕವಾದ ಮಹಃ ಎಂಬುದಕ್ಕೆ ಅಂಗಗಳೆಂದು ತಿಳಿಯಬೇಕು.

ಮಹೀಯನ್ತೇ ಯತಃ ಸರ್ವೇ ಆದಿತ್ಯಾದ್ಯಾತ್ಮನಾ ಪರೇ |
ಮಹ ಇತ್ಯೇವಮುಕ್ತೇನ ತಸ್ಮಾದಾತ್ಮಾ ಭವೇನ್ಮಹಃ ||

೧೧೦. ಉಳಿದ ವ್ಯಾಹೃತಿಗಳೆಲ್ಲವೂ ಆದಿತ್ಯಾದಿರೂಪದಿಂದ ಬೆಳಗುತ್ತಿರುವದು ಈ ವ್ಯಾಹೃತಿಯಿಂದಲೇ. ಆದ್ದರಿಂದ ಮಹಃ ಎಂದು ಇದನ್ನು ಕರೆಯಲಾಗಿದೆ. ಆದ್ದರಿಂದ ಇದು ಉಳಿದುದೆಲ್ಲಕ್ಕೂ ಆತ್ಮವು.

ಆತ್ಮನಾ ಹಿ ಮಹೀಯನ್ತೇ ಹಸ್ತಾದ್ಯಂಗಾನಿ ಸರ್ವಶಃ ।
ಯಥಾ ಲೋಕಾದಯಸ್ತದ್ವದಾದಿತ್ಯಾದ್ಯಾತ್ಮನೈಧಿತಾಃ ॥

೧೧೧. ಹೇಗೆ ಕೈ-ಮುಂತಾದ ಅವಯವಗಳು ಅವಯವಿಯಾದ ಆತ್ಮನಿಂದ ಒಡಗೂಡಿ ಪ್ರಕಾಶಿಸುವವೋ ಹಾಗೆ ಲೋಕಾದಿಗಳು ಆದಿತ್ಯಾದ್ಯಾತ್ಮನಾದ ಹಿರಣ್ಯಗರ್ಭನಿಂದ– ಎಂದರೆ ಮಹಃ ಎನಿಸಿರುವ ವ್ಯಾಹೃತ್ಯಾತ್ಮನಿಂದ ಪುಷ್ಟವಾಗಿರುವವು.

ಅಯಂ ಲೋಕೋಽಗ್ನಿರ್ಋಗ್ವೇದಃ ಪ್ರಾಣಶ್ಚೇತಿ ಚತುರ್ವಿಧಾ ।
ಭೂರಿತಿ ವ್ಯಾಹೃತಿರ್ಜ್ಞೇಯಾ ತಥೈವಾನ್ಯಾ ಯಥಾ ಕ್ರಮಮ್ ॥

೧೧೨. ಭೂಃ ಎಂಬ ವ್ಯಾಹೃತಿಯು ಭೂಲೋಕ, ಅಗ್ನಿದೇವತೆ, ಋಗ್ವೇದ ಪ್ರಾಣ– ಈ ರೀತಿಯಾಗಿ ನಾಲ್ಕು ರೂಪಗಳಾಗಿರುತ್ತದೆ–ಎಂದು ತಿಳಿಯಬೇಕು. ಹಾಗೆಯೇ ಕ್ರಮವಾಗಿ ಉಳಿದ ವ್ಯಾಹೃತಿಗಳನ್ನೂ ನಾಲ್ಕುನಾಲ್ಕಾಗಿ ಅರಿಯಬೇಕು.

ಅಂತರಿಕ್ಷಂ ಚ ವಾಯುಶ್ಚ ಸಾಮ ಚಾಪಾನ ಏವ ಚ ।
ಚತುರ್ಧಾ ಭುವ ಇತ್ಯೇಷಾ ದ್ವಿತೀಯಾ ವ್ಯಾಹೃತಿರ್ಮತಾ ॥
ದ್ಯೌರಾದಿತ್ಯೋ ಯಜುಶ್ಚೇತಿ ವ್ಯಾನಶ್ಚೇತಿ ಚತುರ್ಥ್ಯಪಿ ।
ಮಹಶ್ಚೇತಿ ಪುರಾ ಪ್ರೋಕ್ತಾ ಚತಸ್ರಃ ಸ್ಯುಶ್ಚತುರ್ವಿಧಾಃ ॥

೧೧೩–೧೧೪. ಭುವಃ ಎಂಬಿದು ಅಂತರಿಕ್ಷಲೋಕ, ವಾಯುದೇವತೆ, ಸಾಮವೇದ, ಅಪಾನ– ಈ ರೀತಿಯಾಗಿ ನಾಲ್ಕು ರೂಪಗಳಾಗಿರುತ್ತದೆ. ಸುವಃ ಎಂಬಿದು ದ್ಯುಲೋಕ, ಆದಿತ್ಯ, ಯಜುರ್ವೇದ, ವ್ಯಾನ–ಈ ರೀತಿಯಾಗಿ ನಾಲ್ಕು ರೂಪಗಳಾಗಿದೆ. ಮಹಃ ಎಂಬಿದು ಆದಿತ್ಯ, ಚಂದ್ರ, ಬ್ರಹ್ಮ, ಅನ್ನ–ಎಂಬ ನಾಲ್ಕು ರೂಪಗಳಾಗಿರುವದು. ಹೀಗೆ ನಾಲ್ಕು ವ್ಯಾಹೃತಿಗಳೂ ನಾಲ್ಕು ವಿಧಗಳಾಗಿರುವವು.

ಉಕ್ತಾನಾಂ ಪುನರುಕ್ತಿಃ ಸ್ಯಾದುಪಾಸಾನಿಯಮಾಯ ಯಾ ।
ಯಥೋಕ್ತಾ ವ್ಯಾಹೃತೀರೇತಾ ವೇದೋಪಾಸ್ತೇ ತು ಯೋ ನರಃ ।
ಸ ವೇದ ಸಕಲಂ ಬ್ರಹ್ಮ ವಕ್ಷ್ಯಮಾಣವಿಶೇಷಣಮ್ ॥

೧೧೫. ಹೇಳಿರುವವುಗಳನ್ನೇ ಮತ್ತೆ ಹೇಳಿರುವದೇಕೆಂದರೆ ಅವುಗಳ ಸ್ತುತಿಗಾಗಿ ಅಲ್ಲ. ಮತ್ತೇನೆಂದರೆ ಈ ವ್ಯಾಹೃತಿಗಳನ್ನು ನಾಲ್ಕು ವಿಧವಾಗಿ ಉಪಾಸನೆ

ಮಾಡಬೇಕೆಂದು ನಿಯಮಿಸುವದಕ್ಕಾಗಿ ಹೇಳಿದೆ. ಯಾವನು ಈ ವ್ಯಾಹೃತಿಗಳನ್ನು ಹೀಗೆ ಉಪಾಸನೆಮಾಡುವನೋ ಅವನು ಮುಂದೆ ಹೇಳುವ ವಿಶೇಷಣಗಳಿಂದ ಕೂಡಿದ ಬ್ರಹ್ಮವನ್ನು ಪೂರ್ಣವಾಗಿ ತಿಳಿದವನಾಗುತ್ತಾನೆ.

ಬ್ರಹ್ಮ ವೇದ ಸ ಇತ್ಯೇನಂ ಪುನರುಕ್ತಂ ಕಿಮುಚ್ಯತೇ |
ವಕ್ಷ್ಯಮಾಣಾನುವಾಕಾರ್ಥವಿವಕ್ಷುತ್ವಾದದೋಷತಾ ||

೧೦೬. 'ಅವನು ಬ್ರಹ್ಮವನ್ನರಿತವನಾಗುವನು' ಎಂಬುದಾಗಿ ಪುನರುಕ್ತಿಯನ್ನು ಹೇಳಿರುವದೇಕೆಂದರೆ ಮುಂದಿನ ಅನುವಾಕದಲ್ಲಿ ಹೇಳಿರುವ ಅರ್ಥವನ್ನು ಸೂಚನೆಮಾಡುವ ಉದ್ದೇಶವಿರುವದರಿಂದ ದೋಷವಿಲ್ಲ.

ಸ ಯ ಏಷೋಽನ್ತರಿತ್ಯಾದಿ ವಕ್ಷ್ಯಮಾಣಾನುವಾಕಗಮ್ |
ವಸ್ತೂಪಾಸ್ಯಮಿಹೈವೇತಿ ಸ ವೇದೇತಿ ಪುನರ್ವಚಃ ||
ಏಕವಾಕ್ಯತ್ವಮೇತಸ್ಮಾದ್ದ್ವಯೋರಪ್ಯನುವಾಕಯೋಃ ||

೧೦೭–೧೦೮. 'ಸ ಯ ಏಷಃ....' ಮುಂತಾದ ಮುಂದಿನ ಅನುವಾಕಗತವಾದ ವಸ್ತುವನ್ನು ಇಲ್ಲಿಯೇ ಚಿಂತಿಸಬೇಕು ಎಂಬಿದಕ್ಕಾಗಿ ಸ ವೇದ ಎಂದು ಮತ್ತೆ ಹೇಳಿದೆ. ಈ ಕಾರಣದಿಂದ ಈ ಎರಡು ಅನುವಾಕಗಳಿಗೂ ಏಕವಾಕ್ಯತ್ವವು ಸಿದ್ಧವಾಯಿತು.

ಲೋಕಾ ದೇವಾದಯಶ್ಚಾಸ್ಮೈ ಉಪಾಸಿತ್ರೇ ಯಥಾಬಲಮ್ |
ಬಲಿಂ ಭೋಗಂ ಪ್ರಯಚ್ಛಂತಿ ಫಲಮೇತದುಪಾಸಿತುಃ ||

೧೦೯. ಲೋಕಗಳೂ ದೇವಾದಿಗಳೂ ಈ ಉಪಾಸಕನಿಗೆ ತಮ್ಮ ಶಕ್ತ್ಯನುಸಾರವಾಗಿ ಬಲಿ(ಕಾಣಿಕೆ)ಗಳನ್ನೂ ಭೋಗಗಳನ್ನೂ ಕೊಡುವರು. ಇದೇ ಉಪಾಸನೆಯ ಫಲವು.

ಮನೋಮಯಾತ್ಮನ ಉಪಾಸನೆ

ತಿಸ್ರೋ ವ್ಯಾಹೃತಯೋ ಯಸ್ಯ ಬ್ರಹ್ಮಣೋಂಗಾನ್ಯವಾದಿಷಮ್ |
ಸ್ಥಾನಾದಿಸಿದ್ಧಯೇ ತಸ್ಯ ಪರಃ ಸಂದರ್ಭ ಉಚ್ಯತೇ ||

೧೧೦. (ಮಹಃ ಎಂಬ ವ್ಯಾಹೃತಿರೂಪವಾದ) ಬ್ರಹ್ಮದ ಅಂಗಗಳಾಗಿ ಹೇಳಲ್ಪಟ್ಟ ಯಾವ ಮೂರು ವ್ಯಾಹೃತಿಗಳುಂಟೋ ಅವುಗಳಿಗೆ ಆಧಾರವಾದ ಮಹಃ ಎಂಬುದಕ್ಕೆ ಸ್ಥಾನಾದಿಗಳನ್ನು ತಿಳಿಸುವದಕ್ಕಾಗಿ ಮುಂದಿನ ಸಂದರ್ಭವು ಬಂದಿರುತ್ತದೆ.

ಸ ಯಃ ಪರೋಕ್ಷನಿರ್ದಿಷ್ಟಃ ಪ್ರತ್ಯಕ್ಷೇಣ ಸ ದರ್ಶ್ಯತೇ |
ಅಂತರ್ಹೃದಯ ಆಕಾಶೇ ಪಶ್ಯಾತ್ಮಾನಂ ತ್ವಮಾತ್ಮನಾ ||

೧೧೧. ಯಾವದು ಸಃ ಎಂಬ ಮಾತಿನಿಂದ ಪರೋಕ್ಷವಾಗಿ ನಿರ್ದೇಶಿಸಲ್ಪಟ್ಟಿತ್ತೋ ಅದು ಈಗ 'ಹೃದಯದೊಳಗಿನ ಆಕಾಶದಲ್ಲಿ ನೀನು ಆತ್ಮನಾಗಿ ಆತ್ಮನನ್ನು ಕಂಡುಕೊ'–ಎಂದು ಪ್ರತ್ಯಕ್ಷವಾಗಿ ತಿಳಿಸಲ್ಪಡುತ್ತದೆ.

ಪದ್ಮಾಕಾರೋ ಹಿ ಮಾಂಸಸ್ಯ ಖಂಡೋ ಹೃದಯಮುಚ್ಯತೇ |
ಆಕಾಶಸ್ತಸ್ಯ ಮಧ್ಯೇ ಯೋ ಬುದ್ಧೇರಾಯತನಂ ಸದಾ ||
ತಸ್ಮಿನ್ ಸ ಪುರುಷೋ ಜ್ಞೇಯೋ ಮನೋಮಯ ಇಹಾಂಜಸಾ |

೧೧೨. ಪದ್ಮಾಕಾರವಾದ ಮಾಂಸಖಂಡವು ಹೃದಯವೆನಿಸಿರುತ್ತದೆ. ಅದರ ಮಧ್ಯದಲ್ಲಿ ಯಾವ ಆಕಾಶವಿದೆಯೋ ಅದು ಯಾವಾಗಲೂ ಬುದ್ಧಿಗೆ ಆಶ್ರಯವಾಗಿರುತ್ತದೆ. ಆ (ಆಕಾಶದಲ್ಲಿ) ಮನೋಮಯಪುರುಷನನ್ನು ಉಪಾಸನೆ ಮಾಡಬೇಕು– ಎಂದು ಇಲ್ಲಿ ಹೇಳಿದೆ.

ಶಶಿಸ್ಥರಾಹುವತ್ಸಾಕ್ಷಾನ್ಮನಸ್ಯೇವೋಪಲಭ್ಯತೇ ||
ಮನುತೇ ಮನಸಾ ಯಸ್ಮಾತ್ತೇನಾಯಂ ಸ್ಯಾನ್ಮನೋಮಯಃ |
ಸ್ಯಾದ್ವಾ ತದಭಿಮಾನಿತ್ವಾತ್ತಲ್ಲಿಂಗಾತ್ತನ್ಮಯಃ ಸ್ಮೃತಃ ||

೧೧೩–೧೧೪. ಚಂದ್ರನ ಬೆಳಕಿನಲ್ಲಿ ಕಂಡುಬರುವ ರಾಹುವಿನಂತೆ ಮನಸ್ಸೆಂಬ ಉಪಾಧಿವಿಶಿಷ್ಟನಾಗಿ ಅಲ್ಲಿಯೇ ಈ (ಮನೋಮಯಾತ್ಮನು) ಕಂಡುಬರುವನು. ಮನಸ್ಸಿನಿಂದ ಮನನಮಾಡಲ್ಪಡುವವನಾಗಿರುವದರಿಂದ, ಅಥವಾ ಮನಸ್ಸಿಗೆ ಅಭಿಮಾನಿಯಾಗಿರುವದರಿಂದ, ಅಥವಾ ಮನಸ್ಸೆಂಬುದೇ ಈ ಆತ್ಮನಿಗೆ ಗುರುತಾಗಿರುವದರಿಂದಲೂ ಮನೋಮಯನೆನಿಸಿರುತ್ತಾನೆ.

ಅಮೃತೋಽಮರಣಧರ್ಮಾ ಸ್ಯಾದ್ಧಿರಣ್ಮಯಂ ಜ್ಯೋತಿರುಚ್ಯತೇ |
ತನ್ಮಯೋಽಯಂ ಪುಮಾನ್ ಧ್ಯೇಯಃ ತತ್ಪ್ರಾಪ್ತ್ಯೈ ದ್ವಾಃ ತಥೋಚ್ಯತೇ ||

೧೧೫. ಮರಣವೆಂಬ ವಿಕಾರವಿಲ್ಲದ ಅಮೃತನೂ ಹಿರಣ್ಯದಂತೆ ಜ್ಯೋತಿರ್ಮಯನೂ ಆದ ಮನೋಮಯಾತ್ಮನು ಇಲ್ಲಿ ಧ್ಯಾನವಿಷಯನಾಗಿರುತ್ತಾನೆ. ಅನಂತರ ಅವನನ್ನು ಪಡೆಯಲು ಇನ್ನುಮುಂದೆ ಮಾರ್ಗವನ್ನು ಹೇಳಲಾಗುವದು.

ಊರ್ಧ್ವಂ ಪ್ರವೃತ್ತಾ ನಾಡ್ಯೇಕಾ ಸುಷುಮ್ನಾ ಹೃದಯಾದಧಿ |
ಗತ್ವಾ ತಾಲುಕಯೋರ್ವಿದ್ವಾನ್ ಮಧ್ಯೇನೋದಾನಗರ್ಭಯಾ ||
ಸ್ತನವಲ್ಲಂಬತೇ ಕಂಠೇ ಮಾಂಸಖಂಡಸ್ತ್ವಧೋ ಮುಖಃ |
ಇಂದ್ರಸ್ಯಾಸೌ ಸ್ಮೃತಿರ್ಜ್ಞೇಯಾ ರೇಚಕೇನ ತಯಾ ವ್ರಜೇತ್ ||

೧೧೬–೧೧೭. ಹೃದಯದಿಂದ ಮೇಲಕ್ಕೆ ಊರ್ಧ್ವಮುಖವಾಗಿ ಸುಷುಮ್ನಾ ಎಂಬ ಹೆಸರಿನ ನಾಡಿಯೊಂದು ಹೊರಟಿರುವದು. ಅದು ಯೋಗಶಾಸ್ತ್ರಪ್ರಸಿದ್ಧ

ವಾಗಿರುವದು. ಉಪಾಸಕನು ಕತ್ತಿನಭಾಗದಲ್ಲಿ ಸ್ತನದಂತೆ ಇಳಿಯಬಿದ್ದಿರುವ ಮಾಂಸಖಂಡವನ್ನು ಭೇದಿಸಿಕೊಂಡು ಎರಡು ದವಡೆಗಳ ನಡುವೆ ಹಾದು ಉದಾನ ವಾಯುಪೂರಿತವಾದ ಈ ಸುಷುಮ್ನೆಯ ಮಾರ್ಗದಿಂದ ಹೊರಟು ರೇಚಕಪ್ರಾಣಾ ಯಾಮ ಎಂಬ ಬಲದಿಂದ ಇಂದ್ರಯೋನಿ ಎನಿಸಿರುವ ಹಿರಣ್ಯಗರ್ಭಮಾರ್ಗದಿಂದ ಮುಂದುವರೆದು ಮನೋಮಯಬ್ರಹ್ಮವನ್ನು ಸೇರುವವನಾಗಬೇಕು.

ತಯಾ ಗತ್ವಾಽಥ ಯಾಯಾತ್ಸ ಯತ್ಕೇಶಾಂತೋ ವಿವರ್ತತೇ |
ಭಿತ್ವಾ ಶಿರಃಕಪಾಲೇ ದ್ವೇ ಭೂರಿತ್ಯಗ್ನಿಂ ಪ್ರಪದ್ಯತೇ ||
ದ್ವಿತೀಯಯಾಽಥ ವ್ಯಾಹೃತ್ಯಾ ವಾಯೌ ಸಂಪ್ರತಿತಿಷ್ಠತಿ |
ಆದಿತ್ಯೇ ಸುವರಿತ್ಯೇವಂ ಲೋಕೇಶೇ ಪ್ರತಿತಿಷ್ಠತಿ ||
ಸ್ಥಿತ್ವೈವಮಂಗಭೂತೇಷು ಪ್ರತಿತಿಷ್ಠತ್ಯಥಾಂಗಿನಿ |
ಮಹ ಇತ್ಯಾತ್ಮನಿ ಸ್ಥಿತ್ವಾ ಸ್ವಾರಾಜ್ಯಂ ಪ್ರತಿಪದ್ಯತೇ ||

೧೧೮-೧೨೦. ಇಂದ್ರಮಾರ್ಗದಿಂದ ಹೋಗುವಾಗ ನಡುನೆತ್ತಿಯಲ್ಲಿರುವ ಯಾವ ಬೈತಲೆಯುಂಟೋ ಅಲ್ಲಿ ತಲೆಯನ್ನು ಎರಡು ಹೋಳಾಗಿ ಸೀಳಿಕೊಂಡು ಹೊರಟವನಾದರೆ ಮೊದಲು ಪ್ರಥಮವ್ಯಾಹೃತಿಯ ಸಾಕ್ಷಾತ್ಕಾರದಿಂದ ಅಗ್ನಿ ಲೋಕವನ್ನು ಪಡೆಯುವವನಾಗುವನು. ಅನಂತರ ಎರಡನೆಯ ವ್ಯಾಹೃತ್ಯು ಪಾಸನೆಯಿಂದ ವಾಯುಲೋಕವನ್ನೂ ಮೂರನೆಯ ವ್ಯಾಹೃತ್ಯುಪಾಸನೆಯಿಂದ ಆದಿತ್ಯಲೋಕವನ್ನೂ ಪಡೆದವನಾಗುವನು. ಹೀಗೆ ಮಹಃ ಎಂಬ ವ್ಯಾಹೃತಿಯ ಅಂಗಭೂತವಾದ ಭೂರಾದಿವ್ಯಾಹೃತಿಗಳ ಉಪಾಸನಾಫಲವಾದ ಅಗ್ನ್ಯಾದಿ ಲೋಕಗಳಲ್ಲಿ ನೆಲೆಗೊಂಡವನಾಗಿ ಅನಂತರ ಅಂಗಿಯಾದ ಎಂದರೆ ಪ್ರಧಾನವಾದ ಮಹಃ ಎಂಬ ವ್ಯಾಹೃತ್ಯಾತ್ಮನಲ್ಲಿ ನೆಲೆಸಿ ಸ್ವಾರಾಜ್ಯವನ್ನು ಪಡೆಯುತ್ತಾನೆ.

ನಾನ್ಯೋ ರಾಜಾಸ್ತಿ ಯಸ್ಯೇಹ ರಾಜಾ ಯಃ ಸ್ವಯಮೇವ ತು |
ಸ ಸ್ವರಾಟ್ ತಸ್ಯ ಭಾವಶ್ಚ ಸ್ವಾರಾಜ್ಯಮಿಹ ಕೀರ್ತ್ಯತೇ ||

೧೨೧. ಬೇರೊಬ್ಬ ರಾಜನಾಗಲಿ, (ಒಡೆಯನಾಗಲಿ) ಇಲ್ಲದೆ ತಾನೇ ರಾಜನಾಗಿರುವಿಕೆಯು ಸ್ವರಾಟ್ ಎನಿಸುವದು. ಅದರ ಭಾವವೇ ಸ್ವಾರಾಜ್ಯವು. ಅದನ್ನು ಇಲ್ಲಿ ಹೇಳಿದೆ.

ಮನೋ ಗೀಶ್ಚಕ್ಷುಷಾಂ ಚೈವ ಶ್ರೋತ್ರವಿಜ್ಞಾನಯೋರಪಿ |
ಆಪ್ನೋತಿ ಪರ್ಯುಪಾಸೀನಃ ಸ್ವಾರಾಜ್ಯಂ ನಾತ್ರ ಸಂಶಯಃ ||
ತತ ಏತತ್ಫಲಂ ದಿವ್ಯಂ ಯಥೋಕ್ತೋಪಾಸನಾತ್ ಭವೇತ್ |

೧೨೨. ಮನಸ್ಸು, ವಾಕ್ಕು, ಕಣ್ಣು, ಕಿವಿ, ವಿಜ್ಞಾನ–ಇವುಗಳೆಲ್ಲಕ್ಕೂ ಒಡೆಯ ನಾಗುವನು. ಹೀಗೆ ಉಪಾಸಕನು ಸ್ವಾರಾಜ್ಯವನ್ನು ಹೊಂದುವನೆಂಬುದರಲ್ಲಿ ಸಂಶಯವಿಲ್ಲ. ಹಿಂದೆ ಹೇಳಿದ ಉಪಾಸನೆಯಿಂದ ಈ ದಿವ್ಯಫಲವುಂಟಾಗುವದು.

ವ್ಯಾಹೃತ್ಯಾತ್ಮನ ಏತಸ್ಯ ರೂಪಸಂಕ್ಲೃಪ್ತಯೇಽಧುನಾ |
ಉಪಾಸನವಿಧಿತ್ಸಾಯೈ ಪರೋ ಗ್ರಂಥೋಽವತಾರ್ಯತೇ ||

೧೨೩. ವ್ಯಾಹೃತ್ಯಾತ್ಮನಾದ ಹಿರಣ್ಯಗರ್ಭನ ರೂಪಪ್ರಾಪ್ತಿಗಾಗಿ ಉಪಾಸನೆಯನ್ನು ಹೇಳುವದಕ್ಕಾಗಿ ಮುಂದಿನ ಗ್ರಂಥವನ್ನಾರಂಭಿಸಲಾಗಿದೆ.

ವಿಯದ್ದೇಹಮಿದಂ ಬ್ರಹ್ಮ ವಿಯತ್ಸದೃಶಮೇವ ವಾ |
ಮೂರ್ತಾಮೂರ್ತಸ್ವಭಾವಂ ಚ ತ್ರೈಲೋಕ್ಯಾದ್ಯಾತ್ಮತೋ ಭವೇತ್ ||
ಇಂದ್ರಿಯಾರಮಣಂ ಚೈವ ಮನ ಆನಂದಮೇವ ಚ |
ಶಾಂತ್ಯಾ ಸಮೃದ್ಧಮತ್ಯರ್ಥಂ ಬ್ರಹ್ಮೈತದಮೃತಂ ಪರಮ್ ||

೧೨೪-೧೨೫. ಈ ಬ್ರಹ್ಮವು ಆಕಾಶವನ್ನು ಶರೀರವಾಗಿ ಉಳ್ಳದ್ದಾಗಿದೆ. ಅಥವಾ ಆಕಾಶಕ್ಕೆ ಸಮಾನವಾದ ದೇಹವುಳ್ಳದ್ದಾಗಿದೆ. ಮೂರು ಲೋಕಗಳಿಗೂ ಆತ್ಮನಾಗಿದ್ದುಕೊಂಡು ಮೂರ್ತಾಮೂರ್ತಸ್ವಭಾವದ್ದಾಗಿದೆ. ಮತ್ತು ಇಂದ್ರಿಯಗಳ ಆವರಣಸ್ಥಾನವೂ ಮನಸ್ಸಿನ ಆನಂದಸ್ಥಾನವೂ ಆಗಿದ್ದು ಶಾಂತಿಯಿಂದ ತುಂಬಿತುಳುಕುತ್ತಿದೆ. ಅಮೃತವೂ ಪರವೂ ಆದ ಈ ಬ್ರಹ್ಮವು ಮೇಲೆ ತಿಳಿಸಿದ ಗುಣವಿಶೇಷಗಳಿಂದ ಕೂಡಿದ್ದಾಗಿರುವದು.

ಪ್ರಾಚೀನಯೋಗ್ಯೋಪಾಸ್ವೇತದ್ಯಥಾವ್ಯಾಖ್ಯಾತಲಕ್ಷಣಮ್ |
ಮಾಹಾಚಮಸ್ಯ ಆಚಾರ್ಯ ಅಂತೇವಾಸಿನಮುಕ್ತವಾನ್ ||

೧೨೬. ಮಾಹಾಚಮಸ್ಯನೆಂಬ ಆಚಾರ್ಯನು ತನ್ನ ಶಿಷ್ಯನನ್ನು ಕುರಿತು "ಎಲೈ ಪ್ರಾಚೀನಯೋಗ್ಯನೆ, ಈವರೆಗೆ ಹೇಳಿದ ಲಕ್ಷಣವುಳ್ಳ ಬ್ರಹ್ಮವನ್ನು ಉಪಾಸನೆಮಾಡುವವನಾಗು" ಎಂದು ಹೇಳಿದನು.

ಪಾಂಕ್ತೋಪಾಸನೆ

ಪಾಂಕ್ತಸ್ವರೂಪೇಣೈತಸ್ಯ ಭೂಯೋಽಪ್ಯನ್ಯದುಪಾಸನಮ್ |
ಉದಾರಫಲಸಿದ್ಧ್ಯರ್ಥಂ ಪೃಥಿವೀತ್ಯುಚ್ಯತೇಽಧುನಾ ||

೧೨೭. ಇಲ್ಲಿ ಪ್ರಕೃತನಾಗಿರುವ ಹಿರಣ್ಯಗರ್ಭನನ್ನೇ ಪಾಂಕ್ತಸ್ವರೂಪದಿಂದ ಉಪಾಸನೆಮಾಡಬೇಕೆಂದು ತಿಳಿಸುವದಕ್ಕಾಗಿ ಮುಂದಿನ ಗ್ರಂಥವು ಆರಂಭವಾಗಿದೆ. ಉದಾರವಾದ ಫಲಸಿದ್ಧಿಗಾಗಿ ಪೃಥಿವೀ....ಮುಂತಾದ ಗ್ರಂಥದಿಂದ ಈ ಪಾಂಕ್ತೋಪಾಸನೆಯನ್ನು ಈಗ ಹೇಳಲಾಗುವದು.

ಪಂಚಭಿರ್ಯುತ ಆರಬ್ಧಂ ಜಗತ್ ಪಾಂಕ್ತಮತೋ ಭವೇತ್ |
ಯಜ್ಞಃ ಕ್ಲೃಪ್ತೋ ಭವೇದೇವಂ ಪಾಂಕ್ತೋ ಯಜ್ಞ ಇತಿ ಸ್ಮೃತಃ ||

೧೨೮. ಈ ಜಗತ್ತು ಐದು ಮಹಾಭೂತಗಳಿಂದ ಆರಂಭವಾಗಿರುವದರಿಂದಲೇ ಪಾಂಕ್ತವೆನಿಸಿರುವದು. ಜಗದಾತ್ಮನಾದ ಹಿರಣ್ಯಗರ್ಭನಿಗೆ ಯಜ್ಞತ್ವವೂ ಇದರಿಂದ ಸಿದ್ಧವಾಗುತ್ತದೆ. ಯಜ್ಞವು ಪಾಂಕ್ತವೇ–ಎಂದು ಸ್ಮೃತಿಯಿದೆ.

ಯಜ್ಞೇನ ಪರಿಕ್ಲೃಪ್ತೇನ ತ್ರೈಲೋಕ್ಯಾತ್ಮಾನಮಶ್ನುತೇ |
ಪಾಂಕ್ತತ್ವಸಿದ್ಧಯೇ ತಸ್ಮಾದಾರಬ್ಧೈಷಾ ಪರಾ ಶ್ರುತಿಃ ||

೧೨೯. (ಪತ್ನಿ–ಪುತ್ರ–ಯಜಮಾನ–ದೈವ–ಮಾನುಷವಿತ್ತಗಳೆಂಬ ಐದರಿಂದ) ಯಜ್ಞವು ಪಾಂಕ್ತವೆನಿಸಿದೆ. ಪಾಂಕ್ತಾತ್ಮಕನಾದ ಯಜ್ಞರೂಪನಾದ ಪ್ರಜಾಪತಿಯ ಉಪಾಸನೆಯಿಂದ ತ್ರೈಲೋಕ್ಯಾತ್ಮತ್ವವು ಎಂದರೆ ಪ್ರಾಜಾಪತ್ಯ ಪದವಿಯೇ ದೊರಕುತ್ತದೆ. ಆದ್ದರಿಂದ ಜಗತ್ತಿಗೆ ಪಾಂಕ್ತತ್ವವು ಸಿದ್ಧವಾಗುವದಕ್ಕಾಗಿ ಈ ಶ್ರುತಿಯು ಹೊರಟಿದೆ.

ದಿಗಂತಂ ಲೋಕಪಾಂಕ್ತಂ ಸ್ಯಾನ್ನಕ್ಷತ್ರಾಂತಂ ಚ ದೈವತಮ್ |
ಆತ್ಮಾಂತಂ ಭೂತಪಾಂಕ್ತಂ ಚ ವಿರಾಡಾತ್ಮಾಧಿಕಾರತಃ ||

೧೩೦. ಪೃಥಿವಿ, ಅಂತರಿಕ್ಷ, ದ್ಯುಲೋಕ, ದಿಕ್ಕುಗಳು, ವಿದಿಕ್ಕುಗಳು–ಇವೇ ಲೋಕಪಾಂಕ್ತವು. ಅಗ್ನಿ, ವಾಯು, ಆದಿತ್ಯ, ಚಂದ್ರ, ನಕ್ಷತ್ರಗಳು–ಇವೇ ದೇವತಾಪಾಂಕ್ತವು. ಆಪಃ, ಓಷಧಿಗಳು, ವನಸ್ಪತಿಗಳು, ಆಕಾಶ, ಆತ್ಮಾ (ವಿರಾಟ್)– ಇವೇ ಭೂತಪಾಂಕ್ತವು. ಇಲ್ಲಿ ಆತ್ಮಶಬ್ದಕ್ಕೆ ಪ್ರಕರಣಾನುಗುಣವಾಗಿ ವಿರಾಡಾತ್ಮನೆಂದು ಅರ್ಥಮಾಡಬೇಕು.

ಉಪಲಕ್ಷಣಮೇತತ್ ಸ್ಯಾತ್ ದೇವತಾಲೋಕಪಾಂಕ್ತಯೋಃ |
ಅಧಿಭೂತಮಿತಿ ವಕ್ಷ್ಯಮೋಽಥಾಧ್ಯಾತ್ಮಮತಃ ಪರಮ್ ||

೧೩೧. ಈಗ ಹೇಳಿರುವದನ್ನು ದೇವತಾಪಾಂಕ್ತ ಲೋಕಪಾಂಕ್ತಗಳಿಗೂ ಉಪಲಕ್ಷಣವಾಗಿ ತೆಗೆದುಕೊಳ್ಳಬೇಕು. ಇಲ್ಲಿಗೆ ಅಧಿಭೂತವು ಆಯಿತು. ಇನ್ನು ಮುಂದೆ ಅಧ್ಯಾತ್ಮಪಾಂಕ್ತವನ್ನು ಹೇಳಲಾಗುವದು.

ವಾಯುಪಾಂಕ್ತಂ ಸಮಾನಾಂತಂ ತ್ವಗಂತಂ ಚೈಂದ್ರಿಯಂ ತಥಾ |
ಚರ್ಮಾದಿ ಧಾತುಪಾಂಕ್ತಂ ಚ ವಿಶ್ವಮೇತಾವದುಚ್ಯತೇ ||

೧೩೨. ಪ್ರಾಣ, ವ್ಯಾನ, ಅಪಾನ, ಉದಾನ, ಸಮಾನ– ಇವೇ ವಾಯುಪಾಂಕ್ತವು. ಚಕ್ಷುಸ್ಸು, ಶ್ರೋತ್ರ, ಮನಸ್ಸು, ವಾಕ್ಕು, ತ್ವಕ್–ಇವು ಇಂದ್ರಿಯಪಾಂಕ್ತವು. ಚರ್ಮ, ಮಾಂಸ, ಸ್ನಾವ, ಅಸ್ಥಿ, ಮಜ್ಜೆ– ಇವು ಧಾತುಪಾಂಕ್ತವು. ಪ್ರಪಂಚವೆಂದರೆ ಇಷ್ಟೇ ಆಗಿದೆ.

ಪಾಂಕ್ತಮೇವ ಜಗತ್ಸರ್ವಮಿತಿ ದೃಷ್ಟ್ವಾಽಭ್ಯಥಾದೃಷಿಃ |
ಪಾಂಕ್ತಂ ವಾ ಇದಮಾಬ್ರಹ್ಮಸ್ತಂಬಂ ನಾನ್ಯದಿತಿ ಸ್ಮ ಹ ||

೧೩೩. ಜಗತ್ತೆಲ್ಲವೂ ಪಾಂಕ್ತವೇ ಎಂದು ಕಂಡುಕೊಂಡ ಋಷಿಯು ಹೀಗೆಂದನು : ಆಬ್ರಹ್ಮಸ್ತಂಬಪರ್ಯಂತವಾದ ಇದೆಲ್ಲವೂ ಪಾಂಕ್ತವೇ- ಬೇರೊಂದಿಲ್ಲ- ಎಂದು ಅವನು ಹೇಳಿದನು.

ಆಧ್ಯಾತ್ಮಿಕೇನ ಪಾಂಕ್ತೇನ ಸಂಖ್ಯಾಸಾಮಾನ್ಯಕಾರಣಾತ್ ।
ಬಲಯತ್ಯಾತ್ಮಭಾವೇನ ಪಾಂಕ್ತಂ ಬಾಹ್ಯಮಶೇಷತಃ ॥

೧೩೪. (ನಿಕೃಷ್ಟವಾದದ್ದರಲ್ಲಿ ಉತ್ಕೃಷ್ಟದೃಷ್ಟಿಯನ್ನು ಮಾಡಬೇಕೆಂಬ ನ್ಯಾಯದಂತೆ ಆಧ್ಯಾತ್ಮಿಕಪಾಂಕ್ತತ್ರಯದಲ್ಲಿ ಇತರ ಪಾಂಕ್ತತ್ರಯಗಳ ದೃಷ್ಟಿಯನ್ನು ಮಾಡಬೇಕೆಂಬ ಅಭಿಪ್ರಾಯವನ್ನು ಹೊಂದಿ ಹೇಳುತ್ತಾರೆ) ಸಂಖ್ಯಾಸಾಮಾನ್ಯವು ಎಂದರೆ ಐದು ಎಂಬ ಸಂಖ್ಯೆಯು ಸಮಾನವಾಗಿರುವದರಿಂದ ಆಧ್ಯಾತ್ಮಿಕಪಾಂಕ್ತದೊಡನೆ ಬಾಹ್ಯಪಾಂಕ್ತವನ್ನು ಆತ್ಮಭಾವದಿಂದ ಕಂಡುಕೊಂಡರೆ ಬಲಪಡಿಸಿದಂತಾಗುವದು. ಹೀಗೆ ಪಾಂಕ್ತಗಳನ್ನಾಗಿ ಜಗತ್ತನ್ನು ಭಾವಿಸಿ ಪ್ರಜಾಪತಿಯೆಂದು ಉಪಾಸನೆಮಾಡಬೇಕು.

ಓಂಕಾರೋಪಾಸನೆ

ಸರ್ವೋಪಾಸನಶೇಷಸ್ಯ ಪ್ರಣವಸ್ಯಾಧುನೋಚ್ಯತೇ ।
ಉಪಾಸನಮಲಂ ಯಸ್ಮಾದ್ ಬ್ರಹ್ಮಣೋಃ ಪ್ರಾಪ್ತಯೇ ದ್ವಯೋಃ ॥

೧೩೫. ಎಲ್ಲಾ ಉಪಾಸನೆಗಳ ತಿರುಳಾಗಿ ಓಂಕಾರದ ಉಪಾಸನೆಯನ್ನು ಈಗ ಹೇಳಲಾಗುತ್ತದೆ. ಏಕೆಂದರೆ ಪರಾಪರಬ್ರಹ್ಮಗಳೆರಡರ ಪ್ರಾಪ್ತಿಗೂ ಈ ಪ್ರಣವೋಪಾಸನೆಯೇ ಸಾಕಾಗಿರುತ್ತದೆ.

ಪರಸ್ಯ ಬ್ರಹ್ಮಣೋ ಯಸ್ಮಾದಪರಸ್ಯ ಚ ಚೋದ್ಯತೇ ।
ಆಲಂಬನತಯಾ ತಸ್ಮಾತ್ ಸ ಏವಾತ್ರಾಭಿಧೀಯತೇ ॥

೧೩೬. ಪರಬ್ರಹ್ಮಕ್ಕೂ ಅಪರಬ್ರಹ್ಮಕ್ಕೂ ಆಲಂಬನವಾಗಿ ಓಂಕಾರವು ಹೇಳಲ್ಪಟ್ಟಿರುವದರಿಂದ ಅದನ್ನೇ ಈಗ ತಿಳಿಸಲಾಗುವದು.

ಓಮಿತ್ಯೇತಚ್ಛಬ್ದರೂಪಂ ಬ್ರಹ್ಮೇತಿ ಮನಸಾ ಸದಾ ।
ಧಾರಯೇತ್ ಸ್ತುತಯೇ ತಸ್ಯ ಪರೋ ಗ್ರಂಥೋಽವತಾರ್ಯತೇ ॥

೧೩೭. ಓಂ ಎಂಬ ಶಬ್ದರೂಪವನ್ನು ಬ್ರಹ್ಮವೆಂದು ಮನಸ್ಸಿನಲ್ಲಿ ಸದಾ ಧಾರಣೆಮಾಡಿಕೊಂಡಿರಬೇಕು. ಇನ್ನು ಮುಂದೆ ಉಪಾಸ್ಯವಾದ ಆ ಓಂಕಾರದ ಸ್ತುತಿಗಾಗಿ ಮುಂದಿನ ಗ್ರಂಥವನ್ನಾರಂಭಿಸಲಾಗುವದು.

ತದ್ಯಥಾ ಶಂಕುನೇತ್ಯೇವಂ ಸರ್ವಮೋಮಿತಿ ಯುಜ್ಯತೇ ।
ಅಭಿಧಾನಾದೃತೇ ಯಸ್ಮಾದಭಿಧೇಯಂ ನ ವಿದ್ಯತೇ ॥

೧೩೮. ಸರ್ವವೂ ಓಂಕಾರವೇ– ಎಂಬಿದು 'ತದ್ಯಥಾ ಶಂಕುನಾ' ಎಂಬ ಶ್ರುತಿವಾಕ್ಯದಿಂದ ವಿವರಿಸಲ್ಪಟ್ಟಿದೆ. ಅಭಿಧಾನಕ್ಕಿಂತ ಹೊರತಾಗಿ ಅಭಿಧೇಯ ವೆಂಬುದು ಇಲ್ಲ. (ಹಾಗೆಯೇ ಓಂಕಾರಕ್ಕಿಂತ ಬೇರೆಯಾಗಿ ಯಾವದೂ ಇಲ್ಲ.)

ಅನುಜ್ಞಾನುಕೃತಿಸ್ತದ್ವತ್ ಸರ್ವತ್ರೋಮಿತಿ ಕೀರ್ತ್ಯತೇ ।
ಓ ಶ್ರಾವಯೇತ್ಯನುಜ್ಞಾತಾ ಯತ ಆಶ್ರಾವಯಂತಿ ಚ ॥

೧೩೯. ಲೋಕದಲ್ಲಿಯೂ ವೇದಗಳಲ್ಲಿಯೂ ಅನುಜ್ಞೆಯನ್ನು ನೀಡಲು ಓಮ್ ಎಂದು ಬಳಸುತ್ತಾರೆ. ಹಾಗೆಯೇ ಯಜ್ಞದಲ್ಲಿ 'ಓ ಶ್ರಾವಯ' ಎಂದು ಅಪ್ಪಣೆಮಾಡಿದರೆ ಋತ್ವಿಜರು ಮಂತ್ರಪಠನಮಾಡುವರು. ಆದ್ದರಿಂದ ಓಂಕಾರವು ಅನುಜ್ಞಾರೂಪವಾಗಿದೆ– ಎಂದಾಯಿತು.

ಪ್ರಸೌತಿ ಹ್ಯನುಜಾನಾತಿ ಬ್ರಹ್ಮೋಮಿತ್ಯೇವ ಚರ್ತ್ವಿಜಮ್ ।
ಪ್ರವಕ್ಷ್ಯನ್ ಬ್ರಹ್ಮಣೋ ವೇದಮೋಮಿತ್ಯೇವಂ ಪ್ರಯುಜ್ಯತೇ ॥

೧೪೦. ಬ್ರಹ್ಮನು ಯಜ್ಞದಲ್ಲಿ ಓಂ ಎಂದೇ ಋತ್ವಿಜನಿಗೆ ಅನುಜ್ಞೆಯನ್ನು ನೀಡುವನು. ಮತ್ತು ಬ್ರಾಹ್ಮಣನು ವೇದವನ್ನು ಹೇಳಲಾರಂಭಿಸುವಾಗ ಓಂ ಎಂದೇ ಪ್ರಾರಂಭಿಸುವನು.

ಉಪಾಪ್ನವಾನಿ ಬ್ರಹ್ಮೇತಿ ಸ ಚ ವೇದಮವಾಪ್ನುಯಾತ್ ।
ಪರಾತ್ಮಾ ವಾ ಭವೇದ್ಬ್ರಹ್ಮ ಸ ತದೋಂಕಾರಪೂರ್ವಕಮ್ ॥
ಪ್ರಾಪ್ನೋತ್ಯೇವ ನ ಸಂದೇಹ ಉಪಾಸೀತಾತ ಓಮಿತಿ ॥

೧೪೧–೧೪೩. ವೇದವನ್ನು ನಾನು ಪಡೆದುಕೊಳ್ಳುವೆನು–ಎಂದು ಓಂಕಾರ ಪೂರ್ವಕವಾಗಿ ಅಧ್ಯಯನಮಾಡುವವನು ಅದನ್ನು ಹೊಂದುವನು. ಪರಮಾತ್ಮನೇ ಆಗುವನು. ಪರಮಾತ್ಮನನ್ನೇ ನಿಸ್ಸಂಶಯವಾಗಿ ಹೊಂದುವನು ಆದ್ದರಿಂದ ಓಂ ಎಂದು ಉಪಾಸನೆಮಾಡಬೇಕು.

ಸ್ವಾಧ್ಯಾಯಪ್ರವಚನಗಳು

ಯಥೋಕ್ತೋಪಾಸನಾದೇವ ಸ್ವಾರಾಜ್ಯಫಲಸಂಶ್ರಯಾತ್ ।
ನೈಷ್ಫಲ್ಯೇ ಕರ್ಮಣಾಂ ಪ್ರಾಪ್ತೇ ತತ್ಸಾಫಲ್ಯಾರ್ಥ ಉತ್ತರಃ ॥

೧೪೪. ಹಿಂದೆ ಹೇಳಿರುವ ಉಪಾಸನೆಯಿಂದಲೇ ಸ್ವಾರಾಜ್ಯಪ್ರಾಪ್ತಿಯಾಗು ವದೆಂದು ಹೇಳಿದ್ದರಿಂದ ವೈದಿಕಕರ್ಮಗಳು ವ್ಯರ್ಥವೆಂದಾಗಲಾಗಿ ಅವುಗಳಿಗೂ ಪ್ರಯೋಜನವುಂಟೆಂದು ತಿಳಿಸುವದಕ್ಕಾಗಿ ಮುಂದಿನ ಗ್ರಂಥವು ಹೊರಟಿರುತ್ತದೆ.

ಸ್ವಾಧ್ಯಾಯೋಽಧ್ಯಯನಂ ಜ್ಞೇಯಂ ತಥಾ ಚಾಧ್ಯಾಪನಂ ಪರಮ್ ।
ಆಧಾತವ್ಯಾ ಯಥಾಶಾಸ್ತ್ರಮಗ್ನಯಃ ಶ್ರೇಯಸೇ ತಥಾ ॥
ಹೋತವ್ಯಮಗ್ನಿಹೋತ್ರಂ ಚ ಕುರ್ಯಾಚ್ಚಾತಿಥಿಪೂಜನಮ್ ॥

೧೪೪. ಸ್ವಾಧ್ಯಾಯವೆಂದರೆ ವೇದಾಧ್ಯಯನವನ್ನು ಮಾಡುವಿಕೆಯು. ಪ್ರವಚನವೆಂದರೆ ಶಿಷ್ಯರಿಗೆ ವೇದವನ್ನು ಹೇಳಿಕೊಡುವದು. (ಇವೆರಡೂ ಕರ್ತವ್ಯಗಳು). ಹಾಗೆಯೇ ಶಾಸ್ತ್ರವಿಧಿಯಂತೆ ಅಗ್ನಿಗಳನ್ನು ಆಧಾನಮಾಡಬೇಕು. ಶ್ರೇಯಃಪ್ರಾಪ್ತಿಗಾಗಿ ಅಗ್ನಿಹೋತ್ರವನ್ನೂ ಹವನಮಾಡಬೇಕು. ಅತಿಥಿಸತ್ಕಾರವನ್ನು ಮಾಡಬೇಕು.

ತಥಾ ಸಂವ್ಯವಹಾರಶ್ಚ ಮಾನುಷಂ ಸ್ಯಾದಶಂಕಿತಮ್ ||

೧೪೫. ಹಾಗೆಯೇ ಮಾನುಷಸಂವ್ಯವಹಾರವನ್ನೂ ಎಂದರೆ ವಿವಾಹಾದಿಗಳನ್ನೂ ನಡೆಯಿಸಬೇಕು.

ಉತ್ಪಾದ್ಯಾ ಚ ಪ್ರಜಾ ಯೋಗ್ಯಾ ಪ್ರಜನಂ ಚರ್ತುಸೇವನಮ್ |
ನಿವೇಶನಂ ಸುತಸ್ಯೇಹ ಪ್ರಜಾತಿರಿತಿ ಗಮ್ಯತಾಮ್ ||

೧೪೬. ಯೋಗ್ಯರಾದ ಪ್ರಜೆಗಳನ್ನು ಉತ್ಪಾದನೆಮಾಡಬೇಕು. ಪ್ರಜನವೆಂದರೆ ಋತುಕಾಲದಲ್ಲಿ ಪತ್ನಿಯನ್ನು ಸಮಾಗಮಮಾಡುವದು. ಪ್ರಜಾತಿ ಎಂದರೆ ಮಗನಿಗೂ ಮದುವೆಮಾಡಿ ಅವನನ್ನು ಗೃಹಸ್ಥಧರ್ಮದಲ್ಲಿ ನೆಲೆಗೊಳಿಸುವದು. ಹೀಗೆಂದು ತಿಳಿಯಬೇಕು.

ಉಕ್ತೇಷು ವ್ಯಾಪೃತೇನಾಪಿ ಕಾರ್ಯೌ ಏವ ಪ್ರಯತ್ನತಃ |
ಸ್ವಾಧ್ಯಾಯಪ್ರವಚನೇ ತೇನ ಪ್ರತ್ಯೇಕಂ ಚ ಗ್ರಹಸ್ತಯೋಃ ||

೧೪೭. ಇಲ್ಲಿ ಹೇಳಿರುವ ಸತ್ಯ, ತಪಸ್ಸು, ದಮಾದಿಸಾಧನಗಳಲ್ಲಿ ಸಾಧಕನು ನಿರತನಾಗಿದ್ದರೂ ಪ್ರಯತ್ನಪೂರ್ವಕವಾಗಿ ಸ್ವಾಧ್ಯಾಯ, ಪ್ರವಚನಗಳನ್ನು ಕೈಗೊಳ್ಳಲೇಬೇಕು. ಆದಕ್ಕಾಗಿಯೇ ಸ್ವಾಧ್ಯಾಯಪ್ರವಚನಗಳನ್ನು ಪ್ರತಿ ಪರ್ಯಾಯದಲ್ಲಿಯೂ ಪ್ರತ್ಯೇಕವಾಗಿ ಹೇಳಿದೆ.

ವೇದಾರ್ಥಬೋಧನಂ ನಾಸ್ತಿ ಸ್ವಾಧ್ಯಾಯೇನ ವಿನಾ ಯತಃ |
ತಥಾ ಪ್ರವಚನೇನಾತೋ ಧರ್ಮಾರ್ಥಂ ಚ ಗ್ರಹಸ್ತಯೋಃ ||

೧೪೮. ವೇದಾಧ್ಯಯನವಿಲ್ಲದೆ ವೇದಾರ್ಥಬೋಧವಾಗುವದಿಲ್ಲ. ಹಾಗೆಯೇ ಪ್ರವಚನವಿಲ್ಲವಾದರೂ ಅರ್ಥಬೋಧವಾಗುವದಿಲ್ಲ. ಆದ್ದರಿಂದ ವೇದಾರ್ಥವಾದ ಧರ್ಮವನ್ನು ತಿಳಿಯಬೇಕಾದರೆ ಸ್ವಾಧ್ಯಾಯಪ್ರವಚನಗಳು ಅಗತ್ಯವಾಗಿವೆ-ಎಂಬ ಕಾರಣದಿಂದ ಅವನ್ನು ಮತ್ತೆ ಮತ್ತೆ ಗ್ರಹಣಮಾಡಿದೆ.

ಸತ್ಯಮೇವ ತು ವಕ್ತವ್ಯಮಿತಿ ಸತ್ಯವಚಾ ಜಗೌ |
ರಾಥೀತರೋ ಮುನಿಸ್ತದ್ವತ್ ತಪ ಏವೇತ್ಯುವಾಚ ಹ ||
ಪುರುಶಿಷ್ಟಸ್ಯ ತನಯಃ ಕರ್ತವ್ಯಂ ತು ಮಹಾತಪಾಃ |
ಮುದ್ಗಲಸ್ಯಾತ್ಮಜಶ್ಚಾಹ ಕರ್ತವ್ಯೇ ಯತ್ನಮಾಸ್ಥಿತೈಃ ||
ಸ್ವಾಧ್ಯಾಯಪ್ರವಚನೇ ಏವ ತೇ ಏವ ತು ತಪೋ ಯತಃ ||

೧೪೯-೧೫೦. ರಥೀತರಗೋತ್ರೋತ್ಪನ್ನನಾದ ಸತ್ಯವಚನೆಂಬವನು ಸತ್ಯವೇ ಅನುಷ್ಠೇಯವೆಂದು ಹೇಳಿದನು. ಪುರುಶಿಷ್ಟನ ಮಗನಾದ ಪೌರುಶಿಷ್ಟಿಯೆಂಬ ವನು ತಪಸ್ಸೇ ಮಹಾಕರ್ತವ್ಯವೆಂದು ಹೇಳಿದನು. ಮುದ್ಗಲನ ಮಗನಾದ ಮೌದ್ಗಲನು ವೇದಾಧ್ಯಯನ, ಪ್ರವಚನಗಳೇ ಹೆಚ್ಚಿನವೆಂದು ಹೇಳಿದನು. ಏಕೆಂದರೆ ತಪಸ್ಸೆಂದರೆ ಅದೇ- ಎಂದು ಅವನ ಅಭಿಪ್ರಾಯ.

ತ್ರಿಶಂಕುವಿನ ಆರ್ಷದರ್ಶನ

ಸ್ವಾಧ್ಯಾಯಾರ್ಥಶ್ಚ ವಿಜ್ಞೇಯಃ ಅಹಂ ವೃಕ್ಷಸ್ಯ ರೇರಿವಾ |
ಇತ್ಯಾದಿರುತ್ತರೋ ಗ್ರಂಥಃ ವಿಶುದ್ಧಿರ್ಹಿ ತತೋ ಧಿಯಃ ||

೧೫೧. 'ಅಹಂ ವೃಕ್ಷಸ್ಯ ರೇರಿವಾ' ಮುಂತಾದ ಉತ್ತರಗ್ರಂಥವು ಅಧ್ಯಯ ನಾರ್ಥವಾಗಿ ಹೇಳಲ್ಪಟ್ಟಿದೆ. ಅದರಿಂದ ಬುದ್ಧಿಗೆ ಪರಿಶುದ್ಧಿಯುಂಟಾಗುವದು.

ವಿಶುದ್ಧಮನಸೋ ಯಸ್ಮಾತ್ ಸಮ್ಯಗ್ಜ್ಞಾನೋದಯೋ ಭವೇತ್
ಮಂತ್ರಾಮ್ನಾಯೋಽಯಮಾರಬ್ಧಃ ಏತಸ್ಮಾತ್ ಕಾರಣಾತ್ ಪರಃ ||

೧೫೨. ವಿಶುದ್ಧಮನಸ್ಸಿನವನಿಗೇ ಸಮ್ಯಗ್ಜ್ಞಾನವು ಉಂಟಾಗುತ್ತದೆ. ಈ ಕಾರಣದಿಂದಲೇ ಪವಿತ್ರವಾದ ಈ ಮಂತ್ರಭಾಗವು ಪ್ರಾರಂಭವಾಗಿದೆ.

ಉತ್ಪತ್ತಿಲಕ್ಷಣಸ್ಯಾಹಂ ವಿಶ್ವಸ್ಯ ಜಗತಃ ಸದಾ |
ಅಸ್ಯ ಸಂಸಾರವೃಕ್ಷಸ್ಯ ರೇರಿವಾ ಜನಕೋಽಸ್ಮ್ಯಹಮ್ ||

೧೫೩. ನಾಶವೆಂಬ ಸ್ವಭಾವವುಳ್ಳ ಈ ವಿಶ್ವಕ್ಕೆ- ಎಂದರೆ ಸಂಸಾರವೆಂಬ ವೃಕ್ಷಕ್ಕೆ ನಾನು ಪ್ರೇರಯಿತೃವು ಮತ್ತು ತಂದೆಯಾಗಿರುವೆನು.

ಕೀರ್ತಿಃಖ್ಯಾತಿರ್ಮಮ ಜ್ಞೇಯಾ ಗಿರೇಃ ಪೃಷ್ಠಮಿವೋಚ್ಛ್ರಿತಾ |
ಊರ್ಧ್ವಂ ತತ್ಕಾರಣಂ ಬ್ರಹ್ಮ ಪವಿತ್ರಂ ಭವಹಾನತಃ ||

೧೫೪. ನನ್ನ ಕೀರ್ತಿಯು ಬೆಟ್ಟದ ಶಿಖರದಂತೆ ಉನ್ನತವಾಗಿರುವದು. ಊರ್ಧ್ವವೆಂದರೆ ಆ ಜಗತ್ಕಾರಣವಾದ ಬ್ರಹ್ಮವು. ಅದು ಸಂಸಾರಧರ್ಮಗಳನ್ನು ಮೀರಿರುವದರಿಂದ ಪವಿತ್ರವು. ಆ ಬ್ರಹ್ಮವೇ ನಾನಾಗಿರುವೆನು.

ಯಸ್ಯ ಸೋಽಯಂ ಭವೇದೂರ್ಧ್ವಂ ಪವಿತ್ರಂ ಪಾವನಂ ಪರಮ್ |
ವಾಜಮನ್ನಮಿತಿ ಜ್ಞೇಯಂ ತದ್ವತೀವ ದಿವಾಕರೇ ||
ಸ್ವಮೃತಂ ಪರಮಂ ಬ್ರಹ್ಮ ಬುದ್ಧಾವಸ್ಯಾಮಹಂ ಸದಾ ||

೧೫೫-೧೫೭. ಯಾವದಕ್ಕಿಂತ ಅದು ಹೆಚ್ಚಿನದಾಗಿರುವದೋ-ಮೇಲಿರು ವದೋ ಆ ಪವಿತ್ರವೂ ಪಾವನವೂ ಪರಮವೂ ಆದ ಬ್ರಹ್ಮವು ಊರ್ಧ್ವಪವಿತ್ರವು.

ಹೇಗೆ ಅನ್ನವಂತನಾದ ಸೂರ್ಯನಲ್ಲಿ ಬ್ರಹ್ಮವು ಪ್ರಕಟವಾಗಿರುವದೋ ಹಾಗೆ ಈ ಬುದ್ಧಿಯಲ್ಲಿಯೂ ಅಮೃತವಾದ ಬ್ರಹ್ಮವು ತೋರಿಕೊಂಡಿದೆ. ನಾನು ಸದಾ ಅದೇ ಆಗಿರುವೆನು.

ದ್ರವಿಣಂ ಧನಮಿತ್ಯಾಹುಃ ಇಹ ತ್ವಾತ್ಮಾವಬೋಧನಮ್ |
ಸವರ್ಚಸಂ ಸುದೀಪ್ತಂ ಸ್ಯಾನ್ಮೋಕ್ಷಾಮೃತಫಲಪ್ರದಮ್ ||

೧೫೭. ದ್ರವಿಣವೆಂದರೆ ಧನವು. ಇಲ್ಲಿ ಆತ್ಮಾವಬೋಧವೇ ಧನವು. ಸವರ್ಚಸವೆಂದರೆ ಚೆನ್ನಾಗಿ ಹೊಳೆಯುವಿಕೆ. ಇಂಥ (ಆತ್ಮಬೋಧವು) ಮೋಕ್ಷವೆಂಬ ಅಮೃತಫಲಪ್ರದವಾಗಿರುವದು.

ಅಕ್ಷಿತೋಽಕ್ಷೀಣರೂಪತ್ವಾತ್ ವೇದಾನುವಚನಂ ತ್ವಿದಮ್ |
ತ್ರಿಶಂಕೋರ್ಬ್ರಹ್ಮಭೂತಸ್ಯ ಹ್ಯಾರ್ಷಂ ಸಂದರ್ಶನಮ್ ಪರಮ್ ||

೧೫೮. ಕ್ಷೀಣವಾಗದ ರೂಪವಾಗಿರುವದರಿಂದ ನಾನು ಅಕ್ಷಿತನು. ಹೀಗೆಂಬುದು ಬ್ರಹ್ಮಭೂತನಾದ ತ್ರಿಶಂಕುವೆಂಬ ಮಹರ್ಷಿಯು ಕಂಡುಕೊಂಡ ಆರ್ಷಸಂದರ್ಶನವಾಗಿದೆ. ಇದು ವೇದಾನುವಚನವು.

ಪಾವನೋಽಸ್ಯ ಜಪಃ ಶ್ರೇಯಾನ್ ಬ್ರಹ್ಮಜ್ಞಾನಸ್ಯ ಜನ್ಮನೇ |
ಮುಮುಕ್ಷುಃ ಪ್ರಯತಸ್ತಸ್ಮಾಜ್ಜಪೇದೇತತ್ಸಮಾಹಿತಃ ||
ಕರ್ಮಪ್ರಸಂಗ ಉಕ್ತತ್ವಾದಯಮರ್ಥೋಽವಸೀಯತೇ ||

೧೫೯. ಬ್ರಹ್ಮಜ್ಞಾನವು ಉಂಟಾಗುವದಕ್ಕಾಗಿ ಮುಮುಕ್ಷುವು ಶುದ್ಧನಾಗಿ ಸಮಾಹಿತನಾಗಿ ಕುಳಿತು ಇದನ್ನು ಜಪಿಸಬೇಕು. ಇದರ ಜಪವು ಪವಿತ್ರವಾದದ್ದು. ಕರ್ಮಪ್ರಕರಣದಲ್ಲಿ ಇದನ್ನು ಹೇಳಿರುವದರಿಂದ ಈ ಅಭಿಪ್ರಾಯವು ಹೊರಡುತ್ತದೆ.

ಮುಮುಕ್ಷೋಸ್ತತ್ಪರಸ್ಯೈವಂ ಶ್ರೌತಸ್ಮಾರ್ತೇಷು ಕರ್ಮಸು |
ಆರ್ಷಂ ಚ ಪ್ರಾತಿಭಂ ಜ್ಞಾನಮಾವಿರ್ಭವತಿ ಮೋಕ್ಷದಮ್ ||

೧೬೦. ಶ್ರೌತಸ್ಮಾರ್ತಕರ್ಮಗಳಲ್ಲಿ ತತ್ಪರನಾಗಿರುವ ಮುಮುಕ್ಷುವಿಗೆ ಆರ್ಷವಾದ ಪ್ರತಿಭಾನರೂಪವಾದ ಮೋಕ್ಷಪ್ರದವಾದ ಜ್ಞಾನವು ಉಂಟಾಗುವದು.

ಶಿಷ್ಯಾನುಶಾಸನ

ಆರಂಭೋ ನಿಯಮಾರ್ಥಃ ಸ್ಯಾದಾತ್ಮಜ್ಞಾನೋದಯಾತ್ ಪುರಾ |
ಶ್ರುತೇರ್ವೇದಮನೂಚ್ಯೇತಿ ಶ್ರುತಿಶ್ಚೈವಾನುಶಾಸ್ತಿ ಹಿ ||

೧೬೧. ವೇದಮನೂಚ್ಯ–ಎಂದು ಶ್ರುತಿಯು ಆರಂಭಮಾಡಿ ಹೇಳಿರುವ ಕರ್ಮಗಳು ಆತ್ಮಜ್ಞಾನಕ್ಕೆ ಮುಂಚಿತವಾಗಿ ಅವುಗಳನ್ನು ಮಾಡಬೇಕೆಂದು

ವದಕ್ಕಾಗಿ– ಎಂದು ಅಭಿಪ್ರಾಯ. ಏಕೆಂದರೆ ಈ ಕರ್ಮಗಳನ್ನು ಶ್ರುತಿಯೇ ಅಪ್ಪಣೆಮಾಡಿ ಹೇಳುತ್ತಿದೆ.

ವಿದ್ಯೋತ್ಪತ್ತ್ಯರ್ಥಮೇತಾನಿ ಕರ್ತವ್ಯಾನಿ ಮುಮುಕ್ಷುಣಾ ।
ವಕ್ಷ್ಯಮಾಣಾನಿ ಕರ್ಮಾಣಿ ಯಾವದಾತ್ಮಾವಬೋಧನಮ್ ॥

೧೬೨. ಮುಮುಕ್ಷುವಾದವನು ಬ್ರಹ್ಮವಿದ್ಯೆಯು ಉದಯಿಸುವದಕ್ಕಾಗಿ ಈ ಮುಂದೆ ಹೇಳುವ ಕರ್ಮಗಳನ್ನು ಆತ್ಮಜ್ಞಾನವುಂಟಾಗುವವರೆಗೂ ಮಾಡಬೇಕು.

ಆತ್ಮಜ್ಞಾನೋದಯಾದೂರ್ಧ್ವಂ ಪುರುಷಾರ್ಥಾವಸಾನತಃ ।
ಸ್ವತಃಸಿದ್ಧೇಶ್ಚ ಮೋಕ್ಷಸ್ಯ ಕರ್ಮಕಾಂಡಮನರ್ಥಕಮ್ ॥

೧೬೩. ಆತ್ಮಜ್ಞಾನೋದಯವಾದ ಅನಂತರ ಪುರುಷಾರ್ಥವು ಪರಿಸಮಾಪ್ತವಾಗುವದರಿಂದಲೂ ಮೋಕ್ಷವು ಸ್ವತಃಸಿದ್ಧವಾದ್ದರಿಂದಲೂ ಕರ್ಮಕಾಂಡವು ವ್ಯರ್ಥವೇ ಸರಿ.

ತಸ್ಮಾತ್ಸರ್ವವಿಶುದ್ಧ್ಯರ್ಥಂ ಕಾರ್ಯಂ ಕರ್ಮ ಮುಮುಕ್ಷುಭಿಃ ।
ಪ್ರಾಗೇವ ಬ್ರಹ್ಮವಿಜ್ಞಾನಾನ್ನಿಯಮೇನೇತಿ ಹಿ ಶ್ರುತಿಃ ॥

೧೬೪. ಆದ್ದರಿಂದ ಜ್ಞಾನವುಂಟಾಗುವ ಮುಂಚೆ ಮುಮುಕ್ಷುಗಳು ಎಲ್ಲಾ ರೀತಿಯ ಅಂತಃಕರಣಶುದ್ಧಿಗಾಗಿ ನಿಯತವಾಗಿ ಕರ್ಮಾನುಷ್ಠಾನಮಾಡಬೇಕೆಂದು ಶ್ರುತಿಯು ತಿಳಿಸುತ್ತಿದೆ.

ಆನರ್ಥಕ್ಯಾಪನುತ್ತ್ಯರ್ಥಂ ಋತಾದೀನಾಂ ಪುರಾ ಶ್ರುತಿಃ ।
ನಿಯಮಾರ್ಥಮಿಹೋಕ್ತಿಃ ಸ್ಯಾದಾತ್ಮಜ್ಞಾನೋದಯಾರ್ಥಿನಃ ॥

೧೬೫. ಉಪಾಸನೆಯಿಂದಲೇ ಸ್ವಾರಾಜ್ಯಸಿದ್ಧಿಯಾಗುವದರಿಂದ ಕರ್ಮಗಳು ವ್ಯರ್ಥ ಎಂಬವರ ಆಕ್ಷೇಪವನ್ನು ಪರಿಹಾರಮಾಡಲು 'ಋತಂ ಚ' ಎಂಬಲ್ಲಿ ಕರ್ಮಗಳನ್ನು ವಿಧಿಸಲಾಯಿತು. ಇಲ್ಲಿಯಾದರೋ, ಆತ್ಮಜ್ಞಾನವು ಉಂಟಾಗಬೇಕೆಂದು ಬಯಸುವವನು ಜ್ಞಾನೋತ್ಪತ್ತಿಯಾಗುವವರೆಗೂ ಕರ್ಮಗಳನ್ನು ಮಾಡಲೇಬೇಕೆಂದು ಹೇಳುವದಕ್ಕಾಗಿ ಬಂದಿರುವದರಿಂದ ಪುನರುಕ್ತಿಯಿಲ್ಲ.

ಅಧ್ಯಾಪ್ಯ ನಿಖಿಲಂ ವೇದಮಂತೇವಾಸಿನಮಾದರಾತ್ ।
ಸತ್ಯಂ ವದೇತ್ಯೇವಮಾದಿ ಗರೀಯಾನನುಶಾಸ್ತಿ ಹಿ ॥

೧೬೬. ಗುರುವು ಸಮಸ್ತವೇದವನ್ನೂ ಪ್ರೇಮದಿಂದ ಶಿಷ್ಯನಿಗೆ ಅಧ್ಯಯನ ಮಾಡಿಸಿದ ಅನಂತರ 'ನಿಜವನ್ನು ನುಡಿ' ಮುಂತಾದ ಅ ನು ಶಾ ಸ ನ ವ ನ್ನು ಮಾಡುತ್ತಾನೆ.

ಯಥೋಪಲಬ್ಧಂ ಯದ್ವಾಕ್ಯಂ ಹಿಂಸಾಕಲ್ಕವಿವರ್ಜಿತಮ್ ।
ಸರ್ವಧರ್ಮವಿದಃ ಪ್ರಾಜ್ಞಾಸ್ತತ್ಸತ್ಯಂ ಪ್ರತಿಜಾನತೇ ॥

೧೬೭. ಯಾವ ಮಾತು ಹೇಗೆ ಒದಗಿರುವದೋ ಅದನ್ನು ಹಿಂಸೆಯಾಗಲಿ ಭಾವದೋಷವಾಗಲಿ– ಆಗದಂತೆ ಆಡುವದನ್ನು ಬಲ್ಲವರು ಸತ್ಯವೆನ್ನುವರು.

ಅಗ್ನಿಹೋತ್ರಾದ್ಯನುಷ್ಠಾನಂ ಧರ್ಮಮಾಹುರ್ವಿಪಶ್ಚಿತಃ |
ಪ್ರಮಾದಂ ಮಾ ಕೃಥಾಸ್ತದ್ವತ್ ಸ್ವಾಧ್ಯಾಯಂ ಪ್ರತಿ ಸರ್ವದಾ ||

೧೬೮. ಬಲ್ಲವರು ಅಗ್ನಿಹೋತ್ರಾದಿಗಳ ಅನುಷ್ಠಾನವನ್ನು ಧರ್ಮವೆನ್ನುವರು. ಅದರಂತೆ ಧರ್ಮವನ್ನು ಆಚರಿಸುವಂತೆಯೇ ವೇದಾಧ್ಯಯನವನ್ನೂ ಮಾಡುವವನಾಗು. ಈ ವಿಷಯದಲ್ಲಿ ತಪ್ಪಬೇಡ.

ತಥಾಭಿಲಷಿತಾಂ ನ್ಯಾಯ್ಯಾಮಾಚಾರ್ಯಾಯಾಥ ದಕ್ಷಿಣಾಮ್ |
ದತ್ತ್ವಾ ದಾರಾಂಸ್ತ್ವಮಾಹೃತ್ಯ ಮಾಚ್ಛೇತ್ಸೀಃ ಸುತಸಂತತಿಮ್ ||

೧೬೯. ಹಾಗೆಯೇ ಆಚಾರ್ಯನು ಬಯಸಿದ ನ್ಯಾಯವಾದ ದಕ್ಷಿಣೆಯನ್ನು ಕೊಟ್ಟು ಹೆಂಡತಿಯನ್ನು ಸ್ವೀಕರಿಸಿ ಪುತ್ರಸಂತತಿಯನ್ನು ಮುಂದುವರೆಸುವವನಾಗು. ಅದನ್ನು ಕಡಿಯದಂತೆ ನೋಡಿಕೊಳ್ಳುವವನಾಗು.

ವಿಸ್ಮೃತ್ಯಾಪ್ಯನೃತಂ ನಿತ್ಯಂ ನ ಚ ವಕ್ತವ್ಯಮಣ್ವಪಿ |
ಇತ್ಯಸ್ಯ ಪ್ರತಿಪತ್ತ್ಯರ್ಥಂ ಸತ್ಯಾದೀತಿ ಪುನರ್ವಚಃ ||

೧೭೦. ಯಾವಾಗಲೂ– ಎಂದರೆ ಮರೆತಾದರೂ ಸ್ವಲ್ಪವೂ ಸುಳ್ಳನ್ನು ಹೇಳತಕ್ಕದ್ದಲ್ಲ– ಎಂದು ತಿಳಿಸುವದಕ್ಕಾಗಿ 'ಸತ್ಯಾನ್ನ ಪ್ರಮದಿತವ್ಯಮ್' ಎಂದು ಮತ್ತೆ ವಿಧಿಸಲಾಗಿದೆ.

ಏವಂ ಶಿಷ್ಟೇಷ್ವಪಿ ಜ್ಞೇಯಂ ಪ್ರಸಿದ್ಧಾರ್ಥತ್ವಕಾರಣಾತ್ |
ಸ್ಪಷ್ಟಾರ್ಥ ಉತ್ತರೋ ಗ್ರಂಥಃ ಸ್ವಯಮೇವಾವಗಮ್ಯತಾಮ್ ||

೧೭೧. ಇದೇರೀತಿಯಾಗಿ ಶಿಷ್ಟರುಗಳ ವಿಷಯಕ್ಕೂ ನಡೆದುಕೊಳ್ಳತಕ್ಕದ್ದೆಂದು ತಿಳಿಯಬೇಕು. ಏಕೆಂದರೆ ಲೋಕದಲ್ಲಿ ಹಾಗೆ ನಡೆವಳಿಕೆಯು ಪ್ರಸಿದ್ಧವಾಗಿದೆ. ಇನ್ನುಳಿದ ಮುಂದಿನ ಗ್ರಂಥವು ಸ್ಪಷ್ಟವಾದ ಅರ್ಥವುಳ್ಳದ್ದಾಗಿದೆ. ತಾವುತಾವೇ ತಿಳಿದುಕೊಳ್ಳತಕ್ಕದ್ದು.

ಉಕ್ತೇಭ್ಯೋಽನ್ಯಾನಿ ಕರ್ಮಾಣಿ ಶಿಷ್ಟಾಚಾರೋಪಗಾನಿ ತು |
ಅನಾಶಂಕಿತದೋಷಾಣಿ ತ್ವಯಾ ಕಾರ್ಯಾಣಿ ಯತ್ನತಃ ||

೧೭೨. ಇಲ್ಲಿ ಹೇಳಿರುವದಕ್ಕಿಂತ ಬೇರೆಯಾದ ಹಾಗೂ ಶಿಷ್ಟಾಚಾರ ಪರಿಪ್ರಾಪ್ತವಾದ ಮತ್ತು ದೋಷಗಳ ಶಂಕೆಯಿಲ್ಲದ ಕರ್ಮಗಳನ್ನೂ ನೀನು ಪ್ರಯತ್ನಪೂರ್ವಕವಾಗಿ ಮಾಡಬೇಕು.

ಸಮಾಶಂಕಿತದೋಷಾಣಿ ಶಿಷ್ಟೈರಾಚರಿತಾನ್ಯಪಿ |
ಸಾವದ್ಯಾನಿ ನ ಕಾರ್ಯಾಣಿ ಕರ್ಮಾಣೀಹ ಕದಾಚನ ||

೧೭೩. ಇನ್ನು ಶಿಷ್ಟರೇ ಆಚರಿಸಿದ್ದುದಾದರೂ– ಆ ಕರ್ಮಗಳಲ್ಲಿ ದೋಷಗಳ ಸಂಭವವಿದ್ದುದಾದರೆ ಹಾಗೂ ದೋಷಯುಕ್ತವೇ ಆಗಿದ್ದರಂತೂ ಅಂಥ ಕರ್ಮಗಳನ್ನು ಯಾವಾಗಲೂ ನೀನು ಮಾಡಕೂಡದು.

ಶ್ರುತಿಸ್ಮೃತ್ಯವಿರುದ್ಧಾನಿ ಶಿಷ್ಟಾಚಾರೋಪಗಾನಿ ಚ |
ಅಸ್ಮತ್ಕರ್ಮಾಣಿ ಕಾರ್ಯಾಣಿ ನ ವಿರೋಧೀನಿ ಕರ್ಹಿಚಿತ್ ||

೧೭೪. ಶ್ರುತಿಸ್ಮೃತಿಗಳಿಗೆ ವಿರುದ್ಧವಲ್ಲದ ಹಾಗೂ ಶಿಷ್ಟರು ಅನುಸರಿಸುತ್ತಿರುವ (ಆಚಾರ್ಯರಾದ) ನಮ್ಮ ಕರ್ಮಗಳನ್ನೂ ಅನುಷ್ಠಾನಮಾಡು. ಆದರೆ (ಶ್ರುತಿಸ್ಮೃತಿ)ವಿರೋಧವಾಗಿರುವವುಗಳನ್ನು ಮಾತ್ರ ಮಾಡಬೇಡ.

ಅಸ್ಮತ್ತೋ ಬ್ರಾಹ್ಮಣಾ ಯೇ ಸ್ಯುಃ ಶ್ರೇಯಾಂಸಃ ಶಾಸ್ತ್ರವೇದಿನಃ |
ತೇಷಾಮಾಸನದಾನೇನ ಶ್ರಮಾಪನಯನಂ ಕುರು ||

೧೭೫. ನಮಗಿಂತಲೂ ಶ್ರೇಯಾಂಸರೂ (ಹಿರಿಯರೂ) ಶಾಸ್ತ್ರಜ್ಞರೂ ಆದ ಯಾವ ಬ್ರಾಹ್ಮಣರಿರುವರೋ ಅಂಥವರಿಗೆ ಆಸನಾದಿಗಳನ್ನು ನೀಡಿ ಸತ್ಕರಿಸಿ ಶ್ರಮಪರಿಹಾರವನ್ನು ಮಾಡು.

ತೇಷಾಮಾಖ್ಯಾಯಿಕಾಯಾಂ ವಾ ನ ವಾಚ್ಯಂ ಸಂಭ್ರಮಾತ್ತ್ವಯಾ |
ತದುಕ್ತಸಾರಂ ತ್ವಾದಾಯ ನಾಪಕಾರ್ಯಂ ಯಥಾಬಲಮ್ ||

೧೭೬. ಅವರುಗಳು ವ್ಯಾಖ್ಯಾನಮಾಡುತ್ತಿರುವಲ್ಲಿ (ವಾದಮಾಡುತ್ತಿರುವಾಗ) ನೀನು ಸಡಗರದಿಂದ ಏನನ್ನೂ ಮಧ್ಯೆ ಮಾತನಾಡಬಾರದು. ಆದರೆ ಅವರು ಹೇಳಿದ್ದರ ಸಾರವನ್ನು ಗ್ರಹಿಸಿ ಪ್ರತಿಯಾಗಿ ಅವರಿಗೆ ನಿನ್ನ ಸಾಮರ್ಥ್ಯವನ್ನು ತೋರಿಸುವ ಗೋಜಿಗೆ ಹೋಗಬಾರದು. ಅವರಿಗೆ ಎದುರಾಡಬಾರದು.

ಶ್ರದ್ಧಯೈವ ಹಿ ದಾತವ್ಯಮಶ್ರದ್ಧಾಭಾಜನೇಷ್ವಪಿ |
ಶ್ರೀರ್ವಿಭೂತಿಸ್ತ್ವಯಾ ದೇಯಂ ದೇಯಂ ಚಾಪಿ ಸದಾ ಹ್ರಿಯಾ ||
ಭಿಯಾ ಭಯೇನ ದಾತವ್ಯಂ ಸಂವಿನ್ಮೈತ್ರೀ ತಯಾಪಿ ಚ ||

೧೭೭–೧೭೮. ಶ್ರದ್ಧೆಗೆ ಅರ್ಹರಲ್ಲದವರಿಗೆ ಕೊಡುವ ಪ್ರಸಂಗವು ಬಂದಾಗಲೂ ಶ್ರದ್ಧಾಪೂರ್ವಕವಾಗಿಯೇ ನೀನು ಕೊಡತಕ್ಕದ್ದು. ಶ್ರೀ ಎಂದರೆ ವಿಭೂತಿಯು– ವಿಸ್ತಾರವು. ದಾನಮಾಡುವಾಗ ಸಂಕೋಚಮಾಡದೆ ಧಾರಾಳವಾಗಿಯೇ ಕೊಡಬೇಕು. ಹಾಗೂ ತಾನು ಕೊಡುತ್ತಿರುವದು ಅಲ್ಪವೇ ಎಂಬ ನಾಚಿಕೆಯಿಂದಲೂ

ದಾನವು ಯಾರಿಗಾದರೂ ಪ್ರಕಟವಾದೀತು—ಎಂಬ ಭಯದಿಂದಲೂ ಕೊಡಬೇಕು. ಕೊಡುವಾಗ ಪ್ರೇಮಪೂರ್ವಕವಾಗಿರಬೇಕು.

ಏವಂ ಚೇದ್ವರ್ತಮಾನಸ್ಯ ಶ್ರೌತಸ್ಮಾರ್ತೇಷು ಕರ್ಮಸು |
ವೃತ್ತೇ ವಾ ವಿಚಿಕಿತ್ಸಾ ಸ್ಯಾತ್ ಸಂಶಯೋ ಮತಿವಿಭ್ರಮಾತ್ |
ತಸ್ಮಿನ್ ಕರ್ಮಣಿ ವೃತ್ತೇ ವಾ ವಿಪ್ರಾ ಯೇ ಸೂಕ್ಷ್ಮದರ್ಶಿನಃ ||
ಸ್ವತಂತ್ರಾ ಅಭಿಯುಕ್ತಾಶ್ಚ ಋಜವಃ ಕಾಮವರ್ಜಿತಾಃ |
ಯಥಾ ತೇ ತತ್ರ ವರ್ತಂತೇ ವರ್ತೇಥಾಸ್ತ್ವಂ ತಥೈವ ಚ ||

೧೭೯–೧೮೦. ಹೀಗೆ ನಡೆದುಕೊಳ್ಳುತ್ತಿರುವ ನಿನಗೆ ಶ್ರೌತಸ್ಮಾರ್ತಕರ್ಮಗಳ ವಿಷಯದಲ್ಲಾಗಲಿ, ನಡೆವಳಿಕೆಯಲ್ಲಾಗಲಿ, ಬುದ್ಧಿದೋಷದಿಂದ ಸಂಶಯ ವುಂಟಾದಾಗ ಆಯಾ ಕರ್ಮ ಅಥವಾ ಆಚಾರಗಳ ಬಗ್ಗೆ—ಸೂಕ್ಷ್ಮದರ್ಶಿಗಳೂ ಸ್ವತಂತ್ರರೂ ಬಲ್ಲವರೂ ಸರಳಸ್ವಭಾವದವರೂ ಕಾಮವಿಲ್ಲದವರೂ ಆದ ಬ್ರಾಹ್ಮಣರು ಹೇಗೆ ನಡೆದುಕೊಳ್ಳುವರೋ ಹಾಗೆ ನೀನೂ ನಡೆದುಕೊಳ್ಳಬೇಕು.

ತಥಾ ಶಂಕಿತದೋಷೇಷು ಯಥೋಕ್ತಮುಪಪಾದಯೇತ್ |
ಆದೇಶೋಽತ್ರ ವಿಧಿರ್ಜ್ಞೇಯಃ ಉಪದೇಶಃ ಸುತಾಯ ಚ ||

೧೮೧. ಹಾಗೆಯೇ ದೋಷವುಳ್ಳದ್ದೆಂದು ಕಂಡುಬರುವಂಥ ಕರ್ಮ—ಆಚಾರಗಳ ವಿಷಯದಲ್ಲಿಯೂ ಹಿರಿಯರು ನಡೆದಂತೆಯೇ ನಡೆಯಬೇಕು. ಇಲ್ಲಿ ಆದೇಶಃ ಎಂದು ಶ್ರುತಿಯಲ್ಲಿ ಹೇಳಿರುವದು ಅಪ್ಪಣೆ—ಎಂದು ತಿಳಿಯಬೇಕು. ಈ ಉಪದೇಶವು (ಶಿಷ್ಯನಿಗೆ ಅನ್ವಯಿಸುವಂತೆ) ಮಗನಿಗೂ ಅನ್ವಯಿಸುತ್ತದೆ.

ರಹಸ್ಯಂ ಸರ್ವವೇದಾನಾಂ ವೇದೋಪನಿಷದುಚ್ಯತೇ |
ಅನುಶಾಸನಮೀಶಸ್ಯ ಜ್ಞೇಯಮೇತತ್ಪರಾತ್ಮನಃ ||

೧೮೨. ಸರ್ವವೇದಗಳ ರಹಸ್ಯವೆಂದರೆ ಉಪನಿಷತ್ತು—ಎಂದರ್ಥ. ಇದು ಭಗವಂತನ ಅಪ್ಪಣೆಯು. ಪರಮಾತ್ಮನ ಅನುಶಾಸನವೆಂದೇ ತಿಳಿಯಬೇಕು.

ಯಸ್ಮಾದೇವಮತಃ ಸದ್ಭಿಃ ಯಥೋಕ್ತಂ ಯತ್ನಮಾಸ್ಥಿತೈಃ |
ಉಪಾಸಿತವ್ಯಂ ಕರ್ತವ್ಯಮೇವಂ ಚೈತತ್ಸಮಾಚರೇತ್ ||

೧೮೩. ಹೀಗಿರುವದರಿಂದ ಸಜ್ಜನರು ಈ ನಿಯಮಗಳನ್ನು ಪ್ರಯತ್ನಪೂರ್ವಕವಾಗಿ ಅನುಸರಿಸುವವರಾಗಬೇಕು. ಮತ್ತು ಅನುಷ್ಠಿಸಬೇಕು. ಹೀಗೆಯೇ ನಡೆಯಬೇಕು.

ಉಪಸಂಹಾರ

ಪ್ರಮಾದೋತ್ಥಾದಸನ್ನ್ಯಾಯಾದ್ ಗುರುಶಿಷ್ಯಾಭಿಸಂಗತೇಃ |
ಪ್ರಸಕ್ತೋ ಯಸ್ತಯೋರ್ದ್ವೇಷಃ ತಚ್ಛಾಂತ್ಯೈ ಶಾಂತಿರುಚ್ಯತೇ ||

೧೮೪. ಪ್ರಮಾದದಿಂದುಂಟಾದ ಅಪರಾಧನಿಮಿತ್ತವಾಗಿ ಗುರುಶಿಷ್ಯರ ಸಂಬಂಧದಲ್ಲಿ ನ್ಯಾಯಾತಿಕ್ರಮವಾಗಿದ್ದಲ್ಲಿ ಆ ನಿಮಿತ್ತವಾಗಿ ದ್ವೇಷವು ಆಗಿದ್ದರೆ ಅದರ ಪರಿಹಾರಕ್ಕಾಗಿ ಶಾಂತಿಯನ್ನು ಉಪಸಂಹಾರದಲ್ಲಿಯೂ ಹೇಳಲಾಗುವದು.

ಸ್ಯಾದ್ ಜ್ಞಾನಂ ಫಲವದ್ಯಸ್ಮಾಚ್ಛಾಂತಾಂತಃಕರಣೇ ಗುರೌ |
ತಸ್ಯೇಶ್ವರೇಣಾನನ್ಯತ್ವಾದ್ ಭೂಯಃ ಶಾಂತಿರಿಯಂ ತತಃ ||
ಭಾವ್ಯಂ ತು ಪರಿಹಾರಾಯ ತನ್ಮಾಮಾವೀದಿತೀರಣಮ್ |
ಆತ್ಮನೋ ಬ್ರಹ್ಮತಾಂ ಯಸ್ಮಾತ್ ಸ್ವತಃ ಸಿದ್ಧಾಂ ಪ್ರವಕ್ಷ್ಯತಿ ||

೧೮೫-೧೮೬. ಗುರುವು ಶಾಂತಚಿತ್ತನಾಗಿದ್ದಲ್ಲಿ ಮಾತ್ರ ಶಿಷ್ಯನಿಗೆ ಜ್ಞಾನವು ದಕ್ಕುವದಲ್ಲದೆ ಫಲಪ್ರದವೂ ಆಗುವದು. ಆತನು ಈಶ್ವರನಿಗಿಂತ ಬೇರೆಯಲ್ಲವಾದ್ದರಿಂದ (ಅವನ ಪ್ರಸಾದವು) ಶಿಷ್ಯನಿಗೆ ಬೇಕಾಗಿರುವದು). ಆದ್ದರಿಂದ ಮತ್ತೆ ಇಲ್ಲಿ 'ತನ್ಮಾಮಾವೀತ್' ಇತ್ಯಾದಿ ಶಾಂತಿಯನ್ನು ಪಠಿಸಲಾಗಿದೆ. ಇನ್ನುಮುಂದೆ (ಸಹ ನಾವವತು) ಎಂದು ಪಠಿಸಲ್ಪಡುವ ಶಾಂತಿಯಾದರೋ, ನಿರ್ಗುಣವಿದ್ಯೆಯನ್ನು ತಿಳಿಸುವ ಮುಂದಿನ ಭಾಗದ ಅಧ್ಯಯನಕ್ಕಾಗಿ ಹೇಳಲ್ಪಟ್ಟಿದೆ. ಏಕೆಂದರೆ ಅಲ್ಲಿ ಸ್ವತಃಸಿದ್ಧವಾದ 'ಆತ್ಮನು ಬ್ರಹ್ಮವು' ಎಂಬುದನ್ನು ಹೇಳಲಾಗುವದು.

ಇಲ್ಲಿಗೆ ಶೀಕ್ಷಾಧ್ಯಾಯವಾರ್ತಿಕಗಳು ಮುಗಿದಿವೆ.

ಬ್ರ ಹ್ಮ ವ ಲ್ಲಿ

ಉಪೋದ್ಘಾತ

ಕಾಮಾದಯೋ ಯದಜ್ಞಾನಾತ್ ತಜ್ಜ್ಞಾನಾತ್ ಸ್ಯಾದಕಾಮತಾ |
ಅತಃ ಪರಂ ತದೈಕಾತ್ಮ್ಯಂ ವಕ್ಷ್ಯತೇಽಜ್ಞಾನಘಸ್ಮರಮ್ ||

೧. ಯಾವ ಬ್ರಹ್ಮವನ್ನರಿಯದ್ದರಿಂದ ಕಾಮಾದಿಗಳುಂಟಾಗುವವೋ ಯಾವದನ್ನು ಅರಿತಿದ್ದರಿಂದ ಕಾಮವು ಇಲ್ಲವಾಗುವದೋ ಆ ಬ್ರಹ್ಮದೊಡನೆ ಐಕಾತ್ಮ್ಯವನ್ನು ಹೇಳಿ ಅಜ್ಞಾನವನ್ನು ನುಂಗುವ (ಜ್ಞಾನವನ್ನು) ಈಗ ತಿಳಿಸಲಾಗುವದು.

ನಾನಾಗತಮನೈತಿಹ್ಯಂ ಪ್ರತ್ಯಗೇಕಮವಿಕ್ರಿಯಮ್ |
ಅನಾದೇಯಮಹೇಯಂ ಯನ್ನಮಸ್ತಸ್ಮೈ ಸದಾದೃಶೇ ||

೨. ಸರ್ವಗತವಾಗಿಯೂ ಐತಿಹ್ಯವನ್ನು ಮೀರಿದ್ದಾಗಿಯೂ ಪ್ರತ್ಯಗಾತ್ಮನಾಗಿಯೂ ವಿಕಾರರಹಿತವಾಗಿಯೂ ಹಾನೋಪಾದಾನಗಳಿಲ್ಲದ್ದೂ ಸರ್ವದೃಕ್ಕೂ ಆಗಿರುವ ಯಾವ ತತ್ತ್ವವುಂಟೋ ಅದಕ್ಕೆ ನಮಸ್ಕಾರ.

ಯಾವಂತ್ಯುಪಾಸನಾನ್ಯಾದಾವವಿರುದ್ಧಾನಿ ಕರ್ಮಭಿಃ |
ಸಂಹಿತಾವಿಷಯಾದೀನಿ ಸ್ಯುಸ್ತಾನ್ಯಭ್ಯುದಯಾಯ ತು ||

೩. ಕರ್ಮಗಳಿಗೆ ವಿರುದ್ಧವಾಗದೆ ಹೊಂದಿಕೊಳ್ಳುವ ಸಂಹಿತಾವಿಷಯವೇ ಮೊದಲಾದ ಉಪಾಸನೆಗಳು ಯಾವವುಂಟೋ ಅವು ಅಭ್ಯುದಯಫಲಪ್ರದವಾಗಿವೆ. (ಆದರೆ ಮೋಕ್ಷಫಲಪ್ರದಗಳಾಗಿಲ್ಲ).

ನ ಚೈತಾವದವಷ್ಟಂಭಾತ್ ಕಾಮಕರ್ಮೋದ್ಭವತ್ವತಃ |
ಸರ್ವಾನರ್ಥೈಕಬೀಜಸ್ಯ ಮೋಹಸ್ಯಾಸ್ತಿ ನಿರಾಕ್ರಿಯಾ ||

೪. (ಕರ್ಮಸಮುಚ್ಚಿತವಾದ) ಉಪಾಸನೆಗಳನ್ನು ಅವಲಂಬಿಸಿದಮಾತ್ರದಿಂದ ಸರ್ವಾನರ್ಥಗಳಿಗೂ ಬೀಜವಾಗಿರುವ ಮೋಹ (ಅಜ್ಞಾನ)ದ ನಿರಾಕರಣೆಯು ಆಗುವದಿಲ್ಲ. ಏಕೆಂದರೆ ಇವು ಕಾಮುಕರ್ಮಗಳಿಂದಲೇ ಹುಟ್ಟಿರುತ್ತವೆಯಾಗಿ ಅವುಗಳ ಮೂಲವಾದ ಅಜ್ಞಾನವನ್ನು ಕಳೆಯಲಾರವು.

ತಸ್ಮಾತ್ ಸಂಸಾರಮೂಲಸ್ಯ ಭೃಶಮುಚ್ಛಿತ್ತಯೇಽಧುನಾ |
ಯಥಾಭೂತಾರ್ಥಬೋಧ್ಯಾತ್ಮಜ್ಞಾನಂ ಸಮ್ಯಕ್ ಪ್ರವಕ್ಷ್ಯತೇ ||

೫. ಆದ್ದರಿಂದ ಸಂಸಾರಮೂಲವನ್ನು ಚೆನ್ನಾಗಿ ಕಿತ್ತುಹಾಕುವದಕ್ಕಾಗಿ ಈಗ ಯಥಾಭೂತವಾದ ವಸ್ತುವನ್ನು ತಿಳಿಸುವ ಆತ್ಮಜ್ಞಾನವನ್ನು ಸ್ಫುಟವಾಗಿ ಹೇಳಲಾಗುವದು.

ನಿತ್ಯಕರ್ಮಾದ್ಯನುಷ್ಠಾನಾತ್ ಶುದ್ಧಾಂತಃಕರಣಃ ಪುಮಾನ್ |
ವಿರಕ್ತಶ್ಚಾಗ್ರಜಾಲ್ಲಾಭಾತ್ ಸ್ವಪ್ನಪುತ್ರಾದಿಲಾಭವತ್ ||

೬. ಕನಸಿನಲ್ಲಿ ಗಂಡುಮಗುವಾದರೆ ಆ ಲಾಭವು ಹೇಗೆ ಅಸತ್ಯವೋ ಹಾಗೆ ಕರ್ಮಫಲಗಳಿಂದ ದೊರಕುವ ಸುಖವೂ ಅನಿತ್ಯವೇ ಎಂದು ವಿರಕ್ತನಾಗಿ ನಿತ್ಯಕರ್ಮಾನುಷ್ಠಾನದಿಂದ ಮೊದಲು ಉತ್ಪನ್ನವಾದ ಚಿತ್ತಶುದ್ಧಿಯಿಂದ ಕೂಡಿದ ಸಾಧಕನು ವಿರಕ್ತನಾಗಿ ಬ್ರಹ್ಮವಿದ್ಯೆಗೆ ಅಧಿಕಾರಿಯಾಗುವನು.

ಪ್ರತ್ಯಕ್ಷಾಗಮಲಿಂಗೈರ್ಹಿ ಯದ್ಯತ್ಕರ್ಮೋದ್ಭವಂ ಫಲಮ್ |
ತತ್ ಕ್ಷಯಿಷ್ಣು ಇತಿ ವಿಜ್ಞಾಯ ವಿರಕ್ತೋ ನರಕಾದ್ಯಥಾ ||

೭. ಪ್ರತ್ಯಕ್ಷಪ್ರಮಾಣ, ಶ್ರುತಿ, ಹಾಗೂ ಅನುಮಾನಗಳಿಂದ ಕರ್ಮಜನ್ಯವಾದ ಫಲವೆಲ್ಲವೂ ನಾಶವಾಗತಕ್ಕದ್ದು– ಎಂಬಿದನ್ನು ತಿಳಿದವನಾಗಿ–ನರಕದಿಂದ ಹೇಗೋ ಹಾಗೆ– ಕರ್ಮಗಳಿಂದ ಹಿಂದಿರುಗುವವನಾಗಬೇಕು.

ಅಪಾಸ್ತಾಶೇಷದೋಷಂ ಯತ್ ಸರ್ವಕಾಮನಿರಾಸಕೃತ್ |
ತದನಾಪ್ತಂ ತಮೋಮಾತ್ರಪ್ರಸಿದ್ಧ್ಯೈವ ಹಿ ತದ್ಯತಃ ||
ತದನಾಪ್ತಿಕೃದಜ್ಞಾನಧ್ವಸ್ತ್ಯೈಽಲಂ ನ ಕಾರಕಮ್ |
ಪ್ರತ್ಯಗ್ ಜ್ಞಾನೇಽಧಿಕಾರ್ಯಸ್ಮಾತ್ ತ್ಯಕ್ತಪೂರ್ವೋಕ್ತಸಾಧನಃ ||

೮-೯. ಎಲ್ಲಾ ದೋಷಗಳಿಂದಲೂ ದೂರವಾದ ಹಾಗೂ ಎಲ್ಲಾ ಬಯಕೆಗಳನ್ನೂ ಕಿತ್ತುಹಾಕುವಂಥದ್ದಾದ ಆ (ಮುಕ್ತಿಯು) (ಅಜ್ಞಾನವೆಂಬ) ತಮಸ್ಸಿನಿಂದ ಅನಾಪ್ತವಾದಂತೆ ಆಗಿದೆ. ಏಕೆಂದರೆ ಅಜ್ಞಾನವು ಕೇವಲ ಅವಿಚಾರಿತ ಸಿದ್ಧವಾಗಿದೆ. (ಇದಕ್ಕೆ ಪ್ರಮಾಣವಿಲ್ಲ). (ಮೋಕ್ಷ)ಪ್ರಾಪ್ತಿಗೆ ಅಡ್ಡಿಯಾಗಿರುವ ಅಜ್ಞಾನನಾಶಕ್ಕಾಗಿ ಜ್ಞಾನವು ಸಾಕಾಗಿದೆ. ಆದರೆ ಜ್ಞಾನವು ಕಾರಕವಲ್ಲ. ಇಂಥ ಪ್ರತ್ಯಗಾತ್ಮಜ್ಞಾನಕ್ಕೆ ಹಿಂದೆ ಹೇಳಿದ ಕರ್ಮಸಾಧನಗಳನ್ನು ತ್ಯಾಗಮಾಡಿದವನು ಅಧಿಕಾರಿಯು.

ತ್ಯಾಗ ಏವ ಹಿ ಸರ್ವೇಷಾಂ ಮೋಕ್ಷಸಾಧನಮುತ್ತಮಮ್ |
ತ್ಯಜತೈವ ಹಿ ತಜ್ಜ್ಞೇಯಂ ತ್ಯಕ್ತುಃ ಪ್ರತ್ಯಕ್ಪರಂ ಪದಮ್ ||
ತ್ಯಜ ಧರ್ಮಮಧರ್ಮಂ ಚ ತಥಾ ಸತ್ಯಾನೃತೇ ಅಪಿ |
ನ್ಯಾಸೋ ಬ್ರಹ್ಮೇತಿ ಚ ಪ್ರಾಹ ತೈತ್ತಿರೀಯಶ್ರುತಿಸ್ತಥಾ ||

೧೦-೧೧. "ಮೋಕ್ಷಸಾಧನಗಳಲ್ಲಿ ಉತ್ತಮವಾದ ಸಾಧನವೆಂದರೆ ತ್ಯಾಗವೇ. ತ್ಯಾಗಮಾಡುವವನ ಪ್ರತ್ಯಗಾತ್ಮಸ್ವರೂಪವೇ ಆದ ಆ ತತ್ತ್ವವು ಬಿಡುತ್ತಲೇ ಇರುವವನಿಂದ ತಿಳಿಯಲ್ಪಡಬೇಕಾಗಿರುವದು. ಧರ್ಮವನ್ನೂ ಅಧರ್ಮವನ್ನೂ ಹಾಗೂ ಸತ್ಯಾನೃತಗಳನ್ನೂ ಬಿಡು" ಎಂದು ಸ್ಮೃತಿಯೂ 'ನ್ಯಾಸವೆಂದರೆ ಬ್ರಹ್ಮವೇ' ಎಂದು ತೈತ್ತಿರೀಯಶ್ರುತಿಯೂ ತಿಳಿಸುತ್ತವೆ.

ಕ್ಷಯಿಷ್ಣು ಸಾಧ್ಯಂ ವಿಜ್ಞಾಯ ನಿಃಶೇಷಂ ಕರ್ಮ ಸಾಧನಮ್ |
ತತ್ತ್ಯಾಗಸಾಧನಸ್ತಸ್ಮಾತ್ ಪ್ರತ್ಯಗ್ಜ್ಞಾನೇ ಪ್ರವರ್ತತೇ ||

೧೨. ಸಾಧ್ಯವಾದುದೆಲ್ಲವೂ ಕ್ಷಯಿಸಿಹೋಗತಕ್ಕದ್ದು- ಎಂದು ತಿಳಿದವನಾಗಿ ಎಲ್ಲಾ ಕರ್ಮಸಾಧನಗಳನ್ನೂ ತ್ಯಾಗಮಾಡುವದೆಂಬುದೇ ಸಾಧನವಾಗಿ ಉಳ್ಳವನಾಗಿ ಪ್ರತ್ಯಗಾತ್ಮಜ್ಞಾನದಲ್ಲಿ (ಮುಮುಕ್ಷುವು) ಪ್ರವರ್ತಿಸುವನು.

ಉತ್ಪತ್ತ್ಯಾದಿ ಸ್ವತಃಶ್ಚೇತ್ ಸ್ಯಾತ್ ಕರ್ಮಣಾ ಕಿಂ ಪ್ರಯೋಜನಮ್ |
ಸ್ವತ ಏವ ನ ಚೇತ್ ತತ್ ಸ್ಯಾತ್ ವದ ಸ್ಯಾತ್ಕರ್ಮಣಾತ್ರ ಕಿಮ್ ||

೧೩. ಉತ್ಪತ್ತಿಯೇ ಮುಂತಾದವು ಮುಕ್ತಿಯಲ್ಲಿ ಸ್ವತಃ ಇರಲಿ, ಅಥವಾ ಇಲ್ಲದೆ ಇರಲಿ- ಕರ್ಮದಿಂದ ಪ್ರಯೋಜನವಾದರೂ ಏನು? ಇಲ್ಲಿ ಕರ್ಮದ (ಉಪಯೋಗ)ವು ಏನೆಂಬುದನ್ನಾದರೂ ಹೇಳು.

ಉತ್ಪತ್ತ್ಯಾದೌ ತು ಯಚ್ಛಕ್ತಂ ಹೇತುಮಾತ್ರಮಪೇಕ್ಷತೇ |
ಕರ್ಮಾಪ್ಯಪೇಕ್ಷ್ಯ ತಸ್ಯೈವ ಘಟೋತ್ಪತ್ತೌ ಮೃದೋ ಯಥಾ ||

೧೪. ಯಾವದು ಉತ್ಪತ್ತಿಯಾಗಲಿರುವದೋ ಅದು ತನ್ನ ಕಾರಣವನ್ನು –ಹೇಗೆ ಗಡಿಗೆಯು ಹುಟ್ಟಲು ಮಣ್ಣನ್ನು ಬಯಸುತ್ತದೆಯೋ ಹಾಗೆ–ಬಯಸುತ್ತದೆ. ಅಂಥ ವಸ್ತುವಿಗೇ ಕರ್ಮದ ಆವಶ್ಯಕತೆಯೂ ಇರುತ್ತದೆ.

ನಿತ್ಯಂ ನ ಭವನಂ ಯಸ್ಯ ಯಸ್ಯ ವಾ ನಿತ್ಯಭೂತತಾ |
ನ ತಸ್ಯ ಕ್ರಿಯಮಾಣತ್ವಂ ಖಪುಷ್ಪಾಕಾಶಯೋರಿವ ||

೧೫. ಯಾವದಕ್ಕೆ ಆಕಾಶಕುಸುಮದಂತೆ ಯಾವಾಗಲೂ ಇರುವಿಕೆಯೆಂಬುದೇ ಇಲ್ಲವೋ, ಅಥವಾ ಯಾವದು ಆಕಾಶದಂತೆ ಎಂದೆಂದೂ ಇದ್ದುಕೊಂಡೇ ಇರುವದೋ, ಅದಕ್ಕೆ ಮಾಡಲ್ಪಡುವಿಕೆ (ಕರ್ಮದಿಂದ ನಿಷ್ಪನ್ನವಾಗುವಿಕೆ) ಎಂಬಿದು ಇರುವದಿಲ್ಲ.

ಕರ್ತವ್ಯತಾ ನ ಸಾಧ್ಯಸ್ಯ ವಿದಿತತ್ವಾತ್ ವಿಧೀಯತೇ |
ದುಃಖತ್ವಾಚ್ಚ ನ ಯಾಗಸ್ಯ ಹ್ಯುಪಾಯಸ್ತ್ವವಬೋಧ್ಯತೇ ||

೧೬. ಸಾಧ್ಯವಾದ ಸ್ವರ್ಗಾದಿಗಳು ಪುರುಷಾರ್ಥವೆಂಬುದು ಗೊತ್ತಿರುವದರಿಂದ (ಸ್ವರ್ಗಾದಿಗಳ ಬಗ್ಗೆ) ವಿಧಿಯ ಕರ್ತವ್ಯತೆಯೇನೂ ಇಲ್ಲ. ಯಾಗಾದಿಗಳನ್ನು ಮಾಡುವದು ದುಃಖರೂಪವಾಗಿರುವದರಿಂದಲೂ ವಿಧಿಪ್ರಚೋದನೆಯಿಲ್ಲ ಆದರೆ ಯಾಗವೆಂಬುದು ಸ್ವರ್ಗಕ್ಕೆ ಉಪಾಯವೆಂದು ಮಾತ್ರ ಶಾಸ್ತ್ರವು ಬೋಧಿಸುವದು ನಿಜ.

ವಿಜಿಜ್ಞಾಸಸ್ವ ತದಿತಿ ಬ್ರಹ್ಮಜ್ಞಾನೇ ಪ್ರವರ್ತಕಮ್ |
ಜಿಜ್ಞಾಸ್ಯಲಕ್ಷಣೋಕ್ತಿಃ ಸ್ಯಾತ್ ಯತೋ ವಾ ಇತಿ ಚ ಶ್ರುತಿಃ ||

೧೭. 'ತದ್ವಿಜಿಜ್ಞಾಸಸ್ವ' ಎಂಬ ಶ್ರುತಿಯೂ 'ಯತೋ ವಾ ಇಮಾನಿ ಭೂತಾನಿ ಜಾಯಂತೇ' ಎಂಬೀ ಶ್ರುತಿಯೂ ಜಿಜ್ಞಾಸ್ಯವಾದ ಬ್ರಹ್ಮದ ಲಕ್ಷಣವನ್ನು ಹೇಳುತ್ತವೆಯೇ ಹೊರತು (ವಿಧಿಯನ್ನಲ್ಲ). ಆ ಮೂಲಕ ಬ್ರಹ್ಮದ ಜ್ಞಾನದಲ್ಲಿ ಜಿಜ್ಞಾಸುವು ತೊಡಗುವನು.

ಕೋಶ ಪ್ರತ್ಯಕ್ಪ್ರವೇಶೇನ ಪೂರ್ವಪೂರ್ವಪ್ರಹಾಣತಃ |
ಕಾರಕಾದಿನಿಷೇಧೇನ ಹ್ಯುಪಾಯೋ ಬ್ರಹ್ಮವೇದನೇ ||

೧೮. (ಅನ್ನಮಯಾದಿ) ಕೋಶಗಳಲ್ಲಿ ಹಿಂದುಹಿಂದಿನದನ್ನು (ಪರಿಚ್ಛಿನ್ನತ್ವಾದಿದೋಷಗಳ ಕಾರಣದಿಂದ) ಕೈಬಿಟ್ಟು ಒಳಒಳಗಿನ ಕೋಶಗಳನ್ನು ಪ್ರವೇಶಿಸುವ ಮೂಲಕ ಹಾಗೂ ಕ್ರಿಯಾಕಾರಕಫಲಾತ್ಮಕವಾದ (ದ್ವೈತನಿರಾಸ) ಪೂರ್ವಕವಾಗಿ ಬ್ರಹ್ಮವನ್ನರಿಯುವ ಉಪಾಯದ ಬಗ್ಗೆ (ಮನಸ್ಸನ್ನು ಹಿಂತೆಗೆಯಬಾರದು.)

ಅವಿದ್ಯೋದ್ಭೂತದೋಷೇಣ ಪುಂಸಾ ಯತ್ಕಲ್ಪಿತಂ ಫಲಮ್ ।
ಅನಂತಫಲಸಿದ್ಧ್ಯರ್ಥಂ ತದನೂಕ್ತಿಃ ಪ್ರವೃತ್ತಯೇ ॥

೧೯. (ನಿತ್ಯಪ್ರಾಪ್ತವೇ ಆಗಿರುವ ಬ್ರಹ್ಮವನ್ನು ಜಿಜ್ಞಾಸುವು) ತನ್ನ ಅವಿದ್ಯಾನಿಮಿತ್ತವಾದ ದೋಷದಿಂದ ಪಡೆಯತಕ್ಕದ್ದೆಂದು ಕಲ್ಪಿಸಿಕೊಂಡಿರುವ ನಷ್ಟೆ? ಆದಕ್ಕಾಗಿ ಬ್ರಹ್ಮಪ್ರಾಪ್ತಿಯೆಂಬ ಫಲವನ್ನು ಅನುವಾದಮಾಡಿ ಆ ಬ್ರಹ್ಮವನ್ನು ತಿಳಿಸುವ ವಿದ್ಯೆಯಲ್ಲಿ ಪ್ರವೃತಿಯುಂಟಾಗಿ ಅನಂತಫಲಸಿದ್ಧಿಯಾಗ ಲೆಂದು ಹೇಳುವದಕ್ಕಾಗಿ (ಬ್ರಹ್ಮವಿದಾಪ್ನೋತಿ ಪರಮ್) ಎಂದು ಆರಂಭಿಸ ಲಾಗಿದೆ.

ಕರ್ತುಃ ಕರ್ಮಾಣಿ ಕಾರ್ಯಾರ್ಥಮನಾತ್ಮಫಲದಾನಿ ಹಿ ।
ಪುರೋಕ್ತಾನಿ ಯತೋ ನಾಸಾವನ್ಯಥಾತಃ ಪ್ರವರ್ತತೇ ॥

೨೦. ಕರ್ತೃವಾದವನು ಕೈಗೊಳ್ಳುವ ಕರ್ಮಗಳು ಅನಾತ್ಮರೂಪವಾದ (ಪುತ್ರಪಶುಸ್ವರ್ಗಾದಿ) ಫಲಗಳನ್ನೇ ಉಂಟುಮಾಡುವವು. ಇದನ್ನು ಹಿಂದೆಯೇ ಹೇಳಿದೆ. ಆದ್ದರಿಂದ (ಮುಮುಕ್ಷುವು ಅನಾತ್ಮಫಲಗಳನ್ನುಂಟುಮಾಡುವ) ಕರ್ಮ ಗಳಲ್ಲಿ ಪ್ರವೃತ್ತನಾಗುವದಿಲ್ಲ. ಆದರೆ (ಅನ್ಯಥಾ) ಎಂದರೆ (ಕರ್ಮಗಳನ್ನು ಕಳೆದುಕೊಂಡು ಮುಕ್ತಿಯನ್ನು ಪಡೆಯುವ ಸಲುವಾಗಿ) ಕರ್ಮಗಳಲ್ಲಿ ಪ್ರವೃತ್ತ ನಾಗುತ್ತಾನೆ.

ಕ್ಷಯಿಷ್ಣು ಸಾಧನಾಧೀನಂ ಫಲಂ ಬುದ್ಧ್ವಾ ವಿತೃಷ್ಣತಃ ।
ಕಾಮಹೇತೋರನುಚ್ಛಿತ್ತೇಃ ಅಪರಾತ್ಪರಮಿಪ್ಸತಿ ॥

೨೧. ಸಾಧನಸಾಧ್ಯವಾದ ಹಾಗೂ ನಾಶವಾಗುವ (ಕರ್ಮ)ಫಲದ ಯೋಗ್ಯತೆಯನ್ನರಿತವನು ನಿಷ್ಕಾಮನಾಗಿ–ಕಾಮಕ್ಕೆ ಕಾರಣವಾದ ಅವಿದ್ಯೆಯು ಇನ್ನೂ ಹೋಗಿರುವದಿಲ್ಲವಾದ್ದರಿಂದ– ಅಪರ (ಕೀಳಾದ ಕರ್ಮಫಲಕ್ಕಿಂತಲೂ) ಪರ–ಹೆಚ್ಚಿನದಾದ (ಮೋಕ್ಷವನ್ನು) ಬಯಸಿ (ಶ್ರವಣಾದಿಸಾಧನಗಳಲ್ಲಿ) ತೊಡಗುತ್ತಾನೆ.

ಸಾಧ್ಯಸಾಧನವದ್ವಾಕ್ಯಂ ತದ್ವಿರುದ್ಧಾರ್ಥಸಿದ್ಧಯೇ ।
ಪ್ರಾಹ ಬ್ರಹ್ಮವಿದಾಪ್ನೋತಿ ಶ್ರುತಿಃ ಪ್ರತ್ಯಕ್ಪ್ರವೇಶಿನೀ ॥

೨೨. ಬ್ರಹ್ಮವಿದ್ಯೆಯು ಸಾಧನವೆಂದೂ ಪರಪ್ರಾಪ್ತಿಯು ಸಾಧ್ಯವೆಂದೂ ಮೇಲುನೋಟಕ್ಕೆ ತೋರುವ, ಆದರೆ ಸಾಧ್ಯಸಾಧನಗಳಿಗೆ ವಿರುದ್ಧವಾದ ಅರ್ಥವುಳ್ಳ ಪರಪ್ರಾಪ್ತಿಯನ್ನೇ ಶ್ರುತಿಯು ಹೇಳುತ್ತಾ ಜಿಜ್ಞಾಸುವನ್ನು ಒಳಮುಖವಾಗು ವಂತೆ ಮಾಡುತ್ತಿದೆ.

ವಿವರಣೆ : 'ಬ್ರಹ್ಮವಿದಾಪ್ನೋತಿ ಪರಮ್' ಎಂಬ ವಾಕ್ಯದಲ್ಲಿ ಬ್ರಹ್ಮ ವೇದನವು ಸಾಧನವೆಂದೂ ಪರಪ್ರಾಪ್ತಿಯು ಫಲವೆಂದೂ ಶಬ್ದವ್ಯಾಪಾರದಿಂದ

ತಟ್ಟನೆ ತೋರುತ್ತದೆ. ಆದರೆ ಬ್ರಹ್ಮವು ಅಪ್ರಾಪ್ತವಲ್ಲ. ಬ್ರಹ್ಮವಿದ್ಯೆಯು ನಿತ್ಯಪ್ರಾಪ್ತವಾದ ಬ್ರಹ್ಮದಲ್ಲಿ ಸೇರುವಿಕೆಗೆ ಸಾಧನವೂ ಅಲ್ಲ. ಹೀಗೆ ಸಾಧ್ಯ ಸಾಧನಗಳನ್ನು ತಿಳಿಸುವಂಥ ಭಾಷೆಯಲ್ಲಿ ವಾಕ್ಯವಿದ್ದರೂ ಅದು ಸಾಧ್ಯಸಾಧನ ವಿರುದ್ಧವಾದ ಹಾಗೂ ಅವಿದ್ಯಾವ್ಯವಧಾನದಿಂದ ಅಪ್ರಾಪ್ತವಾದಂತಿರುವ ಜಿಜ್ಞಾಸುವಿನ ಸ್ವರೂಪವೇ ಆಗಿರುವ ಬ್ರಹ್ಮವನ್ನು ತಿಳಿಸುವದಕ್ಕಾಗಿ ಬಂದಿದೆ- ಎಂದಭಿಪ್ರಾಯ.

ಶಿಖಾ ತೇ ವರ್ಧತೇ ವತ್ಸ ಗುಡೂಚೀಂ ಶ್ರದ್ಧಯಾ ಪಿಬ |
ಮಾತೇವ ಪ್ರೇರಯೇದ್ಬಾಲಂ ಸದಸಂಭಾವ್ಯಸಿದ್ಧಯೇ ||

೨೩. ಹೇಗೆ ತಾಯಿಯು ತನ್ನ ಮಗುವಿಗೆ 'ಅಪ್ಪ, ನಿನ್ನ ಕೂದಲು ಬೆಳೆಯುತ್ತದೆ. ಈ ಗುಳೂಚಿ(ಯೆಂಬ ಔಷಧವನ್ನು) ಶ್ರದ್ಧೆಯಿಂದ ಕುಡಿ'- ಎನ್ನುತ್ತಾಳೋ ಹಾಗೆ ಶ್ರುತಿಯು ಜ್ಞಾನವೊಂದು ಹೊರತು ಉಳಿದ (ಯಾವ ಸಾಧನಗಳೂ ಮುಕ್ತಿಯನ್ನು ಕೊಡುವದು) ಅಸಂಭಾವಿತವೇ ಸರಿ- ಎಂದು ಭಾವಿಸಿ (ಮುಮುಕ್ಷುವನ್ನು ಜ್ಞಾನದಕಡೆಗೆ ಸೆಳೆಯುತ್ತಿದೆ.)

ವಿವರಣೆ : ಖಾಯಿಲೆಯಾಗಿರುವ ಮಗುವಿಗೆ ಔಷಧವನ್ನು ಕುಡಿಸಬೇಕಾ ಗಿರುವಲ್ಲಿ- ಅದು ಕಹಿಯಾದ್ದರಿಂದ- ಉಪಾಯವಾಗಿ ತಾಯಿಯು 'ಜುಟ್ಟು ಸೊಂಪಾಗಿ ಬೆಳೆಯುತ್ತದೆ, ಇದನ್ನು ಕುಡಿ'-ಎಂದು ಔಷಧಪಾನಮಾಡಿಸುವಳು. ಆದರೆ ಗುಳೂಚಿಪಾನಕ್ಕೂ ಜುಟ್ಟು ಬೆಳೆಯುವದಕ್ಕೂ ಕಾರ್ಯಕಾರಣಸಂಬಂಧ ವಿಲ್ಲ. ಹಾಗೆಯೇ ಇಲ್ಲಿಯೂ ಶ್ರುತಿಯು ತಾಯಿಯಂತೆ ಮುಮುಕ್ಷುವಿಗೆ 'ಪರ ಪ್ರಾಪ್ತಿ' ಎಂಬ ಫಲವನ್ನು ಕಲ್ಪಿಸಿ ಬ್ರಹ್ಮಜ್ಞಾನದ ಸಂಪಾದನೆಗೆ ಪ್ರಚೋದಿಸು ತ್ತದೆ- ಎಂದರ್ಥ.

ಸಾಧ್ಯಸಾಧನಸಂಬಂಧಾತ್ ಪ್ರಸಕ್ತಾ ಯೇಹ ದೋಷಧೀಃ |
ಸಾ ಚೈಕರೂಪವಿಜ್ಞಾನಶಿಖಿಪ್ಲುಷ್ಟಾ ವಿನಂಕ್ಷ್ಯತಿ ||

೨೪. ಮುಕ್ತಿಯು ಜ್ಞಾನಸಾಧ್ಯವೆಂದದ್ದರಿಂದ ಪುನಃ ಸಾಧ್ಯಸಾಧನ ಸಂಬಂಧವುಂಟಾಗಿ ಅದು ಅನಿತ್ಯವಾಗುವದಲ್ಲವೆ? ಎಂಬ ದೋಷಬುದ್ಧಿಯು ಇಲ್ಲಿ ಸಂಭವಿಸುತ್ತದೆಯಷ್ಟೆ! ಆದರೆ ಆ ದೋಷವು ಏಕತ್ವರೂಪವಾದ ವಿಜ್ಞಾನವೆಂಬ ಬೆಂಕಿಯಿಂದ ಸುಡಲ್ಪಟ್ಟು ನಾಶವಾಗಲಿದೆ.

ಮಾ ಭೂದಣ್ವಪಿ ಮೇ ದುಃಖಂ ಸುಖ್ಯೇವ ಸ್ಯಾಮಹಂ ಸದಾ
ಇತಿ ಸ್ವತೋಽಭಿಲಾಷೋಽಯಂ ಸತ್ಯೇವ ವಿಷಯೇ ಭವೇತ್ ||
ಅಜ್ಞಾತಮೋಕ್ಷರೂಪೋಽಪಿ ಕೈವಲ್ಯಾಯ ಪ್ರವರ್ತತೇ |
ಅಲಂ ಯಥೋಕ್ತಕಾಮೋದ್ಧಧಿಷಣೋ ಭವಭೀಷಿತಃ ||

೨೫–೨೬. 'ನನಗೆ ಸ್ವಲ್ಪವೂ ದುಃಖವಾಗಬಾರದು ; ನಾನು ಯಾವಾಗಲೂ ಸುಖಿಯಾಗಿಯೇ ಇರಬೇಕು' ಎಂಬಿದು (ಪ್ರತಿಯೊಬ್ಬನಿಗೂ) ತಾನಾಗಿಯೇ ಉಂಟಾಗಿರುವ ಆಸೆಯು. (ಆದರೆ ಅದು ಮೋಕ್ಷವಲ್ಲ ;) ಏಕೆಂದರೆ ಸುಖಿಯಾಗಿರಬೇಕೆಂಬ ಬಯಕೆಯು ಸುಖಸಾಧನವಾದ ವಿಷಯಗಳಿದ್ದರೆ ಮಾತ್ರವೇ ಉಂಟಾದೀತು. ಇಂಥವನಿಗೆ ಮೋಕ್ಷಸ್ವರೂಪದ ತಿಳಿವಳಿಕೆಯಿಲ್ಲವಾದರೂ ಮುಕ್ತಿಗಾಗಿ ಪ್ರಯತ್ನವನ್ನು ಇವನು ಮಾಡಬಹುದಾಗಿದೆ ; ಏಕೆಂದರೆ ಇಂಥವನು ಕಾಮದಿಂದುಂಟಾದ ಬುದ್ಧಿಯುಳ್ಳವನಾದರೂ ಸಂಸಾರಭಯದಿಂದ ಹೆದರಿ (ಸುಖಪ್ರಾಪ್ತಿಗೆ ಪ್ರಯತ್ನಮಾಡುವವನಾಗಿರುತ್ತಾನೆ).

ಪ್ರವೃತ್ತಿಜನಕಂ ಯಸ್ಮಾತ್ ಸರ್ವತ್ರೈವ ಪ್ರಯೋಜನಮ್ ।
ಶ್ರುತಿರ್ಬ್ರಹ್ಮವಿದಾಪ್ನೋತೀತ್ಯಾಹ ಪುಂಸಃ ಪ್ರಲುಬ್ಧಯೇ ॥

೨೭. ಹೀಗೆ ಪ್ರಯೋಜನವನ್ನು ತಿಳಿಸುವ ಕ್ರಮವು ಎಲ್ಲಾ ಕಡೆಯಲ್ಲಿಯೂ ಅಧಿಕಾರಿಯಾದವನಿಗೆ ಪ್ರವೃತ್ತಿಜನಕವಾಗಿರುವದು. ಆದ್ದರಿಂದ ಶ್ರುತಿಯು ಮನುಷ್ಯನನ್ನು ಆಕರ್ಷಿಸುವ ಸಲುವಾಗಿ 'ಬ್ರಹ್ಮವಿದಾಪ್ನೋತಿ ಪರಮ್' ಎಂದು ಹೇಳುತ್ತಿದೆ.

ಫಲಶ್ರುತ್ಯಂಕುಶಾಕೃಷ್ಟಃ ಶ್ರವಣಾದೌ ಪ್ರವರ್ತತೇ ।
ತತ್ಪೂರ್ವಕಂ ಯತೋ ಜ್ಞಾನಂ ಶ್ರುತಿಶ್ಚೈವಮಭಾಷತ ॥

೨೮. ಫಲಶ್ರುತಿಯೆಂಬ ಅಂಕುಶಾಯುಧದಿಂದ ಸೆಳೆಯಲ್ಪಟ್ಟವನಾಗಿ (ವೇದಾಂತ)ಶ್ರವಣಾದಿಗಳಲ್ಲಿ ಪ್ರವರ್ತಿಸುವನು. ಏಕೆಂದರೆ ಜ್ಞಾನವು ಶ್ರವಣಾದಿಪೂರ್ವಕವಾಗಿಯೇ ಆಗಲಿದೆ. ಶ್ರುತಿಯೂ ಹೀಗೆ ಹೇಳುತ್ತದೆ.

ಲೌಕಿಕೀ ವೈದಿಕೀ ಚಾಥ ಪ್ರವೃತ್ತಿರ್ಯೇಹ ಕಾಚನ ।
ನರ್ತೇ ಪ್ರಯೋಜನಂ ಯಸ್ಮಾತ್ತದೇವಾತಃ ಪ್ರವೃತ್ತಿಕೃತ್ ॥

೨೯. ಯಾವದೇ ಲೌಕಿಕ ಅಥವಾ ವೈದಿಕಪ್ರವೃತ್ತಿಯಾಗಲಿ, ಪ್ರಯೋಜನವಿಲ್ಲದೆ ಆಗಲಾರದು. ಆದ್ದರಿಂದ ಪ್ರಯೋಜನವೇ ಪ್ರವೃತ್ತಿಕಾರಣವಾಗಿರುತ್ತದೆ.

ಬ್ರಹ್ಮವಿದ್ ಬ್ರಹ್ಮ ವೇತ್ತೀತಿ ಯಃ ಸ ಆಪ್ನೋತಿ ತತ್ಪರಮ್ ।
ಸತ್ಯಾದಿಲಕ್ಷಣಂ ಬ್ರಹ್ಮ ವಕ್ಷ್ಯತೇ ತದೃಚಾ ಸ್ಫುಟಮ್ ॥

೩೦. ಬ್ರಹ್ಮವನ್ನು ಅರಿತವನು ಬ್ರಹ್ಮವಿದನೆನಿಸುವನು. ಯಾವನು ಬ್ರಹ್ಮವಿದನೋ ಅವನು ಆ ಪರಬ್ರಹ್ಮವನ್ನು ಪಡೆಯುವನು. ಬ್ರಹ್ಮವೆಂದರೆ ಸತ್ಯಾದಿಲಕ್ಷಣವುಳ್ಳದ್ದು. ಅದು ಮುಂದಿನ ಋಕ್ಕಿನಿಂದ ಸ್ಫುಟವಾಗಿ ಹೇಳಲ್ಪಡುವದು.

ಫಲೋಕ್ತಿಃ ಪರಮಾಪ್ನೋತೀತ್ಯಾಪ್ತಾ ಬ್ರಹ್ಮವಿದುಚ್ಯತೇ |
ಸಾಮರ್ಥ್ಯಾತ್ ಬ್ರಹ್ಮವಿದ್ಯಾ ತು ಪರಸ್ಯಾವಾಪ್ತಿಸಾಧನಮ್ ||

೩೧. 'ಪರವನ್ನು ಹೊಂದುತ್ತಾನೆ' ಎಂಬ ಫಲವಚನವು ಸಾಮರ್ಥ್ಯದಿಂದ ಬ್ರಹ್ಮವಿದನು ಪರವನ್ನು ಪಡೆಯತಕ್ಕವನೆಂದು ತಿಳಿಸುವದು. ಪರಪದವಿಯ ಪ್ರಾಪ್ತಿಗೆ ಬ್ರಹ್ಮವಿದ್ಯೆಯು ಸಾಧನವೆಂಬುದೂ ಗೊತ್ತಾಗುತ್ತದೆ.

ಸ್ವರ್ಗಂ ಯಥಾಗ್ನಿಹೋತ್ರೇಣ ಯಜಮಾನಃ ಪ್ರಸಾಧಯೇತ್ |
ಪರಾವಾಪ್ತಿಂ ತಥಾ ಕುರ್ಯಾತ್ ಬ್ರಹ್ಮವಿದ್ ಬ್ರಹ್ಮವಿದ್ಯಯಾ ||

೩೨. ಹೇಗೆ ಅಗ್ನಿಹೋತ್ರದಿಂದ ಯಜಮಾನನು ಸ್ವರ್ಗವನ್ನು ಸಾಧಿಸುವನೋ ಹಾಗೆ ಬ್ರಹ್ಮವಿದನು ಬ್ರಹ್ಮವಿದ್ಯೆಯಿಂದ ಪರಪ್ರಾಪ್ತಿಯನ್ನು ಮಾಡಿಕೊಳ್ಳುವನು.

ಬ್ರಹ್ಮೈವಾತ್ರ ಪರಂ ಗ್ರಾಹ್ಯಂ ತಜ್ಜ್ಞಾನಂ ನಾನ್ಯಸಿದ್ಧಯೇ |
ಅನ್ಯಜ್ಞಾನಂ ಹಿ ನಾನ್ಯಸ್ಯ ಕ್ವಚಿದಪ್ಯಾಪ್ತಯೇ ಯತಃ ||

೩೩. ಇಲ್ಲಿ ಪರ–ಎಂದು ಫಲರೂಪವಾಗಿ ಹೇಳಿರುವದು ಬ್ರಹ್ಮವನ್ನೇ. ಅದರ ಜ್ಞಾನವು ಬ್ರಹ್ಮವನ್ನು ಬಿಟ್ಟು ಬೇರೊಂದರ ಸಿದ್ಧಿಗಾಗಿ ಅಲ್ಲ. ಏಕೆಂದರೆ ಒಂದು ವಸ್ತುವಿನ ಜ್ಞಾನವು ಮತ್ತೊಂದು ಬೇರೆ ವಸ್ತುವಿನ ಪ್ರಾಪ್ತಿಗೆ ಎಂದಿಗೂ ಕಾರಣವಾಗಲಾರದಷ್ಟೆ !

ದೇಶಕಾಲಾದಿಸಂಭೇದಪೂರ್ವಿಕಾಽವಾಪ್ತಿರಿಷ್ಯತೇ |
ದೇಶಕಾಲಾದ್ಯಭಿನ್ನಸ್ಯ ಕಥಂ ಸೇತ್ಸ್ಯುಚ್ಯತೇ ಯಥಾ ||
ಸರ್ವಾತ್ಮನೋಽಪ್ಯನಾಪ್ತಿಃ ಸ್ಯಾದ್ದಶಮಸ್ಯೇವ ಮೋಹಜಾ ||

೩೪. ಪ್ರಾಪ್ತಿ ಎಂದರೆ ದೇಶ-ಕಾಲ ಮುಂತಾದ ಕಟ್ಟುಪಾಡುಗಳಿಂದ ಕೂಡಿದ ವ್ಯವಹಾರದಲ್ಲಿ ಸಾಧ್ಯವಾಗುವದು. ದೇಶಕಾಲಾದಿಗಳಿಗಿಂತ ಅಭಿನ್ನವೇ ಆದ ಬ್ರಹ್ಮದಲ್ಲಿ ಅದು ಹೇಗೆ ಹೊಂದುತ್ತದೆ ? ಎಂದರೆ (ಉತ್ತರವಿದು.) ಸರ್ವಾತ್ಮನೇ ಆದ ಬ್ರಹ್ಮದ ಅನಾಪ್ತಿಯು ಅಜ್ಞಾನದಿಂದಾಗಿದ್ದು ಅದು ಹೋಗಲು–ದಶಮನ ಪ್ರಾಪ್ತಿಯಾದಂತೆ ಆಗಲಿದೆ.

ಪಂಚಸ್ವನ್ನಮಯಾದ್ಯೇಷು ಹ್ಯಹಮಸ್ಮೀತಿ ವಿಭ್ರಮಾತ್ ||

೩೫. ಅನ್ನಮಯವೇ ಮುಂತಾದ ಐದು (ಕೋಶಾತ್ಮರುಗಳಲ್ಲಿ) ನಾನೆಂಬ ಬುದ್ಧಿಯು ಭ್ರಾಂತಿಯಿಂದಾಗಿರುವದೇ (ಅನಾಪ್ತಿಯೆನಿಸಿರುವದು.)

ದಶಮೋಽಸ್ಮೀತ್ಯತೋ ಜ್ಞಾನಾತ್ ಅಜ್ಞಾನಧ್ವಸ್ತಿವರ್ತ್ಮನಾ |
ದಶಮಾಪ್ತಿವದಾಪ್ತಿಃಸ್ಯಾತ್ ಬ್ರಹ್ಮಣೋಽಜ್ಞಾನಹಾನತಃ ||

೩೬. (ದೃಷ್ಟಾಂತದಲ್ಲಿ) ಹೇಗೆ 'ನಾನು ಹತ್ತನೆಯವನು' ಎಂಬ ಜ್ಞಾನ ವಾಗಲಾಗಿ ಅಜ್ಞಾನವು ನಾಶವಾಗುವ ಕ್ರಮದಿಂದ ಹತ್ತನೆಯವನ ಪ್ರಾಪ್ತಿ ಯಾಗುವದೋ ಹಾಗೆ ಇಲ್ಲಿಯೂ (ಅನ್ನಮಯಾದಿಗಳು) ನಾನಲ್ಲವೆಂಬ ಜ್ಞಾನ ದಿಂದ) ಅಜ್ಞಾನವು ಹೋಗಲಾಗಿ ಬ್ರಹ್ಮದ ಪ್ರಾಪ್ತಿಯಾಗುವದು.

ವಿಭಿನ್ನವೇತ್ತೃವೇದ್ಯಾದೌ ಗೌಣಂ ಬ್ರಹ್ಮ ಯತಸ್ತತಃ |
ಅಭಿನ್ನವೇತ್ತೃವೇದ್ಯಾದಿ ಗ್ರಾಹ್ಯಂ ಮುಖ್ಯಾರ್ಥಸಿದ್ಧಯೇ ||

೩೭. ವೇತ್ತಾ, ವೇದ್ಯ, ವೇದನಗಳೆಂಬ ತ್ರಿಪುಟಿಯು ದ್ವೈತದಲ್ಲಿ ಬ್ರಹ್ಮ ಕ್ಕಿಂತ ಬೇರೆಯಾಗಿ ಸ್ವೀಕೃತವಾಗಿದ್ದು ಬಳಸಲ್ಪಡುತ್ತದೆಯಷ್ಟೆ! ಅಲ್ಲಿ ಬ್ರಹ್ಮ ವೆಂಬುದು ಗೌಣವಾಗಿರುವದು– ಎಂದರೆ ಭೇದವೇ ಮುಖ್ಯವಾಗಿದ್ದು ಅಭೇದವು ಅಮುಖ್ಯವಾಗಿರುವದು. ಆದರೆ ಬ್ರಹ್ಮಪ್ರಾಪ್ತಿಯ ವಿಷಯದಲ್ಲಿ ವೇತ್ತೃ- ವೇದ್ಯಾದಿಗಳು ಬ್ರಹ್ಮಕ್ಕಿಂತ ಅಭಿನ್ನವೇ ಆಗಿದ್ದು– ಮುಖ್ಯಾರ್ಥವಾದ ಬ್ರಹ್ಮವು ಸಿದ್ಧಿಸುವದಕ್ಕಾಗಿ (ಅಭೇದ)ವನ್ನೇ ಗ್ರಹಿಸಬೇಕು– ಅಂದರೆ ಬ್ರಹ್ಮಪ್ರಾಪ್ತಿ ಎಂಬಿದನ್ನೇ ಗೌಣವಾಗಿ ತೆಗೆದುಕೊಂಡು ಭೇದವನ್ನು ಹೊಂದಿಸಿಕೊಳ್ಳಬೇಕು.

ಅನ್ಯದೃಷ್ಟಾವಿವಾತೋಽತ್ರ ನ ನಿಯೋಗೋ ಮನಾಗಪಿ |
ಮೋಹಪ್ರಧ್ವಂಸಮಾತ್ರೇಣ ನಿವೃತ್ತೇ ರೋಗಹಾನಿವತ್ ||

೩೮. ಹೇಗೆ ಅನ್ಯದೃಷ್ಟಿ–ಎಂದರೆ ಅವಿದ್ಯಾವಸ್ಥೆಯಲ್ಲಿ ವಿಧಿಯು ಕಂಡು ಬರುವದೋ ಹಾಗೆ ಇಲ್ಲಿ ಸ್ವಲ್ಪವೂ ವಿಧಿಯ ಅಪೇಕ್ಷೆಯಿರುವದಿಲ್ಲ. ಹೇಗೆ ಔಷಧಪ್ರಯೋಗದಿಂದ ರೋಗಹಾನಿಯಾಗಲಾಗಿ ಆರೋಗ್ಯವು ಸ್ವಭಾವವೇ ಆಗಿದ್ದು ದೊರಕಿದಂತೆ ಆಗುವದೋ ಹಾಗೆ ಅಜ್ಞಾನನಾಶಮಾತ್ರದಿಂದ ಬ್ರಹ್ಮ ಪ್ರಾಪ್ತಿಯಾಗುವದು.

ಕರ್ತೃತಾಂ ಪ್ರತ್ಯಗಾಲಿಂಗ್ಯ ಯೋಽಕರ್ತ್ರಾತ್ಮಾನಮಿಪ್ಸತಿ |
ಉಲ್ಕಾಪಿಶಾಚಂ ಸೋಽಭ್ಯೇತಿ ಶೀತಾರ್ತಃ ಪಾವಕೇಚ್ಛಯಾ ||

೩೯. ಪ್ರತ್ಯಗಾತ್ಮನಲ್ಲಿ ಪರಮಾರ್ಥವಾದ ಕರ್ತೃತ್ವವನ್ನು ಸ್ವೀಕರಿಸಿ ಯಾವನು ಅಕರ್ತೃವಾದ ಆತ್ಮನನ್ನು ಎಂದರೆ ಬ್ರಹ್ಮವು ಅಕರ್ತೃವೂ ಅಭೋಕ್ತೃ ವೂ ಆಗಿದೆ– ಎಂಬ ತಿಳಿವಳಿಕೆಯನ್ನು ಸಂಪಾದಿಸಲು ಇಚ್ಛಿಸುವನೋ ಅವನು ಚಳಿಯಿಂದ ಪೀಡಿಸಲ್ಪಟ್ಟವನು ಬೆಂಕಿಯನ್ನಾಶ್ರಯಿಸುವ ಆಸೆಯಿಂದ ಕೊಳ್ಳಿದೆವ್ವ ವನ್ನು ಆಶ್ರಯಿಸಿದವನಂತೆ ನಾಶವಾಗುತ್ತಾನೆ.

ಕರೋಮೀತಿ ಧಿಯಾ ಚ್ಚೇತದ್ ಬ್ರಹ್ಮಾಸ್ಮೀತಿ ಹಿ ಲಭ್ಯತೇ |
ಬ್ರೂತಾಲಾಭೇಽಸ್ಯ ಕೋ ಹೇತುರ್ನ ಹ್ಯತೋಽನ್ಯೋಽಸ್ತ್ಯದರ್ಶನಾತ್

೪೦. 'ನಾನು ಮಾಡುತ್ತೇನೆ' ಎಂಬ ಬುದ್ಧಿಯಿಂದ 'ನಾನು ಬ್ರಹ್ಮ ವಾಗಿರುತ್ತೇನೆ' ಎಂಬ ತಿಳಿವಳಿಕೆಯು ದೊರಕುವದಾದರೆ (ಕರ್ತೃತ್ವಜ್ಞಾನವಿರು ವಾಗಲೇ ಬ್ರಹ್ಮಪ್ರಾಪ್ತಿಯನ್ನು ಒಪ್ಪಿದಂತಾಗುವದರಿಂದ– ಆ ಕರ್ತೃತ್ವಜ್ಞಾನವು ನಿದ್ರೆಯಕಾಲದಲ್ಲಿ ಹೊರತು ಉಳಿದ ಕಾಲದಲ್ಲಿದ್ದುಕೊಂಡೇ ಇರುವದರಿಂದ ಬ್ರಹ್ಮೋಪದೇಶವಿಲ್ಲದೆಯೇ ಬ್ರಹ್ಮಪ್ರಾಪ್ತಿಯಾಗಬೇಕಲ್ಲವೆ?) ಹಾಗಾಗದೆ ಇರಲು ಕಾರಣವೇನೆಂದು ಹೇಳಬಲ್ಲಿರಾ? ಅಂಥ ಕಾರಣವು ಕಂಡುಬರುತ್ತಿಲ್ಲ. ಆದ್ದರಿಂದ ಆತ್ಮನಲ್ಲಿ ಕರ್ತೃತ್ವಾದಿಗಳು ಅಜ್ಞಾನಕೃತವೇ ಎಂದು ಸಿದ್ಧವಾಗುವದು.

ತಸ್ಮಾದವಿದ್ಯಾಸಂಭೂತಕರ್ತೃ ಪ್ರತ್ಯಗವಿಕ್ರಿಯಮ್ |
ಅವಿದ್ಯಾನರ್ಥತತ್ಕಾರ್ಯಪ್ರತ್ಯಾಖ್ಯಾನೇನ ಬೋಧ್ಯತೇ ||

೪೧. ಆದ್ದರಿಂದ ಅವಿದ್ಯೆಯಿಂದಾಗಿರುವ ಕರ್ತೃ(ತ್ವವುಳ್ಳ), ಅವಿಕ್ರಿಯ ನಾದ ಪ್ರತ್ಯಗಾತ್ಮನು ಅವಿದ್ಯೆಯಿಂದಾಗಿರುವ ಅನರ್ಥ ಹಾಗೂ ಅದರ ಕಾರ್ಯ ವನ್ನು ನಿರಾಕರಿಸುವ ಮೂಲಕ ಶಾಸ್ತ್ರಗಳಿಂದ ತಿಳಿಸಲ್ಪಡುತ್ತಾನೆ.

ಕರ್ತುರ್ಜ್ಞಾತುರ್ಹಿ ಯಾ ದೃಷ್ಟಿಃ ಸಾಮಾನ್ಯಾದ್ಯರ್ಥಸಂಶ್ರಯಾ |
ತತ್ಪ್ರತ್ಯಗಾತ್ಮದೃಷ್ಟ್ಯಾ ತಾಂ ಪ್ರತ್ಯಾಖ್ಯಾಯಾಶ್ನುತೇ ಪರಮ್ ||

೪೨. ಪ್ರಮಾತೃವಾದವನ ಯಾವ ಕರ್ತೃದೃಷ್ಟಿಯುಂಟೋ ಅದು ಸಾಮಾನ್ಯವಿಶೇಷಗಳನ್ನು ಅರಿಯತಕ್ಕದ್ದಾಗಿರುವದು. ಅದನ್ನು ಪ್ರತ್ಯಗಾತ್ಮ ದೃಷ್ಟಿಯಿಂದ ಕಿತ್ತುಹಾಕಿ (ಕೂಟಸ್ಥದೃಷ್ಟಿಯನ್ನವಲಂಬಿಸಿದನಾದರೆ) ಪರವಾದ ಅಮೃತವನ್ನು ಪಡೆಯುವನು.

ಅಶೇಷಾನಂದವಲ್ಲ್ಯರ್ಥಸೂತ್ರಮಾದ್ಯಮಿದಂ ವಚಃ |
ಯಸ್ಮಾತ್ತಸ್ಮಾತ್ತದರ್ಥಸ್ಯ ಹ್ಯಾವಿಷ್ಕೃತ್ ಋಗುದೀರ್ಯತೇ ||

೪೩. ಇಡಿಯ ಆನಂದವಲ್ಲಿಯ ಅರ್ಥವನ್ನೊಳಗೊಂಡ ಸೂತ್ರರೂಪವಾದ ಈ ವಚನವು (ಬ್ರಹ್ಮವಿದಾಪ್ನೋತಿ ಪರಮ್– ಎಂಬಿದು) ವಿವರಣೆಯನ್ನು ಬಯಸುವದರಿಂದ ಇದರ ಅಭಿಪ್ರಾಯವನ್ನು ಹೊರಗೆಡವಲು (ಮುಂದಿನ) ಋಕ್ಕು ಹೇಳಲ್ಪಟ್ಟಿದೆ.

ವಿಶೇಷಣವಿಶೇಷತ್ವಾತ್ ಸತ್ಯಾದೀನ್ಯತ ಏವ ಚ |
ಚತ್ವಾರ್ಯೇಕವಿಭಕ್ತೀನಿ ನೀಲರಕ್ತೋತ್ಪಲಾದಿವತ್ ||

೪೪. ಸತ್ಯಂ, ಜ್ಞಾನಂ, ಅನಂತಂ, ಬ್ರಹ್ಮ– ಎಂಬ ನಾಲ್ಕು ಪದಗಳೂ ಒಂದೇ ವಿಭಕ್ತಿಯಲ್ಲಿದ್ದು ಬ್ರಹ್ಮವೆಂಬ ವಿಶೇಷ್ಯವನ್ನು ಸತ್ಯಾದಿವಿಶೇಷಣಗಳು

ಅನುಸರಿಸುವವಾದ್ದರಿಂದಲೇ ಸತ್ಯಂ ಬ್ರಹ್ಮ ಇತ್ಯಾದಿರೂಪವಾಗಿ (ಅರ್ಥಮಾಡ ಬೇಕು). ಹೇಗೆ ಉತ್ಪಲವು ನೀಲವಾಗಿದೆ ಅಥವಾ ರಕ್ತವಾಗಿದೆ; (ಮತ್ತು ಮಹತ್ತಾಗಿಯೂ ಸುಗಂಧಿಯಾಗಿಯೂ ಇದೆ- ಎಂದು ಹೇಳಿದಂತೆ) ಎಂದು ತಿಳಿಯಬೇಕು.

ವೇದ್ಯತ್ವೇನ ಯತೋ ಬ್ರಹ್ಮ ಪ್ರಾಧಾನ್ಯೇನ ವಿವಕ್ಷಿತಮ್ ।
ತಸ್ಮಾದ್ ವಿಶೇಷ್ಯಂ ವಿಜ್ಞೇಯಂ ತತೋಽನ್ಯತ್ ಸ್ಯಾದ್ವಿಶೇಷಣಮ್ ॥

೪೫. ಬ್ರಹ್ಮವು ವೇದ್ಯವೆಂದು ವಿವಕ್ಷಿತವಾಗಿರುವದರಿಂದ ವಿಶೇಷ್ಯವೆನಿಸಿರುವದು. ಆದ್ದರಿಂದ ಉಳಿದ (ಸತ್ಯಜ್ಞಾನಾದಿಗಳು) ವಿಶೇಷಣಗಳೆನಿಸುವವು.

ನೀಲಂ ಮಹತ್ ಸುಗಂಧೀತಿ ವಿಶಿಷ್ಯನ್ತ್ಯುತ್ಪಲಂ ಯಥಾ ।
ಏಕಾಧಿಕರಣಾನ್ಯೇವಂ ಸತ್ಯಾದೀನಿ ಪರಂ ಮಹತ್ ॥

೪೬. ಹೇಗೆ ಏಕಾಧಿಕರಣವಾದ ನೀಲ, ಮಹತ್, ಸುಗಂಧಿ- ಎಂಬಿವು ಉತ್ಪಲವನ್ನು ವಿಶಿಷ್ಟವಾಗಿ ತಿಳಿಸುವವೋ ಹಾಗೆ ಸತ್ಯಾದಿ (ವಿಶೇಷಣಗಳು) ಮಹತ್ತಾದ ಪರಬ್ರಹ್ಮವನ್ನು ತಿಳಿಸುತ್ತವೆ.

ಏವಂ ವಿಭಜ್ಯಮಾನಂ ಸತ್ ಸತ್ಯಮಿತ್ಯೇವಮಾದಿಭಿಃ ।
ಸ್ವವಿಶೇಷವಿರುದ್ಧೇಭ್ಯೋ ಧರ್ಮಿಭ್ಯಃ ಸ್ಯಾನ್ನಿರಾಕೃತಮ್ ॥

೪೭. ಹೀಗೆ ಬ್ರಹ್ಮವು ಸತ್ಯವೇ ಮುಂತಾದ ವಿಶೇಷಣಗಳಿಂದ (ಉಳಿದವುಗಳಿಂದ) ವಿಂಗಡಿಸಿ ತಿಳಿಸಲ್ಪಟ್ಟದ್ದಾಗಿ ಸತ್ಯಾದಿವಿರುದ್ಧವಾದ-ಎಂದರೆ ಅನೃತ-ಜಡ-ಪರಿಚ್ಛಿನ್ನತ್ವಗಳಿಂದ ದೂರೀಕರಿಸಲ್ಪಟ್ಟು ಸಿದ್ಧವಾಗುವದು.

ಏವಂ ಚ ಸತಿ ತಜ್ಜ್ಞಾತಂ ಯದನ್ಯೇಭ್ಯೋಽವಧಾರ್ಯತೇ ।
ನೀಲೋತ್ಪಲಾದಿವದ್ ಬ್ರಹ್ಮ ನಾನ್ಯಥಾನವಧಾರಣಾತ್ ॥

೪೮. ಹೀಗಾದರೆ ನೀಲೋತ್ಪಲ-ರಕ್ತೋತ್ಪಲ-ಮುಂತಾದವು ಬೇರೆಯ ಉತ್ಪಲಗಳಿಗಿಂತ ಭಿನ್ನವಾಗಿ ಸ್ಪಷ್ಟವಾಗಿ ತಿಳಿಯುವಂತೆ ಬ್ರಹ್ಮವುಕೂಡ ತಿಳಿದು ಬರುವದು. ಇಲ್ಲವಾದರೆ ಅವಧಾರಣೆಮಾಡದೆ ಇರುವಾಗ ತಿಳಿದುಬರಲಾರದು.

ನನು ವ್ಯಭಿಚರದ್ ವಸ್ತು ಸ್ಯಾದ್ವಿಶೇಷ್ಯಂ ವಿಶೇಷಣೈಃ ।
ಬ್ರಹ್ಮಾಂತರಾದೃತೇ ತ್ವತ್ರ ಕುತೋ ಬ್ರೂಹಿ ವಿಶೇಷ್ಯತಾ ॥

೪೯. ಉತ್ಪಲಾದಿಗಳು ವ್ಯಕ್ತಿಭೇದದಿಂದ ಬದಲಾಗುವದರಿಂದ ವಿಶೇಷಣಗಳಿಂದ ವಿಶೇಷಿತವಾಗಿ ವ್ಯವಹರಿಸಲ್ಪಡುವದು ಸರಿ. ಆದರೆ ಬ್ರಹ್ಮವು ತಾನೊಂದೇ ಆಗಿರುವಲ್ಲಿ ಅದು ವಿಶೇಷ್ಯವೆನಿಸುವದಾದರೂ ಹೇಗೆ? ಏಕೆ? ಹೇಳಬಲ್ಲಿರಾ?

ವಿವರಣೆ : ವಿಶೇಷಣವು ಯಾವಾಗಲೂ ವಿಶೇಷ್ಯವನ್ನು ಇತರ ವಸ್ತುಗಳಿಂದ ವಿಂಗಡಿಸಿ ತಿಳಿಸುತ್ತದೆ. ಉತ್ಪಲ– ಎಂಬಿದು ನೀಲ ರಕ್ತಾದಿಭೇದದಿಂದ ಬೇರೆಬೇರೆಯಾಗಿರುವದರಿಂದ ನೀಲೋತ್ಪಲವು– ಎಂದು ನೀಲ ಎಂಬ ವಿಶೇಷಣದೊಡನೆ ಹೇಳಿದರೆ ರಕ್ತೋತ್ಪಲಾದಿಗಳಿಂದ ವ್ಯಾವೃತ್ತಿಮಾಡಿದಂತಾಗುವದು. ಇದು ಸರಿ. ಆದರೆ ಬ್ರಹ್ಮವೆಂಬುದು ಇರುವದು ಒಂದೇ. ಅದಕ್ಕೆ ಸತ್ಯ ಎಂದು ವಿಶೇಷಣವನ್ನು ಹೇಳುವ ಅವಶ್ಯಕತೆಯಿಲ್ಲ. ಏಕೆಂದರೆ ಸತ್ಯವಲ್ಲದ ಬ್ರಹ್ಮಾಂತರವು ಇಲ್ಲ. ಹೀಗಿರುವಲ್ಲಿ ಬ್ರಹ್ಮವು ವಿಶೇಷ್ಯವೆಂದೂ ಸತ್ಯಾದಿಗಳು ವಿಶೇಷಣಗಳೆಂದೂ ಹೇಳುವದು ಹೇಗೆ ? ಎಂದು ಆಕ್ಷೇಪ.

ವಿಶೇಷಣವಿಶೇಷ್ಯತ್ವೇ ಸತಿ ದೋಷಃ ಪ್ರಸಜ್ಯತೇ |
ಲಕ್ಷ್ಯಲಕ್ಷಣತಾಂ ಯಾತು ನ ದೋಷೋಽತ್ರ ಮನಾಗಪಿ ||

೫೦. ನಿಜ ; ಸತ್ಯಾದಿಗಳು ವಿಶೇಷಣಗಳೆಂದೂ ಬ್ರಹ್ಮವು ವಿಶೇಷ್ಯವೆಂದೂ ಹೇಳಿದರೆ ಮೇಲ್ಕಂಡಂತೆ ದೋಷವುಂಟಾಗುವದು ಸಹಜ. ಆದ್ದರಿಂದ ಸತ್ಯಾದಿಗಳು ಲಕ್ಷಣವೆಂದೂ ಬ್ರಹ್ಮವು ಲಕ್ಷ್ಯವೆಂದೂ ಆಗಲಿ ; ಆಗ ಸ್ವಲ್ಪವೂ ದೋಷವಿರುವದಿಲ್ಲ.

ಅನೇಕಾತ್ಮವಿಶೇಷ್ಯಸ್ಥಮಾಗೃಹೀತವಿಶೇಷ್ಯಕಮ್ |
ಸಜಾತೀಯಾನ್ನಿರಾಕರ್ತೃ ವಿಶೇಷಣಮಿಹೋಚ್ಯತೇ ||

೫೧. ಅನೇಕಾತ್ಮಕವಾದ– ಎಂದರೆ ನಾನಾರಸವಾದ ವಿಶೇಷ್ಯದಲ್ಲಿ ನೆಲೆಗೊಂಡ ವಿಶೇಷಣವು ಸಮಾನಜಾತೀಯವಾದದ್ದನ್ನು ವ್ಯಾವರ್ತನೆಮಾಡಿ ವ್ಯವಹಾರಕಾಲಕ್ಕೆ ವಿಶೇಷಣವೆನಿಸಿಕೊಳ್ಳುವದು.

ಸಾಮಾನ್ಯೇತರಸಂಯುಕ್ತಮನೇಕಗುಣಸಂಯುತಮ್ |
ಸಂಭವ್ಯಸಂಭವಿಗುಣಂ ವಿಶೇಷ್ಯಂ ತತ್ಪ್ರಚಕ್ಷತೇ ||

೫೨. ಸಾಮಾನ್ಯಕ್ಕಿಂತ ಬೇರೆಯಾದ ವಿಶೇಷದಿಂದ ಕೂಡಿದ್ದಾಗಿ ಶುಕ್ಲಾದಿ ಅನೇಕ ಗುಣಗಳಿಂದ ಕೂಡಿದ್ದಾಗಿದ್ದರೆ ವಿಶೇಷ್ಯವೆನಿಸುವದು. ಆದರೆ ಆ ಗುಣಗಳು ನಿತ್ಯವಾಗಿ ವಿಶೇಷ್ಯದಲ್ಲಿದ್ದರೂ ಅಥವಾ ಸ್ವಲ್ಪವೂ ಯಾವರೀತಿಯಿಂದಲೂ ಇಲ್ಲದೆಹೋದರೂ ವಿಶೇಷ್ಯವೆನಿಸುವದಿಲ್ಲ.

ವಿವರಣೆ : ವಿಶೇಷ್ಯವೆಂದರೆ ಸಾಮಾನ್ಯವಿಶೇಷಣಗಳೆರಡೂ ಇರಬೇಕು. ಹೇಗೆಂದರೆ ಕೆಂಪುಮಡಕೆ ಎಂಬಲ್ಲಿ ಮಡಕೆ ಎಂಬಿದು ವಿಶೇಷ್ಯವಾಗಬಹುದು. ಇಲ್ಲಿ ಕೆಂಪು ಎಂಬ ವಿಶೇಷಣವು ಕರಿಯ ಮಡಕೆಯಿಂದ ಅದನ್ನು ವ್ಯಾವೃತ್ತಿ ಮಾಡುತ್ತದೆ. ಆದರೆ ಪ್ರಕಾಶಮಾನನಾದ ಸೂರ್ಯನು ಎಂಬಲ್ಲಿ ಪ್ರಕಾಶ ಎಂಬಿದು ವಿಶೇಷಣವಾಗಲಾರದು. ಏಕೆಂದರೆ ಪ್ರಕಾಶವಿಲ್ಲದ ಸೂರ್ಯನು

ಪ್ರಸಿದ್ಧನೇ ಅಲ್ಲ. ಹಾಗೆಯೇ ಬಂಜೆಯ ಮಗನು ಕಪ್ಪಗಿದ್ದಾನೆ- ಎಂಬಿದೂ ಸರಿಯಲ್ಲ. ಬಂಜೆಯ ಮಗನೇ ಇಲ್ಲದಿರುವಾಗ ಕಪ್ಪು ವಿಶೇಷಣವೇ ಅಲ್ಲ. ಬಂಜೆಯ ಮಗ ವಿಶೇಷ್ಯನೂ ಅಲ್ಲ.

ವಿಶೇಷ್ಯಾನ್ತರಶೇಷಂ ಯತ್ ಸ್ವವಿಶೇಷ್ಯಾನ್ಯಬುದ್ಧಿಕೃತ್ |
ಪರಿಕಲ್ಪಿತಸಂಬಂಧಂ ಲಕ್ಷಣಂ ಭಾವಲಕ್ಷಣಮ್ ||

೫೩. ವಿಶೇಷ್ಯಕ್ಕಿಂತ ಬೇರೆಯಾದ- ಆದರೆ ತನ್ನ ವಿಶೇಷ್ಯವನ್ನು ಉಳಿದ ವಸ್ತುಬುದ್ಧಿಗಳಿಂದ ವಿಂಗಡಿಸುವ ಭಾವವೇ ಲಕ್ಷಣವೆನಿಸುವದು. ಹಾಗೂ ತಾನು ವಿಶೇಷ್ಯದೊಡನೆ ಪರಿಕಲ್ಪಿತವಾದ ಸಂಬಂಧವುಳ್ಳದ್ದೂ ಆಗಿರಬೇಕು. ಇದನ್ನೇ ವಸ್ತುವಿನ ಲಕ್ಷಣವೆನ್ನುವರು. (ಸಜಾತೀಯವೂ ವಿಜಾತೀಯವೂ ಆದ ಎಲ್ಲಾ ವಸ್ತುಗಳಿಂದಲೂ ವಿಂಗಡಿಸಿ ಹೇಳುವ ವಸ್ತುನಿರೂಪಣವು ಲಕ್ಷಣವೆನಿಸುವದು. ಸಜಾತೀಯವಸ್ತುಗಳಿಂದ ಮಾತ್ರ ವಿಂಗಡಿಸಿ ಹೇಳುವ ವಸ್ತುನಿರೂಪಣವು ವಿಶೇಷಣವೆನಿಸುವದು.)

ನಿರಸ್ಯತಿ ಯಥೈವೈಕಂ ತಥೈವಾನ್ಯದ್ವಿರೋಧಿ ಯತ್ |
ಸ್ವಾತ್ಮನೈವೈಕರೂಪೇಣ ಲಕ್ಷ್ಯಮತ್ರ ನಿಗದ್ಯತೇ ||

೫೪. ಯಾವದು ತಾನೊಂದಾಗಿದ್ದು ಬೇರೊಂದು ವಿರೋಧಿಯಾದದ್ದನ್ನು ಅಲ್ಲಗಳೆಯುತ್ತದೆಯೋ ಏಕರೂಪದಿಂದ ತಾನೊಂದೇ ಉಳಿದುಕೊಳ್ಳುವದೋ ಅದು ಲಕ್ಷ್ಯವೆನಿಸುವದು.

ವಿವರಣೆ : ಹೇಗೆ ಅವಕಾಶವನ್ನು ಕೊಡುವದೇ ಆಕಾಶವು- ಎಂದು ಲಕ್ಷಣವನ್ನು ಹೇಳಲಾಗಿ ಲಕ್ಷ್ಯವಾದ ಆಕಾಶವು ತಾನಲ್ಲದ ಎಲ್ಲವನ್ನೂ ವಿರೋಧಿಸಿ ತಾನೊಂದೇ ನೆಲೆಗೊಳ್ಳುವದು. ಆದ್ದರಿಂದ ಆಕಾಶವು ಲಕ್ಷ್ಯವೆಂದೂ ಅವಕಾಶವನ್ನು ಕೊಡುವದು- ಎಂಬಿದನ್ನು ಲಕ್ಷಣವೆಂದೂ ಹೇಳಬಹುದಾಗಿದೆ.

ಸತ್ಯಾದಯಃ ಪರಾರ್ಥತ್ವಾತ್ ಇತರೇತರನಿಃಸ್ಪೃಹಾಃ |
ಏಕೈಕಸ್ತ್ವತ ಏವೈಷಾ ವಿಶೇಷ್ಯಾರ್ಥೇನ ಬಧ್ಯತೇ ||

೫೫. ಸತ್ಯವೇ ಮೊದಲಾದವು ಒಂದಕ್ಕೊಂದು ಸಂಬಂಧಿಸದೆ ಸ್ವತಂತ್ರವಾಗಿದ್ದು ಬ್ರಹ್ಮವೆಂಬ ವಸ್ತುವಿಗಾಗಿ ಇದ್ದುಕೊಂಡು ಪರತಂತ್ರವಾಗಿರುವದರಿಂದ ಇವು ಪ್ರತಿಯೊಂದೂ ವಿಶೇಷ್ಯವಾದ ಬ್ರಹ್ಮದೊಡನೆ ಸಂಬಂಧವನ್ನು ಹೊಂದಿದುತ್ತವೆ.

ವಿವರಣೆ : 'ಸತ್ಯಂ ಜ್ಞಾನಂ ಅನಂತಂ ಬ್ರಹ್ಮ' ಎಂಬಲ್ಲಿ ಸತ್ಯವು ಜ್ಞಾನಕ್ಕಾಗಲಿ ಜ್ಞಾನವು ಅನಂತಕ್ಕಾಗಲಿ ವಿಶೇಷಣವಲ್ಲ. ಆದ್ದರಿಂದ ಸತ್ಯ, ಜ್ಞಾನ,

ಅನಂತಗಳು ನಿರಪೇಕ್ಷಗಳಾಗಿದ್ದು ಒಂದೊಂದೂ ಪ್ರತ್ಯೇಕವಾಗಿ ವಿಶೇಷ್ಯವಾದ ಬ್ರಹ್ಮದೊಡನೆ ಕೂಡಿಕೊಳ್ಳುತ್ತವೆ. ಆಗ ಸತ್ಯಂ ಬ್ರಹ್ಮ, ಜ್ಞಾನಂ ಬ್ರಹ್ಮ, ಅನಂತಂ ಬ್ರಹ್ಮ- ಎಂದಾಗುವದು.

ಸಕೃತ್ ಪ್ರಮಿತರೂಪಾದ್ಯತ್ ರೂಪಮನ್ಯತ್ಕದಾಚನ |
ನೈವ ಪ್ರಪದ್ಯತೇ ಸತ್ಯಂ ತಸ್ಮಾತ್ಕಾರ್ಯವಿಲಕ್ಷಣಮ್ ||

೫೬. ಒಮ್ಮೆ ಇಂಥ ರೂಪವುಳ್ಳದ್ದೆಂದು ನಿಶ್ಚಯಿಸಿದ ಬಳಿಕ ಮತ್ತೆ ಯಾವದು ತನ್ನ ಸ್ವರೂಪವನ್ನು ಎಂದಿಗೂ ಬದಲಾಯಿಸುವದಿಲ್ಲವೋ ಅದು ಸತ್ಯವೆನಿಸುವದು. ಮತ್ತು ಅದು ಕಾರ್ಯಕ್ಕಿಂತ ವಿಲಕ್ಷಣವಾಗಿರುವದು.

ಯಾವಾನ್ ಕಶ್ಚಿದ್ವಿಕಾರೋಽತ್ರ ಬ್ರಹ್ಮ ತಸ್ಮಾನ್ನಿವರ್ತಿತಮ್ |
ಭಜತೇ ಕಾರಣತ್ವಂ ತತ್ ತಥಾಽಚೈತನ್ಯಧರ್ಮಕಮ್ ||

೫೭. ಲೋಕದಲ್ಲಿ ಎಷ್ಟೆಷ್ಟು ಕಾರ್ಯ(ವಿಕಾರ)ಗಳೆಂಬಿವು ಇವೆಯೋ ಅವೆಲ್ಲದರಿಂದಲೂ ಬ್ರಹ್ಮವನ್ನು ಸತ್ಯವೆಂಬ ವಿಶೇಷಣದಿಂದ ಬಿಡಿಸಿ ಹೇಳಿದ್ದರಿಂದ ಅದು ಕಾರಣವೆಂದೂ ಅಚೇತನವೆಂದೂ ಪ್ರಾಪ್ತವಾಗುತ್ತದೆ- (ಎಂದು ಶಂಕೆಯುಂಟಾಗುವದು.)

ತದ್ದೋಷದ್ವಯನುತ್ತ್ಯರ್ಥಂ ಜ್ಞಾನಂ ಬ್ರಹ್ಮೇತ್ಯುದೀರ್ಯತೇ |
ಅನೇಕಾರ್ಥಾಭಿಸಂಬನ್ಧಾತ್ ಕಿಮರ್ಥಂ ಜ್ಞಾನಮುಚ್ಯತೇ ||

೫೮. (ಕಾರಣತ್ವ-ಜಡತ್ವ-ಎಂಬೀ) ಎರಡು ದೋಷಗಳ ಪರಿಹಾರಕ್ಕಾಗಿ ಜ್ಞಾನಂ ಬ್ರಹ್ಮ-ಎಂದು ಹೇಳಲಾಗಿದೆ. (ಆದರೆ) ಜ್ಞಾನವೆಂಬ ಶಬ್ದಕ್ಕೆ ಅನೇಕ ಅರ್ಥಗಳ ಸಂಪರ್ಕವಿರುವದರಿಂದ ಜ್ಞಾನವೆಂದರೆ ಯಾವ ಅರ್ಥವೆಂದು ಕೇಳಲಾಗಿದೆ.

ಬ್ರಹ್ಮಣೋ ಭೇದಕಂ ಯಸ್ಮಾದಾನನ್ತ್ಯೇನ ಚ ಸಂಗತೇಃ |
ಜ್ಞಪ್ತಿರ್ಜ್ಞಾನಮಿತಿ ನ್ಯಾಯ್ಯಮನ್ಯಥಾ ದೋಷದರ್ಶನಾತ್ ||

೫೯. ಅನಂತ- ಎಂಬುದರೊಡನೆ ಹೊಂದಿಕೊಂಡಿರುವ ಜ್ಞಾನಶಬ್ದವು ಬ್ರಹ್ಮದ ವಿಷಯದಲ್ಲಿ ಜ್ಞಪ್ತಿ ಎಂಬರ್ಥವನ್ನು ಕೊಡುವದು. ಇದೇ ನ್ಯಾಯವು. ಹೀಗಲ್ಲವಾದರೆ ಬ್ರಹ್ಮದ ಜ್ಞಾನವೆಂದರೆ ಭೇದವಿಷಯಕವಾಗಿಬಿಟ್ಟು ದೋಷವು ಸಂಭವಿಸುವದು.

ತಸ್ಮಾತ್ ಸತ್ಯಮನಂತಂ ಯತ್ ಜ್ಞಾನಂ ತದಿಹ ಗೃಹ್ಯತೇ |
ಭಾವಸಾಧನಮೇವಾತಃ ಸ್ಯಾದೇತತ್ ಯುಕ್ತಿದರ್ಶನಾತ್ ||

೬೦. ಆದ್ದರಿಂದ ಸತ್ಯವೂ ಅನಂತವೂ ಆದ ಯಾವ ಜ್ಞಾನವಿದೆಯೋ ಅದನ್ನು ಇಲ್ಲಿ ಸ್ವೀಕರಿಸಲಾಗಿದೆ. ಹೀಗಿರುವದರಿಂದ ಇದು ಭಾವಾರ್ಥಕವಾದ ಶಬ್ದವೇ ಆಗಿದೆ. ಇದಕ್ಕೆ ಯುಕ್ತಿಯನ್ನೂ ತೋರಿಸಲಾಗಿದೆ.

ಜ್ಞಾನಂ ಬ್ರಹ್ಮೇತಿ ವಚನಾದಂತವತ್ತ್ವಮವಾಪ ತತ್ |
ಜ್ಞಾನಸ್ಯ ಲೌಕಿಕಸ್ಯೇಹ ಹ್ಯಂತವತ್ತ್ವಸಮನ್ವಯಾತ್ ||

೬೧. ಲೌಕಿಕವಾದ ಜ್ಞಾನವು ಹುಟ್ಟುವದು, ನಾಶವಾಗುವದು–ಪ್ರಸಿದ್ಧವಾಗಿರುವದರಿಂದ 'ಜ್ಞಾನವು ಬ್ರಹ್ಮ' ಎಂದು ಹೇಳಿದಾಗ ಅದು ಅಂತವುಳ್ಳದ್ದೆಂದಾಗಿಬಿಡುತ್ತದೆಯಲ್ಲವೆ ? ಎಂದರೆ—

ಅತಃ ತತ್ಪ್ರತಿಷೇಧಾರ್ಥಮನಂತಮಿತಿ ಶಬ್ದ್ಯತೇ |
ಅನ್ತಃ ಸೀಮಾ ತಥೇಯತ್ತಾ ತನ್ನಿಷೇಧಸ್ತ್ವನಂತತಾ ||

೬೨. ಅದನ್ನು ಪ್ರತಿಷೇಧಿಸುವ ಸಲುವಾಗಿ ಅನಂತವು (ಬ್ರಹ್ಮವು) ಎಂದು ಹೇಳಲ್ಪಡುತ್ತದೆ. ಅನಂತವೆಂದರೆ ಗಡಿಯು ಅಥವಾ ಇಷ್ಟು–ಎಂಬ ಪರಿಮಾಣವು. ಅವುಗಳಿಲ್ಲದ್ದೇ ಅನಂತವು.

ಅನೃತಾದಿನಿಷೇಧೇನ ಸತ್ಯಾದೀನಾಮುಪಕ್ಷಯಾತ್ !
ಬ್ರಹ್ಮಣಶ್ಚಾಪ್ರಸಿದ್ಧತ್ವಾತ್ ಮಿಥ್ಯಾರ್ಥಂ ಚೇದ್ವಚೋ ನ ತತ್ ||

೬೩. ಸತ್ಯವೇ ಮುಂತಾದ ವಿಶೇಷಣಗಳು ಅನೃತಾದಿಧರ್ಮಗಳನ್ನು ನಿಷೇಧಮಾಡುವದರಿಂದಲೂ ಬ್ರಹ್ಮವು (ಪ್ರಮಾಣಗೋಚರ)ವಲ್ಲದೆ ಅಪ್ರಸಿದ್ಧವಾಗಿರುವದರಿಂದಲೂ ಅದು ಮಿಥ್ಯೆ (ಶೂನ್ಯ)ವೆಂದು ಪ್ರಾಪ್ತವಾಗುವದಲ್ಲ ? ಎಂದರೆ ಆ ಮಾತು ಸರಿಯಲ್ಲ.

ಪರಮಾರ್ಥಮನಾಲಿಂಗ್ಯ ನ ದೃಷ್ಟಂ ವಿತಥಂ ಕ್ವಚಿತ್ |
ತಸ್ಮಾದ್ವಾ ವಿತಥಂ ಸರ್ವಂ ಪರಮಾರ್ಥೈಕನಿಷ್ಠಿತಮ್ ||

೬೪. ಪರಮಾರ್ಥವಾದ (ವಸ್ತುವನ್ನು) ಆಶ್ರಯಿಸದೆ ಎಲ್ಲಿಯೂ ಮಿಥ್ಯೆಯಾದದ್ದು ತೋರಿರುವದು ಅನುಭವದಲ್ಲಿಲ್ಲ. ಆದ್ದರಿಂದ ಎಲ್ಲಾ ಮಿಥ್ಯಾವಸ್ತುಗಳೂ ಪರಮಾರ್ಥದಲ್ಲೇ ನೆಲೆಗೊಂಡಿರುತ್ತವೆ.

ವಿವರಣೆ : ಕಪ್ಪೆಯಚಿಪ್ಪಿನಲ್ಲಿ ಕಲ್ಪಿತವಾದ ಬೆಳ್ಳಿಯು ಕಪ್ಪೆಯಚಿಪ್ಪನ್ನು ಆಶ್ರಯಿಸಿಯೇ ತೋರುತ್ತದೆ. ವ್ಯವಹಾರದಲ್ಲಿ ಬೆಳ್ಳಿಯು ತೋರಿಕೆಯೆಂದೂ ಕಪ್ಪೆಯಚಿಪ್ಪು ಪರಮಾರ್ಥವೆಂದೂ ಪ್ರಸಿದ್ಧವಾಗಿದೆ. ನಿರಧಿಷ್ಠಾನವಾದ ಭ್ರಮೆಯು ಅನುಭವದಲ್ಲಿಲ್ಲ. ಹಾಗೆಯೇ ಬ್ರಹ್ಮವು ಜಗತ್ತಿಗೆ ಅಧಿಷ್ಠಾನವಾಗಿದ್ದು

ಸತ್ಯಾದಿಶಬ್ದಗಳು ಅನೃತಾದಿಗಳನ್ನು ನಿಷೇಧಮಾಡಿದರೂ ನಿಷೇಧಶೇಷ ವಾಗಿದ್ದುಕೊಂಡೇ ಇರುವದು. ಆದ್ದರಿಂದ ಶೂನ್ಯವಾದದ ಪ್ರಸಕ್ತಿಯಿಲ್ಲ.

ಪದಾತ್ ಪದಾರ್ಥಬುದ್ಧಿರ್ನ ಉತ್ಪಲಾದೌ ಪ್ರಜಾಯತೇ |
ತದಭಾವಧಿಯೈ ನಾಲಂ ಪದವಾಕ್ಯಾರ್ಥರೂಪತಃ ||

೬೫. ಪದದಿಂದ ಪದಾರ್ಥಬುದ್ಧಿಯುಂಟಾದೀತೇ ಹೊರತು (ವಾಕ್ಯಾರ್ಥ ಬುದ್ಧಿ)ಯುಂಟಾಗುವದಿಲ್ಲ. ಉತ್ಪಲಾದಿಗಳಲ್ಲಿ ಹೀಗೆ ಕಂಡುಬಂದಿದೆ. ಆದ್ದರಿಂದ (ಸತ್ಯಾದಿಪದಗಳು ಅನೃತಾದಿನಿಷೇಧಪೂರ್ವಕವಾಗಿ ವಾಕ್ಯಾರ್ಥಜ್ಞಾನಕ್ಕೆ ನೆರ ವಾಗುವವು). ಆದ್ದರಿಂದಲೇ ಅವು ಬ್ರಹ್ಮವಿಲ್ಲ- ಎಂಬ ಬುದ್ಧಿಯನ್ನುಂಟು ಮಾಡಲು ಸಮರ್ಥವಲ್ಲ. ಏಕೆಂದರೆ ಪದಾರ್ಥಜ್ಞಾನಪೂರ್ವಕವಾಗಿ ವಾಕ್ಯಾರ್ಥ ಜ್ಞಾನದಲ್ಲಿ ಅವು ನೆಲೆಗೊಂಡಿವೆ.

ಪ್ರತಿಪದ್ಯ ಪದಾರ್ಥಂ ಹಿ ವಿರೋಧಾತ್ ತದ್ವಿರೋಧಿನಃ |
ಪಶ್ಚಾದಭಾವಂ ಜಾನಾತಿ ವಧ್ಯಘಾತಕವತ್ ಪದಾತ್ ||

೬೬. ಸತ್ಯಾದಿಪದಗಳಿಂದ ಪರಬ್ರಹ್ಮದ ಅರಿವನ್ನು ಪಡೆದನಂತರ ಆ ಅರಿವಿಗೆ ವಿರೋಧವಾದ ಅಸತ್ಯಾದಿಗಳು ಇಲ್ಲವೆಂಬುದು (ಅರ್ಥಾಪತ್ತಿಯಿಂದ) ಸಿದ್ಧವಾಗುತ್ತವೆ. ಏಕೆಂದರೆ ಒಂದೇ ಅಧಿಕರಣದಲ್ಲಿ ಸತ್ಯವೂ ಅನೃತವೂ ಒಟ್ಟಿಗೆ ಇರಲಾರವು. ಉದಾಹರಣೆ : ಒಂದು ಜಮೀನಿನಲ್ಲಿ ಇಲಿಗಳ ಕಾಟವು ಹೆಚ್ಚಾಗಿದ್ದು ಪೈರು ನಷ್ಟವಾಗುತ್ತಿದ್ದರೆ ಅಲ್ಲಿ ಬೆಕ್ಕು- ಹಾವು ಇರಲಾರವು- ಎಂದೇ ಅರ್ಥವಷ್ಟೆ !

ಶಬ್ದಾತ್ ಪ್ರತೀಯತೇ ತಾವತ್ ಸಂಗತಿರ್ಧರ್ಮಧರ್ಮಿಣೋಃ |
ಮಾನಾಂತರಾದಪೋಹಸ್ತು ನ ಶಾಬ್ದಸ್ತೇನ ಸ ಸ್ಮೃತಃ ||

೬೭. ಧರ್ಮವಾದ ಸತ್ಯಾದಿಗಳಿಗೂ ಧರ್ಮಿಯಾದ ಬ್ರಹ್ಮಕ್ಕೂ ಶಬ್ದ ದಿಂದಲೇ ಸಮಾನಾಧಿಕರಣತ್ವಧರ್ಮವು ಕಂಡುಬರುತ್ತದೆ. ಬ್ರಹ್ಮವು ಸತ್ಯಾದಿ ರೂಪವಾದ್ದಾದರೆ ಅದು ಅಸತ್ಯಾದಿರೂಪವೆಂಬುದು ಹೇಗಾದೀತು ? ಎಂಬ ಅರ್ಥಾ ಪತ್ತಿಯು ಶಬ್ದಗಮ್ಯವೇನೂ ಅಲ್ಲ. (ಒಂದರ್ಥದಿಂದ ಹೊರಡುವ ಮತ್ತೊಂ ದರ್ಥವು ಚೋದನಾರ್ಥವಲ್ಲ).

ನ ನೀಲವಚನಾದಾಯ ನೀಲಧೀರುಪಜಾಯತೇ |
ವಿಶೇಷ್ಯಜ್ಞಾನಮಪ್ಯೇವಂ ನಾನ್ತರೇಣ ವಿಶೇಷಣಮ್ ||

೬೮. ಇದು ನೀಲವಾಗಿದೆ- ಎನ್ನುವಾಗ ನೈಲ್ಯವೆಂಬ ಗುಣವುಳ್ಳ ವಸ್ತು ವನ್ನು ಸ್ವೀಕರಿಸದೆ ನೀಲಬುದ್ಧಿಯುಂಟಾಗುವದಿಲ್ಲ. ಹಾಗೆಯೇ (ಬ್ರಹ್ಮ)ವೆಂಬ ವಿಶೇಷ್ಯವಸ್ತುವಿನ ಜ್ಞಾನವಿಲ್ಲದೆ ಸತ್ಯಾದಿವಿಶೇಷಣಗಳ ಅರಿವುಂಟಾಗಲಾರದು.

ವಾಕ್ಯಾರ್ಥಾನುಭವೋಽಸ್ಮಾಕಂ ನೀಲಾದೇರುಪಜಾಯತೇ |
ಕಿಂ ನೀಲಮಿತಿ ಚಾಕಾಂಕ್ಷಾ ಸತ್ಯೇವಮುಪಪದ್ಯತೇ ||

೧೯. 'ನೀಲೋತ್ಪಲ' ಎಂಬ ಪದವು ಆ ವಸ್ತುವಾಚಕವಾದ ಶಕ್ತಿಯುಳ್ಳದ್ದಾಗಿದ್ದರೆ ವಾಕ್ಯಪ್ರಯೋಗಕಾಲಕ್ಕೆ ನಮಗೆ ಅನುಭವವಾಗುವದಕ್ಕೂ ನೀಲನೆಂದರೇನು ? ಎಂಬ ಪ್ರಶ್ನೆಗೂ ತಕ್ಕದ್ದಾಗುವದು. ಹಾಗಿಲ್ಲದೆ ಶೂನ್ಯವಾದದ್ದರಲ್ಲಿ ನೀಲವೆಂದು ಸೇರಿಸಿ ಹೇಳಿದರೂ ಆಕಾಂಕ್ಷೆಯಾಗುವದಿಲ್ಲ. (ಹಾಗೆಯೇ ಸತ್ಯಂ ಬ್ರಹ್ಮ ಎಂಬ ವಾಕ್ಯವು ಶೂನ್ಯಾರ್ಥಪರ್ಯವಸಾಯಿಯಾಗದೆ ಬ್ರಹ್ಮಲಕ್ಷಣವನ್ನು ಹೇಳುವದು).

ಪ್ರತ್ಯಕ್ಷತೋಽವಸೇಯತ್ವಾದೇವಂ ಸರ್ವಸ್ಯ ವಸ್ತುನಃ |
ನೈವ ಸಾಧಯಿತುಂ ಶಕ್ಯಂ ಕ್ಷಣಿಕತ್ವಂ ಕಥಂಚನ ||

೨೦. ಹೀಗೆ ಎಲ್ಲಾ ವಸ್ತುಗಳಿಗೂ ಪ್ರತ್ಯಕ್ಷಾನುಭವವು ಪ್ರಮಾಣವಾಗಿರಲಾಗಿ ಕ್ಷಣಿಕತ್ವವನ್ನು ಸಾಧಿಸುವದಾಗಲಾರದು. (ಬ್ರಹ್ಮವು ದೃಷ್ಟಿಯ ದ್ರಷ್ಟವೆನಿಸಿರುವದರಿಂದ ನಿತ್ಯದೃಗ್ರೂಪವಾದ ಅದು ಎಂದಿಗೂ ಕ್ಷಣಿಕವಾಗಲಾರದು).

ಸತಿ ಕುಂಭೇ ನ ನಾಶೋಽಸ್ತಿ ನಾಶೋಽಪಿ ನ ತದಾಶ್ರಯಃ |
ಅಸ್ತಿ ಚೇತ್ ಪೂರ್ವವದ್ಧರ್ಮಿ ನ ನಷ್ಟಃ ಪೂರ್ವವದ್ ಘಟಃ ||

೨೧. ಮಡಕೆಯು ಇದೆ- ಎಂದಾದರೆ ನಾಶವು ಇಲ್ಲವೆಂದಾಗುವದು (ಏಕಕಾಲದಲ್ಲಿ ಒಂದು ವಸ್ತುವು ಇದೆ-ಇಲ್ಲ ಎಂಬೆರಡೂ ಧರ್ಮಗಳುಳ್ಳದ್ದಾಗಲಾರದು) ಆದ್ದರಿಂದ ನಾಶವೆಂಬುದು ಘಟವನ್ನು ಆಶ್ರಯಿಸಲಾರದು. ನಾಶವುಂಟು- ಎನ್ನುವದಾದರೆ ನಾಶಕ್ಕೆ ಮುಂಚೆ ಘಟವಿರಲೇಬೇಕಾದ್ದರಿಂದ ಮತ್ತು ನಾಶವೆಂಬುದು ಆ ಘಟವನ್ನಾಶ್ರಯಿಸಬೇಕಾಗುವದರಿಂದ ನಾಶೋತ್ತರಕಾಲದಲ್ಲಿಯೂ (ನಾಶಕ್ಕೆ ಆಶ್ರಯವಾಗಿ) ಘಟವಿದೆ- ಎಂದಾಗುವದು.

ಇಷ್ಟೋ ನಾಶಸ್ಯ ನಾಶಶ್ಚೇತ್ ಅಸ್ತು ಜೀವ ಶತಂ ಸಮಾಃ |
ಘಟೋಽನಾಶೀತಿ ಮತ್ಪಕ್ಷಃ ಸ ಚ ನೈವಂ ನಿಹನ್ಯತೇ ||

೨೨. ನಾಶವು ನಾಶವಾಯಿತು, ಅದು ನಮ್ಮ ಮತ- ಎನ್ನುವದಾದರೆ ನೀನು ನೂರು ವರ್ಷಗಳು ಬದುಕುವವನಾಗು. ಮಡಕೆಯು ನಾಶವಿಲ್ಲದ್ದು ಎಂದು ನನ್ನ ಪಕ್ಷವು. ಅದು ಹೀಗೆ ಬಾಧಿತವಾಗದೆ ಇದೆ.

ವಿವರಣೆ: ಶೂನ್ಯವಾದಿಯು ನಾಶವೂ ನಾಶವಾಯಿತು-ಎಂದು ಹೇಳಿದರೆ ನಾಶವಿಲ್ಲ- ಎಂದಾಗುವದು. ಹೇಗೆ ನಷ್ಟವು ನಷ್ಟವಾಯಿತು- ಎಂದರೆ ಲಾಭವಾಯಿತೆಂದು ಅರ್ಥವೋ ಹಾಗೆ ಇದೂ ಸಂಭವಿಸುವದು. ಆಗ ಶೂನ

ಸಿದ್ಧಿಯಾಗದೆ ಸತ್ ಸಾಮಾನ್ಯವೇ ಸಿದ್ಧಿಯಾಗುವದರಿಂದ ಅದು ನಮ್ಮ ಅಭಿಪ್ರಾಯವೇ ಆಗಿದೆ. ಅದನ್ನು ಸಮರ್ಥಿಸಿದ ನೀನು ನೂರುಕಾಲ ಬಾಳುವವನಾಗು– ಎಂದರ್ಥ.

ನ ನಾಶೋ ಹಂತಿ ನಷ್ಟಾರಂ ಗಂತಾರಮಿವ ತದ್ಗತಿಃ |
ಯಸ್ಮಿನ್ ಸತ್ಯೇವ ಯಃ ಸಿಧ್ಯೇತ್ ನಿರುಣದ್ಧಿ ಸ ತಂ ಕಥಮ್ ||

೭೩. ಹೋಗುವವನನ್ನು ಹೋಗುವಿಕೆ ಎಂಬ ಕ್ರಿಯೆಯು ಹೇಗೆ ನಾಶಪಡಿಸಲಾರದೋ ಹಾಗೆ ನಾಶಕ್ಕೆ ಆಶ್ರಯನಾಗಿರುವವನನ್ನು ನಾಶವು ಕೊಲ್ಲಲಾರದು. ಏಕೆಂದರೆ ಯಾವದು ಇದ್ದರೆ ಮಾತ್ರವೇ ಯಾವದು ಸಿದ್ಧಿಸೀತೋ ಅದು ತನ್ನ ಆಶ್ರಯವನ್ನು ಇಲ್ಲವಾಗಿಸುವದಾದರೂ ಹೇಗಾದೀತು ?

ಲಕ್ಷಣಾರ್ಥಮಿದಂ ವಾಕ್ಯಂ ಯಸ್ಮಾತ್ ಪೂರ್ವಮುದಾಹೃತಮ್ |
ವಿಶೇಷಣಾಶ್ರಯಾನ್ನಾತಃ ಶೂನ್ಯತಾತ್ರ ಪ್ರಸಜ್ಯತೇ ||

೭೪. (ಬ್ರಹ್ಮದ ಸ್ವರೂಪ) ಲಕ್ಷಣವನ್ನು ಹೇಳುವ ಈ ವಾಕ್ಯವು ಹಿಂದೆಯೇ ಉದಾಹರಿಸಲ್ಪಟ್ಟಿರುವಂತೆ ವಿಶೇಷಣಗಳನ್ನಾಶ್ರಯಿಸಿರುವದರಿಂದ ಶೂನ್ಯಾರ್ಥವು ಇಲ್ಲಿ ಸಂಭವಿಸುವದಿಲ್ಲ.

ವಿಶೇಷಣತ್ವೇಽಪ್ಯೇತೇಷಾಂ ಲಕ್ಷಣಾರ್ಥತ್ವಮಾತ್ಮನಿ |
ಲಕ್ಷ್ಯೇಽಸತಿ ನ ತಾದರ್ಥ್ಯಂ ಸತ್ಯಾದೀನಾಂ ಪ್ರಸಜ್ಯತೇ ||

೭೫. ಪ್ರತ್ಯಗಾತ್ಮನಲ್ಲಿ (ವಿಶೇಷಣವಿಶೇಷ್ಯತ್ವಾದಿಗಳು ವಿವಕ್ಷಿತವಲ್ಲದ್ದರಿಂದ) ಈ ಸತ್ಯಾದಿಶಬ್ದಗಳಿಗೆ ವಿಶೇಷಣತ್ವವನ್ನು ಹೇಳಿದರೂ ಇವು ಬ್ರಹ್ಮಸ್ವರೂಪವನ್ನು ತಿಳಿಸುವ ಪದಗಳೇ ಆಗಿವೆ. ಏಕೆಂದರೆ ವಿಶೇಷ್ಯ(ಲಕ್ಷ್ಯ)ವು ಸಿದ್ಧವಾಗದಿರುವಾಗ ವಿಶೇಷಣವೂ ಸಿದ್ಧವಾಗುವದಿಲ್ಲ. ಆದ್ದರಿಂದ ಸತ್ಯಾದಿಗಳಿಗೆ ವಿಶೇಷಣಾರ್ಥವಿಲ್ಲ.

ಅತೋ ಲಕ್ಷಣವಾಚಿತ್ವಾತ್ ನ ಶೂನ್ಯಾರ್ಥಮಿದಂ ವಚಃ |
ವಿಶೇಷ್ಯತ್ವೇಽಪಿ ನೈವಂ ಸ್ಯಾತ್ ಸ್ವಾರ್ಥಾಸಂತ್ಯಾಗಕಾರಣಾತ್ ||

೭೬. ಆದ್ದರಿಂದ (ಸತ್ಯಾದಿಗಳು) ಲಕ್ಷಣವಾಚಿಗಳಾದ್ದರಿಂದ ಶೂನ್ಯಾರ್ಥವಾಚಕವೆಂದು ಇದು (ಸತ್ಯಂ ಜ್ಞಾನಮನನ್ತಂ ಬ್ರಹ್ಮ– ಎಂಬ ವಾಕ್ಯವು) ಆಗಲಾರದು. ಹಾಗೆಯೇ ಬ್ರಹ್ಮವು ಸತ್ಯಾದಿಗಳಿಗೆ ವಿಶೇಷ್ಯವೆಂದಾದರೂ ಅದು ತನ್ನ ಅರ್ಥವನ್ನು ಬಿಡದೆಇರುವ ಕಾರಣದಿಂದ ಶೂನ್ಯಾರ್ಥವಾಗಲಾರದು.

ಸ್ವಾರ್ಥೇಽಸತಿ ನ ಸತ್ಯಾದೇಃ ವಿಶೇಷ್ಯಾರ್ಥೇ ನಿಯಂತೃತಾ |
ನಿಯಮ್ಯಾರ್ಥನಿಯಂತೃತ್ವಂ ಸ್ವಾರ್ಥೇ ಸತ್ಯುಪಪದ್ಯತೇ ||

೭೭. ಸತ್ಯಾದಿವಿಶೇಷಣಗಳಿಗೆ ಸ್ವಾರ್ಥವಿಲ್ಲವೆಂದಾದರೆ ವಿಶೇಷ್ಯಾರ್ಥವನ್ನು ನಿಯಂತ್ರಣಮಾಡಲಾರವು. ಆದರೆ ಸ್ವಾರ್ಥವಿದೆಯೆಂದಾದರೆ ನಿಯಮ್ಯಾರ್ಥವನ್ನು ನಿಯಂತ್ರಣಮಾಡುವದು ಹೊಂದುತ್ತದೆ. (ಹೀಗೆ ಅನ್ವಯವ್ಯತಿರೇಕಗಳಿಂದ ಸತ್ಯಾದಿಗಳಿಗೆ ವಿಶೇಷಣಾರ್ಥವು ಸಿದ್ಧವಾಗುತ್ತದೆ.)

ಸ್ವೇನಾರ್ಥೇನಾರ್ಥವಾಂಶ್ಚಾತ್ರ ಬ್ರಹ್ಮಶಬ್ದಃ ಸಹೇತರೈಃ |
ತತ್ರಾನಂತೋಽನ್ತವದ್ವಸ್ತುವ್ಯಾವೃತ್ತ್ಯೈವ ವಿಶೇಷಣಮ್ ||

ಸ್ವಾರ್ಥಾರ್ಪಣಪ್ರನಾಡ್ಯೈವ ಪರಿಶಿಷ್ಟಾ ವಿಶೇಷಣಮ್ |
ತದ್ವಿರೋಧ್ಯರ್ಥಸಂತ್ಯಾಗಃ ಸಾಮರ್ಥ್ಯಾತ್ ಸ್ಯಾನ್ನ ಶಬ್ದತಃ ||

೭೮–೭೯. ಇಲ್ಲಿ ಬ್ರಹ್ಮವೆಂಬ ಶಬ್ದವು ಇತರ ಸತ್ಯಾದಿಶಬ್ದಗಳೊಡಗೂಡಿ ತನ್ನ ಅರ್ಥವನ್ನೂ ಉಳ್ಳದ್ದಾಗಿ ವಸ್ತುನಿಷ್ಠವಾಗಿದೆ. ಅನಂತವೆಂಬುದು ಮಾತ್ರ ಅಂತವುಳ್ಳ ವಸ್ತುವನ್ನು ವ್ಯಾವೃತ್ತಿಮಾಡುವ ಮೂಲಕ ವಿಶೇಷಣವೆನಿಸಿರುವದು. ಉಳಿದ ಸತ್ಯಜ್ಞಾನಶಬ್ದಗಳು ತಮ್ಮ ಅರ್ಥವನ್ನು ಸಮರ್ಪಿಸುವ ಮೂಲಕವೇ ವಿಶೇಷಣಗಳಾಗಿವೆ. ಅನೃತಾದಿ ಅರ್ಥವನ್ನು ವ್ಯಾವೃತ್ತಿಗೊಳಿಸುವದಾದರೋ, ಸಾಮರ್ಥ್ಯದಿಂದ ಸಿದ್ಧವೇ ಹೊರತು ಶಬ್ದದಿಂದಲ್ಲ.

ಗುಹಾಯಾಂ ನಿಹಿತಂ ಯಸ್ಮಾದೇತಸ್ಮಾದಾತ್ಮನಸ್ತಥಾ |
ಬ್ರಹ್ಮಾತ್ಮಶಬ್ದಯೋಸ್ತಸ್ಮಾದೈಕಾರ್ಥ್ಯಮವಸೀಯತೇ ||

೮೦. 'ಯೋ ವೇದ ನಿಹಿತಂ ಗುಹಾಯಾಮ್' ಎಂದು ಬ್ರಹ್ಮವನ್ನು ಬುದ್ಧಿಸಾಕ್ಷಿಯೆಂದೂ 'ಏತಸ್ಮಾದಾತ್ಮನ ಆಕಾಶಃ ಸಂಭೂತಃ' ಎಂಬಲ್ಲಿ ಆತ್ಮಶಬ್ದವನ್ನು ಬ್ರಹ್ಮದಲ್ಲಿ ಪ್ರಯೋಗಿಸಿರುವದರಿಂದಲೂ ಬ್ರಹ್ಮಾತ್ಮಶಬ್ದಗಳಿಗೆ ಏಕಾರ್ಥತ್ವವು ಸಿದ್ಧವಾಗುತ್ತದೆ.

ವಿಜ್ಞಾನಾತ್ಮಾತಿರೇಕೇಣ ಜ್ಞಾಪ್ಯತೇ ಬ್ರಹ್ಮ ಚೇತ್ ಪರಮ್ |
ನಿಯೋಗಗಮ್ಯಃ ಸನ್ ಭೇದೋ ವದ ಕೇನ ನಿವಾರ್ಯತೇ ||

೮೧. ಜೀವಾತ್ಮನಿಗಿಂತ ಬೇರೆಯಾಗಿ ಬ್ರಹ್ಮವನ್ನು ಶಾಸ್ತ್ರವೇ ತಿಳಿಸುತ್ತದೆ-ಎಂದಾದರೆ ಆ ಶಾಸ್ತ್ರಸಿದ್ಧವಾದ ಭೇದವು (ಸತ್ಯವೆಂದಾಗಿ) ಯಾರಿಂದಲೂ ನಿವಾರಿಸಲಾಗದ್ದಾಗುವದು. (ಅದು ಅನಿಷ್ಟವು).

ನ ಚೇದಾತ್ಮಾ ಪರಂ ಬ್ರಹ್ಮ ಸ್ವತಃ ಸ್ಯಾದಸ್ಯ ದುಃಖಿನಃ |
ನಿಯೋಗೋ ವಾಽನಿಯೋಗೋ ವಾ ಕಂ ವಿಶೇಷಂ ಕರಿಷ್ಯತಿ ||

೮೨. ಆತ್ಮನು ಪರಬ್ರಹ್ಮವಲ್ಲವೆಂದಾದರೆ ದುಃಖಿಯಾದ ಈ ಆತ್ಮನಿಗೆ ನಿಯೋಗವಾಗಲಿ, ಅನಿಯೋಗವಾಗಲಿ ಏನು ವಿಶೇಷವನ್ನುಂಟುಮಾಡೀತು ? (ಜೀವಬ್ರಹ್ಮಭೇದವು ಶಾಸ್ತ್ರಸಿದ್ಧವೆಂದು ಒಪ್ಪಿದಮೇಲೆ ಅದನ್ನು ಕಳೆಯುವ ದಾದರೂ ಹೇಗಾದೀತು ?)

ಪಶ್ಯತಃ ಪ್ರತ್ಯಗಾತ್ಮಾನಮಪವಿಧ್ಯಾನ್ಯವಸ್ತುನಃ ।
ಅಹಂ ಬ್ರಹ್ಮೇತಿ ಚೇಜ್ಜ್ಞಾನಂ ಶಾಸ್ತ್ರಾದನ್ಯತ್ ಪರಂ ಕಥಮ್ ॥

೮೩. (ನೇತಿ ನೇತಿ– ಮುಂತಾದ ವಾಕ್ಯಗಳಿಂದ) ಅನಾತ್ಮವಸ್ತುಗಳನ್ನು ನಿರಾಕರಣಮಾಡಿ 'ನಾನು ಬ್ರಹ್ಮವು' ಎಂಬ ಶಾಸ್ತ್ರಜ್ಞಾನದಿಂದ ಪರಿಶುದ್ಧಾತ್ಮನನ್ನು ಕಂಡುಕೊಳ್ಳುವದಾದರೆ (ಆತ್ಮನು) ಪರಬ್ರಹ್ಮಕ್ಕಿಂತ ಬೇರೆಯಾಗಿ ಹೇಗಾದಾನು ?

ಆತ್ಮನೋಽನ್ಯಸ್ಯ ಚೇದ್ಧರ್ಮಾ ಅಸ್ಥೂಲತ್ವಾದಯೋ ಮತಾಃ ।
ಅನಾತ್ಮತ್ವೇಽಸ್ಯ ಕಿಂ ತೈಃ ಸ್ಯಾತ್ ಆತ್ಮತ್ವೇ ತ್ವನ್ಯಧೀ ಹ್ನುತಿಃ ॥

೮೪. ಆತ್ಮನಲ್ಲದ (ಬ್ರಹ್ಮದ) ಧರ್ಮಗಳು ಅಸ್ಥೂಲತ್ವಾದಿಗಳು–ಎಂದಾದರೆ ಅವು ಅನಾತ್ಮಧರ್ಮಗಳೆನಿಸಿಬಿಡುವವು. ಆಗ ಅವುಗಳಿಂದ ಆತ್ಮನಿಗೆ ಏನಾದೀತು? ಆದರೆ ಅವು ಆತ್ಮಧರ್ಮಗಳೇ ಎಂದಾದರೆ ಸ್ಥೂಲತ್ವಾದಿಗಳು ಆತ್ಮನ ಧರ್ಮವಲ್ಲ– ಎಂದು ಅಲ್ಲಗಳೆಯಲು ಸಾಧ್ಯವಾಗುವದು.

ಯತ್ಸಾಕ್ಷಾದಿತ್ಯುಪಕ್ರಮ್ಯ ಯ ಆತ್ಮೇತ್ಯುಪಸಂಹೃತೇಃ ।
ಅನ್ಯೋನ್ಯಾರ್ಥಸಮಾಪ್ತೇಶ್ಚ ವ್ಯತಿರೇಕೇ ತ್ವಸಂಭವಾತ್ ॥

೮೫. 'ಯತ್ಸಾಕ್ಷಾದಪರೋಕ್ಷಾತ್' ಎಂದು ಬ್ರಹ್ಮಶಬ್ದದಿಂದಾರಂಭಿಸಿ 'ಯ ಆತ್ಮಾ ಸರ್ವಾಂತರಃ' ಎಂದು ಆತ್ಮಶಬ್ದದಿಂದ ಉಪಸಂಹಾರಮಾಡಿರುವದರಿಂದ ಬ್ರಹ್ಮಾತ್ಮಶಬ್ದಗಳು ಪರಸ್ಪರವಾಗಿ ಅರ್ಥವನ್ನು ಪೂರ್ಣಗೊಳಿಸುವವು. ಹಾಗಿಲ್ಲವಾದರೆ (ಶ್ರುತ್ಯರ್ಥವು) ಅಸಂಭವವಾಗುವದು.

ಆತ್ಮೈವ ಚೇತ್ ಪರಂ ಬ್ರಹ್ಮ ಭವತಾಭ್ಯುಪಗಮ್ಯತೇ ।
ಆತ್ಮನೋ ಜ್ಞಾನಕರ್ತೃತ್ವಾತ್ ಜ್ಞಾನಂ ಸ್ಯಾತ್ ಕರ್ತೃಸಾಧನಮ್ ॥

೮೬. (ಪೂರ್ವಪಕ್ಷಿಯು ಹೇಳುವದೇನೆಂದರೆ) ಆತ್ಮನೇ ಪರಬ್ರಹ್ಮವೆಂದು ನೀನು ಒಪ್ಪುವದಾದರೆ ಆತ್ಮನು ಜ್ಞಾನಕರ್ತೃವಾದ್ದರಿಂದ ಆತ್ಮಕರ್ತೃವಿಗೆ ಜ್ಞಾನವು ಸಾಧನ(ಕರಣ)ವೆಂದಾಗುವದು.

ಪಾರತಂತ್ರ್ಯಮನಿತ್ಯತ್ವಂ ಧಾತ್ವರ್ಥತ್ವೇ ಪ್ರಸಜ್ಯತೇ ।
ತರ್ಕಶಾಸ್ತ್ರಪ್ರಸಿದ್ಧೇಶ್ಚ ಕರ್ತೃತ್ವೇನಾತ್ಮನೋ ಭವೇತ್ ॥

೮೭. ಹೀಗೆ ಧಾತ್ವರ್ಥವು ಕರ್ತೃಸಾಧನವೆಂದಾಗಲು ಆ ನಿಮಿತ್ತವಾಗಿ ಬ್ರಹ್ಮಕ್ಕೆ ಪಾರತಂತ್ರ್ಯವೂ ಅನಿತ್ಯತ್ವವೂ ಬಂದೊದಗುವದು. ಇನ್ನು ತರ್ಕ ಶಾಸ್ತ್ರದಂತೆ ಆತ್ಮನಿಗೆ ಕರ್ತೃತ್ವವೇ ಸಿದ್ಧವಾಗುವದು.

ಉಚ್ಚೈರ್ಬಾಹುಂ ಸಮುದ್ಧೃತ್ಯ ಇತ್ಯಾಹುಶ್ಚೋದ್ಯಚುಂಚವಃ |
ಯಥೋದಿತಮಿದಂ ಸರ್ವಂ ನೈತದೇವಂ ಭವೇತ್ ಕುತಃ ||

೮೮ ಕೈಯನ್ನೆತ್ತಿ ಗಟ್ಟಿಯಾಗಿ ಹೀಗೆ (ದೋಷವನ್ನು ಚೋದ್ಯಮಾಡು ವದರಲ್ಲಿ ಗಟ್ಟಿಗರಾದವರು ಹೇಳುತ್ತಾರೆ. ಈವರೆಗೆ ಹೇಳಿದ ಈ ದೋಷಗಳೆಲ್ಲವೂ ಹೀಗೆ ಸಂಭವಿಸಲಾರವು. ಏಕೆಂಬುದನ್ನು ಹೇಳುವೆವು.

ಸ್ವರೂಪಾವ್ಯತಿರೇಕೇಽಪಿ ಕಾರ್ಯತ್ವಮುಪಚಾರತಃ |
ಬುದ್ಧ್ಯುಪಾಶ್ರಯಕಾರ್ಯಾಣಿ ಕಲ್ಪ್ಯಂತೇಽತ್ರಾವಿವೇಕತಃ ||

೮೯. ಜ್ಞಪ್ತಿ ಎಂಬರ್ಥದ ಜ್ಞಾನವು ಬ್ರಹ್ಮಸ್ವರೂಪಕ್ಕಿಂತ ಬೇರೆಯಲ್ಲ ವಾದರೂ ಅದನ್ನು ಕಾರ್ಯವೆಂದು ಉಪಚಾರಕ್ಕಾಗಿ ಕರೆದಿದೆ. (ನಿಜವಾದ ಕರ್ತೃಕ್ರಿಯಾಭೇದವಿಲ್ಲ.) ಬುದ್ಧಿಯನ್ನಾಶ್ರಯಿಸಿದ ವಿಕಾರಗಳು ಬ್ರಹ್ಮದಲ್ಲಿ ಅವಿವೇಕದಿಂದ ಕಲ್ಪಿಸಲ್ಪಡುವವು. (ವಸ್ತುತಃ ಅವಿಕಾರಿಯಾದ ಕೂಟಸ್ಥ ವಾದ ಬ್ರಹ್ಮವು ಜ್ಞಾನಸ್ವಭಾವದ್ದಾಗಿಯೇ ಇರುವದು.)

ಸ್ವರೂಪಮಾತ್ಮನೋ ಜ್ಞಾನಂ ನ ತಸ್ಮಾದ್ ವ್ಯತಿರಿಚ್ಯತೇ |
ಬುದ್ಧೇಃ ಪ್ರತ್ಯಯಕಾರಿತ್ವಂ ತತ್ಸಾಕ್ಷಿಣ್ಯುಪಚರ್ಯತೇ ||

೯೦. ಆತ್ಮನ ಜ್ಞಾನವೆಂದರೆ ಸ್ವರೂಪವೇ. ಅದಕ್ಕಿಂತ ಬೇರೆಯಲ್ಲ. ಬುದ್ಧಿಯ ಪ್ರತ್ಯಯಗಳ ಪ್ರಚಾರವು ಆ ಬುದ್ಧಿಸಾಕ್ಷಿಯಾದ ಆತ್ಮನಲ್ಲಿ ಉಪಚಾರ ಕ್ಕಾಗಿ ಆರೋಪಿಸಲ್ಪಟ್ಟಿದೆ.

ಆತ್ಮಚೈತನ್ಯಸಂವ್ಯಾಪ್ತಾ ವೃತ್ತೀರ್ಧೀಃ ಕುರುತೇ ಯತಃ |
ಚೈತನ್ಯಾಲಿಂಗಿತಾಃ ಸರ್ವಾಸ್ತಪ್ತಾಯೋವಿಸ್ಫುಲಿಂಗವತ್ ||

೯೧. ಆತ್ಮಚೈತನ್ಯದಿಂದ ಸಂವ್ಯಾಪ್ತವಾದ ವೃತ್ತಿಗಳನ್ನೇ ಬುದ್ಧಿಯು ಉಂಟುಮಾಡುತ್ತದೆಯಾಗಿ– ಕಾದಿರುವ ಕಬ್ಬಿಣದ ಗುಂಡಿನ ಬೆಂಕಿಯಂತೆ– ಎಲ್ಲಾ ಧೀವೃತ್ತಿಗಳೂ ಚೈತನ್ಯವ್ಯಾಪ್ತವಾಗಿಯೇ ಇರುವವು.

ಚೈತನ್ಯಖಚಿತಾನ್ ದೃಷ್ಟ್ವಾ ಪ್ರತ್ಯಯಾನ್ ಬುದ್ಧಿಕರ್ತೃಕಾನ್ |
ಜ್ಞಾನಂ ಕ್ರಿಯೇತ ಇತ್ಯಜ್ಞಾಃ ಕೂಟಸ್ಥಮಪಿ ಮನ್ವತೇ ||

೯೨. ಬುದ್ಧಿಯಿಂದುಂಟಾದ ಚೈತನ್ಯವ್ಯಾಪ್ತವಾದ ವೃತ್ತಿಗಳನ್ನು ನೋಡಿ ಅಜ್ಞಾನಿಗಳು ಕೂಟಸ್ಥವಾದ (ಆತ್ಮ)ಚೈತನ್ಯವು ಜ್ಞಾನವನ್ನುಂಟುಮಾಡುತ್ತದೆ –ಎಂದು ಭ್ರಾಂತರಾಗಿರುತ್ತಾರೆ.

ಆವಿರ್ಭಾವತಿರೋಭಾವೌ ಬುದ್ಧೇರ್ಯತ್ಸಾಕ್ಷಿಕೌ ನೃಣಾಮ್ ।
ತತೋಽನ್ಯಂ ಕಂ ಸಮಾಶ್ರಿತ್ಯ ಸಾಕ್ಷಿಕರ್ತೃತ್ವಮುಚ್ಯತೇ ॥

೯೩. ಮನುಷ್ಯರ ಬುದ್ಧಿಯ ತೋರುವಿಕೆ– ಮರೆಯಾಗುವಿಕೆಗಳು ಯಾವ ಸಾಕ್ಷಿಯ ಸಾಂನಿಧ್ಯದಿಂದಾಗುತ್ತಿರುವವೋ ಅದನ್ನು ಬಿಟ್ಟು ಬೇರೆ ಯಾವದನ್ನಾಶ್ರಯಿಸಿ ಸಾಕ್ಷಿಗೆ ಕರ್ತೃತ್ವವನ್ನು ಹೇಳಲಾದೀತು ?

ಬುದ್ಧಿಭಾವಾನವಚ್ಛಿನ್ನಂ ತಾದೃಗ್ರೂಪಂ ಯಥಾ ಪುರಾ ।
ಬುದ್ಧ್ಯುತ್ಪತ್ತಾವಪಿ ತಥಾಽವಿಕ್ರಿಯಂ ಹ್ಯನುಭೂಯತಾಮ್ ॥

೯೪. (ಸಾಕ್ಷಿಚೈತನ್ಯವು) ಬುದ್ಧಿಯು ಹುಟ್ಟುವ ಮುಂಚೆ ಹೇಗೆ ಬುದ್ಧಿಭಾವದ ಸಂಬಂಧವಿಲ್ಲದ್ದಾಗಿ (ಅವಿಕ್ರಿಯ)ವಾಗಿತ್ತೋ ಹಾಗೆಯೇ ಬುದ್ಧಿಯು ಹುಟ್ಟಿದಮೇಲೂ ತಾನು ಅವಿಕ್ರಿಯವಾಗಿಯೇ ಇದ್ದುಕೊಂಡಿದೆಯೆಂಬುದನ್ನು ಅನುಭವಿಸಿ ಕಂಡುಕೊಳ್ಳಿರಿ.

ಕರ್ತೃಕಾರ್ಯಾವಭಾಸಿತ್ವಾತ್ ಕರ್ತೃಕಾರ್ಯಾಭಿಧಾಯಿನಃ ।
ಲಕ್ಷಯಂತಿ ಪರಂ ಬ್ರಹ್ಮ ನಾಂಜಸಾ ತತ್ಪ್ರಚಕ್ಷತೇ ॥

೯೫. ಕರ್ತೃ-ಕರ್ಮಾದಿಗಳನ್ನು ಬೆಳಗುವದರಿಂದ ಕರ್ತೃಕಾರ್ಯವಾಚಕಗಳಾದ ಶಬ್ದಗಳು ಪರಬ್ರಹ್ಮವನ್ನು ಲಕ್ಷ್ಯವೃತ್ತಿಯಿಂದ ತಿಳಿಸುವವು. ವಾಚ್ಯವಾಗಿ ಸಾಕ್ಷಾತ್ತಾಗಿ ತಿಳಿಸುವದಿಲ್ಲ.

ಯತ್ತು ತದ್ಬ್ರಹ್ಮಣೋ ಜ್ಞಾನಂ ಸರ್ವಾನನ್ಯದವಿಕ್ರಿಯಮ್ ।
ಬ್ರಹ್ಮಣೋಽವ್ಯತಿರಿಕ್ತಂ ತತ್ ಸರ್ವಪ್ರತ್ಯಕ್ಸಮಾಪ್ತಿತಃ ॥

೯೬. ಎಲ್ಲಾ (ಬುದ್ಧಿವೃತ್ತಿಗಳನ್ನೂ) ವ್ಯಾಪಿಸಿರುವ ವಿಕಾರವಿಲ್ಲದ ಬ್ರಹ್ಮದ ವಿಜ್ಞಾನವೆಂಬುದು ಯಾವದೋ ಅದು ಬ್ರಹ್ಮಕ್ಕಿಂತ ಬೇರೆಯಲ್ಲವೇ ಅಲ್ಲ. ಏಕೆಂದರೆ ಅದು ಒಳಗಿನ ಎಲ್ಲಾ ವಸ್ತುಗಳಿಗೂ ಒಳಗಿನದಾಗಿರುವದು.

ಪ್ರತ್ಯಾಖ್ಯಾತಾಖಿಲಾನಾತ್ಮಭೇದಸತ್ಯಾರ್ಥವಾಚಿನಾ ।
ತಥೈವ ಸತ್ಯಶಬ್ದೇನ ಲಕ್ಷ್ಯತೇ ತನ್ನ ತೂಚ್ಯತೇ ॥

೯೭. ಸಕಲವಿಧವಾದ ಅನಾತ್ಮಭೇದಗಳನ್ನೂ ಕಿತ್ತೊಗೆದ ಸತ್ಯವಸ್ತುವಾಚಿಯಾದ ಸತ್ಯಶಬ್ದದಿಂದ ಬ್ರಹ್ಮವು ಗುರುತಿಸಲ್ಪಡುತ್ತದೆ. ವಾಚ್ಯವಾಗಿ ಹೇಳಲ್ಪಡುವದಿಲ್ಲ.

ಏವಂ ಸತ್ಯಾದಯಃ ಶಬ್ದಾಃ ಸ್ವಾರ್ಥಾಸಂತ್ಯಾಗಿನಃ ಪರಮ್ ।
ಲಕ್ಷಯಂತಿ ವಿರುದ್ಧಾರ್ಥನಿವೃತ್ತ್ಯಾಜ್ಞಾನಹಾನತಃ ॥

೯೮. ಹೀಗೆ ಸತ್ಯಾದಿಶಬ್ದಗಳು ತಮ್ಮ ಅರ್ಥವನ್ನು ಬಿಡದೆ, ವಿರುದ್ಧಾರ್ಥನಿವೃತ್ತಿಪೂರ್ವಕವಾಗಿ ಅಜ್ಞಾನವನ್ನು ಕಳೆದು ಪರ(ವಸ್ತು)ವನ್ನು ಗುರುತಿಸಿ ತಿಳಿಸುವವು.

ನಿವರ್ತ್ಯಭೇದಾದ್ ಭಿನ್ನೋಽರ್ಥೋಽಸತ್ಯಾದ್ಯರ್ಥನಿವರ್ತಿನಾಮ್ |
ಸತ್ಯಾದೀನಾಮತಃ ಸಿದ್ಧಂ ಅವಾಕ್ಯಾರ್ಥತ್ವಮಾತ್ಮನಃ ||

೯೯. ಅಸತ್ಯವೇ ಮುಂತಾದ ನಿವರ್ತಕವಾದ ಅರ್ಥಗಳನ್ನು ನಿವರ್ತ್ಯವಾದ ಬ್ರಹ್ಮದ ದೆಸೆಯಿಂದ ಬೇರ್ಪಡಿಸಿ ಸತ್ಯಾದಿಶಬ್ದಗಳು ಬೋಧಿಸುವದರಿಂದ ಬ್ರಹ್ಮವು ಸತ್ಯಾದಿಶಬ್ದಗಳಿಗೂ ವಾಚ್ಯವಲ್ಲವೆಂದಾಗಿ ಅದು ಅವಾಕ್ಯಾರ್ಥವೆಂದು ಸಿದ್ಧವಾಯಿತು.

ಯತೋ ವಾಚೋ ನಿವರ್ತಂತೇ ನೇತಿ ನೇತೀತಿ ಚಾಪರಮ್ |
ಏವಂ ಸತ್ಯರ್ಥವತ್ ಸರ್ವಂ ಅನ್ಯಥಾ ತದನರ್ಥಕಮ್ ||

೧೦೦. ಬ್ರಹ್ಮವು ಅವಾಕ್ಯಾರ್ಥವೆಂದು ಸಿದ್ಧವಾದರೆ ಮಾತ್ರ 'ಯತೋ ವಾಚೋ ನಿವರ್ತಂತೇ, ನೇತಿ ನೇತಿ'– ಮುಂತಾದ ಉಪನಿಷದ್ವಾಕ್ಯಗಳು ಅರ್ಥವುಳ್ಳದ್ದಾಗುವವು. ಇಲ್ಲವಾದರೆ ಅವುಗಳಿಗೆ ಅರ್ಥವೇ ಇಲ್ಲವೆಂದಾಗುವದು.

ಕೌಟಸ್ಥ್ಯಂ ಸತ್ಯಮಿತ್ಯುಕ್ತಂ ತದ್ಗುಣಂ ಜ್ಞಾನಮುಚ್ಯತೇ |
ಸ್ವತೋ ಬೋಧಸ್ಯ ಕೌಟಸ್ಥ್ಯೇ ಜ್ಞಾತುರಾನಂತ್ಯಮೇಕತಾ ||

೧೦೧. ಕೂಟಸ್ಥ (ವಿಕಾರವಿಲ್ಲದಿರುವಿಕೆ) ಸ್ವಭಾವವೇ ಸತ್ಯವೆನಿಸುವದು. ಅದರ ಗುಣವೇ ಜ್ಞಾನವು. ಸ್ವಯಂಬೋಧಸ್ವರೂಪವಾದ (ಬ್ರಹ್ಮವು) ಕೂಟಸ್ಥವಾಗಿರುವಲ್ಲಿ ಜ್ಞಾತೃವಾದ ಅದರ ಆನಂತ್ಯವೆಂಬುದು ಏಕತೆಯೇ ಆಗಿರುವದು.

ವಿವರಣೆ : ಬ್ರಹ್ಮವು ಅವಿಕ್ರಿಯವಾಗಿರುವದರಿಂದಲೇ ಸತ್ಯವು ; ಸತ್ಯವಾಗಿರುವದರಿಂದಲೇ ಜ್ಞಪ್ತಿಸ್ವರೂಪವು. ಆದ್ದರಿಂದಲೇ ಅನಂತವು. ಹೀಗೆ ಸತ್ಯಜ್ಞಾನಾನಂತ್ಯಗಳು ಬ್ರಹ್ಮದ ಸ್ವರೂಪವೆಂದೇ ತಿಳಿಯಬೇಕು.

ಜ್ಞಾತೃಭೇದಾತ್ತು ತದ್ಬ್ರಹ್ಮ ಹ್ಯನೀಪ್ಸಿತತಮಂ ಪರಮ್ |
ಜ್ಞಾತುರನ್ಯಸ್ಯ ಚಾಭಾವಾತ್ ಯೋ ವೇದೇತ್ಯುಚ್ಯತೇ ಕಥಮ್ ||

೧೦೨. ಆಕ್ಷೇಪ : ಬ್ರಹ್ಮವು ಜ್ಞಾನಕರ್ತೃವಿಗಿಂತ ಬೇರೆಯಲ್ಲವೆಂದು ಒಪ್ಪಿರುವದರಿಂದ ಅದು ಕರ್ಮ–ಕರ್ತೃ ಎರಡೂ ತಾನೇ ಆದಂತಾಯಿತು. ಆಗ ಬೇರೊಬ್ಬ ಜ್ಞಾತೃವಿಲ್ಲವಾಗಿ ಅದು ಈಪ್ಸಿತತಮ (ಕರ್ಮ)ವಲ್ಲವೆಂದೂ ಗೊತ್ತಾಗುವದು. ಹೀಗಿರುವಲ್ಲಿ 'ಯೋ ವೇದ'–ಮುಂತಾಗಿ ಶ್ರುತಿಯಲ್ಲಿ ಹೇಳಿದ್ದು ಹೇಗೆ ಸರಿ ?

ಸತ್ಯಾದಿಲಕ್ಷ್ಯಜ್ಞಾನೋತ್ಥಾಸತ್ಯಾದ್ಯರ್ಥನಿಷೇಧಧೀಃ |
ವರ್ತ್ಮಾನ್ಯೈವಾಪ್ತಮಾಪ್ನೋತಿ ಕೇವಲಾಜ್ಞಾನಹಾನತಃ ||

೧೦೩. ಸತ್ಯಾದಿಶಬ್ದಗಳಿಂದ ಲಕ್ಷ್ಯವಾದ ಯಾವ ಬ್ರಹ್ಮವಿದೆಯೋ ಅದನ್ನರಿಯದೆ ಇರುವಾಗ ಉಂಟಾದ ಅಸತ್ಯಾದಿಕಲ್ಪನೆಗಳನ್ನು ನಿಷೇಧಿಸುವ

ಬುದ್ಧಿಯ ದ್ವಾರದಿಂದ ಕೇವಲವಾದ ಅಜ್ಞಾನವು ಮಾತ್ರ ಇಲ್ಲವಾಗಲಾಗಿ, ಪಡೆದು ಕೊಂಡಿರುವ ಬ್ರಹ್ಮವನ್ನೇ ಪಡೆದಂತೆ ಭಾವಿಸುತ್ತಾನೆ. ಇದೇ ಬ್ರಹ್ಮಪ್ರಾಪ್ತಿಯು.

ಏವಂ ಜ್ಞಾತಂ ವಿಜಾನಾತಿ ವಿಮುಕ್ತಶ್ಚ ವಿಮುಚ್ಯತೇ |
ನಿವರ್ತತೇ ನಿವೃತ್ತಂ ಚ ತ್ರಿರ್ವಃ ಶಪಥಯಾಮ್ಯಹಮ್ ||

೧೦೪. ಹೀಗೆ ತಿಳಿಯಲ್ಪಟ್ಟದ್ದನ್ನೇ ತಿಳಿಯುತ್ತಾನೆ. ಮುಕ್ತಿಯನ್ನು ಪಡೆದುಕೊಂಡವನಾಗಿಯೇ ಮುಕ್ತನಾಗುತ್ತಾನೆ. ನಿವೃತ್ತವಾದ ಅಜ್ಞಾನವುಳ್ಳವ ನಾಗಿಯೇ ಅಜ್ಞಾನನಿವೃತ್ತಿಯನ್ನು ಹೊಂದುತ್ತಾನೆ. ಈ ರೀತಿ ನಿಮಗೆ ಮೂರು ಬಾರಿಗೂ ಶಪಥಮಾಡಿ ಹೇಳುತ್ತೇನೆ.

ತಸ್ಮಾದಾಸನ್ನಕರ್ತೃತ್ವತಿಮಿರೋಽಯಮವಿದ್ಯಯಾ |
ಸತ್ಯಾದಿಲಕ್ಷಣಂ ಬ್ರಹ್ಮ ಪ್ರತ್ಯಕ್‌ಸ್ಥಮಪಿ ನೇಕ್ಷತೇ ||

೧೦೫. ಹೀಗೆ ಸಾಧಕನು ಇಲ್ಲದ ಅಜ್ಞಾನವನ್ನು ಕಲ್ಪಿಸಿಕೊಂಡದ್ದ ರಿಂದಲೇ ಕರ್ತೃತ್ವವನ್ನು ಹೊಂದಿ ತನ್ನೊಳಗೇ ಯಾವಾಗಲೂ ಇದ್ದುಕೊಂಡಿರುವ ಸತ್ಯಾದಿಲಕ್ಷಣವಾದ ಬ್ರಹ್ಮವನ್ನು ಕಂಡುಕೊಂಡಿರುವದಿಲ್ಲ.

ಅತೋಽವಿದ್ಯಾನಿಷೇಧೇನ ಸದಾವಿಸ್ಫುರಿತೇಕ್ಷಣಃ |
ಪಿಬನ್ ಜ್ಞಾತ್ರಾದಿನಾನಾತ್ವಂ ಪ್ರತ್ಯಗಾತ್ಮಾನಮೀಕ್ಷತೇ ||

೧೦೬. ಆದ್ದರಿಂದ ಯಾವಾಗಲೂ ಎಚ್ಚರವಾಗಿರುವವನಾಗಿ ಜ್ಞಾತೃವೇ ಮುಂತಾದ ನಾನಾತ್ವವನ್ನು ಕೂಡಿದವನಾಗಿ ಅವಿದ್ಯೆಯನ್ನು ಬಾಧಮಾಡುವ ಮೂಲಕ ಪ್ರತ್ಯಗಾತ್ಮನನ್ನು ಕಂಡುಕೊಳ್ಳುವನು.

ಭೂತಮಾತ್ರೋಪಸಂಶ್ಲೇಷಸಮುತ್ಥಂ ಯತ ಆತ್ಮನಃ |
ಕರ್ತೃಭೋಕ್ತೃತ್ವವಿಜ್ಞಾನಂ ಬುದ್ಧೌ ತನ್ನಿಹಿತಂ ತತಃ ||

೧೦೭. ಅಂತಃಕರಣವು ಪಂಚಭೂತಗಳ ಸೂಕ್ಷ್ಮಭಾಗಗಳಿಂದಾಗಿದ್ದು ಅದರಲ್ಲಿ ಆತ್ಮನು ಕಂಡುಬರುವವನಾಗಿರುವದರಿಂದ ತಾನು ಕರ್ತೃಭೋಕ್ತೃವೆಂಬ ತಿಳಿವಳಿಕೆಯಿರುವವನಿಗಾಗಿ ಅದು (ಬ್ರಹ್ಮವು) ಬುದ್ಧಿಯಲ್ಲಿದೆ-ಎಂದು ಹೇಳಿದೆ.

ತಮೋರಜೋವಿನಿರ್ಮುಕ್ತಂ ತದ್ವೃತ್ತ್ಯಾ ಚೋಪಲಭ್ಯತೇ |
ಬ್ರಹ್ಮಾತೋ ನಿಹಿತಂ ಬುದ್ಧೌ ಮನಸೈವೇತಿ ಚ ಶ್ರುತಿಃ ||

೧೦೮. ರಜಸ್ತಮೋಗುಣಗಳಿಲ್ಲದ ಸಾತ್ತ್ವಿಕವೃತ್ತಿಯ ಮನಸ್ಸಿನಲ್ಲಿ ಅದು ಕಂಡುಬರುತ್ತದೆಯಾಗಿ ಬ್ರಹ್ಮವು ಬುದ್ಧಿಯಲ್ಲಿದೆ- ಎಂದೂ ಮನಸ್ಸಿನಿಂದಲೇ ಅರಿತುಕೊಳ್ಳಬೇಕೆಂದೂ ಶ್ರುತಿಯಲ್ಲಿ ಹೇಳಿದೆ.

ನಿಗೂಢಮಸ್ಯಾಂ ತದ್ಬ್ರಹ್ಮ ಕಾಮಾವಿದ್ಯಾದ್ಯುಪಪ್ಲವಾತ್ |
ಪ್ರತ್ಯಗ್ಧಿಯೋಽನುಪಶ್ಯಂತಿ ತಸ್ಮಾದ್ ಬುದ್ಧಿರ್ಗುಹೋಚ್ಯತೇ ||

೧೧೯. ಕಾಮ, ಅವಿದ್ಯೆ– ಮುಂತಾದವುಗಳ ಕೋಟಲೆಯಿಂದ ಇದರಲ್ಲಿರುವ ಬ್ರಹ್ಮವು ಗೋಪ್ಯವಾಗಿ ಅಡಗಿಕೊಂಡಿದೆ. ಆದರೆ ಒಳಮುಖವಾದ ಪ್ರಜ್ಞೆಯುಳ್ಳವರು ಈ ಬ್ರಹ್ಮವನ್ನು ಇಲ್ಲಿ ಕಂಡುಕೊಳ್ಳುವರಾದ್ದರಿಂದ ಬುದ್ಧಿಯನ್ನು ಗುಹೆಯೆಂದು ಕರೆಯಲಾಗಿದೆ.

ಪರಮಂ ವ್ಯೋಮ ಹಾರ್ದಂ ಸ್ಯಾದ್ಬಾಹ್ಯಾತ್ತತ್ಪರಮಂ ಯತಃ |
ಶ್ರುತೇರ್ಯೋಽಯಂ ಬಹಿರ್ಧೇತಿ ತಚ್ಚ ಬುದ್ಧೇಃ ಸಮಾಶ್ರಯಮ್ ||

೧೧೦. ಹೃದಯಾಕಾಶವನ್ನೇ ಪರಮವ್ಯೋಮವೆನ್ನುವರು. ಏಕೆಂದರೆ ಅದು ಬಾಹ್ಯಾಕಾಶಕ್ಕಿಂತ ಒಳಗಿದೆ. 'ಯೋ ವೈ ಸ ಬಹಿರ್ಧಾ' ಎಂಬ ಶ್ರುತಿಯಲ್ಲಿಯೂ ಹೀಗೆ ಹೇಳಿದೆ. ಅದು (ಆಕಾಶವು) ಬುದ್ಧಿಯನ್ನೇ ಆಶ್ರಯಿಸಿದೆ.

ಗುಹಾಯಾಂ ಪರಮೇ ವ್ಯೋಮನ್ ವಸ್ತುವೃತ್ತಮಪೇಕ್ಷ್ಯ ವಾ |
ಸತ್ಯಾದಿಲಕ್ಷಣಾನ್ನಾನ್ಯದ್ಧಿಯಃ ಪ್ರತ್ಯಕ್ ಪ್ರತೀಯತೇ ||

೧೧೧. ಅಥವಾ ವಸ್ತುಸ್ಥಿತಿಯನ್ನನುಸರಿಸಿ ಹೇಳುವದಾದರೆ ಅವ್ಯಾಕೃತಾಕಾಶವೆಂಬ ಪರಮಗುಹೆಯಲ್ಲಿ–ಅದನ್ನೂ ದಾಟಿ ನೋಡಿದರೆ ಸತ್ಯಾದಿಲಕ್ಷಣವುಳ್ಳ ಬ್ರಹ್ಮವು ಕಂಡುಬರುತ್ತದೆ. ಅಲ್ಲಿರುವ ಬುದ್ಧಿಗೆ ಸಾಕ್ಷಿಯಾಗಿದ್ದುಕೊಂಡಿರುವದೇ ಬ್ರಹ್ಮವು ಎಂದು ತಿಳಿಯಬೇಕು.

ಸತ್ಯಾದ್ಯರ್ಥವಿರುದ್ಧೇಭ್ಯಃ ಸಮ್ಯಗ್ವ್ಯಾವೃತ್ತಧೀರ್ಯತಿಃ |
ಧಿಯಃ ಪ್ರತ್ಯಕ್ಪ್ರವಿಶ್ಯಾಥ ಸತ್ಯಾತ್ಮಾನಂ ಪ್ರಪಶ್ಯತಿ ||

೧೧೨. ಸತ್ಯವೇ ಮುಂತಾದ ಅರ್ಥಗಳಿಗೆ ವಿರುದ್ಧವಾದ ಅನೃತಾದಿಗಳಿಂದ ತನ್ನ ಬುದ್ಧಿಯನ್ನು ಹಿಂತಿರುಗಿಸಿಕೊಂಡಿರುವ ಯತಿಯು ಬುದ್ಧಿಯನ್ನು ಮೀರಿ ಒಳಕ್ಕೆ ಪ್ರವೇಶಿಸಿದವನಾಗಿ ಸತ್ಯನಾದ ಪ್ರತ್ಯಗಾತ್ಮನನ್ನು ಕಂಡುಕೊಳ್ಳುವನು.

ತಸ್ಮಾದುಪಾಯಸಿಧ್ಯರ್ಥಂ ಬುದ್ಧೇಃ ಪ್ರತ್ಯಕ್ಪ್ರವೇಶನಮ್ |
ಗುಹಾಯಾಂ ಪರಮೇ ವ್ಯೋಮನ್ ಶ್ರುತಿರಸ್ಮಾನತೋಽನ್ವಶಾತ್ ||

೧೧೩. ಆದ್ದರಿಂದ ಶ್ರುತಿಯು ನಮ್ಮನ್ನು ಬುದ್ಧಿಯೊಳಗೆ ಪ್ರವೇಶಿಸುವಂತೆ ಮಾಡಲು ಉಪಾಯವನ್ನು ಸಿದ್ಧಗೊಳಿಸುವದಕ್ಕಾಗಿ 'ಗುಹೆಯಲ್ಲಿರುವ ಪರಮವ್ಯೋಮದಲ್ಲಿ' ಎಂದು ಅನುಶಾಸನಮಾಡಿರುತ್ತದೆ.

ಜ್ಞಾತುರ್ಜ್ಞೇಯಂ ಪರಂ ಬ್ರಹ್ಮ ಭೇದಬುದ್ಧ್ಯಪನುತ್ತಯೇ |
ಗುಹಾಯಾಂ ಪರಮೇ ವ್ಯೋಮನ್ ಜ್ಞೇಯಂ ಜ್ಞಾತರಿ ಶಿಷ್ಯತೇ ||

೧೧೪. ಪರಬ್ರಹ್ಮವು ಜ್ಞಾತೃವಿಗೆ ಜ್ಞೇಯವೆನಿಸಿದೆ- ಎಂಬ ಭೇದಬುದ್ಧಿಯನ್ನು ತೆಗೆದುಹಾಕುವದಕ್ಕಾಗಿ ಪರಮವ್ಯೋಮವೆನಿಸಿದ ಹೃದಯಗುಹೆಯಲ್ಲಿ ಅದು ನೆಲೆಸಿದೆ- ಎಂದೂ ಜ್ಞಾತೃವಿಗೂ ಅದು ಆತ್ಮನಾಗಿ (ಜ್ಞೇಯವೆನಿಸಿದೆ) ಯೆಂದೂ ಶಾಸನಮಾಡಲ್ಪಟ್ಟಿದೆ. (ಜ್ಞಾತೃವಿಗೂ ಜ್ಞೇಯಕ್ಕೂ ಭೇದವಿಲ್ಲ. ಒಂದೇ ಬ್ರಹ್ಮವನ್ನೇ ಹಾಗೆ ವ್ಯವಹರಿಸಲಾಗಿದೆ ಎಂದಭಿಪ್ರಾಯ.)

ಸಾಧ್ಯಸಾಧನಸಂಬಂಧವರ್ತ್ಮನ್ಯೇವಾನುಧಾವತಃ |
ಸಾಧ್ಯಸಾಧನನಿರ್ಮುಕ್ತಂ ಸ್ವಾತ್ಮನ್ಯಾವಿಶತೇ ಪರಮ್ ||

೧೧೫. ಸಾಧ್ಯಸಾಧನಸಂಬಂಧದ ಹಾದಿಯಲ್ಲೇ ಮುಂದುವರೆಯುವವನಾದ (ಸಾಧಕನು ಕಡೆಗೆ) ಸಾಧ್ಯಸಾಧನಗಳೆಂಬ ಭೇದವೇ ಇಲ್ಲದ ತನ್ನ ಪರವಾದ ಸ್ವರೂಪದಲ್ಲಿ ತನ್ನಲ್ಲಿಯೇ ನೆಲೆಗೊಳ್ಳುತ್ತಾನೆ.

ಸೋಽಶ್ನುತೇ ನಿಖಿಲಾನ್ ಕಾಮಾನ್ ಕರ್ತೃತ್ವೇ ತದಸಂಭವಮ್ |
ಆಶಂಕ್ಯ ಬ್ರಹ್ಮಣೇತ್ಯಾಹ ಯುಗಪತ್ ಸ್ಯಾತ್ ಸಹೇತಿ ಚ ||

೧೧೬. ಕರ್ತೃತ್ವವು ಉಳಿದುಕೊಳ್ಳಲಾಗಿ ಎಲ್ಲಾ ಕಾಮಗಳನ್ನೂ ಅನುಭವಿಸುವದು ಅಸಂಭವವಾಗುವದರಿಂದ ಹಾಗಾಗಬಾರದೆಂದು ಮತ್ತು ಒಟ್ಟಿಗೆ ಕಾಮಗಳನ್ನು ಅನುಭವಿಸುವನೆಂದೂ ತಿಳಿಸುವದಕ್ಕಾಗಿ 'ಬ್ರಹ್ಮಣಾ ಸಹ' ಎಂದು ಹೇಳಿದೆ.

ವಿವರಣೆ : ಕಾಮಗಳನ್ನು ಅನುಭವಿಸುವಾಗ ತಾನು ಕರ್ತೃವೆಂದು ಭಾವಿಸಿದನಾದರೆ ಒಟ್ಟಿಗೆ ಎಲ್ಲವನ್ನೂ ಅನುಭವಿಸಲಾರನು. ಉದಾಹರಣೆಗೆ ಮಾವಿನಹಣ್ಣನ್ನು ತಿನ್ನುವವನು ನಾನು- ಎಂದುಕೊಂಡಲ್ಲಿ ಅದೇ ಸಮಯದಲ್ಲಿ ಕಿತ್ತಳೆಹಣ್ಣನ್ನು ತಿನ್ನುವವನು ನಾನಾಗಲಾರೆನು. ಆದರೆ ಒಂದೊಂದಾಗಿ ಹಣ್ಣನ್ನು ತಿನ್ನಬಹುದಾದರೂ ಯುಗಪತ್ ಆಗಲಾರದು. ಬ್ರಹ್ಮಜ್ಞಾನಿಯಾದವನಿಗೆ ಎಲ್ಲಾ ಕರ್ತೃಗಳ ಆತ್ಮನೂ ತಾನೇ ಎಂಬ ಅನುಭವವಿರುವದರಿಂದ ಯಾವ ಯಾವ ಕರ್ತೃವು ಏನೇನನ್ನು ಅನುಭವಿಸಿದರೂ ಅದು ತಾನೇ ಅನುಭವಿಸಿದ ತೃಪ್ತಿಯಿರುವದು. ಇಲ್ಲಿ ವೈಯಕ್ತಿಕರ್ತೃತ್ವಭೋಕ್ತೃತ್ವಗಳು ನಾಶವಾಗಿರುವವು. ಆದ್ದರಿಂದ ಶ್ರುತಿಯಲ್ಲಿ ಕರ್ತೃತ್ವವನ್ನು ಮೀರಿದ ಆತ್ಮನು ತಾನೆಂಬ ಸ್ವರೂಪಜ್ಞಾನವುಳ್ಳವನೇ ಬ್ರಹ್ಮವಿದನೆಂದೂ ಅವನು ಬ್ರಹ್ಮದೊಡಗೂಡಿ ಏಕಕಾಲದಲ್ಲಿ ಎಲ್ಲಾ ಕಾಮಗಳನ್ನೂ ಒಟ್ಟಿಗೆ ಅನುಭವಿಸುವನೆಂದೂ ತಿಳಿಸಿದೆ- ಎಂದಭಿಪ್ರಾಯ.

ಪ್ರತೀಚಿ ನ ಸ್ಯಾತ್ ತದ್ಬ್ರಹ್ಮ ಭೇದಾರ್ಥಾ ಚೇತ್ಸಹಾರ್ಥತಾ |
ಸಂಭಾವ್ಯತೇ ಪರಾಗ್ಭೂತಂ ನಾಪಿ ಸತ್ಯಾದಿಮತ್ ಪರಮ್ ||

೧೧೭. 'ಸಹ' ಎಂಬ ಶಬ್ದಕ್ಕೆ ಯಥಾಶ್ರುತಾರ್ಥವನ್ನು ಮಾಡಿದರೆ ಬ್ರಹ್ಮದೊಡನೆ ಆತ್ಮನು (ತಾನು) ಕಾಮಗಳನ್ನು ಒಟ್ಟಿಗೆ ಅನುಭವಿಸುವನು-ಎಂದಾಗುವದು. ಇದು ಹೊಂದುವದಿಲ್ಲ. ಏಕೆಂದರೆ ಆತ್ಮ, ಬ್ರಹ್ಮ ಎರಡೂ ಬೇರೆಯೆಂದಾಗುವದು. ಭೇದವಿರುವಲ್ಲಿ ಮಾತ್ರ ಸಹ (ಒಡನೆ) ಎಂಬಿದು ಹೊಂದುವದು. ಹಾಗೇ ಆಗಲಿ-ಎಂದರೆ ಬ್ರಹ್ಮವು ಪರಾಗ್ಭೂತವಾದ ಅನಾತ್ಮವೆಂದಾಗಿಬಿಡುವದು. ಆಗ ಅದು ಸತ್ಯವೇ ಮುಂತಾದ ಸ್ವರೂಪವುಳ್ಳದ್ದಲ್ಲ ಎಂದಾಗುವದು.

ನಾಪಿ ಸೋऽತ್ರ ಸಹತೇ ವಕ್ತುಂ ನಿಪಾತತ್ವಾತ್ ಸಹಾऽರ್ಥತಾಮ್ ।
ತಸ್ಮಾತ್ ಯುಗಪದರ್ಥಸ್ಯ ವಾಚಕಂ ಸ್ಯಾತ್ ಸಹೇತಿ ಯತ್ ॥

೧೧೮. ಸಹ ಎಂಬುದು ನಿಪಾತವಾದ್ದರಿಂದ 'ಒಡನೆ' ಎಂಬರ್ಥವನ್ನೂ 'ಒಮ್ಮೆಗೇ' ಎಂಬರ್ಥವನ್ನೂ- ಎರಡನ್ನೂ ತಿಳಿಸಲಾರದು. ಏಕೆಂದರೆ ನಿಪಾತಗಳಿಗೆ ಅನೇಕಾರ್ಥವಿರುವದಿಲ್ಲ. ಆದ್ದರಿಂದ 'ಸಹ' ಎಂಬುದಕ್ಕೆ ಒಡನೆ-ಎಂಬರ್ಥವನ್ನು ಕೈಬಿಟ್ಟು ಒಮ್ಮೆಗೆ-ಎಂಬರ್ಥವನ್ನೇ ಸ್ವೀಕರಿಸಲಾಗಿದೆ.

ಜ್ಞಾನಾದಸತ್ಯಾದ್ಯುಚ್ಛಿತ್ತೇರಾತ್ಮನೋऽನ್ಯನ್ನ ವಿದ್ಯತೇ ।
ತಸ್ಮಾದ್ವಿಪಶ್ಚಿತ್ ಬ್ರಹ್ಮಭ್ಯಾಂ ಕಾಮಾನ್ ಸರ್ವಾನ್ ಸಹಾಶ್ನುತೇ ॥

೧೧೯. ಐಕ್ಯಜ್ಞಾನದಿಂದ ಅಸತ್ಯಾದಿಧರ್ಮಗಳ ನಿರಾಕರಣವಾಗಲಾಗಿ ಆತ್ಮನಿಗಿಂತ ಬೇರೊಂದು ಉಳಿದಿರುವದಿಲ್ಲ. ಆದ್ದರಿಂದ ಬ್ರಹ್ಮವಿದನೂ ಬ್ರಹ್ಮವೂ ಒಂದೇ ಆಗಲಾಗಿ ಎಲ್ಲಾ ಕಾಮಗಳನ್ನೂ ಒಟ್ಟಿಗೆ ಅನುಭವಿಸುವವನಾಗುತ್ತಾನೆ.

ಜ್ಞಾತುರ್ಹಾರ್ದಗುಹಾಂತಸ್ಥಂ ಪ್ರತೀಚೋऽನ್ಯನ್ನ ಲಭ್ಯತೇ ।
ಸತ್ಯಾದಿಮದತೋ ಬ್ರಹ್ಮ ಪ್ರತ್ಯಗಾತ್ಮೈವ ತದ್ವಿದಃ ॥

೧೨೦. ಜ್ಞಾತೃವಿನ ಹೃದಯಗುಹೆಯಲ್ಲಿರುವ ಪ್ರತ್ಯಗಾತ್ಮನನ್ನು ಬಿಟ್ಟರೆ ಬೇರೊಂದು ವಸ್ತುವೇನೂ ಅಲ್ಲಿಲ್ಲ. ಆದ್ದರಿಂದ ಬ್ರಹ್ಮವನ್ನರಿತವನ ಪ್ರತ್ಯಗಾತ್ಮನೇ ಆದ ಬ್ರಹ್ಮವು ಸತ್ಯಾದಿವಿಶೇಷಣಗಳುಳ್ಳದ್ದೇ ಆಗಿದೆ.

ವಿಪಶ್ಚಿದ್ವ್ಯತಿರೇಕೇಣ ಜ್ಞೇಯತ್ವಾದ್ಯಪನುತ್ತಯೇ ।
ಸಾಮಾನಾಧಿಕರಣ್ಯೇನ ಬ್ರಹ್ಮಣಾ ಹಿ ವಿಪಶ್ಚಿತಾ ॥

೧೨೧. ಬ್ರಹ್ಮವಿದನಿಗಿಂತ ಬೇರೆಯಾದ ಜ್ಞೇಯವೇನೂ ಇಲ್ಲವೆಂದು ತಿಳಿಸುವದಕ್ಕಾಗಿ ಬ್ರಹ್ಮಣಾ-ವಿಪಶ್ಚಿತಾ-ಎಂದು ಶ್ರುತಿಯಲ್ಲಿ ಸಾಮಾನಾಧಿಕರಣ್ಯದಿಂದ ತಿಳಿಸಲಾಗಿದೆ.

ಏಕಯಾऽಕ್ರಮವರ್ತಿನ್ಯಾ ವ್ಯಾಪ್ನೋತಿ ಕ್ರಮವರ್ತಿನಃ ।
ಆಪಗತ್ಯಾಖಿಲಾನ್ ಕಾಮಾನ್ ಯೋऽಕಾಮ ಇತಿ ಚ ಶ್ರುತಿಃ ॥

೧೨೨. 'ಯೋ ಅಕಾಮಃ' ಎಂದು ಬೇರೊಂದು ಶ್ರುತಿಯಲ್ಲಿರುವದರಿಂದ ಕ್ರಿಯಾವ್ಯಾಪಾರವಿಲ್ಲದ (ಬ್ರಾಹ್ಮೀಸ್ಥಿತಿ)ಯನ್ನು ಹೊಂದುವ ಮೂಲಕ ಉಳಿದ ಎಲ್ಲಾ ಕ್ರಮವರ್ತಿ (ಕ್ರಿಯಾವ್ಯಾಪಾರವುಳ್ಳ) ಕಾಮಗಳನ್ನೂ ಹೊಂದಿದವನಾಗಿ ಎಲ್ಲಾ ಕಾಮಗಳನ್ನೂ ಒಟ್ಟಿಗೆ ಅನುಭವಿಸುತ್ತಾನೆ.

ವಿವರಣೆ: ಬ್ರಹ್ಮಪ್ರಾಪ್ತಿಯೆಂಬುದೇ ಸರ್ವಕಾಮಾವಾಪ್ತಿಯು. ಅದು ಜ್ಞಾನದಿಂದಾಗುವದರಿಂದ ಕಾಮ-ಕಾಮಿಭೇದರಹಿತವಾಗಿದೆ. ಅದು ಉಳಿದೆಲ್ಲ ಭೇದವಿಶಿಷ್ಟವಾದ ಕಾಮಪ್ರಾಪ್ತಿಗಳನ್ನೂ ವ್ಯಾಪಿಸಿದೆ. ಆದ್ದರಿಂದ ಸ್ವಭಾವ ಭೂತವಾದ ಬ್ರಹ್ಮಾವಾಪ್ತಿಯು ಸರ್ವಕಾಮಗಳ ಪ್ರಾಪ್ತಿಯೆನಿಸಿರುವದು. ಇದನ್ನು ಬೃಹದಾರಣ್ಯಕಶ್ರುತಿಯಲ್ಲಿ 'ಅಕಾಮನೇ ಆಪ್ತಕಾಮನು' ಎಂದು ತಿಳಿಸಿದೆ. ಬ್ರಹ್ಮವಿದನು ಅಕಾಮನೆಂಬುದು ರಹಸ್ಯವು.

ಆದಾವನ್ತೇ ತಥಾ ಮಧ್ಯೇ ಧಿಯೋಽನೇಕಶರೀರಗಾಃ ।
ನಿರ್ವಿಶೇಷೈಕಚಿದ್ವ್ಯಾಪ್ತಾ ಹ್ಯನನ್ಯಾನುಭವಾತ್ಮನಾ ॥
ಸರ್ವಪ್ರವೃತ್ತಿಹೇತೂಂಶ್ಚ ಯಸ್ಮಾದ್ ಬ್ರಹ್ಮವಿದಶ್ನುತೇ ।
ಕಾಮಾನ್ ಬ್ರಹ್ಮವಿದಸ್ತಸ್ಮಾನ್ನ ಪ್ರವೃತ್ತಿರಹೇತುತಃ ॥

೧೨೩-೨೪. ಅನೇಕ ಶರೀರಗಳಲ್ಲಿರುವ ಬುದ್ಧಿಗಳೆಲ್ಲವೂ ಆದಿಮಧ್ಯಾಂತ ಗಳಲ್ಲಿ ನಿರ್ವಿಶೇಷಚಿತ್‌ತತ್ತ್ವದಿಂದ ವ್ಯಾಪ್ತವಾದವುಗಳಾಗಿರುವವು. ಹೇಗೆಂದರೆ ಅವು ಆತ್ಮನಿಲ್ಲದೆ ಅನುಭವಗೋಚರವಾಗಲೇ ಆರವು. ಹೀಗೆ ಎಲ್ಲಾ ಪ್ರವೃತ್ತಿ ಕಾರಣಗಳಾದ ಕಾಮಗಳನ್ನೂ ಬ್ರಹ್ಮವಿದನು (ಆತ್ಮಸ್ವಭಾವದಿಂದ) ಅನುಭವಿ ಸುವನಾದ್ದರಿಂದ ಅವನ ಕಾಮಗಳು ಪ್ರವೃತ್ತಿಹೇತುಗಳಾಗಿರುವದಿಲ್ಲ.

ಅವಿದ್ಯಾಹೇತವಃ ಕಾಮಾಃ ಕಾಮಮೂಲಾಃ ಪ್ರವೃತ್ತಯಃ ।
ಧರ್ಮಾಧರ್ಮೌ ಚ ತನ್ಮೂಲೌ ದೇಹೋಽನರ್ಥಾಶ್ರಯಸ್ತತಃ ॥
ಅತೋಽವಿದ್ಯಾನಿರೋಧೇ ಸ್ಯಾನ್ನಿರೋಧೋ ವಿದುಷಃ ಸದಾ ।
ನಿಃಶೇಷಕರ್ಮಹೇತೂನಾಂ ವಿಕಾರಾಣಾಂ ತದೈವ ತು ॥

೧೨೫-೨೬. ಕಾಮಗಳು ಅವಿದ್ಯೆಯೆಂಬ ಕಾರಣವುಳ್ಳವಾಗಿರುವವು. ಪ್ರವೃತ್ತಿಗಳು ಕಾಮಗಳಿಂದಾಗುವವು. ಅವುಗಳಿಗೆ ಧರ್ಮಾಧರ್ಮಗಳೇ ಮೂಲವು. ಅನಂತರ ಅವುಗಳಿಂದ ದೇಹಧಾರಣೆಯೂ ಆ ಮೂಲಕ ಪಾಪಪುಣ್ಯ ಗಳೂ ಸಂಘಟಿಸುತ್ತವೆ. ಆದ್ದರಿಂದ ಜ್ಞಾನಿಗೆ ಅವಿದ್ಯೆಯು ಇಲ್ಲವಾಗಲು ಕರ್ಮಹೇತುವಾದ ಎಲ್ಲಾ (ಕಾಮ)ವಿಕಾರಗಳೂ ನಿರೋಧಿಸಲ್ಪಡಲಾಗಿ ಅವನು ಅಕಾಮನಾಗುವನು.

ಕೃತ್ಸ್ನೋಪನಿಷದರ್ಥಸ್ಯ ಸೂತ್ರಮಿತ್ಯಭ್ಯಧಾತ್ ಪುರಾ ।
ಸಂಕ್ಷೇಪತಸ್ತದರ್ಥಶ್ಚ ಸಮ್ಯಗ್ ಮಂತ್ರೇಣ ವರ್ಣಿತಃ ॥

೧೨೭. ಇಡಿಯ ಉಪನಿಷತ್ತಿನ ಅರ್ಥವನ್ನೆಲ್ಲ ಒಳಗೊಂಡಿರುವ ಸೂತ್ರ ವಾಕ್ಯವಿದು- ಎಂದು ಹಿಂದೆ ಹೇಳಲಾಗಿತ್ತು. ಈಗ ಅದರ ಅರ್ಥವು ಚೆನ್ನಾಗಿ- ಆದರೆ ಸಂಕ್ಷಿಪ್ತವಾಗಿ ಮಂತ್ರದಿಂದ ವರ್ಣಿಸಲ್ಪಟ್ಟಿತು.

ಅನೇನ ತ್ವಾದ್ಯಸೂತ್ರೇಣ ಯಾವಾನರ್ಥೋಽತ್ರ ಸೂತ್ರಿತಃ ।
ಆಸಮಾಪ್ತೇರಿಯಂ ವೃತ್ತಿಸ್ತಸ್ಮಾದಿತ್ಯುಚ್ಯತೇಽಧುನಾ ॥

೧೨೮. ಈ ಮೊದಲನೆಯ ಸೂತ್ರದಿಂದ ಎಷ್ಟು ಅರ್ಥವು ಸೂತ್ರಿಸಲ್ಪಟ್ಟಿತೋ ಅದು ಈ ವಲ್ಲಿಯ ಕೊನೆಯವರೆಗೂ ವ್ಯಾಪಿಸಿದ್ದು ಅದರ ವ್ಯಾಖ್ಯಾನ ರೂಪವಾಗಿ 'ತಸ್ಮಾದ್ವಾ' ಎಂದು ಈಗ ಹೇಳಲಾಗುವದು.

ಸತ್ಯಂ ಜ್ಞಾನಮನಂತಂ ಚ ರಸಾದೇಃ ಪಂಚಕಾತ್ ಪರಮ್ ।
ಸ್ಯಾಮದೃಶ್ಯಾದಿಶಾಸ್ತ್ರೋಕ್ತಮಹಂ ಬ್ರಹ್ಮೇತಿ ನಿರ್ಭಯಮ್ ॥

೧೨೯. (ಅನ್ನ)ರಸಮಯವಾದ ಕೋಶವೇ ಮುಂತಾಗಿ ಐದು ಕೋಶಗಳನ್ನೂ ಮೀರಿದ, ಸತ್ಯಜ್ಞಾನಾನಂತವಾದ, ನಿರ್ಭಯವಾದ, ಹಾಗೂ ಅದೃಶ್ಯಾದಿ ಧರ್ಮಕವೆಂದು ಶಾಸ್ತ್ರದಲ್ಲಿ ತಿಳಿಸಿರುವ ಬ್ರಹ್ಮವೇ ನಾನಾಗಿರುವೆನು-ಎಂಬಿದು ಸಿದ್ಧಾಂತವು.

ನನು ಸತ್ಯಮನಂತಂ ಚ ಕಥಂ ಸಮ್ಯಕ್ಪ್ರತೀಯತೇ ।
ದೇಶಕಾಲಾದಿಹೇತುತ್ವಾತ್ತದಿದಾನೀಂ ವಿಭಾವ್ಯತೇ ॥

೧೩೦. ಬ್ರಹ್ಮವು ಸತ್ಯವೂ ಅನಂತವೂ ಆಗಿದೆ-ಎಂಬುದು ಹೇಗೆ ಸಿದ್ಧವಾಗುತ್ತದೆ ? ಎಂದರೆ ಅದು ದೇಶಕಾಲಾದಿಗಳಿಗೂ ಕಾರಣವಾದ್ದರಿಂದ-ಎಂಬಿದೇ ಉತ್ತರವು. ಅದನ್ನು ಈಗ ವಿವರಿಸಲಾಗುವದು.

ವಸ್ತುತೋ ದೇಶತಶ್ಚೈವ ಕಾಲತಶ್ಚ ತ್ರಿಧೋಚ್ಯತೇ ।
ಅನಂತ್ಯಂ ಬ್ರಹ್ಮಣಸ್ತ್ವಾತಃ ಸತ್ಯಾದ್ಯಪಿ ಚ ಸಿಧ್ಯತಿ ॥

೧೩೧. ಅನಂತ್ಯವು ದೇಶದಿಂದ, ಕಾಲದಿಂದ, ವಸ್ತುವಿನಿಂದ- ಎಂದು ಮೂರು ವಿಧವಾಗಿರುತ್ತದೆ. ಆದ್ದರಿಂದ ಬ್ರಹ್ಮದ ಸತ್ಯತ್ವಾದಿಗಳೂ ಅದರಿಂದ ಸಿದ್ಧಿಸುವವು.

ಅನಂತಂ ದೇಶತೋ ವ್ಯೋಮ ದೇಶವತ್ ಪ್ರಕೃತಿತ್ವತಃ ।
ಕಾರಣೇಸ್ಯೈಕದೇಶಂ ಹಿ ಕಾರ್ಯಂ ನಾನ್ಯತ್ರ ವರ್ತತೇ ॥

೧೩೨. ದೇಶವತ್ತಾದ ಭೂಮಿಯೇ ಮುಂತಾದವುಗಳಿಗೆ ಕಾರಣವಾಗಿರುವದರಿಂದ ಆಕಾಶವು ದೇಶದಿಂದ ಅನಂತವಾಗಿದೆ. ಕಾರ್ಯವು ಕಾರಣದ ಏಕದೇಶವಷ್ಟೆ! ಅದು ಕಾರಣವನ್ನು ಬಿಟ್ಟು ಬೇರೆಲ್ಲಿಯೂ ಇರುವದಿಲ್ಲ.

ಕಾರ್ಯತ್ವಾತ್ ಕಾಲತೋ ನಾಸ್ಯ ವಸ್ತುತಶ್ಚ ವಿಹಾಯಸಃ |
ವಸ್ತ್ವನ್ತರಸ್ಯ ಸದ್ಭಾವಾದಾನಂತ್ಯಂ ವಸ್ತುತೋಽಪಿ ನ ||

೧೩೩. ಆದರೆ ಆಕಾಶವು ಕಾರ್ಯವಾಗಿರುವದರಿಂದ ಕಾಲದಿಂದಲೂ ವಸ್ತುವಿನಿಂದಲೂ ಅದು ಅನಂತವಲ್ಲ. ಏಕೆಂದರೆ (ಅದಕ್ಕೆ ಕಾರಣವಾದ) ಬೇರೊಂದು ವಸ್ತುವಿರುವದರಿಂದ ಅದಕ್ಕೆ ವಸ್ತುತಃ ಆನಂತ್ಯವಿಲ್ಲ.

ಕಾಲಾಕಾಶಾದಿಯೋನಿತ್ವಾತ್ ಸರ್ವಾತ್ಮತ್ವಾತ್ತಥಾತ್ಮನಃ |
ವಸ್ತ್ವನ್ತರಸ್ಯ ಚಾಸತ್ತ್ವಾತ್ ಮುಖ್ಯಾನಂತ್ಯಂ ಪರಾತ್ಮನಃ ||

೧೩೪. ಪರಬ್ರಹ್ಮವಾದರೊ, ಕಾಲಾಕಾಶಾದಿಗಳಿಗೂ ಕಾರಣವಾಗಿರುವದರಿಂದಲೂ (ಆತ್ಮರೂಪದಿಂದ) ಸರ್ವಕ್ಕೂ ಆತ್ಮನಾಗಿರುವದರಿಂದಲೂ ಅದಕ್ಕಿಂತ ಬೇರೊಂದು ವಸ್ತುವಿಲ್ಲವಾದ್ದರಿಂದಲೂ ಆನಂತ್ಯವು ಮುಖ್ಯಾರ್ಥದಲ್ಲಿ ಆದಕ್ಕೆ ಹೊಂದುತ್ತದೆ.

ಕಲ್ಪಿತೇನ ಪರಿಚ್ಛೇದೋ ನ ಹ್ಯಕಲ್ಪಿತವಸ್ತುನಃ |
ಕಲ್ಪಿತಶ್ಚೇಹ ಕಾಲಾದಿರ್ವಾಚಾರಂಭಣಶಾಸ್ತ್ರತಃ ||

೧೩೫. ಅಕಲ್ಪಿತವಸ್ತುವಿಗೆ ಕಲ್ಪಿತಪದಾರ್ಥದಿಂದ ಪರಿಚ್ಛೇದವುಂಟಾಗಲಾರದು. 'ವಾಚಾರಂಭಣಮ್' ಎಂಬ (ಶ್ರುತಿ)ಶಾಸ್ತ್ರದಂತೆ ಕಾಲಾದಿಗಳು ಬ್ರಹ್ಮದಲ್ಲಿ ಕಲ್ಪಿತವಾಗಿರುವವು.

ತಸ್ಮಾತ್ ಸತ್ಯಾದಿ ಯಾಥಾತ್ಮ್ಯಂ ತಸ್ಮಾತ್ ಇತ್ಯೇವಮಾದಿನಾ |
ವಕ್ಷ್ಯತೇ ಬ್ರಹ್ಮಣಃ ಸಮ್ಯಕ್ ಸೃಷ್ಟಿವ್ಯಾಜೇನ ಯತ್ನತಃ ||

೧೩೬. ಆದ್ದರಿಂದ 'ತಸ್ಮಾದ್ವಾ' ಎಂಬೀ ಮುಂತಾದ ಶ್ರುತಿಯಿಂದ ಬ್ರಹ್ಮಕ್ಕೆ ಸತ್ಯಾದಿ ಯಾಥಾತ್ಮ್ಯವು ಸೃಷ್ಟಿಯ ನೆಪದಿಂದ ಮುಂದೆ ಹೇಳಲ್ಪಡುವದು.

ತಸ್ಮಾದಿತ್ಯಾದಿವಾಕ್ಯೋಕ್ತಂ ವೈಶಬ್ದಃ ಸ್ಮರಣಾಯ ತು |
ಏತಸ್ಮಾದಿತಿಮಂತ್ರೋಕ್ತಂ ಸತ್ಯಾದಿಗುಣಲಕ್ಷಿತಮ್ ||

೧೩೭. ತಸ್ಮಾತ್....ಮುಂತಾದ ವಾಕ್ಯದಲ್ಲಿರುವ ವೈಶಬ್ದವು ಸ್ಮರಣೆಯನ್ನು ಸೂಚಿಸುತ್ತದೆ. ಅದು 'ಏತಸ್ಮಾತ್' ಎಂಬ ಮಂತ್ರದಲ್ಲಿ ಹೇಳಿರುವ ಸತ್ಯಾದಿಗುಣಲಕ್ಷಿತವಾದ ಬ್ರಹ್ಮವನ್ನು ಸ್ಮರಣೆಗೆ ತರುತ್ತದೆ.

ತದ್ವಿದ್ವಿಪಶ್ಚಿತ್ ಸಾಮರ್ಥ್ಯಾತ್ ತದೇತದ್ವಾಕ್ಯಂ ಪ್ರತೀಯತೇ |
ಆತ್ಮಶ್ರುತೇರ್ನ ಮುಖ್ಯೋಽರ್ಥಃ ಪ್ರತೀಚೋಽನ್ಯತ್ರ ಲಭ್ಯತೇ ||

೧೩೮. ಬ್ರಹ್ಮವನ್ನು ಬಲ್ಲವನು ಪರಪ್ರಾಪ್ತಿಯನ್ನು ಹೊಂದುವನು– ಎಂದು ಹೇಳಿರುವದರ ಸಾಮರ್ಥ್ಯದಿಂದ ತಸ್ಮಾತ್ ಎಂಬೀ ಮಾತುಗಳಿಂದ

ಬ್ರಹ್ಮಕ್ಕೂ ಆತ್ಮನಿಗೂ ಅಭೇದವೇ ಸಿದ್ಧವಾಗುತ್ತದೆ. ಏಕೆಂದರೆ ಆತ್ಮಶಬ್ದಕ್ಕೆ ಪ್ರತ್ಯಗಾತ್ಮನನ್ನು ಬಿಟ್ಟು ಬೇರೊಂದು ವಸ್ತುವಿನಲ್ಲಿ ಮುಖ್ಯಾರ್ಥವು ಹೊಂದುವದಿಲ್ಲ.

ಮತ್ತಃ ಸರ್ವಮಿದಂ ಜಾತಂ ಮಯ್ಯೇವಾಂತೇ ಪ್ರಲೀಯತೇ |
ಅಹಮೇಕೋ ಬಿಭರ್ಮೀದಂ ಇತ್ಯೇವಂ ಚ ಪ್ರಸಿಧ್ಯತಿ ||

೧೫೯. ಇದೆಲ್ಲವೂ ನನ್ನಿಂದ ಹುಟ್ಟಿರುವದು ; ಕೊನೆಯಲ್ಲಿ ನನ್ನಲ್ಲಿಯೇ ಅಡಗುವದು. ನಾನೊಬ್ಬನೇ ಇದೆಲ್ಲವನ್ನೂ ಧರಿಸಿರುವೆನು– ಹೀಗೆಂದೂ ಸಿದ್ಧವಾಗುತ್ತದೆ.

ಸರ್ವಾನನ್ಯಾವಿಕಾರ್ಯೇಕಮಕಾರ್ಯಾಕಾರಣಂ ಪರಮ್ |
ಬ್ರಹ್ಮಸ್ವಭಾವಮಾಲಂಬ್ಯ ಸೃಷ್ಟಿರ್ವಕ್ತುಂ ನ ಶಕ್ಯತೇ ||

೧೬೦. ಸರ್ವವಸ್ತುಗಳಿಂದಲೂ ಅನ್ಯವಲ್ಲದ್ದೂ ಅವಿಕಾರಿಯೂ ಕಾರ್ಯವಲ್ಲದ್ದೂ ಕಾರಣವಲ್ಲದ್ದೂ ಪರವೂ ಆಗಿರುವ ಬ್ರಹ್ಮದ ಸ್ವಭಾವವನ್ನವಲಂಬಿಸಿ ಹೇಳಹೊರಟರೆ ಸೃಷ್ಟಿಯನ್ನು ವರ್ಣಿಸಲಾಗುವದೇ ಇಲ್ಲ. (ಆದ್ದರಿಂದ ಸೃಷ್ಟಿಯು ನಿಜವಲ್ಲವೆಂದೇ ತಿಳಿಯಬೇಕು.)

ಬ್ರಹ್ಮಣೋಽನ್ಯದತಃ ಸರ್ವಂ ಕಾರ್ಯತ್ವೇನ ವಿವಕ್ಷ್ಯತೇ |
ಬ್ರಹ್ಮಣೋಽಕಾರಣತ್ವಾಚ್ಚ ಸೃಷ್ಟ್ಯಾ ಹೇತೋರಸಂಭವಃ ||

೧೬೧. ಬ್ರಹ್ಮಕ್ಕಿಂತ ಬೇರೆಯಾದುದೆಲ್ಲವೂ ಕಾರ್ಯವೆಂದು ಗೊತ್ತುಪಡಿಸಲ್ಪಟ್ಟಿದೆ. ಬ್ರಹ್ಮವು ಕಾರಣವಾಗುವಂತಿಲ್ಲ. ಆದ್ದರಿಂದ ಸೃಷ್ಟಿಗೆ ಕಾರಣವಿಲ್ಲವಾಗಿ ಅದು ಅಸಂಭವವೇ ಆಯಿತು. (ನಿಜವಾದ ಸೃಷ್ಟಿಯಾಗಿಲ್ಲ ಎಂದರ್ಥ.)

ಬ್ರಹ್ಮಸ್ವಭಾವೋ ಹೇತುಶ್ಚೇತ್ ಸೃಷ್ಟೇಃ ತತ್ಸಂನಿಧೇಃ ಸದಾ |
ಸರ್ವದಾ ಬ್ರಹ್ಮವತ್ ಸರ್ಗೋ ನ ಚ ದೇಶಾದ್ಯಸಂಭವಾತ್ ||

೧೬೨. ಬ್ರಹ್ಮವು ಕೂಟಸ್ಥವಾಗಿದ್ದರೂ ಅದರ ಸಾಂನಿಧ್ಯಮಾತ್ರವೇ ಸೃಷ್ಟಿಗೆ ಕಾರಣವಾಗಬಹುದಲ್ಲವೆ ? ಎಂದರೆ ಅದು ಸರಿಯಲ್ಲ. ಹಾಗಾದರೆ ಬ್ರ[illegible]ಂತೆ ಸೃಷ್ಟಿಯೂ ಯಾವಾಗಲೂ ಆಗಬೇಕಾಗುತ್ತದೆ. ಆದರೆ ಹಾಗಿಲ್ಲ. ಏಕೆಂದರೆ ಹುಟ್ಟುವದೆಲ್ಲವೂ ದೇಶಕಾಲಗಳಲ್ಲಿಯೇ ಹುಟ್ಟುತ್ತವೆ. ದೇಶಕಾಲಗಳಿಗೆ ಕಾರಣವಾದ ಮತ್ತೊಂದು ದೇಶಕಾಲಗಳಿರುವದಿಲ್ಲ. ಇದೆ–ಎಂದು ಕಲ್ಪಿಸಿದರೆ ಅನವಸ್ಥಾದೋಷವು ಬರುತ್ತದೆ. ಆದ್ದರಿಂದ ಕಾರಣವಿಲ್ಲವಾಗಿ ಕಾರ್ಯವಾದ ಸೃಷ್ಟಿಯೂ ಇಲ್ಲ– ಎಂಬಿದೇ ಸಿದ್ಧಾಂತವು.

ನಾಭೂತ್ಸೃಷ್ಟಿರಭೂತತ್ವಾತ್ ಅಭೂತಂ ಕಾಲಹೇತುತಃ |
ನ ಭವಿಷ್ಯತ್ಯಭಾವ್ಯತ್ವಾದಭಾವ್ಯಂ ಚಾಕ್ರಿಯೋಕ್ತಿತಃ ||

೧೪೩. ಮತ್ತು ಸೃಷ್ಟಿಯು ಭೂತಭವಿಷ್ಯದ್ವರ್ತಮಾನಕಾಲಗಳಲ್ಲಿ ಒಂದರಲ್ಲಿ ಆಗಿರಬೇಕಾಗುವದು. ಭೂತದಲ್ಲಿ ಆಗಿಲ್ಲ. ಏಕೆಂದರೆ ಅಸಂಗವಾದ ಬ್ರಹ್ಮಕ್ಕೆ ಭೂತಕಾಲಸಂಬಂಧವಿಲ್ಲ. ಮತ್ತು ಅದು ಕಾಲಕಾರಣವಾದ್ದರಿಂದ ಕಾಲಪರಿಚ್ಛೇದ್ಯವಾಗಲಾರದು. ಇನ್ನು ಭವಿಷತ್ಕಾಲವು ಬಂದೇ ಇಲ್ಲವಾದ್ದರಿಂದ ಸೃಷ್ಟಿಯು ಹೊಂದಲಾರದು. ಹಾಗೂ ಬ್ರಹ್ಮವು ಕಾರ್ಯವಲ್ಲದ್ದರಿಂದ ಅದಕ್ಕೆ ಭವಿಷತ್ಕಾಲ ಸಂಬಂಧವೂ ಇಲ್ಲ.

ನೇದಾನೀಮದ್ವಿತೀಯತ್ವಾತ್ ಕೌಟಸ್ಥ್ಯಾದಾತ್ಮನಃ ಸದಾ |
ಭವಿಷ್ಯತ್ಯಸ್ತ್ಯಭೂನ್ನಾತೋ ವಸ್ತುವೃತ್ತಮುಪೇಕ್ಷ್ಯ ತು ||

೧೪೪. ಇನ್ನು ಈಗ (ವರ್ತಮಾನಕಾಲದಲ್ಲಿಯೂ) ಸೃಷ್ಟಿಯಾಗಿಲ್ಲ. ಏಕೆಂದರೆ ಆತ್ಮನು ಯಾವಾಗಲೂ ಕೂಟಸ್ಥನಾಗಿರುವನು. ಆತ್ಮನು ಮುಂದೆ ಆಗಲಿದ್ದಾನೆ, ಈಗ ಇದ್ದಾನೆ, ಹಿಂದೆ ಇದ್ದನು– ಎಂದು ಕಾಲಸಂಬಂಧದಿಂದ ಹೇಳಲು ಬಾರದವನಾಗಿರುತ್ತಾನೆ. ಆದ್ದರಿಂದ ಆತ್ಮನ ಸ್ವರೂಪಸ್ಥಿತಿಯಿಂದ ನೋಡಿದಾಗ ಸೃಷ್ಟಿಯು ಹೊಂದುತ್ತಿಲ್ಲ.

ಭವಿಷ್ಯತ್ಯಸ್ತ್ಯಭೂಚ್ಚೇತಿ ಯತೋ ವಂಧ್ಯಂ ವಿಶೇಷಣಮ್ |
ಉತ್ಪಾದಿವದಣೋಸ್ತಸ್ಮಾದವಿದ್ಯೈವಾತ್ರ ಕಾರಣಮ್ ||

೧೪೫. ಸೃಷ್ಟಿಗೆ ಭವಿಷ್ಯತಿ, ಅಸ್ತಿ, ಅಭೂತ್, ಎಂಬ ವಿಶೇಷಣಗಳು– ಹೇಗೆ ಪರಮಾಣುವಿಗೆ ಒಂಟೆಯು ಪರಮಾಣು, ಕತ್ತೆಯು ಪರಮಾಣು– ಎಂದು ವಿಶೇಷಣವನ್ನು ಕೊಡುವದು ವ್ಯರ್ಥವೋ ಹಾಗೆ ವ್ಯರ್ಥವೇ ಸರಿ. ಆದ್ದರಿಂದ ಸೃಷ್ಟಿಗೆ ಅವಿದ್ಯೆಯೊಂದೇ ಕಾರಣವೆಂದು ತಿಳಿಯಬೇಕು.

ವಿವರಣೆ : ಪ್ರತಿಯೊಂದು ವಸ್ತುವೂ ಪರಮಾಣುವಿನಿಂದ ಹುಟ್ಟುತ್ತದೆ– ಎಂಬ ಮತದಲ್ಲಿ ಒಂಟೆ, ಕತ್ತೆಗಳು ಅವು ಹುಟ್ಟುವ ಮುಂಚೆ ಆಯಾ ಪರಮಾಣು ರೂಪದಲ್ಲಿದ್ದಾಗ ಪರಮಾಣುಗಳನ್ನು ವಿಶೇಷಣವಿಶಿಷ್ಟವಾಗಿ ಹೇಳುವದು ಹೇಗೆ ವ್ಯರ್ಥವೋ ಹಾಗೆ ಸೃಷ್ಟಿಯನ್ನೂ ಕಾಲವಿಶೇಷಣಗಳಿಂದ ಹೇಳುವದು ವ್ಯರ್ಥ– ಎಂದರ್ಥ.

ಅಸತಃ ಕಾರಣಂ ನಾಸ್ತಿ ಸತೋಽನತಿಶಯತ್ವತಃ |
ಕೌಟಸ್ಥ್ಯಾಜ್ಜನ್ಮನಾಶಾನಾಮನವಸ್ಥಾ ಜನೇರ್ಜನೌ |

೧೪೬. ಅಸತ್ತು ಹುಟ್ಟುತ್ತದೆ–ಎಂಬುದು ಸರಿಯಲ್ಲ. ಏಕೆಂದರೆ ಅದಕ್ಕೆ ಕಾರಣವಿಲ್ಲ. ಸತ್ತು ಹುಟ್ಟುತ್ತದೆ– ಎಂಬಿದೂ ಹೊಂದುವದಿಲ್ಲ. ಏಕೆಂದರೆ ಅದು ಹುಟ್ಟುವ ಮೊದಲೇ ಇರುವದರಿಂದ ಹುಟ್ಟಿತು ಎಂದಾಗ ಅತಿಶಯವಿರುವದಿಲ್ಲ. ಆದ್ದರಿಂದ ಜನ್ಮಕ್ಕೆ ಜನ್ಮ, ನಾಶಕ್ಕೆ ನಾಶ– ಎಂದು ಕಲ್ಪಿಸಿದರೆ

ಅನವಸ್ಥಾದೋಷವುಂಟಾಗುವದು. ಹೀಗೆ ಬ್ರಹ್ಮವು ಕೂಟಸ್ಥವಾಗಿರುವಲ್ಲಿ ಉತ್ಪತ್ತಿಪ್ರಲಯಗಳು ಪರಮಾರ್ಥವಾಗಿ ಹೊಂದುವಂತೆಯೇ ಇಲ್ಲ.

ಕಾಲತ್ರಯಸ್ಯಾವಿದ್ಯಾಯಾಃ ಸಮುತ್ಥಾನಾದಹೇತುತಾ |
ಕರ್ಮದೇವೇಶ್ವರಾದೀನಾಮತ ಏವಾನಿಮಿತ್ತತಾ ||

೧೪೭. ಮೂರು ಕಾಲವೂ ಅವಿದ್ಯೆಯಿಂದಲೇ ತೋರುವದರಿಂದ ಅದು ಜಗತ್ಕಾರಣವಾಗಲಾರದು. ಹಾಗೆಯೇ ಕರ್ಮ, ದೇವತೆಗಳು, ಈಶ್ವರನೇ ಮುಂತಾದವುಗಳು ಕೂಡ ಅವಿದ್ಯಾಕ್ಷೇತ್ರದಲ್ಲೇ ಸೇರಿರುವದರಿಂದ ಜಗತ್ಕಾರಣವಾಗಲಾರರು.

ಜನಿಸ್ಥಿತ್ಯಪ್ಯಯಾ ಹ್ಯೇತೇ ಜಗತಃ ಸ್ಯುಃ ಪ್ರತಿಕ್ಷಣಮ್ |
ಧಿಯಾ ಜನಯತೇ ಕರ್ತಾ ಕರ್ಮಭಿಶ್ಚೇತಿ ಹಿ ಶ್ರುತಿಃ ||

೧೪೮. ಆದರೆ ಪ್ರತಿಕ್ಷಣವೂ ಜಗತ್ತಿನ ಉತ್ಪತ್ತಿಸ್ಥಿತಿಲಯಗಳು ಆಗುತ್ತಲೇ ಇವೆಯಾದ್ದರಿಂದ ಶ್ರುತಿಯು ತಿಳಿಸುವಂತೆ ಆಯಾ ಜೀವರ ವಿದ್ಯಾ-ಕರ್ಮಗಳ ನಿಮಿತ್ತದಿಂದಲೇ ಸೃಷ್ಟಿಕರ್ತನು ಜಗತ್ತನ್ನು ಉಂಟುಮಾಡುತ್ತಿರುವನು. ಇದು ಅವಿದ್ಯೆಯ ವಶದಿಂದಲೇ- ಎಂದು ತಿಳಿಯಬೇಕು.

ಅನಾದಿಮಧ್ಯನಿಧನಾವಿದ್ಯಾಸಂದೂಷಿತಾತ್ಮನಃ |
ಬ್ರಹ್ಮಣೋ ಜಾಯತೇ ವ್ಯೋಮ ತಿಮಿರಾದಿವ ಚಂದ್ರಮಾಃ ||

೧೪೯. ಆದಿಮಧ್ಯಾಂತಗಳಿಲ್ಲದ ಅವಿದ್ಯಾದೂಷಿತನಾದ ಆತ್ಮನಿಂದಲೇ- ಎಂದರೆ ಬ್ರಹ್ಮದಿಂದಲೇ- ಹೇಗೆ ಕಣ್ಣಿನ ತಿಮಿರದೋಷದಿಂದ ಚಂದ್ರನು ಹುಟ್ಟುವನೋ ಹಾಗೆ- ಆಕಾಶವು ಹುಟ್ಟುತ್ತದೆ.

ನಾಲಂ ಕ್ಷಣಮಪಿ ಸ್ಥಾತುಂ ಕಾರ್ಯಂ ತದ್ಧ್ರುವತಾ ಕುತಃ |
ರಜ್ಜ್ವಾಮಿವ ಭೋಗ್ಯವಿದ್ಯೋತ್ಥಂ ಮೂಢದೃಷ್ಟೇರ್ಧ್ರುವಾಯತೇ ||

೧೫೦. ಕಾರ್ಯವಾದ (ವಿಶ್ವವು) ಒಂದು ಕ್ಷಣಕಾಲವು ಕೂಡ ನಿಲ್ಲಲು ಸಮರ್ಥವಾಗಿಲ್ಲವಾಗಿ ಅದು ಶಾಶ್ವತವಾಗಿ ಹೇಗಾದೀತು ? ಅವಿದ್ಯಾಕಲ್ಪಿತವಾದ ರಜ್ಜುಸರ್ಪದಂತೆ ಮೂಢಬುದ್ಧಿಯವನಿಗೆ ಅದು ಸ್ಥಿರವಾಗಿರುವಂತೆ ತೋರುತ್ತದೆ.

ತಿಮಿರೋಪಪ್ಲುತೋ ಯದ್ವತ್ ಭಿನ್ನಾವಿವ ಸಮೀಕ್ಷತೇ |
ಚಂದ್ರಿಕಾಮಾತ್ಮನಸ್ತದ್ವತ್ ಕಾರ್ಯಂ ಭಿನ್ನಂ ವಿಮೀಕ್ಷತೇ ||

೧೫೧. ತಿಮಿರದೋಷದಿಂದ ಕೂಡಿದವನು (ದ್ವಿತೀಯಚಂದ್ರನ) ಬೆಳದಿಂಗಳನ್ನು ಹೇಗೆ ಕಾಣುತ್ತಾನೋ ಹಾಗೆ ಆತ್ಮನ ಕಾರ್ಯವಾದ (ಆಕಾಶಾದಿಗಳನ್ನು) ಅಜ್ಞನು ಭಿನ್ನವಾಗಿ ಕಾಣುತ್ತಾನೆ.

ಯದ್ಯದ್ ಭೂತಂ ಯಥಾಸಂಖ್ಯಂ ತತ್ತತ್ತಾವದ್ ಗುಣಂ ಸ್ಮೃತಮ್ |
ಪೂರ್ವೈರ್ವ್ಯಾಪ್ತಾನಿ ಕಾರ್ಯತ್ವಾತ್ ಉತ್ತರಾಣಿ ಯಥಾಕ್ರಮಮ್ ||

೧೫೨. ಯಾವ ಯಾವ ಮಹಾಭೂತವು ಸಂಖ್ಯಾಕ್ರಮದಿಂದ ಉಂಟಾಗಿದೆಯೋ ಆಯಾ ಸಂಖ್ಯೆಯ ಗುಣಗಳು ಆದದರಲ್ಲಿ ಇರುತ್ತವೆ. ಹಾಗೂ ಮುಂದುಮುಂದಿನ ಭೂತಗಳು ಹಿಂದುಹಿಂದಿನಭೂತಗಳಿಂದ ವ್ಯಾಪ್ತವಾಗಿರುವವು.

ಆಕಾಶಾದೇಶ್ಚ ಕಾರ್ಯತ್ವಾತ್ ನ ವಾಯ್ವಾದಿ ಪ್ರಜಾಯತೇ |
ವಿಯದ್ರೂಪಾನ್ಮರುಜ್ಜನ್ಮ ತಸ್ಮಾದಾತ್ಮನ ಏವ ತತ್ ||

೧೫೩. ಆಕಾಶಾದಿಗಳೂ ಕಾರ್ಯವಾಗಿರುವದರಿಂದ ವಾಯುವೇ ಮುಂತಾದದ್ದು ಅದರಿಂದ ಹುಟ್ಟುವದಿಲ್ಲ. ಹಾಗಾದರೆ (ಆಕಾಶದಿಂದ ವಾಯುವು ಹುಟ್ಟಿತು ಎಂಬಿದರ ಅರ್ಥವೇನೆಂದರೆ) ಆಕಾಶರೂಪನಾದ ಆತ್ಮನಿಂದಲೇ ವಾಯುವು ಹುಟ್ಟಿತು– ಎಂದು ತಿಳಿಯಬೇಕು.

ಪಂಚೈವ ಖಲು ಭೂತಾನಿ ವ್ಯೋಮಾದೀನ್ಯುಪಲಕ್ಷಯೇತ್ |
ಕಾರ್ಯಕಾರಣರೂಪೇಣ ಭೂತೇಭ್ಯೋ ನಾನ್ಯದಿಷ್ಯತೇ ||

೧೫೪. ಆಕಾಶವೇ ಮುಂತಾಗಿ ಐದು ಭೂತಗಳು ಮಾತ್ರವೇ (ಉಂಟಾದವು) ಎಂದು ತಿಳಿಯಬೇಕು. ಇವುಗಳೇ ಕಾರ್ಯಕಾರಣರೂಪದಿಂದ (ಎಲ್ಲಾ ಸೃಷ್ಟಿಪದಾರ್ಥಗಳನ್ನೂ) ವ್ಯಾಪಿಸಿಕೊಂಡಿವೆಯಾಗಿ ಈ ಭೂತಗಳಿಗಿಂತ ಬೇರೆಯೇನೂ ಇರುವದಿಲ್ಲ.

ವಾಯ್ವಾದಿಷು ತು ಯಃ ಶಬ್ದಃ ಸ್ವಸ್ಥಂ ತಮವಿಚಕ್ಷಣಾಃ |
ವಾಯ್ವಾದೀನಾಮಿವೇಕ್ಷನ್ತೇ ಸ್ರಗ್ಗುಣಾನಿವ ಭೋಗಿನಃ ||

೧೫೫. ವಾಯುವೇ ಮುಂತಾದವುಗಳಲ್ಲಿ ಕಾಣುವ ಶಬ್ದಗುಣವು ಅದರದ್ದೇ ಎಂದು ಅಜ್ಞರು ತಿಳಿಯುವರು. ಹೇಗೆ ಹಗ್ಗದಲ್ಲಿ ಕಲ್ಪಿಸ ಹಾವಿನ ಗುಣಗಳನ್ನು ಕಾಣುವರೋ ಹಾಗೆ ಮೂಢರು ವಾಯ್ವಾದಿಗಳಲ್ಲಿ ಶಬ್ದಾದಿಗಳನ್ನು ತಿಳಿಯುತ್ತಾರೆ.

ಚತುರ್ಗುಣಾತ್ಮಿಕಾ ಪೃಥ್ವೀ ನ ಚತುರ್ಷ್ವಪಿ ಸಾ ಯಥಾ |
ಬ್ರಹ್ಮಾತ್ಮಕಂ ಜಗತ್ಸರ್ವಂ ಬ್ರಹ್ಮೈವಂ ನ ಜಗನ್ಮಯಮ್ ||

೧೫೬. ಭೂಮಿಯು ಉಳಿದ ನಾಲ್ಕು ಭೂತಗಳ ಅಂಶವುಳ್ಳದ್ದಾಗಿದೆಯಾದರೂ ಅದು ಹೇಗೆ ಉಳಿದ ಭೂತಗಳಲ್ಲಿಲ್ಲವೋ ಹಾಗೆಯೇ ಜಗತ್ತೆಲ್ಲವೂ ಬ್ರಹ್ಮಾತ್ಮಕವಾಗಿದೆಯಾದರೂ ಬ್ರಹ್ಮವು ಜಗನ್ಮಯವಾಗಿಲ್ಲ.

ಸತ್ಯಂ ಜ್ಞಾನಮನನ್ತಂ ಯತ್ ಪ್ರತ್ಯಜ್ಞಾಯಿ ಪುರೈಕಲಮ್ |
ಅನನ್ಯಾನುಭವಂ ಬ್ರಹ್ಮ ತತ್ಸಿದ್ಧಂ ನ್ಯಾಯತಃ ಸ್ಫುಟಮ್ ||

೧೫೭. ಹಿಂದೆ ಸತ್ಯಜ್ಞಾನಾನಂತವಾದ ಬ್ರಹ್ಮವೊಂದೇ ಇದ್ದುಕೊಂಡಿದೆ- ಎಂದು ಯಾವದನ್ನು ಪ್ರತಿಜ್ಞೆಮಾಡಲಾಗಿತ್ತೋ ಆ ಅನನ್ಯಾನುಭವಾತ್ಮಕವಾದ ಬ್ರಹ್ಮವು ನ್ಯಾಯದಿಂದಲೂ ಈಗ ಸ್ಫುಟವಾಗಿ ಸಿದ್ಧವಾಯಿತು.

ದಿಗಾದಿಕಾರಣೋ ದೇವಃ ಪಂಚಭೂತಶರೀರಭೃತ್ |
ಸರ್ವೋಽಸ್ಮೀತ್ಯಭಿಮಾನೇದ್ಧೋ ವಿರಾಡೇವಮಜಾಯತ ||

೧೫೮. ದಿಕ್ಕೇ ಮುಂತಾದವುಗಳಿಗೆ ಕಾರಣನೂ ಪಂಚಮಹಾಭೂತಶರೀರವುಳ್ಳವನೂ 'ನಾನು ಎಲ್ಲವೂ ಆಗಿರುವೆನು' ಎಂದು ಅಭಿಮಾನವುಳ್ಳವನೂ ಆದ ವಿರಾಟ್‌ದೇವತೆಯು (ಪಂಚೀಕೃತಭೂತಶರೀರನಾಗಿ) ಹುಟ್ಟಿದನು.

ಅಸ್ಮಾತ್ ಪೂರ್ವಂ ಭವೇತ್ಸೂತ್ರಂ ತಸ್ಮಿನ್ ಸತಿ ವಿರಾಡ್ಯತಃ |
ಶ್ರುತ್ಯಂತರಾನುಬೋಧಾಚ್ಚ ವಿಜ್ಞಾನಮಿತಿ ಲಿಂಗತಃ ||

೧೫೯. ಈ (ವಿರಾಜನಿಗಿಂತ) ಮುಂಚೆಯೇ ಸೂತ್ರಾತ್ಮನಾದ ವಾಯುವು ಹುಟ್ಟಿರುವನು. ಏಕೆಂದರೆ ಅವನಿಂದಲೇ ವಿರಾಜನು ಹೊರಬಂದಿರುವನು. ಹೀಗೆಂದು (ಬೃಹದಾರಣ್ಯಕ) ಶ್ರುತಿಯಲ್ಲಿಯೂ 'ವಿಜ್ಞಾನಂ ಯಜ್ಞಂ ತನುತೇ' ಎಂಬ ತೈತ್ತಿರೀಯ ಶ್ರುತಿಯಲ್ಲಿಯೂ ಲಿಂಗಗಳಿವೆ.

ವ್ಯುತ್ಕ್ರಮ್ಯಾನ್ನಮಯಾದಿಭ್ಯೋ ಹ್ಯನ್ನಂ ಪ್ರಾಣಮಿತೀರಣಾತ್ |
ಉಪಾಸನೋಪದೇಶಾಚ್ಚ ಸೂತ್ರಮತ್ರ ವಿವಕ್ಷಿತಮ್ ||

೧೬೦. ಅನ್ನವು ಪ್ರಾಣದಲ್ಲಿ ಅಡಕವಾಗಿದೆ- ಎಂದು ಹೇಳುವ ಮೂಲಕ ಅನ್ನಮಯಾದಿಗಳಿಂದ ಆತ್ಮನನ್ನು ಮೇಲೆತ್ತಿ ವಿಜ್ಞಾನದಲ್ಲಿ ನೆಲೆಗೊಳಿಸಿ ದೇವತೆಗಳೆಲ್ಲ ವಿಜ್ಞಾನಾತ್ಮನನ್ನು ಜ್ಯೇಷ್ಠನೆಂದು ಉಪಾಸನೆಮಾಡುತ್ತಾರೆ- ಎಂದು ಹೇಳಿರುವದರಿಂದ ಇಲ್ಲಿ ಸೂತ್ರಾತ್ಮನು ವಿವಕ್ಷಿತನಾಗಿರುತ್ತಾನೆ.

ಕಾರ್ಯೋತ್ಪಾದಾತ್ ಪುರಾಸೂತ್ರಂ ಮೃದ್ವತ್ಸದವಿಭಾಗವತ್ |
ಕಾರಣಂ ಕಾರ್ಯಮುತ್ಪಾದ್ಯ ಕಾರ್ಯತಾಮಿವ ಗಚ್ಛತಿ ||

೧೬೧. (ವಿರಾಟ್-ತತ್ತ್ವವೆಂಬ) ಕಾರ್ಯವು ಹುಟ್ಟುವ ಮುಂಚೆ ಸೂತ್ರಾತ್ಮನು ಪರಮಾತ್ಮನೊಡನೆ ಒಂದಾಗಿರುತ್ತಾನೆ. ಅಲ್ಲಿ ವಿಭಾಗವಿರುವದಿಲ್ಲ. ಮಡಕೆಗಳು ಮಣ್ಣೇ ಆಗಿದ್ದಾಗ ಹೇಗೋ ಹಾಗೆ- ಎಂದರ್ಥ. ಮುಂದೆ ಕಾರ್ಯೋತ್ಪತ್ತಿಯಾಗಲಾಗಿ ಕಾರಣವು ಕಾರ್ಯಾಕಾರವಾಗಿ ತೋರಿದಾಗ ಅದರ ಅಪೇಕ್ಷೆಯಿಂದ ಕಾರಣವೆನಿಸುವದು.

ಕಾರ್ಯೇಽಸತಿ ತು ತತ್ಸೂತ್ರಂ ಪ್ರಜ್ಞಾನಘನರೂಪಭೃತ್ |
ಅವಚ್ಛಿನ್ನಂ ಸ್ವಕಾರ್ಯೇಣ ಸಮಷ್ಟಿವ್ಯಷ್ಟಿತಾಂ ವ್ರಜೇತ್ ||

೧೬೨. ಕಾರ್ಯವಿಲ್ಲವಾದಾಗ ಆ ಸೂತ್ರವು ತಾನು ಪ್ರಜ್ಞಾನಘನರೂಪವಾಗಿಯೇ ಇದ್ದುಕೊಂಡಿರುವದು. ಅನಂತರ ತನ್ನ ಕಾರ್ಯದೊಡನೆ ಒಂದಾಗಿ ಸಮಷ್ಟಿಯಾಗಿಯೂ ವ್ಯಷ್ಟಿಯಾಗಿಯೂ ತೋರಿಕೊಳ್ಳುವದು.

ವೃಷ್ಟ್ಯಾದಿಸವ್ಯಪೇಕ್ಷಾಯಾ ಭುವಃ ಪಂಚಗುಣಾತ್ಮಿಕಾ |
ವ್ರೀಹಿಪ್ರಭೃತಯಃ ಸರ್ವಾ ಭವನ್ತ್ಯೋಷಧಯಃ ಕ್ರಮಾತ್ ||

೧೬೩. ಮಳೆಯೇ ಮುಂತಾದದ್ದನ್ನವಲಂಬಿಸಿದ ಭೂಮಿಯಲ್ಲಿ ಐದು ಗುಣಗಳಿಂದ ಕೂಡಿದ ಬತ್ತವೇ ಮುಂತಾದ ಎಲ್ಲಾ ವಿಧವಾದ ಪೈರುಗಳೂ ಕ್ರಮವಾಗಿ ಹುಟ್ಟುವವು.

ಅದನಾರ್ಹಂ ತಥಾನ್ನಂ ಚ ತಾಭ್ಯಃ ಸಮಭಿಜಾಯತೇ |
ಜಗ್ಧಾದನ್ನಾದ್ರಸೋತ್ಪತ್ತಿಃ ಶೋಣಿತಂ ಜಾಯತೇ ರಸಾತ್ ||
ಜಾಯತೇ ರುಧಿರಾನ್ಮಾಂಸಂ ಮೇದಸಶ್ಚ ತತೋ ಭವಃ |
ಮೇದಸೋಽಸ್ಥೀನಿ ಜಾಯಂತೇ ಮಜ್ಜಾಪ್ಯಸ್ಥಿಸಮುದ್ಭವಾ ||
ತತಃ ಶುಕ್ರಸ್ಯ ನಿಷ್ಪತ್ತಿರ್ಬೀಜಂ ಮಾತ್ರಸೃಜಾ ಸಹ ||

೧೬೪-೧೬೬. ತಿನ್ನಲು ಯೋಗ್ಯವಾದದ್ದನ್ನು ಅನ್ನವೆನ್ನುವರು. ಅದು ಓಷಧಿಗಳಿಂದ (ಪೈರುಗಳಿಂದ) ಹುಟ್ಟುವದು. ಮನುಷ್ಯನು ಅನ್ನವನ್ನು ತಿಂದಾಗ ಅವನ ಶರೀರದಲ್ಲಿ ರಸವುಂಟಾಗಿ ರಸದಿಂದ ರಕ್ತವು ಹುಟ್ಟುವದು. ರಕ್ತದಿಂದ ಮಾಂಸವೂ ಅದರಿಂದ ಮೇದಸ್ಸೂ ಉಂಟಾಗುವದು. ಮೇದಸ್ಸಿನಿಂದ ಮೂಳೆಗಳೂ ಅದರಿಂದ ಎಲುಬೂ ಹುಟ್ಟುವದು. ಅನಂತರ ಶುಕ್ರ (ವೀರ್ಯ)ವು ಹುಟ್ಟಿ ತಾಯಿಯ ರಕ್ತದೊಡಗೂಡಿ ಬೀಜವೆನಿಸುವದು.

ನಿಜಾವಿದ್ಯಾಮಹಾಜಾಲಸಂವೀತಧಿಷಣಃ ಪುಮಾನ್ |
ಮೋಹೋತ್ಥಾನಲಕಾಮಾಖ್ಯಬಡಿಶಾಪಹೃತಾಶಯಃ ||
ತಮಸಾ ಕಾಮಶಾರ್ಙ್ಗೇಣ ಸಂಕಲ್ಪಾಕರ್ಷಣೇನ ಸಃ |
ರಾಗಾಖ್ಯವಿಷಲೇಪೇನ ತಾಡಿತೋ ವಿಷಯೇಷುಣಾ ||
ಗ್ರಹಾವಿಷ್ಟ ಇವಾನೀಶಶ್ಚೋದಿತೋ ಜನ್ಯಕರ್ಮಣಾ |
ಯೋಷಿದಗ್ನಿಂ ಪತತ್ಯಾಶು ಜ್ಯೋತಿರ್ಲೋಭಾತ್ ಪತಂಗವತ್ ||

೧೬೭-೧೬೯. ತನ್ನ ಅವಿದ್ಯೆಯೆಂಬ ದೊಡ್ಡ ಬಲೆಯಲ್ಲಿ ಬಿದ್ದ ಬುದ್ಧಿಯುಳ್ಳ ಮನುಷ್ಯನು ಮೋಹದಿಂದೆದ್ದ ಬೆಂಕಿಯರೂಪವಾದ ಕಾಮವೆಂಬ ಗಾಳದಿಂದ ಅಪಹರಿಸಲ್ಪಟ್ಟ ವಾಸನೆಯುಳ್ಳವನಾಗಿ ತಮೋಗುಣದಿಂದ ಕೂಡಿ ಕಾಮವೆಂಬ ಬಿಲ್ಲಿನಲ್ಲಿ ಹೂಡಿದ್ದು ಸಂಕಲ್ಪವೆಂಬ ಎಳೆತವುಳ್ಳ ಮತ್ತು ರಾಗವೆಂಬ ವಿಷದಿಂದ ಬಳಿಯಲ್ಪಟ್ಟ ವಿಷಯವೆಂಬ ಬಾಣದಿಂದ ಹೊಡೆಯಲ್ಪಟ್ಟವನಾಗಿ

ಭೂತಬಡಿದವನಂತೆ ಪರಾಧೀನನಾಗಿ ತನ್ನ (ಪ್ರಾಚೀನ)ಕರ್ಮದಿಂದ ಸ್ತ್ರೀ-ಎಂಬ ಬೆಂಕಿಯಲ್ಲಿ- ಹೇಗೆ ಪತಂಗದ ಹುಳುವು ಬೆಳಕಿನ ಆಸೆಯಿಂದ (ಬೆಂಕಿಗೆ ಬೀಳು ವದೋ ಹಾಗೆ)- ಬೀಳುವನು.

ಆಕೃಷ್ಯ ದೇಹಾತ್ ತಚ್ಛುಕ್ರಂ ಯಥಾಕರ್ಮ ಯಥಾಶ್ರುತಮ್ |
ರೇತೋವಹಪ್ರನಾಡ್ಯಾಥ ಯೋನೌ ಪುಂಸಾ ನಿಷಿಚ್ಯತೇ ||

೧೬೯. ಕರ್ಮ ಹಾಗೂ ವಿದ್ಯೆಗನುಗುಣವಾಗಿ ದೇಹದಿಂದ ಆ ವೀರ್ಯ ವನ್ನು ಸೆಳೆದುಕೊಂಡು ರೇತಸ್ಸು ಹರಿಯುವ ನಾಳದ ಮೂಲಕ ಸ್ತ್ರೀಯೋನಿ ಯಲ್ಲಿ ಅದು ಪುರುಷನಿಂದ ಸುರಿಯಲ್ಪಡುತ್ತದೆ.

ತಸ್ಯ ಯೋನೌ ನಿಷಿಕ್ತಸ್ಯ ನಿಮಿತ್ತವಶವರ್ತಿನಃ |
ಜಾಯತೇ ಕಲಲಾವಸ್ಥಾ ತತೋ ಬುದ್ಬುದರೂಪಿಣೀ ||

೧೭೦. ಹಿಂದೆ ಸೂಚಿಸಿದ ಜ್ಞಾನಕರ್ಮಾನುಸಾರವಾಗಿ ಯೋನಿಯಲ್ಲಿ ಸುರಿಯಲ್ಪಟ್ಟ ರೇತಸ್ಸು ಕಲಲಾವಸ್ಥೆಯನ್ನು ಹೊಂದಿ ಅನಂತರ ಬುದ್ಬುದರೂಪ ವಾಗುವದು.

ಬುದ್ಬುದಾಜ್ಜಾಯತೇ ಪೇಶೀ ಪೇಶೀತೋ ಜಾಯತೇ ಘನಮ್ |
ಘನಾದಂಗಾಭಿನಿಷ್ಪತ್ತಿಃ ಕೇಶರೋಮಾಣಿ ಚಾಂಗತಃ ||

೧೭೧. ಬುದ್ಬುದದಿಂದ ಪೇಶಿಯೂ ಪೇಶಿಯಿಂದ ಘನವೂ ಘನದಿಂದ ಅವ ಯವಗಳ ಉತ್ಪತ್ತಿಯೂ ಅದರಿಂದ ಕೂದಲು-ರೋಮಗಳೂ ಹುಟ್ಟುವವು.

ಪೂರ್ವಜನ್ಮನಿ ಯಾನ್ಯಾಸನ್ ಭೂತಾನಿ ಕರಣಾನಿ ಚ |
ತಾನ್ಯೇವೇಹಾಪಿ ದೇಹಾಯ ತದ್ಯಥೇತಿ ಶ್ರುತೇರ್ಬಲಾತ್ ||

೧೭೨. ಹಿಂದಿನ ಜನ್ಮದಲ್ಲಿ ಯಾವ ಸೂಕ್ಷ್ಮಭೂತಗಳೂ ಕರಣಗಳೂ ಇದ್ದುಕೊಂಡಿದ್ದವೋ ಅವುಗಳೇ ಇಲ್ಲಿಯೂ ದೇಹಾರಂಭಕವಾಗುವವು. 'ತದ್ಯಥಾ ಪೇಶಸ್ಕಾರೀ' (ಬೃ. ೪-೪-೪) ಎಂಬ ಶ್ರುತಿಯು ಬಲದಿಂದ ಇದು ಸಿದ್ಧವಾಗಲಿದೆ.

ಸರ್ವಾತ್ಮನೋಽಪ್ಯವಚ್ಛೇದಃ ವಿರಾಜಃ ಸೂತ್ರಜನ್ಮನಃ |
ಇಯಾನಸ್ಮೀತಿ ಸಂಮೋಹಾತ್ ಕಾಮಕರ್ಮಸಮನ್ವಯಾತ್ ||

೧೭೩. ಸೂತ್ರಾತ್ಮನಿಂದ ಹುಟ್ಟಿದ ಸರ್ವಾತ್ಮನಾದ ವಿರಾಡಾತ್ಮನೊಡನೆ ಒಂದಾಗಿರುವನಾದರೂ ಈ ಜೀವನು ಕಾಮಕರ್ಮಗಳ ವಶದಿಂದ ಮೋಹದ ನಿಮಿತ್ತ 'ಈ ದೇಹಪರಿಚ್ಛಿನ್ನನು ನಾನು' ಎಂದು ತಿಳಿಯುವನು.

ಲಿಂಗಾತ್ಮಕತಯಾ ತದ್ವತ್ ಸಮಷ್ಟಿವ್ಯಷ್ಟಿರೂಪಿಣಃ |
ತದವಚ್ಛೇದಹೇತೋಃ ಸ್ಯಾದವ್ಯಕ್ತಸ್ಯ ಸುಷುಪ್ತತಾ ||

೧೭೪. ಇದೇ ರೀತಿಯಾಗಿ ಸಪ್ತದಶಲಿಂಗಾತ್ಮನಾದ ಸೂಕ್ಷ್ಮಶರೀರಿಯು ಸೂತ್ರಾತ್ಮನೊಡನೆ ಒಂದಾಗಿದ್ದರೂ ಮತ್ತು ಅವ್ಯಕ್ತಾತ್ಮ(ಕಾರಣಾತ್ಮ)ನೊಡನೆ ಸಮಷ್ಟಿಯಾದ ರೂಪದಲ್ಲಿದ್ದರೂ (ಅಜ್ಞಾನನಿಮಿತ್ತವಾಗಿ) ವ್ಯಷ್ಟಿರೂಪದಿಂದ ಸ್ವಪ್ನಾತ್ಮನಾಗಿಯೂ ಸುಷುಪ್ತಾತ್ಮನಾಗಿಯೂ ಕಂಡುಬರುವನು.

ವಿವರಣೆ : ಅನ್ಯಥಾಗ್ರಹಣ, ಅಗ್ರಹಣಗಳೆಂಬ ಅವಿದ್ಯಾನಿಮಿತ್ತವಾಗಿ ವೈಶ್ವಾನರಾತ್ಮನಾಗಿ ಸಮಷ್ಟಿಯಲ್ಲಿಯೂ ಜಾಗ್ರದಾತ್ಮನಾಗಿ ವ್ಯಷ್ಟಿಯಲ್ಲಿಯೂ ಜೀವನು ಕಂಡುಬರುತ್ತಾನೆ. ಹಾಗೆಯೇ ಹಿರಣ್ಯಗರ್ಭಾತ್ಮನಾಗಿ ಸಮಷ್ಟಿಯಲ್ಲಿಯೂ ಸ್ವಪ್ನಾತ್ಮನಾಗಿ ವ್ಯಷ್ಟಿಯಲ್ಲಿಯೂ ಕಾಣಿಸಿಕೊಳ್ಳುವನು. ಇನ್ನು ಪ್ರಾಜ್ಞ ಅಥವಾ ಅವ್ಯಾಕೃತಾತ್ಮನಾಗಿ ಸಮಷ್ಟಿಯಲ್ಲಿಯೂ ಸುಷುಪ್ತಾತ್ಮನಾಗಿ ವ್ಯಷ್ಟಿಯಲ್ಲಿಯೂ ತೋರಿಕೊಳ್ಳುವನು.

ಪರಾತ್ಮನೋಽಪ್ಯನಂತಸ್ಯ ಕ್ಷೇತ್ರಜ್ಞತ್ವಮವಿದ್ಯಯಾ |
ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧೀತ್ಯೇವಂ ಸತ್ಯುಪಪದ್ಯತೇ ||

೧೭೫. ಹಾಗೆಯೇ ಅನಂತನೂ ಪರಮನೂ ಆದ ಆತ್ಮನು ಜೀವನಾಗಿ ತೋರಿಕೊಳ್ಳುತ್ತಿರುವದೂ ಅವಿದ್ಯೆಯಿಂದಲೇ. ಆದ್ದರಿಂದಲೇ ಭಗವಂತನು 'ಕ್ಷೇತ್ರಜ್ಞನನ್ನೂ ನಾನೆಂದು ತಿಳಿ' ಎಂದು ಹೇಳಿರುವದು ಹೊಂದುಗೆಯಾಗುತ್ತದೆ.

ನ ಜಾನಾಮೀತ್ಯವಿದ್ಯೈಕಾಽನಿತ್ಯಾ ತತ್ಕಾರಣಂ ಮತಾ |
ಸ್ವಪ್ರಸಿದ್ಧ್ಯೈವ ಸಾ ಸಿದ್ಧ್ಯೇನ್ನಿಶೌಲೂಕೇಽವ ವಾಸರೇ ||

೧೭೬ 'ನಾನು ಅರಿಯೆನು' ಎಂಬ ರೂಪದ ಅವಿದ್ಯೆಯೊಂದೇ ಜೀವ ಭೇದಕ್ಕೆ ಕಾರಣವು. ಆದರೆ ಅದು ನಿತ್ಯವಲ್ಲ. ಪ್ರಮಾಣಸಿದ್ಧವೂ ಅಲ್ಲ. ಗೂಬೆಯ ದೃಷ್ಟಿಯಲ್ಲಿ ಕತ್ತಲೆಯೆಂಬುದು ಹೇಗೋ ಹಾಗೆ ತನ್ನ ಪ್ರಸಿದ್ಧಿಯಿಂದಲೇ ಅದು ಸಿದ್ಧವಾಗಿದೆ.

ವಿವರಣೆ : ಅವಿದ್ಯೆಯು ಯಾವ ಪ್ರಮಾಣದಿಂದಲೂ ಸಿದ್ಧವಲ್ಲ. ಏಕೆಂದರೆ ಅವಿದ್ಯೆಯು ತೋರಿಕೊಂಡ ಅನಂತರವೇ ಪ್ರಮಾಣವ್ಯಾಪಾರಗಳು ಸಿದ್ಧವಾಗುವವು. ಆದ್ದರಿಂದ ಅದು ನೈಸರ್ಗಿಕ–ಎಂದು ತಿಳಿಯಬೇಕು. ಉದಾಹರಣೆಗೆ ಗೂಬೆ ಎಂಬ ಹಕ್ಕಿಗೆ ಹಗಲಿನಲ್ಲಿ ಕಣ್ಣು ಕಾಣುವದಿಲ್ಲವಾಗಿ ಅದು ಹಗಲನ್ನೇ ರಾತ್ರಿಯೆಂದು ತಿಳಿದಿರುತ್ತದೆ. ಈ ಗೂಬೆಯು ರಾತ್ರಿಗೆ ಪ್ರಮಾಣವು ಗೂಬೆಯ ಅನುಭವವೇ. ಏಕೆಂದರೆ ಅದು ರಾತ್ರಿಯಲ್ಲವೇ ಅಲ್ಲ. ಹಗಲನ್ನೇ ರಾತ್ರಿ– ಎಂದು ಭಾವಿಸಿರುವದು ಗೂಬೆಮಾತ್ರವೇ. ಇಂಥ ರಾತ್ರಿಯು ಹೇಗೆ ಗೂಬೆಗೆ ನೈಸರ್ಗಿಕವೋ ಹಾಗೆ ಅವಿದ್ಯಾವಂತರಿಗೆ ತೋರುವ ಅವಿದ್ಯೆಯೂ ನೈಸರ್ಗಿಕವೇ. ಆದ್ದರಿಂದಲೇ ಬ್ರಹ್ಮವಿದ್ಯೆಯಿಂದ ಅದು ಇಲ್ಲವಾಗುವದು.

ಪ್ರಮಾಣೋತ್ಪನ್ನಯಾ ದೃಷ್ಟ್ಯಾ ಯೋಽವಿದ್ಯಾಂ ದ್ರಷ್ಟುಮಿಚ್ಛತಿ |
ದೀಪೇನಾಸೌ ಧ್ರುವಂ ಪಶ್ಯೇತ್ ಗುಹಾಕುಕ್ಷಿಗತಂ ತಮಃ ||

೧೭೭. ಪ್ರಮಾಣಸಿದ್ಧವಾದ ದೃಷ್ಟಿಯಿಂದ ಯಾವನು ಅವಿದ್ಯೆಯನ್ನು ನೋಡಲಿಚ್ಛಿಸುವನೋ ಅವನು ಗುಹೆಯ ಒಳಗೆ ಅಡಗಿರುವ ಕತ್ತಲೆಯನ್ನು ದೀಪದ ಬೆಳಕಿನಿಂದ ಕಂಡವನಾಗುವದೇ ನಿಜ. (ದೀಪವುಳ್ಳವನಿಗೆ ಕತ್ತಲೆಯು ಕಾಣುವದಾದರೂ ಹೇಗೆ ?)

ಅನಾತ್ಮೇತೀಹ ಯದ್ಭಾತಿ ತದವಿದ್ಯಾವಿಜೃಂಭಿತಮ್ |
ತಸ್ಮಾದವಿದ್ಯಾ ಸಾಪ್ಯುಕ್ತಾ ವಿದ್ಯಾ ತ್ವಾತ್ಮೈಕರೂಪಿಣೀ ||

೧೭೮. ಅನಾತ್ಮನೆಂಬುದಾಗಿ ಏನೇನು ತೋರಿಬರುತ್ತಿರುವದೋ ಅದೆಲ್ಲವೂ ಅವಿದ್ಯೆಯ ವಿಸ್ತಾರವೇ ಆಗಿರುವದು. ಆದ್ದರಿಂದ ಆ ಅನಾತ್ಮವಿಸ್ತಾರವೂ ಅವಿದ್ಯೆಯೇ ಸರಿ. ವಿದ್ಯೆಯಾದರೋ ಆತ್ಮನೊಬ್ಬನೇ ಎಂಬ ರೂಪದ್ದಾಗಿರುವದು.

ಆತ್ಮಾಗ್ರಹಾತಿರೇಕೇಣ ತಸ್ಯಾ ರೂಪಂ ನ ವಿದ್ಯತೇ |
ಅಮಿತ್ರವದವಿದ್ಯೇತಿ ಸಕ್ತ್ಯೇವಂ ಘಟತೇ ಸದಾ ||

೧೭೯. ಆತ್ಮನನ್ನು ತಿಳಿಸದೆ ಇರುವದೆಂಬುದಕ್ಕಿಂತ ಬೇರೆಯಾಗಿ ಅದಕ್ಕೆ ಸ್ವರೂಪವೇನೂ ಇರುವದಿಲ್ಲ. (ಆತ್ಮನು ಗೊತ್ತಿಲ್ಲ ಎಂಬಿದೇ ಅವಿದ್ಯೆಯು ಎಂದರ್ಥ.) ಅವಿದ್ಯಾ ಎಂಬಲ್ಲಿ 'ಅ' ಎಂಬುದು ವಿದ್ಯೆಗೆ ವಿರುದ್ಧವಾದದ್ದು ಎಂಬರ್ಥದಲ್ಲಿ ಬಂದಿರುತ್ತದೆ. ಅಮಿತ್ರ–ಎಂದರೆ ಮಿತ್ರನಲ್ಲದವನು–ಎಂಬುದು ಹೇಗೋ ಹಾಗೆ–ಎಂದು ತಿಳಿಯಬೇಕು. ಹೀಗಾದರೆ ಅದು ಹೊಂದುತ್ತದೆ.

ತಸ್ಮಾತ್ ಸದಸದಿತ್ಯಾದಿರ್ವಿಕಲ್ಪೋ ಮೂಢಚೇತಸಾಮ್ |
ನಿರೂಪ್ಯಮಾಣೋ ನಿರ್ವಾತಿ ನ ವೇದ್ಮೀತ್ಯಗ್ರಹಾತ್ಮನಿ ||

೧೮೦. ಆದ್ದರಿಂದ (ಅನಾತ್ಮದಲ್ಲಿ) ಸತ್, ಅಸತ್– ಮುಂತಾಗಿ ವಿಕಲ್ಪಿಸುವದು– ಮೂಢಬುದ್ಧಿಯವರ ವ್ಯವಹಾರವೇ ಆಗಿರುವದು. ಅವಿದ್ಯೆಯನ್ನು ನಿರೂಪಣಮಾಡಹೊರಟರೆ ಅದು 'ನಾನು ಏನನ್ನೂ ಅರಿಯೆನು' ಎಂಬೀ ರೀತಿಯ ಅವಿದ್ಯೆಯಲ್ಲೇ ಪರ್ಯವಸಾನವಾಗುವದು.

ತಯಾ ಸಂವೀತಚಿತ್ತೋಽಯಂ ತ್ಯಕ್ತ್ವಾ ದೇಹಂ ಪುರಾತನಮ್ |
ಲಿಂಗಾತ್ಮಾ ಪ್ರಾವಿಶೇದ್ಯೋನಿಂ ಕರ್ಮಾದಿಮರುತೇರಿತಃ ||

೧೮೧. ಈ ಆತ್ಮಾವಿದ್ಯೆಯಿಂದ ಆವರಿಸಲ್ಪಟ್ಟ ಮನಸ್ಸುಳ್ಳ ಈ ಜೀವನು ಹಿಂದಿನ ದೇಹವನ್ನು ಕರ್ಮವೇ ಮುಂತಾದದ್ದರಿಂದ ಪ್ರೇರಿತನಾಗಿ ಯೋನಿಯನ್ನು ಪ್ರವೇಶಿಸುವನು.

ಅನ್ನಮಂಭಸ್ತಥಾ ತೇಜೋ ಭುಕ್ತಂ ಪ್ರತ್ಯೇಕಶಸ್ತ್ರಿಧಾ |
ತ್ರಿವೃತ್ಕೃತಂ ತಥೈವೈಕಂ ಪರಿಣಾಮಂ ಪ್ರಪದ್ಯತೇ ||
ಪುರೀಷಮಾಂಸಬುದ್ಧ್ಯಂಶೈರ್ಮೂತ್ರಾಸೃಕ್ಪ್ರಾಣರಶ್ಮಿಭಿಃ |
ತಥಾಸ್ಥಿಮಜ್ಜಾವಾಗ್ಭಾಗೈರನ್ನಾಪ್ತೇಜಾಂಸಿ ಕಾಲತಃ ||

೧೮೨-೧೮೩. ಊಟಮಾಡಿದ ತ್ರಿವೃತ್ಕೃತವಾದ ಅನ್ನ, ನೀರು, ತೇಜೋದ್ರವ್ಯಗಳು ಪ್ರತಿಯೊಂದೂ ಮೂರು ವಿಧವಾಗಿ ಪರಿಣಾಮವನ್ನು ಹೊಂದುತ್ತವೆ. ಅನ್ನದ ಸ್ಥೂಲಭಾಗವು ಪುರೀಷವಾಗುತ್ತದೆ. ಮಧ್ಯಮಭಾಗವು ಮಾಂಸವಾಗುತ್ತದೆ. ಸೂಕ್ಷ್ಮಭಾಗವು ಮನಸ್ಸಾಗುತ್ತದೆ. ಹಾಗೆಯೇ ನೀರಿನ ಸ್ಥೂಲಭಾಗವು ಮೂತ್ರವಾಗುವದು. ಮಧ್ಯಮಭಾಗವು ರಕ್ತವಾಗುವದು. ಸೂಕ್ಷ್ಮಭಾಗವು ಪ್ರಾಣವೆನಿಸುವದು. ಹಾಗೆಯೇ ತೇಜೋದ್ರವ್ಯದ ಸ್ಥೂಲಭಾಗವು ಅಸ್ಥಿಯಾಗುವದು. ಮಧ್ಯಮಭಾಗವು ಮಜ್ಜೆಯಾಗುವದು. ಸೂಕ್ಷ್ಮಭಾಗವು ವಾಕ್ ಆಗುವದು. ಹೀಗೆ ಕಾಲಾನುಗುಣವಾಗಿ ಅನ್ನ, ನೀರು, ತೇಜಸ್ಸುಗಳು ಪರಿಣಾಮವಾಗುವವು.

ಮನೋಬುದ್ಧೀಂದ್ರಿಯಾಣಾಂ ಸ್ಯಾತ್ ಕರ್ಮಶಕ್ತೇಶ್ಚ ಭಾರತೀ |
ಪ್ರಾಣಶ್ಚ ಪ್ರಾಣಭೇದಾನಾಮುಪಲಕ್ಷಣಸಿದ್ಧಯೇ ||

೧೮೪. ಅನ್ನದ ಸೂಕ್ಷ್ಮಭಾಗವು ಮನಸ್ಸಾಗುವದೆಂದು ಹೇಳಿದ್ದು, ಬುದ್ಧಿ ಮತ್ತು ಇಂದ್ರಿಯಗಳಿಗೂ- ತೇಜಸ್ಸಿನ ಸೂಕ್ಷ್ಮಭಾಗವು ವಾಕ್ ಆಗುವದೆಂದು ಹೇಳಿದ್ದು, ಉಳಿದ ಕರ್ಮೇಂದ್ರಿಯಗಳಿಗೂ- ನೀರಿನ ಸೂಕ್ಷ್ಮಭಾಗವು ಪ್ರಾಣವಾಗುವದೆಂದು ಹೇಳಿದ್ದು, ಅಪಾನಾದಿಪ್ರಾಣಗಳಿಗೂ- ಉಪಲಕ್ಷಣವು.

ಕರ್ಮೋತ್ಥಭಾವನಾಭಿಸ್ತು ಚೋದ್ಯತೇ ಯದ್ಯದಿಂದ್ರಿಯಮ್ |
ಜಾಯತೇ ತದಹಂಕಾರಾತ್ ಯಥಾಕರ್ಮ ಯಥಾಶ್ರುತಮ್ ||

೧೮೫. ಜೀವನ ಕರ್ಮ, ವಿದ್ಯೆ-ಗಳಿಗೆ ಅನುಗುಣವಾಗಿ ಮೇಲೆದ್ದ (ಸಂಚಿತ) ಕರ್ಮಗಳ ಭಾವನಾಸಮೂಹದಿಂದ ಯಾವಯಾವ ಇಂದ್ರಿಯವು ತೋರಿಕೊಳ್ಳುವದೋ ಅದು ಅಹಂಕಾರತತ್ತ್ವದಿಂದಲೇ ಹುಟ್ಟುತ್ತದೆ.

ಶ್ರೋತಾಸ್ಮೀತ್ಯಭಿಮಾನಾದ್ಧಿ ಜಾಯತೇ ಶ್ರವಣೇಂದ್ರಿಯಮ್ |
ಪರಿಶಿಷ್ಟೇಷು ಚಾಪ್ಯೇವಮಿಂದ್ರಿಯೇಷೂಪಧಾರಯೇತ್ ||

೧೮೬. 'ನಾನು ಕೇಳುವವನು' ಎಂಬ ಅಭಿಮಾನದಿಂದ ಶ್ರವಣೇಂದ್ರಿಯವು ಹುಟ್ಟುತ್ತದೆ. ಹೀಗೆಯೇ ಉಳಿದ ಇಂದ್ರಿಯಗಳ ಉತ್ಪತ್ತಿವಿಷಯದಲ್ಲಿಯೂ ತಿಳಿಯಬೇಕು.

ದೇಹೋತ್ಪತ್ತಿಮನೂತ್ಪನ್ನೋ ವ್ಯೋಮವದ್ ಘಟಜನ್ಮನಾ ।
ಅಸ್ತ್ಯಾದಯೋಽಪ್ಯತೋ ನ ಸ್ಯುಃ ಸತಿ ಜನ್ಮನಿ ತೇ ಯತಃ ॥

೧೮೭. (ಜೀವಾತ್ಮನು) ದೇಹವು ಹುಟ್ಟಿದ್ದನ್ನು ಅನುಸರಿಸಿ ಹುಟ್ಟುತ್ತಾನೆ. ಹೇಗೆ ಘಟವು ಹುಟ್ಟಿದ್ದನ್ನು ಅನುಸರಿಸಿ ಆಕಾಶವು ಹುಟ್ಟುವದೋ ಹಾಗೆ– ಎಂದರ್ಥ. ಹೀಗೆ ಜನ್ಮವೆಂಬುದೇ ಆತ್ಮನಿಗೆ ಹೊಂದದೆ ಇರುವಲ್ಲಿ ಮುಂದಿನ ಭಾವವಿಕಾರಗಳಾದ ಇರುತ್ತಾನೆ– ಮುಂತಾದವು ಕೂಡ ಅವನಿಗೆ ನಿಜವಾಗಿಲ್ಲ. ಏಕೆಂದರೆ ಅವು ಜನ್ಮವುಳ್ಳ ವಸ್ತುವಿಗೆ ಮಾತ್ರವೇ ಇದ್ದುಕೊಂಡಿರುತ್ತವೆ

ಯಾವದ್ಯಾವದಯಂ ದೇಹೋ ವರ್ಧತೇ ಗರ್ಭಶಾಯಿನಃ ।
ತಾವತ್ತಾವದಭಿವ್ಯಕ್ತಿರ್ಲಿಂಗಸ್ಯಾಪ್ಯುಪಜಾಯತೇ ॥

೧೮೮. ಗರ್ಭವಾಸದಲ್ಲಿರುವ ಜೀವನಿಗೆ ದೇಹವು ಬೆಳೆದಂತೆಲ್ಲ ಅವನ ಲಿಂಗವೂ (ಸ್ತ್ರೀ-ಪುರುಷಭೇದವೂ) ಅಭಿವ್ಯಕ್ತವಾಗುತ್ತಾ ಹೋಗುವದು.

ಸಮಗ್ರಕರಣಸ್ಯಾಥ ನವಮೇ ಮಾಸಿ ದೇಹಿನಃ ।
ವ್ಯತೀತಾನೇಕಜನ್ಮೋತ್ಥಾ ವ್ಯಜ್ಯನ್ತೇ ವಾಸನಾಃ ಕ್ರಮಾತ್ ॥

೧೮೯. ದೇಹಿಯಾದ ಅವನಿಗೆ ಒಂಭತ್ತನೆಯ ತಿಂಗಳಿನಲ್ಲಿ ಎಲ್ಲಾ ಕರಣಗಳೂ ಸಂಪೂರ್ಣವಾಗಿ ಮೂಡಿರಲಾಗಿ ಹಿಂದೆ ಕಳೆದುಹೋದ ಅನೇಕ ಜನ್ಮಗಳ ವಾಸನೆಗಳೂ ಕ್ರಮವಾಗಿ ಅಭಿವ್ಯಕ್ತವಾಗುತ್ತವೆ.

ಆವಿರ್ಭೂತಪ್ರಬೋಧೋಽಸೌ ಗರ್ಭದುಃಖಾದಿಸಂಸ್ಮೃತಃ ।
ಹಾ ಕಷ್ಟಮಿತಿ ನಿರ್ವಿಣ್ಣಃ ಸ್ವಾತ್ಮಾನಂ ಶೋಚತೀತ್ಯಥ ॥

೧೯೦. ಆಗ ತಿಳಿವಳಿಕೆಯುಂಟಾಗಲಾಗಿ ಗರ್ಭದುಃಖಾದಿಗಳಿಂದ ಬಳಲಿದವನಾಗಿ ವೈರಾಗ್ಯದಿಂದ 'ಅಯ್ಯೋ, ಎಂಥ ಕಷ್ಟವು ಒದಗಿತು' ಎಂದು ತನ್ನನ್ನು ಕುರಿತು ಶೋಕಪೂರಿತನಾಗುವನು.

ಅನುಭೂತಾಃ ಪುರಾಽಸಹ್ಯಾ ಮಯಾ ಮರ್ಮಚ್ಛಿದೋಽಸಕೃತ್ ।
ಕರಂಭವಾಲುಕಾಸ್ತಪ್ತಾ ಯಾ ದಹನ್ತ್ಯಶುಭಾಶಯಾನ್ ॥

೧೯೧. ಗರ್ಭಪ್ರವೇಶಕ್ಕೆ ಮುಂಚೆ ಹಿಂದಿನ ಜನ್ಮಗಳಲ್ಲಿ ನಾನು ಮರ್ಮವನ್ನು ಭೇದಿಸುವಂಥ ಹಾಗೂ ಅಶುಭಸಂಕಲ್ಪಗಳನ್ನು ಸುಡುವಂಥ ಕೆಸರಿನ ಮರಳುಗಾಡುಗಳಲ್ಲಿ ಸಂತಾಪಪಟ್ಟೆನು.

ಜಾಠರಾನಲಸಂತಪ್ತಾಃ ಪಿತ್ತಾಖ್ಯರಸವಿಪ್ರುಷಃ ।
ಗರ್ಭಾಶಯೇ ನಿಮಗ್ನಂ ತಾ ದಹನ್ತ್ಯತಿಭೃಶಂ ತು ಮಾಮ್ ॥

೧೯೩. ಜಠರಾಗ್ನಿಯಿಂದ ಚೆನ್ನಾಗಿ ಕಾದಿರುವ ಪಿತ್ತವೆಂಬ ರಸದ ಬಿಂದುಗಳು ಗರ್ಭಾಶಯದಲ್ಲಿ ಮಲಗಿರುವ ನನ್ನನ್ನು ಅವು ಅತಿಯಾದ ವೇಗದಿಂದ ಸುಡುತ್ತಿರುವವು.

ಔದರ್ಯಃ ಕೃಮಿವಕ್ತ್ರಾಣಿ ಕೂಟಶಾಲ್ಮಲಿಕಂಟಕೈಃ ।
ತುಲ್ಯಾನಿ ವಿತುದಂತ್ಯಾರ್ತಂ ಪಾರ್ಶ್ವಾಸ್ಥಿಕ್ರಕಚಾರ್ದಿತಮ್ ॥

೧೯೪. ಕೂಟಶಾಲ್ಮಲಿಯೆಂಬ ಮುಳ್ಳುಗಿಡದಂತೆ ಇರುವ, ತಾಯಿಯ ಹೊಟ್ಟೆಯಲ್ಲಿರುವ ಕ್ರಿಮಿಗಳು ಪಕ್ಕೆಲಬುಗಳೆಂಬ ಯಂತ್ರಪೀಡಿತನಾದ ನನ್ನನ್ನು ಬಹಳವಾಗಿ ಕಚ್ಚಿ ತಿನ್ನುತ್ತಿವೆ.

ಗರ್ಭೇ ದುರ್ಗಂಧಭೂಯಿಷ್ಠೇ ಜಾಠರಾಗ್ನಿಪ್ರದೀಪಿತೇ ।
ದುಃಖಂ ಮಯಾಪ್ತಂ ಯತ್ತಸ್ಮಾತ್ಕನೀಯಃ ಕುಂಭಿಪಾಕಜಮ್ ॥

೧೯೫. ದುರ್ಗಂಧಯುಕ್ತವಾದ ಹಾಗೂ ಜಠರಾಗ್ನಿಯ ಜ್ವಾಲೆಯಿಂದ ಬಿಸಿಯಾಗಿರುವ ಗರ್ಭದಲ್ಲಿ ನಾನು ಅನುಭವಿಸಿದ ದುಃಖಕ್ಕೆ ಹೋಲಿಸಿದರೆ ಕುಂಭೀಪಾಕನರಕದಲ್ಲಾದ ದುಃಖವು ಕಡಿಮೆಯದೇ– ಎನ್ನಬಹುದು.

ಪೂಯಾಸೃಕ್‌ಶ್ಲೇಷ್ಮಪಾಯಿತ್ವಂ ವಾನ್ತಾಶಿತ್ವಂ ಚ ಯದ್ಭವೇತ್ ।
ಅಶುಚೌ ಕ್ರಿಮಿಭಾವಶ್ಚ ತತ್ಪ್ರಾಪ್ತಂ ಗರ್ಭಶಾಯಿನಾ ॥

೧೯೬. ಕಫ, ರಕ್ತ, ಸಿಂಬಳಾದಿಗಳ ಪಾನ, ವಾಂತಿಯಾದದ್ದನ್ನು ತಿನ್ನುವದು– ಕೊಳಚೆಯಲ್ಲಿ ಹುಳುವಾಗಿರುವಿಕೆ– ಇವುಗಳೇನಿವೆಯೋ ಅವೆಲ್ಲವೂ ಗರ್ಭವಾಸಿಯಾದ ನನಗೆ ಒದಗಿಬಂದಿತು.

ಗರ್ಭಶಯ್ಯಾಂ ಸಮಾರುಹ್ಯ ದುಃಖಂ ಯಾದೃಙ್ಮಯಾಽಪಿ ತತ್ ।
ನಾತಿಶೇತೇ ಮಹದ್ದುಃಖಂ ನಿಃಶೇಷನರಕೇಷು ಯತ್ ॥

೧೯೭. ಗರ್ಭವಾಸದಲ್ಲಿ ನಾನು ಎಂಥ ದುಃಖವನ್ನು ಅನುಭವಿಸಿಬಿಟ್ಟೆನೋ ಆ ಮಹಾದುಃಖವನ್ನು ಎಲ್ಲಾ ನರಕಗಳ ಒಟ್ಟು ದುಃಖವು ಕೂಡ ಮೀರಲಾರದು.

ಅಸ್ಥಿಯಂತ್ರವಿನಿಷ್ಪಿಷ್ಟಃ ಪರೀತಃ ಕುಕ್ಷಿವಹ್ನಿನಾ ।
ಕ್ಲೇದಾಸೃಗ್ದಿಗ್ಧಸರ್ವಾಂಗೋ ಜರಾಯುಪಟಸಂವೃತಃ ॥
ನಿಷ್ಕ್ರಾಮನ್ ಭೃಶದುಃಖಾರ್ತೋ ರುದನ್ನುಚ್ಚೈರಧೋಮುಖಃ ।
ಯಂತ್ರಾದಿವ ವಿನಿರ್ಮುಕ್ತಃ ಪತತ್ಯುತ್ತಾನಶಾಯ್ಯಧಃ ।

೧೯೭–೧೯೮. ಅಸ್ಥಿಯೆಂಬ ಯಂತ್ರದಿಂದ ಹಿಂಡಲ್ಪಟ್ಟವನಾಗಿ ಜಠರಾಗ್ನಿಯಿಂದ ಬಳಲಿ, ರಕ್ತದಿಂದ ಒದ್ದೆಯಾದ ಎಲ್ಲಾ ಶರೀರಾವಯವವುಳ್ಳವನಾಗಿ ಜರಾಯುವೆಂಬ ಚೀಲದಿಂದ ಆವರಿಸಲ್ಪಟ್ಟವನಾಗಿ ಬಹಳ ದುಃಖಪೀಡಿತನಾಗಿ ಅಳುತ್ತಾ ತಲೆಕೆಳಗಾಗಿ ಹೊರಬರುತ್ತಾ ಯಂತ್ರದಿಂದ ಬಿಡಿಸಿಕೊಂಡವನಂತೆ– ನೆಲದಮೇಲೆ ಮೇಲ್ಮುಖನಾಗಿ (ಜೀವನು) ಬೀಳುತ್ತಾನೆ.

ಅಕಿಂಚಿಜ್ಞಸ್ತದಾ ಬಾಲೋ ಮಾಂಸಪೇಶೀಸಮಃ ಸ್ಥಿತಃ |
ಶ್ವಮಾರ್ಜಾರಾದಿದಂಷ್ಟ್ರಿಭ್ಯೋ ರಕ್ಷ್ಯತೇ ದಂಡಪಾಣಿಭಿಃ ||
ಪಿತೃವದ್ ರಾಕ್ಷಸಂ ವೇತ್ತಿ ಮಾತೃವಡ್ಡಾಕಿನೀಮಪಿ |
ಪೂಯಂ ಪಯೋವದಶ್ನಾತಿ ಧಿಕ್ ಪಾಪಿಷ್ಠಂ ಹಿ ಶೈಶವಮ್ ||

೧೯೯–೨೦೦. ಆಗ ಶೈಶವದಲ್ಲಿ ಏನೂ ಅರಿಯದ ಬಾಲಕನಾಗಿ ಮಾಂಸದ ಮುದ್ದೆಯಂತಿರುವವನಾಗಿ ನಾಯಿ, ಬೆಕ್ಕು– ಮುಂತಾದ ಹಲ್ಲುಳ್ಳ ಪ್ರಾಣಿಗಳಿಂದ ಅಪಾಯವಾಗದಂತೆ ಕೈಯಲ್ಲಿ ಕೋಲು ಹಿಡಿದಿರುವ ಜನರಿಂದ ರಕ್ಷಿಸಲ್ಪಡುವನು. ಆ ಸ್ಥಿತಿಯಲ್ಲಿ ವಿವೇಕವಿಲ್ಲದೆ ರಾಕ್ಷಸನನ್ನು ತಂದೆಯೆಂದೂ ಪಿಶಾಚಿಯನ್ನು ತಾಯಿಯೆಂದೂ ಕೊಳಕು (ಮಲ)ವನ್ನು ಹಾಲೆಂದೂ ಭಾವಿಸುವನು. ಇದೊಂದು ದುರಂತವು. ಅಯ್ಯೋ, ಶೈಶವಕ್ಕೆ ಧಿಕ್ಕಾರವಿರಲಿ.

ಧೃತ್ವೋಽಥ ಯೌವನಂ ಪ್ರಾಪ್ಯ ಮನ್ಮಥಜ್ವರವಿಹ್ವಲಃ |
ಗಾಯತ್ಯಕಸ್ಮಾದುಚ್ಚೈಸ್ತು ಸ ತಥಾಽಕಸ್ಮಾಚ್ಚ ವಲ್ಗತಿ ||
ಆರೋಹತಿ ತರುಂ ವೇಗಾತ್ ಶಾಂತಾನುದ್ವೇಜಯತ್ಯಪಿ |
ಕಾಮಕ್ರೋಧಮದಾಂಧಃ ಸನ್ ನ ಕಿಂಚಿದಪಿ ವೀಕ್ಷತೇ ||

೨೦೧–೨೦೨. ಇನ್ನು ಯೌವನವಂತನಾದಾಗ ಕೊಬ್ಬಿದವನಾಗಿ ಕಾಮಜ್ವರಪೀಡಿತನಾಗಿ ಇದ್ದಕ್ಕಿದ್ದಂತೆಯೇ ಗಟ್ಟಿಯಾಗಿ ಹಾಡುವನು. ಅಕಸ್ಮಾತ್ತಾಗಿ ಹಾರುವನು. ಬೇಗನೆ ಮರವನ್ನು ಏರುವನು. ಶಾಂತರಾಗಿರುವವರನ್ನು ಉದ್ವೇಗಗೊಳಿಸುವನು. ಹೀಗೆ ಕಾಮ–ಕ್ರೋಧ–ಮದಗಳಿಂದ ಕೂಡಿ ಕುರುಡನಂತೆ ಏನನ್ನೂ (ಹಿತಾಹಿತವನ್ನು) ಗಮನಿಸದೆ (ವ್ಯವಹಾರಮಾಡುವನು).

ಮಧ್ಯಮಾವಸ್ಥಾನಂ ಜರಾಂ ಪ್ರಾಪ್ಯಾಥ ದುಃಖಿತಃ |
ಶ್ಲೇಷ್ಮಣಾ ಪಿಹಿತೋರಸ್ಕೋ ಭುಕ್ತಮನ್ನಂ ನ ಜೀರ್ಯತಿ ||
ಭಗ್ನದಂತೋ ಭಗ್ನದೃಷ್ಟಿಃ ಕಟುತಿಕ್ತಕಷಾಯಭುಕ್ |
ವಾತಭುಗ್ನಕಟಿಗ್ರೀವಾಕರೋರುಚರಣೋಽಬಲಃ ||
ಗದಾಯುತಸಮಾವಿಷ್ಟಃ ಪರಿಧೂತಃ ಸ್ವಬಾಂಧವೈಃ |
ನಿಃಶೌಚೋ ಮಲದಿಗ್ಧಾಂಗಃ ಆಲಿಂಗಿತವರೋಷಿತಃ ||
ಕಾಸಾಧೋವಾಯುಮುರಜಾ ಪಿತೃಸ್ತ್ರೀರಿಬಾಂಬರಾ |
ಕ್ಷ್ಯಸೋಕ್ಷ್ಯಸ್ವನವಂತಾ ಚ ಜಾತರಧ್ವನಿಗೋಯುತಾ ||
ವಲೀಪಲಿತವಚ್ಛರ್ಮಾವರಣಂ ಮುಕಥಾಂಗೇ |
ಜಂಪತ್ಯುತೇಯುಪಾದೇಯಂ ಪ್ರಸ್ಖಲಂತೀ ಮುಹುರ್ಮುಹುಃ ||
ಅಗ್ನಿಪಾಕಿಕರುಕ್ಕ್ಯಾಗ್ರಾ ಸೂಕ್ಷ್ಮಶ್ಮಶ್ರುಕ್ ಪಟುಸಂವೃತಾ |
ಗುಲ್ಫಜಾನ್ವಸ್ಥಿಸಂಘಾತಾ ಚಲದ್ರೂಪುರಘೋಷಿತಾ ||

ಪ್ರಜ್ಞಾಂ ಮೇಧಾಂ ಧೃತಿಂ ಶೌರ್ಯಂ ಯೂನಾಂ ಜಗ್ಧ್ವಾ ಬಲಂ ತಥಾ |
ಕೃತಾರ್ಥೇವ ಪ್ರಹರ್ಷೇಣ ಜರಾಯೋಷಿತ್ ಪ್ರನೃತ್ಯತಿ ||

೨೦೩-೨೦೯. ಇನ್ನು ಹೆಚ್ಚಿನ ತಿರಸ್ಕಾರಕ್ಕೆ ಕಾರಣವಾದ ಮುಪ್ಪನ್ನು ಹೊಂದಿ ದುಃಖಿತನಾಗಿ ಶ್ಲೇಷ್ಮದಿಂದ ಎದೆಯೊಳಗೆ ಕಟ್ಟಿದವನಾಗಿ ಊಟಮಾಡಿದ ಅನ್ನವು ಜೀರ್ಣವಾಗದೆ ಸಂಕಟಪಡುತ್ತಾನೆ. ಹಲ್ಲುಗಳು ಬಿದ್ದುಹೋದವನಾಗಿ ದೃಷ್ಟಿಯೂ ಮಂಜಾದವನಾಗಿ (ಔಷಧರೂಪವಾಗಿ) ಕಹಿ, ಒಗರು, ಕಷಾಯ- ರಸಗಳನ್ನು ಸೇವಿಸುತ್ತಾ ಸೊಂಟ, ಕತ್ತು, ಕೈಗಳು, ತೊಡೆಗಳಲ್ಲಿ- ವಾಯುವು ಕೆಲಸಮಾಡದೆ ಇರುವ ನಿಮಿತ್ತ ನೋವಿನಿಂದ ಪೀಡಿತನಾಗಿ ನಿರ್ಬಲನಾಗಿ ಸಾವಿರಾರು ರೋಗಗಳಿಂದ ಕೂಡಿದವನಾಗಿ ತನ್ನ ಬಾಂಧವರಿಂದಲೂ ತಿರಸ್ಕರಿಸಲ್ಪಡುವವನಾಗಿ ಶೌಚವಿಲ್ಲದೆ ಕೊಳೆವ್ಯೆಯುಳ್ಳವನಾಗಿ ಭೂಮಿಯನ್ನೇ ಆಶ್ರಯಿಸಿದವನಾಗಿ (ಯಾವಾಗಲೂ ಮಲಗಿಯೇ ಇದ್ದುಕೊಂಡು) ಕಾಲಯಾಪನೆಯನ್ನು ಮಾಡುತ್ತಿರುವನು.

ನಿಟ್ಟುಸಿರು, ಅಧೋವಾಯುಗಳೆಂಬ ಮುರಜವಾದ್ಯಧ್ವನಿಯನ್ನು ಮಾಡುತ್ತಾ ಬಿಳುಪಾದ ಗಡ್ಡಮೀಸೆಗಳೆಂಬ ವಸ್ತ್ರಧಾರಿಣಿಯಾಗಿ ಉಸಿರಾಟದ ಧ್ವನಿಯೆಂಬ ಶ್ರುತಿಯುಳ್ಳವಳಾಗಿ ಹೊಟ್ಟೆಯೊಳಗಿನ ಗುಡುಗುಡುಧ್ವನಿಯನ್ನು ಹಾಡುವವಳಾಗಿ ಸುಕ್ಕಿದ ಹಾಗೂ ಬಿಳುಚಿಕೊಂಡ ಚರ್ಮದ ರವಿಕೆಯನ್ನು ತೊಟ್ಟವಳಾದ ಕೋಲು ಎಂಬ ಮೂರನೆಯ ಕಾಲಿನಿಂದ ನಡೆಯುತ್ತಾ ಆಗಾಗ್ಗೆ ಮುಗ್ಗರಿಸುತ್ತಾ ಶರೀರದಲ್ಲಿ ಎದ್ದು ಕಾಣುವ (ಅಗ್ನಿಪಾಕಿಕವೆಂಬ) ಮಾಂಸಗ್ರಂಥಿಗಳ ಒಡವೆಯುಳ್ಳವಳಾಗಿ ತೆಳುವಾದ ಚರ್ಮದ ಸೀರೆಯುಟ್ಟು ಹಿಮ್ಮಡಿ, ಮೊಳಕಾಲುಗಳ ಎಲುಬುಗಳ ಚಲನವೆಂಬ ಕಾಲುಗೆಜ್ಜೆಯನ್ನು ಸದ್ದುಮಾಡುತ್ತಾ ಯುವಕರ ಪ್ರಜ್ಞೆ, ಮೇಧೆ, ಧೃತಿ, ಶೌರ್ಯ, ಬಲ- ಇವುಗಳನ್ನು ನುಂಗಿಹಾಕಿ ಕೃತಾರ್ಥಳಾದವಳಂತೆ ಸಂತೋಷದಿಂದ ಜರಾ ಎಂಬ ಹೆಂಗಸು ಕುಣಿಯುತ್ತಿರುವಳು.

ತತೋಽಪಿ ಮೃತಿದುಃಖಸ್ಯ ದೃಷ್ಟಾಂತೋ ನೋಪಲಭ್ಯತೇ |
ಯಸ್ಮಾದ್ ಬಿಭ್ಯತಿ ಭೂತಾನಿ ಪ್ರಾಪ್ತಾನ್ಯಪಿ ಪರಾಂ ರುಜಮ್ ||
ಮ್ರಿಯತೇ ಮೃತ್ಯುನಾ ಜಂತುಃ ಪರಿಷ್ವಕ್ತೋಽಪಿ ಬಾಂಧವೈಃ |
ಸಾಗರಾಂತರ್ಜಲಗತೋ ಗರುಡೇನೇವ ಪನ್ನಗಃ ||

೨೧೦-೨೧೧. ಅದಕ್ಕಿಂತಲೂ ಸಾಯುವದೆಂಬ ಸ್ಥಿತಿಯ ದುಃಖಕ್ಕೆ ದೃಷ್ಟಾಂತವೇ ಸಿಗಲಾರದು. ಏಕೆಂದರೆ ಪ್ರಾಣಿಗಳು ಹೆಚ್ಚಿನ ಖಾಯಿಲೆಯನ್ನು ಅನುಭವಿಸುತ್ತಿರುವಾಗಲೂ ಸಾವಿಗೆ ಹೆದರುತ್ತಾರೆ. ಬಂಧುಗಳು ಅಪ್ಪಿಕೊಂಡೇ ಇದ್ದರೂ ಪ್ರಾಣಿಯು-ಹೇಗೆ ಸಮುದ್ರದ ನೀರಿನೊಳಗೆ ಅಡಗಿಕೊಂಡಿರುವ ಹಾವು ಗರುಡನಿಗೆ ತುತ್ತಾಗುವದೋ ಹಾಗೆ- ಮೃತ್ಯುವಿನಿಂದ ಅಪಹರಿಸಲ್ಪಡುವನು.

ಹಾ ಕಾಂತೇ ಹಾ ಧನಂ ಪುತ್ರ ಕ್ರಂದಮಾನಃ ಸುದಾರುಣಮ್ |
ಮಂಡೂಕ ಇವ ಸರ್ಪೇಣ ಗೀರ್ಯತೇ ಮೃತ್ಯುನಾ ನರಃ ||

೨೧೨. ಎಲೌ ಪ್ರಿಯಳೆ, ಹಣವೆ, ಮಗನೆ– ಎಂದು ಕ್ರೂರವಾಗಿ ಅಳುತ್ತಾ ಇರುವಲ್ಲಿ– ಕಪ್ಪೆಯನ್ನು ಹಾವು ನುಂಗಿದಂತೆ– ಮೃತ್ಯುವು ಮನುಷ್ಯನನು ನುಂಗುವದು.

ಮರ್ಮಸೂತ್ಕೃತ್ಯಮಾನೇಷು ಮುಚ್ಯಮಾನೇಷು ಸಂಧಿಷು |
ಯದ್ದುಃಖಂ ಮ್ರಿಯಮಾಣಸ್ಯ ಸ್ಮರ್ಯತಾಂ ತನ್ಮುಮುಕ್ಷುಭಿಃ ||

೨೧೩. (ಶರೀರದಲ್ಲಿ) ಮರ್ಮಸ್ಥಾನಗಳು ಕಿತ್ತುಬರುವಲ್ಲಿ ಕೀಲುಗಳು ಸಡಿಲವಾಗುತ್ತಿರುವಲ್ಲಿ ಸಾಯುತ್ತಿರುವವನಿಗೆ ಏನು ದುಃಖವಾಗುವದೋ ಅದನ್ನು ಮುಮುಕ್ಷುಗಳು ಜ್ಞಾಪಿಸಿಕೊಳ್ಳತಕ್ಕದ್ದು.

ದೃಷ್ಟಾವಾಕ್ಷಿಪ್ಯಮಾಣಾಯಾಂ ಸಂಜ್ಞಯಾ ಹ್ರಿಯಮಾಣಯಾ |
ಮೃತ್ಯುಪಾಶೇನ ಬದ್ಧಶ್ಚ ತ್ರಾತಾರಂ ನೋಪಲಪ್ಸ್ಯಸೇ ||

೨೧೪. ದೃಷ್ಟಿಯು ಮಂದವಾಗಲಾಗಿ, ಪ್ರಜ್ಞೆಯು ಅಪಹರಿಸಲ್ಪಡಲಾಗಿ, ಮೃತ್ಯುಪಾಶದಿಂದ ಕಟ್ಟಲ್ಪಡುವವನಾಗಿದ್ದಾಗ ಕಾಪಾಡುವವನನ್ನು ನೀನು ಪಡೆಯಲಾರೆ.

ಸಂರುಧ್ಯಮಾನಸ್ತಮಸಾ ಮಹಚ್ ಶ್ವಭ್ರಮಿವಾವಿಶನ್ |
ಉರೋ ಘ್ನತಃ ತದಾ ಜ್ಞಾತೀನ್ ದ್ರಕ್ಷ್ಯಸೇ ದೀನಚಕ್ಷುಷಾ ||

೨೧೫. ಕತ್ತಲೆಯಿಂದ ಆವರಿಸಲ್ಪಟ್ಟವನಾಗಿ ದೊಡ್ಡದಾದ ಗುಂಡಿಯನ್ನು ಒಳಹೊಗುವವನಂತೆ ಎದೆಯನ್ನು ಬಡಿದುಕೊಳ್ಳುತ್ತಾ ಆಗ ನೀನು ದೈನ್ಯದಿಂದ ಕೂಡಿದ ಕಣ್ಣಿನಿಂದ ಜ್ಞಾತಿಗಳನ್ನು ನೋಡುವೆ.

ಅಯಃಪಾಶೇನ ಕಾಲೇನ ಸ್ನೇಹಪಾಶೇನ ಬಂಧುಭಿಃ |
ಆತ್ಮಾನಂ ಕೃಷ್ಯಮಾಣಂ ತ್ವಮಭಿತೋ ದ್ರಕ್ಷ್ಯಸೇ ತದಾ ||

೨೧೬. ಯಮನ ಕಬ್ಬಿಣದ ಪಾಶದಿಂದಲೂ ಬಂಧುಗಳ ಸ್ನೇಹಪಾಶದಿಂದಲೂ ಅತ್ತಿತ್ತ ಎಳೆಯಲ್ಪಡುತ್ತಿರುವ ಜೀವನನ್ನು ನೀನು ಸುತ್ತಲೂ ನೋಡುತ್ತಿರುವೆ.

ಹಿಕ್ಕಿಕಾಬಾಧ್ಯಮಾನಸ್ಯ ಶ್ವಾಸೇನ ಪರಿಶುಷ್ಯತಃ |
ಕೃಷ್ಯಮಾಣಸ್ಯ ಪಾಶೇನ ನ ಖಲ್ವಸ್ತಿ ಪರಾಯಣಮ್ ||

೨೧೭. ಬಿಕ್ಕಳಿಕೆಯಿಂದ ಪೀಡಿಸಲ್ಪಡುತ್ತಿರುವ ಹಾಗೂ ಉಸಿರು ಒಣಗುವದರಿಂದ ದುಃಖಿತನಾದ ಮತ್ತು (ಯಮ)ಪಾಶದಿಂದ ಎಳೆಯಲ್ಪಡುತ್ತಿರುವವನಿಗೆ ಗತಿಯು ಯಾವದೂ ಇರುವದಿಲ್ಲ.

ಸಂಸಾರಯಂತ್ರಮಾರೂಢೋ ಯಮದೂತೈರಧಿಷ್ಠಿತಃ ।
ಕ್ವ ಯಾಸ್ಯಾಮೀತಿ ದುಃಖಾರ್ತಃ ಕಾಲಪಾಶೇನ ಯೋಜಿತಃ ॥

೨೧೮. ಸಂಸಾರವೆಂಬ ಚಕ್ರವನ್ನೇರಿದವನಾಗಿ ಯಮದೂತರಿಂದ ಕೂಡಿದವನಾಗಿ ದುಃಖಾವಿಷ್ಟನಾಗಿ ಕಾಲಪಾಶದಿಂದ ಪ್ರೇರಿತನಾಗಿ ಎಲ್ಲಿಗೆ ಹೋಗುವೆನೆಂಬುದನ್ನರಿಯದೆ ಇರುವನು.

ಮಾತಾಪಿತಾಗುರುಸುತಾಃ ಸ್ವಜನೋ ಮಮೇತಿ
ಮಾಯೋಪಮೇ ಜಗತಿ ಕಸ್ಯ ಭವೇತ್ ಪ್ರತಿಜ್ಞಾ ।
ಏಕೋ ಯದಾ ವ್ರಜತಿ ಕರ್ಮಪುರಃಸರೋಽಯಂ
ವಿಶ್ರಾಮವೃಕ್ಷಸದೃಶಃ ಖಲು ಜೀವಲೋಕಃ ॥

೨೧೯. ಮಾಯೋಪಮವಾದ ಈ ಜಗತ್ತಿನಲ್ಲಿ ತಾಯಿ, ತಂದೆ, ಗುರು, ಮಗ, ನನ್ನವರು, ಸ್ವಜನರು—ಎಂಬ ರೀತಿಯ ಬಂಧುಗಳು (ಸಾಯುವಾಗ ನನಗೆ ಸಹಾಯಕರಾಗುತ್ತಾರೆ)— ಎಂದು ಯಾರು ತಾನೆ ಪ್ರತಿಜ್ಞೆ ಮಾಡಲಾದೀತು? ಕರ್ಮವನ್ನು ಮುಂದಿಟ್ಟುಕೊಂಡು ತಾನೊಬ್ಬನೇ ಯಾವಾಗ ಹೊರಡುವನೋ (ಆಗ ಜೊತೆಗಾರರು ಯಾರೂ ಇರುವದಿಲ್ಲ). ಈ ಜೀವಲೋಕವು ದಾರಿಯ ಪಕ್ಕದಲ್ಲಿರುವ ಹಾಗೂ ವಿಶ್ರಾಂತಿಗಾಗಿ ಇರುವ ಮರದಂತೆಯೇ ಸರಿ.

ಸಾಯಂ ಸಾಯಂ ವಾಸವೃಕ್ಷಂ ಸಮೇತಾಃ
ಪ್ರಾತಃ ಪ್ರಾತಃ ತೇನ ತೇನ ಪ್ರಯಾಂತಿ ।
ತ್ಯಕ್ತ್ವಾಽನ್ಯೋನ್ಯಂ ತಂ ಚ ವೃಕ್ಷಂ ವಿಹಂಗಾಃ
ಯದ್ವತ್ ತದ್ವತ್ ಜ್ಞಾತಯೋಽಜ್ಞಾತಯಶ್ಚ ॥

೨೨೦. ಪ್ರತಿಸಂಜೆಯಲ್ಲಿಯೂ ವಾಸಮಾಡುವ ಮರವನ್ನು ಬಂದುಸೇರಿ ಪ್ರತಿ ಬೆಳಗಿನಲ್ಲಿಯೂ ಅಲ್ಲಿಂದ ಹೊರಡುವ ಹಕ್ಕಿಗಳು ಒಂದನ್ನೊಂದು ಅಗಲಿ ಹೋಗುತ್ತಾ ಮರವನ್ನೂ ಬಿಟ್ಟು ತೆರಳುವಂತೆ ಜ್ಞಾತಿಗಳೂ ಜ್ಞಾತಿಗಳಲ್ಲದವರೂ (ನಮ್ಮನ್ನು ಬಿಟ್ಟುಹೋಗುವರು).

ಮೃತಿಬೀಜಂ ಭವೇಜ್ಜನ್ಮ ಜನ್ಮಬೀಜಂ ತಥಾ ಮೃತಿಃ ।
ಘಟೀಯಂತ್ರವದಶ್ರಾಂತೋ ಬಂಭ್ರಮೀತ್ಯನಿಶಂ ನರಃ ॥

೨೨೧. ಹುಟ್ಟುವಿಕೆಯು ಸಾಯುವದಕ್ಕೂ, ಸಾವು ಹುಟ್ಟುವಿಕೆಗೂ ಕಾರಣವಾಗಿರುವದು. ಹೀಗೆ ಏತದ ಯಂತ್ರದಂತೆ ವಿಶ್ರಾಂತಿಯಿಲ್ಲದೆ ಮನುಷ್ಯನು (ಸಂಸಾರದಲ್ಲಿ) ತೊಳಲುತ್ತಿರುವನು.

ಧ್ಯಾಪ್ಯಜನ್ಯಧರಾಮತ್ಯಸಯೋಷಿದಗ್ನಿಷು ದೈವತೈಃ ।
ಶ್ರದ್ಧೋಡುರಾಜವರ್ಷಾನ್ನರೇತ ಆಖ್ಯಂ ಹವಿರ್ಹುತಮ್ ॥

೨೨೨. ದ್ಯುಲೋಕ, ಪರ್ಜನ್ಯ, ಭೂಮಿ, ಗಂಡಸು, ಹೆಂಗಸು– ಎಂಬ ಪಂಚಾಗ್ನಿಗಳಲ್ಲಿ ಕ್ರಮವಾಗಿ ಶ್ರದ್ಧೆ, ಚಂದ್ರ, ಮಳೆ, ಅನ್ನ, ರೇತಸ್ಸು ಎಂಬ ಐದು ಹವಿಸ್ಸುಗಳು ಹುತವಾಗುವವು.

ಪಂಚಮ್ಯಾಮಾಹುತಾವೇವಂ ಪುವಂಚಾ ಜಾಯತೇ ಪುಮಾನ್ ।
ಕ್ರಮಾತ್ತಸ್ಯ ಮಹಾನರ್ಥಸಂಸ್ಸೃತ್ಯುತ್ಪತ್ತಿರುಚ್ಯತೇ ॥

೨೨೩. ಐದನೆಯ ಆಹುತಿಯಲ್ಲಿ ಹೀಗೆ ಪುರುಷನೆನಿಸಿ ಜೀವನು ಉದಯಿಸುತ್ತಾನೆ. ಅನಂತರ ಸಂಸಾರವೆಂಬ ಮಹಾ ಅನರ್ಥವು ಆವನಿಗೆ ಕ್ರಮವಾಗಿ ಆಗುತ್ತದೆ. ಆದರ ನಾಶವನ್ನು ಈಗ ಹೇಳಲಾಗುವದು.

ಇತ್ಯಾದ್ಯಾ ವಿಕ್ರಿಯಾಃ ಸರ್ವಾ ಲಿಂಗದೇಹಸಮಾಶ್ರಯಾಃ ।
ಅತದ್ವಾನಪಿ ಸಂಮೋಹಾತ್ ತದ್ವಾನಿತ್ಯಭಿಮನ್ಯತೇ ॥

೨೨೪. ಇವೇ ಮೊದಲಾದ ವಿಕಾರಗಳೆಲ್ಲವೂ ಲಿಂಗದೇಹವನ್ನಾಶ್ರಯಿಸಿದ ಜೀವನಿಗೆ ಉಂಟಾಗುವವು. ಆಗ ತಾನು ಆತ್ಮನನ್ನರಿಯದವನಾದರೂ ಅಜ್ಞಾನದಿಂದ ಅರಿತಿರುವವನೆಂದು ಅಭಿಮಾನಪಡುವನು.

ಜ್ಞಾತಾಸ್ಮೀತ್ಯಭಿಮಾನಾದ್ಧಿ ಚೇಷ್ಟತೇ ಜ್ಞಾನಕರ್ಮಣಿ ।
ಮಂತಾಸ್ಮೀತಿ ತತೋ ಮೋಹಾತ್ ಕುರುತೇ ಮಾನಸೀಃ ಕ್ರಿಯಾಃ ॥

೨೨೫. ನಾನು ಜ್ಞಾತೃವು–ಎಂಬ ಅಭಿಮಾನದಿಂದ ಜ್ಞಾನಕರ್ಮವ್ಯಾಪಾರಗಳಲ್ಲಿ ತೊಡಗುವನು. ಹಾಗೆಯೇ ನಾನು ಮನನಮಾಡುವವನು–ಎಂಬ ಅಭಿಮಾನದಿಂದ ಮೋಹವಶನಾಗಿ ಮಾನಸಿಕವಾದ (ಸಂಕಲ್ಪವಿಕಲ್ಪಕಾಮಭಯಾದಿ) ಕ್ರಿಯೆಗಳಲ್ಲಿ ತೊಡಗುವನು.

ಪ್ರಾಣಾದ್ಯಾತ್ಮಾಭಿಮಾನೇನ ಕರ್ಮಚೇಷ್ಟಾಂ ಪ್ರಪದ್ಯತೇ ।
ಚಕ್ಷುರಾದ್ಯಭಿಮಾನೀ ಚ ರೂಪಾದ್ಯಾಲೋಚನಾತ್ಪರಃ ॥

೨೨೬. ಪ್ರಾಣನೇ ನಾನು– ಮುಂತಾದ ಅಭಿಮಾನನಿಮಿತ್ತವಾಗಿ ಕರ್ಮವ್ಯಾಪಾರಗಳನ್ನು ಕೈಗೊಳ್ಳುವನು. ಕಣ್ಣೇ ಮುಂತಾದವುಗಳು ನಾನು–ಎಂಬ ಅಭಿಮಾನನಿಮಿತ್ತವಾಗಿ ರೂಪ–ರಸಾದಿಗಳನ್ನು ಚಿಂತಿಸುವವನಾಗುತ್ತಾನೆ.

ತಥಾ ದೇಹಸ್ಯ ದಾಹಾದೌ ದಗ್ಧೋಽಸ್ಮೀತಿ ಚ ಮನ್ಯತೇ ।
ಶ್ಯಾಮೋಽಸ್ಮೀತಿ ಚ ದೇಹಸ್ಯ ಶ್ಯಾಮತ್ವಂ ಮನ್ಯತೇಽಬುಧಃ ॥

೨೨೭. ಹಾಗೆಯೇ ಶರೀರದ ಸುಡುವಿಕೆ ಮುಂತಾದ ಸಂದರ್ಭದಲ್ಲಿ ನಾನು ಸುಡಲ್ಪಟ್ಟೆನು–ಎಂದು ಭಾವಿಸುತ್ತಾನೆ; ಮತ್ತು ನಾನು ಕಪ್ಪಗಿದ್ದೇನೆ–ಎಂದು ಶರೀರದ ಕಪ್ಪುಬಣ್ಣವನ್ನು ತಾನೆಂದು ಅಜ್ಞಾನಿಯು ಭಾವಿಸುತ್ತಾನೆ.

ಗೋಧನಾದ್ಯಭಿಮಾನೇನ ತದ್ವಾನಸ್ಮೀತ್ಯವಿದ್ಯಯಾ |
ಬ್ರಹ್ಮಚಾರೀ ಗೃಹಸ್ಥೋಽಹಂ ತಾಪಸೋಽಸ್ಮಿ ತಥಾ ಮುನಿಃ ||
ದೇಹಲಿಂಗಾತ್ಮಸಂಸ್ಕಾರಾನ್ಮನ್ಯತೇ ಸಂಗಕಾರಣಾತ್ ||

೨೭೮. ಗೋಧನವೇ ಮುಂತಾದವುಗಳ ಅಭಿಮಾನದಿಂದ ತಾನು ಗೋಸ್ವಾಮಿಯೆಂದೂ ಧನವಂತನೆಂದೂ ಅವಿದ್ಯೆಯಿಂದ ತಿಳಿಯುವನು. ಹಾಗೆಯೇ ತಾನು ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ಮುನಿ– ಮುಂತಾಗಿ ದೇಹಸಂಬಂಧವಾದ ಆತ್ಮಸಂಸ್ಕಾರಗಳಿಂದ ದೇಹವೇ ತಾನೆಂಬ ಆಸಂಗನಿಮಿತ್ತವಾಗಿ ಹಾಗೆ ಹಾಗೆ ಭಾವಿಸುವನು.

ಭಿನ್ನಾತ್ಮನಾಂ ತು ಭೂತಾನಾಂ ಶರೀರಂ ಕಾರ್ಯಮುಚ್ಯತೇ |
ಮಮಾಹಮಿತಿಸಂಮೋಹಾದನರ್ಥಂ ಪ್ರತಿಪದ್ಯತೇ ||

೨೭೯. ಭಿನ್ನಭಿನ್ನವಾದ ಸ್ವರೂಪವುಳ್ಳ ಪಂಚಭೂತಗಳ ಕಾರ್ಯವೇ ಶರೀರವೆನಿಸುವದು. ಅದರಲ್ಲಿ ನಾನು ನನ್ನದೆಂಬ ವ್ಯಾಮೋಹದಿಂದ ಜೀವನು ಅನರ್ಥವನ್ನು ಹೊಂದುವನು.

ಸರ್ವೇಷಾಂ ಚಾನ್ನಕಾರ್ಯತ್ವೇ ಬ್ರಹ್ಮಜತ್ವೇ ಸಮೇ ತಥಾ |
ಕರ್ಮಜ್ಞಾನಾಧಿಕಾರಿತ್ವಾತ್ ಪುಮಾನೇವೇಹ ಗೃಹ್ಯತೇ ||

೨೮೦. ಎಲ್ಲಾ ಪ್ರಾಣಿಗಳೂ ಅನ್ನದಿಂದ ಹುಟ್ಟಿದ್ದು ಮೂಲದಲ್ಲಿ ಬ್ರಹ್ಮದಿಂದ ಬಂದವರೇ ಆಗಿರುತ್ತಾರಾದರೂ ಕರ್ಮಜ್ಞಾನಾಧಿಕಾರವುಳ್ಳವನು ಮನುಷ್ಯನು ಮಾತ್ರವೇ ಆದ್ದರಿಂದ ಅವನನ್ನೇ ಇಲ್ಲಿ (ಅನ್ನಾತ್ ಪುರುಷಃ ಎಂಬಲ್ಲಿ) ಗ್ರಹಣಮಾಡಿದೆ.

ಅನೇಕಾನರ್ಥನೀಡೇಽಸ್ಮಿನ್ ನಿಮಗ್ನಂ ಬ್ರಹ್ಮವಿದ್ಯಯಾ |
ಸಂಕ್ರಾಮಯಿತುಮಿಷ್ಟತ್ವಾತ್ ಬ್ರಹ್ಮಾಂತರತಮಂ ನರಮ್ ||
ತರುಶಾಖಾಗ್ರದೃಷ್ಟ್ಯೈವ ಸೋಮಂ ಯದ್ವತ್ ಪ್ರದರ್ಶಯೇತ್ |
ನಿಷ್ಕೋಶಂ ಕೋಶದೃಷ್ಟ್ಯೈವ ಪ್ರತೀಚಿ ಬ್ರಹ್ಮ ದರ್ಶ್ಯತೇ ||

೨೮೧–೨೮೨. ಅನೇಕ ಅನರ್ಥಗಳಿಗೆ ಆಶ್ರಯವಾಗಿರುವ ಈ ಶರೀರದಲ್ಲಿ ಆತ್ಮಾಭಿಮಾನದಿಂದ ಮುಳುಗಿರುವ ಈ ನರಜೀವನನ್ನು ಅಂತರತಮವಾದ ಬ್ರಹ್ಮಸ್ವರೂಪಕ್ಕೆ ದಾಟಿಸಲು ಉದ್ದೇಶಿಸಿ– ಹೇಗೆ ಮರದ ಕೊಂಬೆಯ ತುದಿಯಿಂದ ಚಂದ್ರನನ್ನು ತೋರಿಸುತ್ತಾರೋ ಹಾಗೆ ಕೋಶಗಳಿಲ್ಲದ ಬ್ರಹ್ಮವನ್ನು ಕೋಶಗಳ ದ್ವಾರದಿಂದ ಒಳಗೆ ತೋರಿಸಲು ಹೊರಟಿದೆ.

ಅನಾದಾವಿಹ ಸಂಸಾರೇ ವಾಸನಾರಂಜಿತಾ ಮತಿಃ |
ಪ್ರತೀಚ್ಯಪಾಯತಃ ಕರ್ತುಂ ಶಕ್ಯಾ ತಸ್ಮಾತ್ ಸ ಉಚ್ಯತೇ ||

೨೩೩. ಅನಾದಿಯಾದ ಈ ಸಂಸಾರದಲ್ಲಿ ವಾಸನೆಗಳಿಂದ ದೂಷಿತವಾದ ಬುದ್ಧಿಯನ್ನು ಪ್ರತ್ಯಗಾತ್ಮನಲ್ಲಿ ನೆಲೆಗೊಳ್ಳುವದಕ್ಕೆ ಉಪಾಯವಾಗಿ ಕೋಶಗಳನ್ನು ಪ್ರಸ್ತಾಪಿಸಿದೆ.

ದ್ವೈತಾಸ್ಪೃಕ್ ಪ್ರತ್ಯಗಾತ್ಮೈಕಃ ಪ್ರತೀಚೀವ ಪರಾಗಪಿ |
ಯುಷ್ಮದಸ್ಮದ್ವಿಭಾಗಾಭ್ಯಾಂ ಭಿದ್ಯತೇಽವಿದ್ಯಯಾ ವೃಥಾ ||

೨೩೪. ದ್ವೈತಸಂಪರ್ಕವಿಲ್ಲದ ಏಕನಾದ ಪ್ರತ್ಯಗಾತ್ಮನೇ ಒಳಗಿನಂತೆಯೇ ಹೊರಗಿನ ಪ್ರಪಂಚದಲ್ಲಿಯೂ ನೀನು–ನಾನು ಎಂಬ ವಿಭಾಗದಿಂದ ಅವಿದ್ಯೆಯಿಂದ ಸುಳ್ಳಾಗಿಯೇ ಭೇದವನ್ನು ಹೊಂದಿರುತ್ತಾನೆ.

ಅಸ್ಮದ್ವಿಭಾಗೇ ಪಂಚಾಸ್ಯ ಯಥೈವಾನ್ನಮಯಾದಯಃ |
ತಥಾ ತತ್ಪ್ರತ್ಯಗಾತ್ಮಾನೋ ಯುಷ್ಮದನ್ನಾದಯಃ ಸ್ಮೃತಾಃ ||

೨೩೫. ನಾನು ಎಂದು ಭಾಗವಾಗಿರುವದರಲ್ಲಿ ಹೇಗೆ ಅನ್ನಮಯವೇ ಮುಂತಾದ ಆತ್ಮರುಗಳಿರುವರೋ ಹಾಗೆಯೇ ಆ ಅನ್ನಮಯಾದಿಗಳ ಪ್ರತ್ಯಕ್ ಸ್ವರೂಪಗಳಾದ ಅನ್ನಾದಿಗಳು ನೀನು ಎಂಬ ವಿಭಾಗದಲ್ಲಿದ್ದುಕೊಂಡಿರುವವು.

ವಿವರಣೆ : ಅನ್ನಮಯಾತ್ಮನೆಂದರೆ ಶರೀರವು. ಶರೀರಕ್ಕೆ ಅನ್ನವೇ ಆಧಾರವು. ಜೀವನು ಅವಿದ್ಯೆಯಿಂದ ಅನ್ನಮಯಾತ್ಮನೇ ತಾನೆಂದುಕೊಂಡಿದ್ದಾನೆ. ವಿಚಾರಮಾಡಿದಂತೆಲ್ಲ ಆನಂದಮಯನವರೆಗೂ ಪಂಚಕೋಶಾತ್ಮರುಗಳನ್ನು ಹೀಗೆಯೇ ಭಾವಿಸಿಕೊಳ್ಳುವನು. ಇದೇ ಅಸ್ಮದರ್ಥಭಾಗವು. ಹಾಗೆಯೇ ಯುಷ್ಮದರ್ಥಭಾಗದಲ್ಲಿ ಅನ್ನ, ಪ್ರಾಣ, ಮನಸ್ಸು, ವಿಜ್ಞಾನ, ಆನಂದಗಳು ಆಯಾ ಕೋಶಾತ್ಮರ ಉಪಾಧಿಗಳಾಗಿವೆ. ಆದರೆ ಪ್ರತ್ಯಗಾತ್ಮನಿಗೆ ಹೋಲಿಸಿದರೆ ಅವು ಕೂಡ ಅನಾತ್ಮಗಳೇ. ಹೀಗೆ ಅನ್ನ, ಅನ್ನಮಯಾತ್ಮ ಎಂಬೀರೀತಿಯಲ್ಲಿ ಐದ್ಯೆದಾಗಿ ತೋರಿಸಿಕೊಂಡಿರುವದೆಲ್ಲವೂ ಯುಷ್ಮದಸ್ಮದ್ವಿಭಾಗವಿಶಿಷ್ಟವಾಗಿರುವ ಬ್ರಹ್ಮವೊಂದೇ– ಎಂದಭಿಪ್ರಾಯ.

ಆಧ್ಯಾತ್ಮಿಕಾನ್ ವಿಲಾಪ್ಯಾಥ ಯಥಾ ಸ್ವಂ ಪ್ರತ್ಯಗಾತ್ಮಸು |
ಅನ್ನಾದೀನ್ ಪರ್ಯುಪಾಸೀತ ಹ್ಯುತ್ತರೋತ್ತರರೂಪಗಾನ್ ||

೨೩೬. (ಕಾರಣವ್ಯತಿರಿಕ್ತವಾಗಿ ಕಾರ್ಯವಿಲ್ಲ– ಎಂಬ ನ್ಯಾಯದಂತೆ) ಆಧ್ಯಾತ್ಮಿಕವಾದ ಅನ್ನಮಯಾದಿಗಳನ್ನು ಅವವುಗಳ ಪ್ರತ್ಯಗಾತ್ಮಸ್ವರೂಪದಲ್ಲಿ (ಎಂದರೆ ಅನ್ನಮಯವನ್ನು ಪ್ರಾಣಮಯನಲ್ಲಿ– ಇತ್ಯಾದಿ) ವಿಲಾಪನಗೊಳಿಸಿ ಪ್ರತ್ಯಕ್ತಿಗಳಾದ ಅನ್ನಾದಿಗಳನ್ನು (ಸಮಷ್ಟಿಯಾಗಿ) ಚಿಂತಿಸಬೇಕು. ಅನಂತರ ಮುಂದುಮುಂದಿನ ಪ್ರಾಣಾದಿತತ್ತ್ವಗಳಲ್ಲಿ ಅಡಕವಾಗುವವೆಂದೂ ಭಾವಿಸಬೇಕು.

ಜಗ್ಧ್ವಾ ಕಾರ್ಯಾತ್ಮತಾಮೇವಂ ಕಾರಣಾತ್ಮತಯಾ ಸ್ಥಿತಃ |
ಆತ್ಮನಾಽಽಲಿಂಗತೇ ಬ್ರಹ್ಮ ವಾಕ್ಯಾಜ್ಜಗ್ಧ್ವಾ ಚ ತಾಮಪಿ ||

೨೩೭. ಹೀಗೆ ಕಾರ್ಯಾತ್ಮರುಗಳನ್ನು ಕಾರಣಾತ್ಮನಲ್ಲಿ ಅಡಗಿಸಿ ಅರಗಿಸಿಕೊಂಡು ಕಾರಣಾತ್ಮನಾಗಿ ನೆಲೆಗೊಂಡಂತೆಲ್ಲ ಆ ಕಾರಣಾತ್ಮನನ್ನೂ 'ಅಹಂ ಬ್ರಹ್ಮಾಸ್ಮಿ' ಎಂಬ ವಾಕ್ಯದಿಂದ ಪರಬ್ರಹ್ಮದಲ್ಲೇ ಅಡಗಿಸಿಕೊಂಡು ತಾನೇ ಪರಮಾತ್ಮನಾಗಿ ನೆಲೆಗೊಳ್ಳಬೇಕು. ಆಗ ಕಾರ್ಯಕಾರಣವಿಲಕ್ಷಣವಾದ ಬ್ರಹ್ಮವನ್ನು ಪಡೆಯುವನು.

ಅನ್ನಂ ವಿರಾಡಿತಿ ಜ್ಞೇಯಂ ಪ್ರಾಣಾತ್ತದಭಿವರ್ಧತೇ |
ಋಗ್ಯಜುಃಸಾಮರೂಪೋಽತೋ ವೇದಾತ್ಮಾನ್ತರ್ಮನೋಮಯಃ ||
ವೇದಾರ್ಥವಿಷಯಾ ಬುದ್ಧಿರ್ವಿಜ್ಞಾನಂ ನಿಶ್ಚಯಾತ್ಮಿಕಾ |
ಜ್ಞಾನಕರ್ಮಾಭಿನಿರ್ವೃತ್ತ ಆನಂದಃ ಫಲಲಕ್ಷಣಃ ||

೨೩೮–೨೩೯. ಅನ್ನವನ್ನು ವಿರಾಟ್ ಎಂದು ತಿಳಿಯಬೇಕು. ಅದು ಪ್ರಾಣದಿಂದ ಬೆಳೆಯುತ್ತದೆ. ಪ್ರಾಣಕ್ಕಿಂತಲೂ ಋಗ್ಯಜುಃಸಾಮರೂಪನೂ ವೇದಾತ್ಮನೂ ಆದ ಮನೋಮಯನು ಅಂತರನು. ವೇದಾರ್ಥವಿಷಯವಾದ ನಿಶ್ಚಯಾತ್ಮಕಬುದ್ಧಿಯು ವಿಜ್ಞಾನಮಯನೆನಿಸುವದು. ಜ್ಞಾನಕರ್ಮಗಳ ಯೋಜನದಿಂದ ಉಂಟಾದ ಫಲವೇ ಆನಂದವು– ಎಂದು ಅಭಿಪ್ರಾಯ.

ತ್ರೀಣ್ಯೇವಾನ್ನಾನಿ ಚೈತಾನಿ ಪ್ರಾಜಾಪತ್ಯಾನಿ ಸರ್ವಶಃ |
ಪ್ರಾಣೋ ಮನಸ್ತಥಾ ವಾಕ್ ಚ ವಿರಾಡನ್ನಾತ್ಮತಾಂ ಗತಃ ||

೨೪೦. ಪ್ರಜಾಪತಿಯು ಸೃಷ್ಟಿಸಿದ ಅನ್ನಗಳು ಎಲ್ಲಾ ವಿಧದಿಂದಲೂ ಈ ಮೂರೇ ಆಗಿವೆ. ಅವುಗಳೇ ವಾಕ್–ಪ್ರಾಣ–ಮನಸ್ಸುಗಳೆಂಬಿವು. ವಿರಾಡಾತ್ಮನು ಅನ್ನವಾಗಿ ಪರಿಣಮಿಸಿರುತ್ತಾನೆ.

ಚತುರ್ಣಾಂ ಪ್ರತ್ಯಗಾತ್ಮೈಷ ಆನಂದಮಯ ಉಚ್ಯತೇ |
ಪ್ರಜ್ಞಾನಘನರೂಪತ್ವಾತ್ ಸ್ಯಾದ್ಭೇದೋಽಪ್ಯಸ್ಯ ಕಾರ್ಯತಃ ||

೨೪೧. ಈ ರೀತಿಯಾಗಿ ಅನ್ನಮಯನೇ ಮುಂತಾದ ನಾಲ್ವರು ಆತ್ಮರಿಗೆ ಆನಂದಮಯನು ಪ್ರತ್ಯಗಾತ್ಮನಾಗಿರುತ್ತಾನೆ. ಆದರೂ ಕಾರ್ಯಭೇದದಿಂದ– ಈತನು ಪ್ರಜ್ಞಾನಘನನೇ ಆಗಿದ್ದರೂ (ಶಿರಃ ಪುಚ್ಛಾದಿಗಳ) ಭೇದವು ಇರಬಹುದಾಗಿದೆ.

ವಿವರಣೆ : ಆನಂದಮಯಾತ್ಮನು ಅನ್ನಮಯಾದ್ಯಾತ್ಮರುಗಳಿಗಿಂತ ಪ್ರತ್ಯಗಾತ್ಮನೇ ಹೌದು. ಆದ್ದರಿಂದ ಉಳಿದ ನಾಲ್ವರಿಗೆ ಆತನು ಆತ್ಮನೆನಿಸುವನು. ಹಾಗಾದರೆ ಅನ್ನಮಯಾದಿ– ಎಲ್ಲಾ ಆತ್ಮರುಗಳನ್ನೂ ಆನಂದಮಯ

ನೆಂದೇ ಕರೆಯಬಹುದಲ್ಲ? ಎಂದರೆ ಹಾಗಲ್ಲ. ಕರ್ಮಫಲಭೇದದಿಂದ ಶಿರಃಪುಚ್ಛಾದಿಗಳೂ ಬೇರೆಯಾಗಿದ್ದು ಆಯಾ ಕೋಶಾತ್ಮರೆನಿಸಿದ್ದಾರೆ ಇದರಿಂದ ಆನಂದಮಯನ ವ್ಯಾಪಕತ್ವಕ್ಕೇನೂ ಹಾನಿಯಿಲ್ಲ–ಎಂದಭಿಪ್ರಾಯ.

ಶಿರ ಆದಿ ಪ್ರಕ್ಲೃಪ್ತಿಸ್ತು ಸ್ಯಾದುಪಾಸನಕರ್ಮಣೇ |
ತಸ್ಮಾದೇವಂ ಚಿತೀರೇತಾ ಮಾನಸೀರ್ವ್ಯಾಚಚಕ್ಷಿರೇ ||

೨೪೨. ಒಬ್ಬನೇ ಆತ್ಮನಿಗೆ ಬೇರೆಬೇರೆಯ ಶಿರಃಪುಚ್ಛಾದಿಕಲ್ಪನೆಗಳನ್ನು ಮಾಡಿರುವದರ ಉದ್ದೇಶವೇನೆಂದರೆ : ಹಾಗೆಂತ ಉಪಾಸನೆಮಾಡುವವರಿಗೆ ಅನುಕೂಲವಾಗಬೇಂದು ಹೇಳಿದೆ. ಈ ಚೈತನ್ಯಾತ್ಮರುಗಳ ಭೇದಕಲ್ಪನೆಯ ಬಗ್ಗೆ ಹಿರಿಯರಿಗೂ ಒಪ್ಪಿಗೆಯಿದೆ. ಅವರೂ ಹಾಗೆ ಹೇಳಿರುತ್ತಾರೆ.

ಶಿರೋ ಮೂರ್ಧಾ ಭುಜೌ ಪಕ್ಷಾವಾತ್ಮಾ ಕಾಯಶ್ಚ ಮಧ್ಯಮಃ |
ಶೇಷಂ ಪುಚ್ಛನಿತಿ ಜ್ಞೇಯಂ ಚಿತಿಮೇವಂ ವಿಚಿಂತಯೇತ್ ||

೨೪೩. ತಲೆ, ನೆತ್ತಿ, ಭುಜಗಳು, ಎಡಬಲಗಳು, ಜೀವಾತ್ಮನು, ಶರೀರ– ಉಳಿದದ್ದು ಪುಚ್ಛ– ಹೀಗೆ ಚಿತ್‌ತತ್ತ್ವವನ್ನೇ ಕುರಿತು ಚಿಂತಿಸಬೇಕು.

ಉಪಾಸೀನಶ್ಚಿತೀರೇವಂ ವಿದ್ವಾನೇತಾ ಯಥಾಕ್ರಮಮ್ |
ಪೂರ್ವಪೂರ್ವಪ್ರಹಾಣೇನ ಹ್ಯನ್ತರನ್ತಃ ಪ್ರಪದ್ಯತೇ ||

೨೪೪. ಈ ರೀತಿಯಲ್ಲಿ ಚಿದಾತ್ಮರಾದ ಕೋಶಾತ್ಮರುಗಳನ್ನು ಕ್ರಮವಾಗಿ ಚಿಂತಿಸುವ ಉಪಾಸಕನು ಹಿಂದುಹಿಂದಿನ ಕೋಶಾತ್ಮರುಗಳನ್ನು ಮೀರಿ ಒಳಒಳಕ್ಕೆ ಪ್ರವೇಶಿಸುತ್ತಾನೆ.

ಶ್ರುತೇರನತಿಶಂಕ್ಯತ್ವಾತ್ ಸಂಭಾವ್ಯೇತ ಯಥೋದಿತಮ್ |
ಲಿಂಗಪ್ರತ್ಯಕ್ಷಗಮ್ಯೇ ಹಿ ಸ್ಯಾದಾಶಂಕಾ ನೃಬುದ್ಧಿತಃ ||

೨೪೫. (ಹಾಗಾದರೆ 'ಅನ್ನಮಯಾತ್ಮೋಪಾಸಕನು ಎಲ್ಲ ಅನ್ನವನ್ನೂ ಪಡೆಯುತ್ತಾನೆ' ಎಂದು ಫಲಸಂಕೀರ್ತನೆಮಾಡಿರುವದು ಹೇಗೆ ಸರಿ ? ಒಬ್ಬನೇ ಆತ್ಮನ ಉಪಾಸನೆಗೆ ಬೇರೆಬೇರೆಯ ಫಲಗಳು ಹೇಗೆ ಸಂಭವಿಸುತ್ತವೆ ? ಎಂದರೆ) ಅದು ಸರಿಯಲ್ಲ. ಶ್ರುತಿಯು ಪರಮಪ್ರಮಾಣವಾಗಿದ್ದು ಅದು ಹೇಳುವ ಫಲವನ್ನು ಪ್ರಶ್ನಿಸುವದು ಯೋಗ್ಯವಲ್ಲ. ಅದು ಹೇಳಿರುವಂತೆಯೇ ಫಲವಾಗಲಿದೆ. ಅನುಮಾನಪ್ರಮಾಣವಾಗಿದ್ದಲ್ಲಿ ಮನುಷ್ಯಬುದ್ಧಿದೋಷವಿರುವದರಿಂದ ಶಂಕೆ ಮಾಡುವದು ಸರಿಯೆಂದಾಗಬಹುದಾಗಿತ್ತು.

ಸ್ವಭಾವತೋ ವಾ ಸಂಪ್ರಾಪ್ತಮನೂದ್ಯೋಪಾಸನಂ ಶ್ರುತಿಃ |
ನಾಮಾದಾವಿವ ಭೂಮಾನಂ ವಿಧತ್ತೇ ಜ್ಞಾನಮಾತ್ಮನಿ ||

೨೪೬. ಅಥವಾ ಛಾಂದೋಗ್ಯಶ್ರುತಿಯಲ್ಲಿ ನಾಮಾದಿಗಳಲ್ಲಿ ಭೂಮ ದೃಷ್ಟಿಯನ್ನು ಮಾಡಬೇಕೆಂದು ಹೇಳಿರುವಂತೆ ಸ್ವಭಾವತಃ ಪ್ರಾಪ್ತವಾದ (ಅವಿದ್ಯಾದಶೆಯಲ್ಲಿ ಹೊಂದುವ) ಉಪಾಸನೆಯನ್ನು ಅನುವಾದಮಾಡಿಕೊಂಡು ಆತ್ಮಜ್ಞಾನವನ್ನು ವಿಧಿಸಲಾಗಿದೆ-ಎಂದೂ ತಾತ್ಪರ್ಯವನ್ನು ಕಲ್ಪಿಸಬಹುದಾಗಿದೆ.

ಶ್ರುತ್ಯಂತರಾದ್ವಾ ಸಂಪ್ರಾಪ್ತಂ ಮೋಕ್ಷಾದರ್ವಾಕ್ ಫಲಾಯ ತು |
ತದನೂದ್ಯ ಪರಂ ಶ್ರೇಯಃ ಪ್ರಾಪ್ತಯೇ ಜ್ಞಾನಮುಚ್ಯತೇ ||

೨೪೭. ಅಥವಾ ಬೇರೊಂದು ಶ್ರುತಿಯಿಂದ ಪ್ರಾಪ್ತವಾದ, ಮೋಕ್ಷಕ್ಕಿಂತ ಕಡಿಮೆಯದಾದ ಫಲವನ್ನು ಹೇಳಿ ಅನುವಾದಮಾಡಿ ಮುಂದೆ ಪರಮಶ್ರೇಯಃ ಪ್ರಾಪ್ತಿಗಾಗಿ ಜ್ಞಾನವನ್ನು ಹೇಳಲಾಗುವದು.

ಬ್ರಹ್ಮವಿದ್ಯೋಡುಪೇನೈವ ಕೋಶಾನರ್ಥಮಹೋದಧೇಃ |
ನಿನೀಷಂತೀ ಪರಂ ಪಾರಂ ಸ ವಾ ಇತ್ಯಭ್ಯಧಾದಥ ||

೨೪೮. ಪಂಚಕೋಶಗಳೆಂಬ ಅನರ್ಥಮಹಾಸಮುದ್ರದಿಂದ ಜಿಜ್ಞಾಸುವನ್ನು ಬ್ರಹ್ಮವಿದ್ಯೆಯೆಂಬ ತೆಪ್ಪದಿಂದಲೇ ಆಚೆಯ ದಡಕ್ಕೆ ಒಯ್ಯಲು ಇಚ್ಛಿಸುವ ಶ್ರುತಿಯು 'ಸ ವಾ ಏಷಃ....' ಎಂದು ಹೇಳುತ್ತಿದೆ.

ಮೂಲಾತ್ಮಾನಂ ಸ ಶಬ್ದೇನ ಸ್ಪೃಷ್ಟ್ವಾ ತತ್ಸ್ಮೃತಯೇಽಥ ವೈ |
ಕೋಶಾತ್ಮತಾಂ ಸಮಾಪನ್ನ ಏಷ ಇತ್ಯಭಿಧೀಯತೇ ||

೨೪೯. ಸಃ ಎಂಬ ಶಬ್ದದಿಂದ ಕಾರ್ಯಕಾರಣವಿಲಕ್ಷಣನಾದ ಪ್ರತ್ಯಗಾತ್ಮನನ್ನು ಪರಾಮರ್ಶಿಸಿ ವೈ ಎಂಬುದರಿಂದ ಅವನನ್ನು ಸ್ಮರಿಸಿ ಅವನೇ (ಅವಿದ್ಯೆಯಿಂದ) ಪಂಚಕೋಶಾತ್ಮನಾಗಿ ತೋರಿಕೊಂಡಿದ್ದಾನೆ-ಎಂದು ಹೇಳಲಾಗಿದೆ.

ಅವಿದ್ಯಯಾ ತದರ್ಹೋಽಪಿ ರಜ್ಜುಃ ಸರ್ಪಾತ್ಮತಾಮಿವ |
ಕೋಶಪಂಚಕತಾಂ ಯಾತಸ್ತಮನುಕ್ರೋಶತೀವ ಹಿ ||

೨೫೦. ಹಗ್ಗವು ಹಾವಾಗಿ ತೋರುವಂತೆ ಅವಿದ್ಯೆಯಿಂದ ಆತ್ಮನು ಪಂಚಕೋಶವಿಶಿಷ್ಟನಾಗಿ- ತಾನು ಕಾರ್ಯಕಾರಣವಿಲಕ್ಷಣನಾಗಿದ್ದರೂ ಅದನ್ನು ಹೊಂದಿರುವಂತೆ ಕಂಡುಬರುತ್ತಿದಾನೆ.

ಮಯಡತ್ರ ವಿಕಾರಾರ್ಥೇ ನಿಷಿದ್ಧೋಽಸೌ ಪರಾತ್ಮನಃ |
ಯುಕ್ತ್ಯಾಗಮಾಭ್ಯಾಮನ್ನಸ್ಯ ಕಾರ್ಯಂ ದೇಹಃ ಪ್ರತೀಯತೇ ||

೨೫೧. 'ಅನ್ನಮಯಾತ್ಮ' ಎಂಬಲ್ಲಿ ಮಯಟ್‌ಪ್ರತ್ಯಯವು ವಿಕಾರಾರ್ಥದಲ್ಲಿ ಪ್ರಯುಕ್ತವಾಗಿದೆ. ಆದರೆ ಪರಮಾತ್ಮನು ವಿಕಾರಿಯಲ್ಲವಾದ್ದರಿಂದ ಅದು ಅವನಿಗೆ ಹೊಂದುವಂತಿಲ್ಲ. ಹೀಗೆ ಯುಕ್ತಿಯಿಂದಲೂ ಆಗಮಗಳಿಂದಲೂ

ಆತ್ಮನು ವಿಕಾರರಹಿತನೆಂದೇ ಸಿದ್ಧವಾಗಿರುವದರಿಂದ ಅನ್ನಮಯಾತ್ಮನೆಂದರೆ ಅನ್ನದ ಕಾರ್ಯವಾದ ಶರೀರವೇ– ಎಂದು ಗೊತ್ತಾಗುತ್ತದೆ.

ಇದಮೇವ ಶಿರಸ್ತಸ್ಯ ಮಾ ಭೂದಧ್ಯಾಸಲಕ್ಷಣಮ್ |
ಪ್ರಾಣಕೋಶವದೇವೇತಿ ತಸ್ಮಾದೇವಾವಧಾರ್ಯತೇ ||

೨೫೨. ಪ್ರಾಣಮಯಾತ್ಮನೇ ಮುಂತಾದವರ ಶಿರ ಆದಿಗಳಂತೆ ಇಲ್ಲಿ ಕಲ್ಪನಾಮಯವಾದ ಶಿರ ಆದಿಗಳಿಲ್ಲ. ಪ್ರಸಿದ್ಧವಾದ (ಮನುಷ್ಯ) ತಲೆಯೇ ಶಿರವು. ಆದ್ದರಿಂದ 'ಏವ' ಎಂದು (ಶ್ರುತಿಯಲ್ಲಿ) ಅವಧಾರಣೆಮಾಡಲಾಗಿದೆ.

ವಿರಾಟ್ ಪಿಂಡಾತ್ಮನೋರೈಕ್ಯಂ ಶ್ರುತ್ಯಂತರವಶಾದಿಹ |
ಉಪಾಸನೋಪದೇಶಾಚ್ಚ ಜಾನೀಯಾತ್ ಪಿಂಡದೇವತಾಮ್ ||

೨೫೩. ಬೇರೊಂದು ಶ್ರುತಿಯ ಪ್ರಮಾಣದಂತೆ ವಿರಾಡಾತ್ಮನಿಗೂ ಪಿಂಡಾತ್ಮರಿಗೂ ಐಕ್ಯವು ಸಿದ್ಧವಾಗುತ್ತದೆ. ಆದ್ದರಿಂದ ಅನ್ನಮಯಾತ್ಮನನ್ನು ವಿರಾಡಾತ್ಮನೆಂದು ತಿಳಿದು ಉಪಾಸನೆಮಾಡಬೇಕು. ಹಾಗೆಂತ ಶ್ರುತಿಯಲ್ಲಿ ಉಪದೇಶಿಸಿದೆ.

ವಿರಾಡಾತ್ಮಕತಾಂ ಯಾತೇ ಪಿಂಡೇಽಧ್ಯಾತ್ಮಾವಸಾಯಿನೀ |
ಪ್ರಾಣೋ ವಾಯ್ವಾತ್ಮತಾಮೇತಿ ಪ್ರಧ್ವಸ್ತಘಟದೀಪವತ್ ||

೨೫೪. ಉಪಾಸನೆಯಿಂದ ಶರೀರವು ವಿರಾಡಾತ್ಮತ್ವವನ್ನು ಹೊಂದಲಾಗಿ ಒಳಗಿರುವ ಪ್ರಾಣನು–ಹೇಗೆ ಗಡಿಗೆಯೊಳಗಿದ್ದ ದೀಪವು ಅದು ಒಡೆದುಹೋಗಲು ತೇಜೋಮಾತ್ರವಾಗಿ ನೆಲೆಗೊಳ್ಳುವದೋ ಹಾಗೆ–ವಾಯ್ವಾತ್ಮನಾಗಿಬಿಡುವನು.

ವಿದ್ಯಾದನ್ನಮಯೇಽಸ್ಯೈವ ಮೂಷಾಯಾಂ ದ್ರುತತಾಮ್ರವತ್ |
ಸರ್ವಾನ್ ಪ್ರಾಣಮಯಾದೀಂಸ್ತಾನ್ ರಚಿತಾನ್ ಪುರುಷಾಕೃತೀನ್ ||

೨೫೫. ಪ್ರಾಣಮಯಾದ್ಯಾತ್ಮರುಗಳಿಗೆ ಪುರುಷಾಕಾರವು ಹೇಗೆಂದರೆ ಮೂಸೆಯಲ್ಲಿರುವ ಕರಗಿದ ತಾಮ್ರ ಲೋಹಕ್ಕೆ ಹೇಗೆ ಮೂಸೆಯ ಆಕಾರದಿಂದಲೇ ವ್ಯವಹಾರವೋ ಹಾಗೆ– ಅನ್ನಮಯಶರೀರದೊಳಗಿರುವ ಪ್ರಾಣಾದಿಗಳಿಗೂ ಶಿರ ಆದಿಗಳನ್ನು ತಿಳಿಯಬೇಕು.

ಯಥೋದಿತಾನುವಾದೀ ತು ಶ್ಲೋಕೋಽಪ್ಯತ್ರ ನಿಗದ್ಯತೇ |
ಬ್ರಾಹ್ಮಣೋಕ್ತಾರ್ಥವಿಜ್ಞಾನದ್ರಢಿಮ್ನೇ ಹಿತಕಾಮ್ಯಯಾ ||

೨೫೬. ಹಿಂದೆ ಹೇಳಿದ ಅಭಿಪ್ರಾಯವನ್ನು ಅನುವಾದಮಾಡುವ ಶ್ಲೋಕವೂ ಇಲ್ಲಿ ಹೇಳಲ್ಪಡುತ್ತದೆ. ಹಾಗೂ ಬ್ರಾಹ್ಮಣೋಕ್ತವಾದ ತಿಳಿವಳಿಕೆಯನ್ನು ದೃಢಗೊಳಿಸುವದಕ್ಕಾಗಿ ಹಿತವನ್ನು ಬಯಸಿ ಶ್ರುತಿಯು ಹೇಳುತ್ತದೆ.

ಅನ್ನಾದೇವ ಪ್ರಜಾಸ್ಸರ್ವಾ ಜಾಯಂತೇಽನ್ನೇನ ಬೃಂಹಿತಾಃ ।
ವರ್ಧಂತೇ ತ್ವನ್ನಮೇವೈತಾಃ ಪ್ರವಿಲೀಯನ್ತಿ ಸರ್ವಶಃ ॥

೨೫೭. ಪ್ರಜೆಗಳೆಲ್ಲರೂ ಅನ್ನದಿಂದಲೇ ಹುಟ್ಟುವರು ; ಅನ್ನದಿಂದಲೇ ಪೋಷಿತರಾಗಿ ಬೆಳೆಯುವರು. ಕಡೆಯಲ್ಲಿ ಅನ್ನದಲ್ಲಿಯೇ ಸೇರಿ ಒಂದಾಗಿಬಿಡುವರು.

ಭೂತೇಭ್ಯಃ ಪೂರ್ವನಿಷ್ಪತ್ತೇಃ ಜ್ಯೇಷ್ಠಮನ್ನಂ ವಿರಾಡ್ಭವೇತ್ ।
ಸ ವೈ ಶರೀರೀ ಪ್ರಥಮಸ್ತಥಾ ಪೌರಾಣಿಕೀ ಸ್ಮೃತಿಃ ॥

೨೫೮. ಪ್ರಾಣಿಗಳಿಗಿಂತ ಮೊದಲು ಹುಟ್ಟಿದ್ದರಿಂದ ಅನ್ನವು ಜ್ಯೇಷ್ಠವೆನಿಸಿತು. ಹಾಗೂ ವಿರಾಟ್ ಎಂದೂ ಕರೆಯಲ್ಪಟ್ಟಿತು. ಪೌರಾಣಿಕಸ್ಮೃತಿಯೂ ವಿರಾಡಾತ್ಮನನ್ನೇ ಪ್ರಥಮಶರೀರಿಯೆಂದು ನಿರ್ದೇಶಿಸಿದೆ.

ಓಷಣಾದಗ್ನಿರೋಷಃ ಸ್ಯಾದ್ಧಾತೂನುಷ್ಯತಿ ಯೇನ ಸಃ ।
ಧಾನಾತ್ತಸ್ಯಾನ್ನತತ್ತ್ವಜ್ಞೈರೌಷಧಂ ಶಬ್ದ್ಯತೇ ಸದಾ ॥

೨೫೯. ಎಲ್ಲವನ್ನೂ ಸುಡುವದರಿಂದ ಅಗ್ನಿಯನ್ನು ಓಷ– ಎನ್ನುವರು. ಅದು ಧಾತುಗಳನ್ನೆಲ್ಲ ಸುಡುತ್ತದೆಯಷ್ಟೆ! ಅನ್ನವು ದೊರಕದೆ ಇರುವಾಗ ಆ ಜಠರಾಗ್ನಿಯು ಶರೀರದೊಳಗಿನ ಧಾತುಗಳನ್ನೇ ಸುಡುತ್ತದೆ. ಆದ್ದರಿಂದ ಅಗ್ನಿಯನ್ನು ಶಮನಗೊಳಿಸುವ ಅನ್ನವನ್ನು ಅದರ ತತ್ತ್ವವನ್ನು ಬಲ್ಲವರು ಔಷಧವೆಂದು ಕರೆಯುವರು.

ಸರ್ವೇಷಾಂ ಜಾಠರಾಗ್ನ್ಯಾಖ್ಯಂ ವತ್ಸಂ ಚೋಷ್ಯಾದಿಭಿಃ ಸ್ತನೈಃ ।
ಅನ್ನಂ ಗೌರ್ಧಯತೇ ಯಸ್ಮಾತ್ ಸರ್ವೌಷಧಮತೋ ಭವೇತ್ ॥

೨೬೦. ಜಾಠರಾಗ್ನಿಯೆಂಬ ಎಲ್ಲರ ಹೊಟ್ಟೆಯಲ್ಲಿರುವ ಅಗ್ನಿದೇವನ ಪುತ್ರನನ್ನು ಅನ್ನವೆಂಬ ಹಸುವು ಭಕ್ಷ್ಯಭೋಜ್ಯಲೇಹ್ಯಚೋಷ್ಯಗಳೆಂಬ ಮೊಲೆಗಳಿಂದ ತೃಪ್ತಿಗೊಳಿಸುವದರಿಂದ ಅನ್ನವು ಸರ್ವೌಷಧವೆನಿಸಿರುವದು.

ಉದ್ಭೂತಿಸ್ಥಿತಿಹಾನಿಭ್ಯೋ ಜಗತೋಽನ್ನಂ ಹಿ ಕಾರಣಮ್ ।
ಕಾರ್ಯಸ್ಯ ಕಾರಣಾತ್ ಬ್ರಹ್ಮ ತದ್ಯೇ ನಿತ್ಯಮುಪಾಸತೇ ॥
ಆಪ್ನುವಂತ್ಯಖಿಲಂ ತೇಽನ್ನಮಧ್ಯಾತ್ಮಂ ದೈವತಾತ್ಮನಾ ॥

೨೬೧–೨೬೨. ಉತ್ಪತ್ತಿ, ಸ್ಥಿತಿ, ನಾಶ– ಇವುಗಳ ನಿಮಿತ್ತವಾಗಿ ಅನ್ನವು ಜಗತ್ತಿಗೆ ಕಾರಣವೆನಿಸಿರುವದು. ಹೀಗೆ ಅದು ಕಾರ್ಯವಾದ ಜಗತ್ತಿಗೆ ಕಾರಣವಾಗಿರುವದರಿಂದ ಬ್ರಹ್ಮವೆನಿಸಿರುವದು. ಯಾರು ಅದನ್ನು ಹೀಗೆಂದು ನಿತ್ಯವೂ ಉಪಾಸಿಸುವರೋ ಅವರು ಅಧ್ಯಾತ್ಮವಾಗಿ ದೇವತಾತ್ಮನಾಗಿರುವ ವಿರಾಡಾತ್ಮನಂತೆ ಎಲ್ಲಾ ಅನ್ನವನ್ನೂ ಪಡೆದುಕೊಳ್ಳುವರು.

ಸ್ಯೈಷಾ ವಿರಾಡಿತಿ ಹ್ಯುಕ್ತಮನ್ನಾತ್ತೃತ್ವಂ ಹಿ ತಾಂಡಿಕೈಃ |
ಕಾರ್ಯಂ ಸರ್ವಂ ಯತೋ ವ್ಯಾಪ್ತಂ ಕಾರಣೇನಾತ್ತೃರೂಪಿಣಾ |
ಇತಿ ಹೇತೂಪದೇಶಾಯ ಹ್ಯನ್ನಂ ಹೀತ್ಯುಚ್ಯತೇ ಪುನಃ ||

೨೬೩. "ಅನ್ನಂ ಹಿ ಭೂತಾನಿ" ಎಂಬ ಪುನರುಕ್ತಿಯ ಅಭಿಪ್ರಾಯ ವೇನೆಂದರೆ; ಉಪಾಸಕನು ವಿರಾಡಾತ್ಮರೂಪದಿಂದ ಸರ್ವಾನ್ನಭಕ್ಷಕನಾಗುತ್ತಾನೆಂದು ಹೇಳುವದೇ ಆಗಿದೆ. ತಾಂಡಿಶಾಖೆಯವರು ವಿರಾಜನು ಅನ್ನಾದಿಯು- ಎಂದರೆ ಅನ್ನವನ್ನು ತಿನ್ನುವವನು- ಎಂದು ಅಧ್ಯಯನಮಾಡುವರು. ಅತ್ತೃವಾದ ಕಾರಣಾತ್ಮನಿಂದ ಅನ್ನವಾದ ಕಾರ್ಯವೆಲ್ಲವೂ ವ್ಯಾಪಿಸಲ್ಪಟ್ಟಿರುವದರಿಂದ ಉಪಾಸಕನು ಸರ್ವಾನ್ನಭಕ್ಷಕನಾಗುವನೆಂದು ಕಾರಣವನ್ನು ತಿಳಿಸುವದೇ ಪುನರುಕ್ತಿಯ ಅಭಿಪ್ರಾಯವಾಗಿದೆ.

ಅದ್ಯತೇಽನ್ನಂ ಪ್ರಧಾನತ್ವಾದದಿತಿತ್ವಾತ್ತ್ವಥಾಽತ್ತಿ ಚ |
ಅನ್ನಾನ್ನಾದತ್ವಹೇತೋಸ್ತದನ್ನಂ ಹೀತ್ಯುಚ್ಯತೇ ಬುಧೈಃ ||

೨೬೪. ತಿನ್ನಲ್ಪಡುವದರಿಂದ ಅನ್ನವೆಂದೂ ತಿನ್ನುವವರನ್ನು (ತಾನೂ ತಿನ್ನುತ್ತದೆಯಾಗಿ) ಅದಿತಿಯೆಂದೂ ಅನ್ನಾನ್ನಾದತ್ವಕಾರಣದಿಂದ ಬಲ್ಲವರು ಅದನ್ನು ಅನ್ನವೆಂದು ಕರೆಯುವರು.

ಆಪ್ನೋತಿ ಸರ್ವಕಾರ್ಯಾಣಿ ಕಾರಣಾತ್ಮತಯಾ ವಿರಾಟ್ |
ತತೋಽಪ್ಯನ್ಯಃ ಪ್ರವೇಶಾಯ ತಸ್ಮಾದಿತ್ಯಭಿಧೀಯತೇ ||

೨೬೫. ಕಾರಣಾತ್ಮನಾದ ವಿರಾಜನು ಎಲ್ಲಾ ಕಾರ್ಯಗಳನ್ನೂ ವ್ಯಾಪಿಸಿಕೊಂಡಿರುತ್ತಾನೆ. ಇನ್ನು ಅದಕ್ಕಿಂತಲೂ ಒಳಕ್ಕೆ ಪ್ರವೇಶಿಸುವ ಸಲುವಾಗಿ ತಸ್ಮಾತ್- ಎಂದು ಮುಂದುವರೆದು ಹೇಳಿದೆ.

ವೈಶಬ್ದೇನೈವ ಸಂಸ್ಮಾರ್ಯ ದವೀಯೋದೇಶವರ್ತಿನಮ್ |
ತಸ್ಮಾಚ್ಛಬ್ದೇನ ವೈರಾಜಮಾದಾಯಾಧ್ಯಾತ್ಮರೂಪಿಣಃ |
ಏತಸ್ಮಾದಿತಿ ಶಬ್ದೇನ ವೈರಾಜತ್ವಂ ಪ್ರಬೋಧ್ಯತೇ ||

೨೬೬-೨೬೭. ದೂರತರವಾದ ದೇಶದಲ್ಲಿರುವ ವಿರಾಜನನ್ನು ವೈ ಎಂಬ ಶಬ್ದದಿಂದ ಸ್ಮರಿಸಿ ತಸ್ಮಾತ್- ಎಂಬ ಶಬ್ದದಿಂದ ಅಧ್ಯಾತ್ಮರೂಪನಾದ ವೈರಾಜನನ್ನು ತೆಗೆದುಕೊಂಡು ಏತಸ್ಮಾತ್ ಎಂಬುದರಿಂದ ಅನ್ನಮಯಾತ್ಮನಿಗೆ [illegible]ತ್ವವನ್ನು ತಿಳಿಸುತ್ತಾರೆ.

ಕಾರ್ಯಾಣಾಂ ಕಾರಣಾತ್ಮತ್ವಮೇವಂ ಸ್ಯಾದುತ್ತರೇಷ್ವಪಿ
ಬ್ರಹ್ಮಾನಂತಂ ಭವೇದೇವಂ ಸಾಂಖ್ಯರಾದ್ಧಾಂತಮನ್ಯಥಾ

೨೬೮. ಮುಂದಿನ ಪರ್ಯಾಯಗಳಲ್ಲಿಯೂ ಕಾರ್ಯಗಳಿಗೆ ಕಾರಣಾತ್ಮತ್ವವು ಇದೇ ರೀತಿಯಲ್ಲಿ ಸಿದ್ಧಿಸುತ್ತದೆ. ಹೀಗೆ ಕಾರಣಾತ್ಮತ್ವವು ನೆಲೆಗೊಳ್ಳಲಾಗಿ ಕಡೆಯಲ್ಲಿ ಅನಂತವಾದ ಬ್ರಹ್ಮವೊಂದೇ ಉಳಿದುಕೊಳ್ಳುವದು. ಹಾಗಿಲ್ಲವಾದರೆ ಕಾರ್ಯಕಾರಣಗಳೆಂಬ ಎರಡೂ ತತ್ತ್ವಗಳು ಸತ್ಯವೆಂದಾಗಿ ಸಾಂಖ್ಯಸಿದ್ಧಾಂತವಾದೀತು.

ಪೂರ್ವಕಾರ್ಯಾತಿರೇಕೇಣ ಸ್ವಾತ್ಮನಾ ಚಾನ್ವಯೋಕ್ತಿತಃ |
ಅನ್ವಯವ್ಯತಿರೇಕಾಭ್ಯಾಂ ಯಥೋಕ್ತಾರ್ಥಃ ಸಮರ್ಥಿತಃ ||

೨೬೯. ಹಿಂದಿನ ಕಾರ್ಯಕ್ಕಿಂತ ಬೇರೆಯಾಗಿ ಹಾಗೂ ಕಾರ್ಯವಾದದ್ದರಲ್ಲಿ ಅನುಗತವಾಗಿರುವ ಕಾರಣದಿಂದಲೂ– ಹೀಗೆ ಅನ್ವಯವ್ಯತಿರೇಕಗಳಿಂದ ಈ ಹೇಳಲ್ಪಟ್ಟ ಅರ್ಥವು ಪ್ರತಿಪಾದಿಸಲ್ಪಟ್ಟಿತು.

ಯಥೋಕ್ತಾನ್ನಮಯಾದಸ್ಮಾದನ್ಯಃ ಸ್ಯಾತ್ತದ್ವಿಲಕ್ಷಣಃ |
ಅಂತರಃ ಪ್ರತ್ಯಗಿತ್ಯೇತದಾತ್ಮಾ ಚಾತ್ಮಸಮನ್ವಯಾತ್ ||

೨೭೦. ಹಿಂದೆ ಹೇಳಿದ ಅನ್ನಮಯಾತ್ಮನಿಗಿಂತ ಬೇರೆಯಾದ ಎಂದರೆ ವಿಲಕ್ಷಣನಾದ ಅಂತರನೂ ಪ್ರತ್ಯಗಾತ್ಮನೂ ಆದವನನ್ನು ಅನ್ಯೋಽನ್ತರಃ ಎಂಬ ವಾಕ್ಯದಿಂದ ಹೇಳಿ ಶ್ರುತಿಯು ಆತ್ಮತ್ವವನ್ನು ಸಮನ್ವಯಮಾಡುತ್ತಿದೆ.

ಕೋಶೈಶ್ಚತುರ್ಭಿಃ ಸಂವ್ಯಾಪ್ತೋ ಯಥೈವಾನ್ನಮಯಃ ಪುರಾ |
ಜಾನೀಯಾದುತ್ತರಾನೇವಂ ತ್ರಿದ್ವ್ಯೇಕಾರ್ಥಸಮನ್ವಯಾತ್ ||

೨೭೧. ಹಿಂದೆ ಹೇಗೆ ಅನ್ನಮಯನು ಉಳಿದ ಪ್ರಾಣಮಯಾದಿ ನಾಲ್ಕು ಕೋಶಗಳಿಂದ ವ್ಯಾಪ್ತನಾಗಿದ್ದನೆಂದು ಹೇಳಲಾಗಿತ್ತೋ ಹಾಗೆಯೇ ಮುಂದು ಮುಂದಿನ ಕೋಶಾತ್ಮರುಗಳನ್ನೂ ಕ್ರಮವಾಗಿ ಮೂರು–ಎರಡು–ಒಂದು–ಕೋಶದಿಂದ ವ್ಯಾಪ್ತರಾಗಿರುವರೆಂದು ತಿಳಿಯಬೇಕು.

ತೇನ ಪ್ರಾಣಮಯೇನೈಷ ಪೂರ್ಣೋ ರಜ್ಜ್ವೇವ ಪನ್ನಗಃ |
ಕಾರ್ಯತೋಽನ್ನಮಯಃ ಕ್ಲೃಪ್ತೋ ವಾಚಾರಂಭಣಶಾಸ್ತ್ರತಃ ||

೨೭೨. ಈ ಅನ್ನಮಯಾತ್ಮನು– ಹಾವು ಹಗ್ಗದಿಂದ ಸಿದ್ಧವಾದಂತೆ– ಪ್ರಾಣಮಯನಿಂದ ಸಿದ್ಧನಾಗಿರುವನು. 'ವಾಚಾರಂಭಣಮ್' ಎಂಬ ಶ್ರುತಿವಾಕ್ಯದಿಂದ ಇದು ತಿಳಿದುಬರುತ್ತದೆ.

ಸ ವೈ ಪುರುಷವಿಧೋ ಹ್ಯುಕ್ತೋ ಯೋಽಯಂ ಪ್ರಾಣಮಯಃ ಸ್ಮೃತಃ |
ಅಮೂರ್ತತ್ವಾತ್ ಕುತೋಽನ್ವೇತದ್ಧೇತುಸ್ತಸ್ಯೇತಿ ಭಣ್ಯತೇ ||

೨೭೩. ಯಾವ ಪ್ರಾಣಮಯಾತ್ಮನೆಂಬವನಿರುವನೋ ಅವನೂ ಪುರುಷಾಕಾರನಾಗಿರುವನು. ಹೇಗೆಂದರೆ ಅವನು ಅಮೂರ್ತನಾದರೂ (ಹಿಂದೆ ತಿಳಿಸಿದ

ಮೂಸೆಯಲ್ಲಿರುವ ಕರಗಿದ ತಾಮ್ರದಂತೆ) ಅನ್ನಮಯಶರೀರದಲ್ಲೇ ಇರುವದರಿಂದ ಅದರ ಆಕಾರವನ್ನೇ ಹೊಂದಿದವನಾಗಿರುತ್ತಾನೆಂದು ಹೇಳಿದೆ.

ಪ್ರಾಣಸ್ತಸ್ಯ ಶಿರಃ ಶ್ರೈಷ್ಠ್ಯಾತ್ ಪ್ರಾಣೋ ಯಸ್ಮಾನ್ಮುಖಾಲಯಃ |
ವ್ಯಾನೋಽಸ್ಯ ದಕ್ಷಿಣಃ ಪಕ್ಷ ಉತ್ತರೋಽಪಾನ ಉಚ್ಯತೇ ||

೨೭೪. ಈ ಪ್ರಾಣಮಯಾತ್ಮನಿಗೆ ಪ್ರಾಣವೇ ತಲೆಯು. ಏಕೆಂದರೆ ಅದು ಮುಖದಲ್ಲಿರುವದರಿಂದ ಶ್ರೇಷ್ಠವಾಗಿದೆ. ವ್ಯಾನವು ಬಲಪಕ್ಷವು. ಅಪಾನವು ಎಡಪಕ್ಷವು.

ಸಾಮಾನ್ಯಂ ವೀರ್ಯವತ್ತ್ವಾತ್ ಸ್ಯಾದಿತರಸ್ಯಾತಥಾತ್ವತಾ |
ಆಕಾಶ ಇತಿ ಚಾತ್ರ ಸ್ಯಾತ್ ಸಮಾನೋಽಮ್ಬರಸಾಮ್ಯತಃ ||

೨೭೫. ವ್ಯಾನನು ಯಾರೆಂದರೆ: ದೇಹದಲ್ಲಿರುವ ವೀರ್ಯಶಕ್ತಿಯೇ ಅದು. ಉಳಿದ ಪ್ರಾಣಗಳಿಗೆ ಈ ಗುಣವಿರುವದಿಲ್ಲ. ಇನ್ನು ಸಮಾನನು ಆಕಾಶದಂತೆ ವ್ಯಾಪಕನಾಗಿರುವದರಿಂದ 'ಆಕಾಶ ಆತ್ಮಾ' ಎಂದು ಇವನನ್ನೇ ಆತ್ಮನೆಂದೂ ಶ್ರುತಿಯಲ್ಲಿ ಹೇಳಿದೆ.

ಪ್ರಾಣಾನಾಂ ತತ್ಪ್ರತಿಷ್ಠಾನಾದಾತ್ಮಾಸೌ ಶ್ರುತಿತೋ ಭವೇತ್ |
ಪೃಥಿವೀ ದೇವತಾ ಪುಚ್ಛಂ ಸೈಷೇತಿ ಶ್ರುತಿದರ್ಶನಾತ್ ||
ಅಸೋರಾಧ್ಯಾತ್ಮಿಕಸ್ಯೈಷಾ ಸ್ಥಿತಿಹೇತುಃ ಪ್ರಕೀರ್ತಿತಾ |
ಅನ್ನಾತ್ಮನೀವೇಹಾಪ್ಯಾಹ ಶ್ಲೋಕಂ ಪ್ರಾಣಮಯಾತ್ಮನಿ ||

೨೭೬–೨೭೭. ಪ್ರಾಣಗಳೆಲ್ಲವೂ ಸಮಾನದಲ್ಲಿ ಪ್ರತಿಷ್ಠಿತವಾಗಿರುವವೆಂದು ಶ್ರುತಿಯಿಂದ ತಿಳಿದುಬರುವದರಿಂದ ಸಮಾನನು ಆತ್ಮನೆನಿಸಿದ್ದಾನೆ. ಈ ಪ್ರಾಣ ಮಯಾತ್ಮನಿಗೆ ಪೃಥಿವೀದೇವತೆಯೇ ಪುಚ್ಛವು. ಈಕೆಯು ಪುರುಷನ ಅಪಾನ ಪ್ರಾಣವನ್ನಾಶ್ರಯಿಸಿ (ಆಧಾರಳಾಗಿದ್ದಾಳೆ) ಎಂಬ ಶ್ರುತಿಯಿಂದ ಹೀಗೆ ಸಿದ್ಧ ವಾಗುತ್ತದೆ. ಆಧ್ಯಾತ್ಮಿಕಪ್ರಾಣನಿಗೆ ಈಕೆಯು ಸ್ಥಿತಿಹೇತುವೆನಿಸಿದ್ದಾಳೆ. ಅನ್ನ ಮಯಾತ್ಮನಂತೆಯೇ ಇಲ್ಲಿಯೂ ಪ್ರಾಣಮಯಾತ್ಮನ ವಿಷಯದಲ್ಲಿ ಶ್ಲೋಕವಿದೆ.

ಪ್ರಾಣಂ ಪ್ರಾಣಂ ತಮನ್ವೇವ ದೇವಾಃ ಪ್ರಾಣನ್ತಿ ನ ಸ್ವತಃ |
ವರ್ಷಸೀಹ ಯದೈವ ತ್ವಮಥೇಮಾಃ ಪ್ರಾಣತೇ ಪ್ರಜಾಃ |
ಮನುಷ್ಯಾಃ ಪಶವೋಽನ್ಯೇ ಚ ಪ್ರಾಣನ್ತ್ಯಸುಸಮಾಶ್ರಯಾತ್ ||

೨೭೮–೨೭೯. ದೇವತೆಗಳು ಆ ಪ್ರಾಣನನ್ನು ಅನುಸರಿಸಿಕೊಂಡೇ ಉಸಿ ರಾಡುವರು. ಸ್ವತಃ ಅವರಿಗೆ ಪ್ರಾಣನಶಕ್ತಿಯಿರುವದಿಲ್ಲ. 'ಎಲೈ ಪ್ರಾಣನೆ, ನೀನು ಮಳೆಗರೆದಾಗ ಈ ಪ್ರಜೆಗಳು ಉಸಿರಾಡುವರು'. ಹಾಗೆಯೇ ಮನುಷ್ಯರೂ ಪಶುಗಳೂ ಉಳಿದವರೂ ಪ್ರಾಣನನ್ನು ಆಶ್ರಯಿಸಿಕೊಂಡೇ ಉಸಿರಾಡುವರು.

ಅಧ್ಯಾತ್ಮಮಧಿದೈವಂ ಚ ಕರಣಾನ್ಯಧಿದೈವತಾಃ |
ಪ್ರಾಣಸ್ವರೂಪಮಾಪದ್ಯ ಜಹುರ್ಮೃತ್ಯುಮಿತಿ ಶ್ರುತಿಃ ||
ಘಟತೇಽಸಾವಿದಂ ಸರ್ವಂ ಸರ್ವಸ್ಯಾಯುರ್ಯತೋ ಹ್ಯಸುಃ |
ತಸ್ಮಾತ್ತಂ ತದ್ವಿದಃ ಪ್ರಾಹುಃ ಸರ್ವಾಯುಷಮನೇಕಶಃ ||

೨೮೦–೨೮೧. ಅಧ್ಯಾತ್ಮವಾದ ಕರಣಗಳೂ ಅಧಿದೈವರಾದ ದೇವತೆಗಳೂ ಪ್ರಾಣನ ತತ್ತ್ವವನ್ನರಿತು ಅವನ ಸ್ವರೂಪಭೂತರಾಗಿ ಉಳಿದುಕೊಂಡು ಮೃತ್ಯುವಿನಿಂದ ಬಿಡುಗಡೆಯಾದರು ಎಂದು (ಬೃಹದಾರಣ್ಯಕ)ಶ್ರುತಿಯು ಹೇಳುತ್ತಿದೆ. ಪ್ರಾಣನು ಎಲ್ಲರ ಆಯುಸ್ಸ್ವರೂಪನಾದ್ದರಿಂದ ಇದೆಲ್ಲವೂ ಹೊಂದುತ್ತದೆ. ಆದ್ದರಿಂದ ಬಲ್ಲವರು ಬಹಳಸಲ ಈ ಪ್ರಾಣನನ್ನು 'ಸರ್ವಾಯುಷ'ನೆನ್ನುವರು.

ಸರ್ವಾಯುಷಗುಣೇನಾಸುಂ ಯ ಆತ್ಮಾನಮುಪಾಸತೇ |
ತೇ ತಂ ಸರ್ವಾಯುಷಂ ಪ್ರಾಣಂ ಪ್ರಾಪ್ನುವನ್ತ್ಯಭಿಯೋಗತಃ ||
ತಸ್ಯ ತ್ವನ್ನಮಯಸ್ಯೈಷ ಯೋಽಯಂ ಪ್ರಾಣಮಯಃ ಸ್ಮೃತಃ |
ಭವಃ ಶರೀರೇ ಶಾರೀರ ಆತ್ಮಾ ತೇನಾತ್ಮವಾನ್ ಯತಃ ||

೨೮೨–೨೮೩. ಯಾರು ತಮ್ಮ ಆತ್ಮನನ್ನು ಸರ್ವಾಯುಷ್ಯಗುಣವುಳ ಪ್ರಾಣನೆಂದು ಚಿಂತಿಸುವರೋ ಅವರು ಆ ಉಪಾಸನೆಯಿಂದ ಸರ್ವಾಯುಷ್ಯನಾದ ಪ್ರಾಣಾತ್ಮನನ್ನೇ ಸೇರುತ್ತಾರೆ. ಯಾವ ಈ ಪ್ರಾಣಮಯನಿರುವನೋ ಇವನು ಅನ್ನಮಯಶರೀರದಲ್ಲಿರುವವನಾದ್ದರಿಂದ ಅವನಿಗೆ ಶಾರೀರನೆನಿಸಿದ್ದಾನೆ. ಏಕೆಂದರೆ ಅನ್ನಮಯನು ಇವನಿಂದಲೇ ಆತ್ಮವಂತನೆನಿಸಿರುತ್ತಾನೆ.

ಸತ್ಯಾದಿಲಕ್ಷಣೋ ವಾತ್ಮಾ ಗೌಣೋ ಹ್ಯಾತ್ಮಾಽಮುತೋಽಪರಃ |
ಸರ್ವಾಂತರತ್ವಾನ್ನ್ಯಾಯ್ಯೈವಂ ಯಃ ಪೂರ್ವಸ್ಯೇತಿ ಹಿ ಶ್ರುತಿಃ ||
ಮಿಥ್ಯಾತ್ಮನಾಂ ಹಿ ಸರ್ವೇಷಾಂ ಸತ್ಯಾದಿಗುಣಲಕ್ಷಣಮ್ |
ವ್ಯಾವಿದ್ಧಾಶೇಷಸಂಸಾರಮಾತ್ಮಾನಂ ತಂ ಪ್ರಚಕ್ಷ್ಮಹೇ ||

೨೮೪–೨೮೫. ಅಥವಾ ಆತ್ಮನೆಂದರೆ ಸತ್ಯಜ್ಞಾನಾನಂತಸ್ವರೂಪನಾದ ಆತ್ಮನೇ ಸರ್ವಾಂತರನಾಗಿರುವದರಿಂದ ಇವನಿಗೂ ಆತ್ಮನೆಂಬುದು ನ್ಯಾಯವಾಗಿದೆ. ಏಕೆಂದರೆ ಶ್ರುತಿಯೂ 'ಯಃ ಪೂರ್ವಸ್ಯ' ಎಂದು ಹೇಳುತ್ತಿದೆ. ಇವನಿಗಿಂತ ಬೇರೆಯಾದ ಆತ್ಮನು ಗೌಣಾತ್ಮನೆನಿಸುವನು. ಎಲ್ಲಾ (ಗೌಣ) ಮಿಥ್ಯಾತ್ಮರುಗಳಿಗೂ ಸತ್ಯಾದಿಗುಣಲಕ್ಷಣನಾದ ಹಾಗೂ ಸಂಸಾರಧರ್ಮಗಳನ್ನೆಲ್ಲ ತೊಡೆದುಹಾಕಿರುವ ಆತ್ಮನನ್ನೇ ನಾವು ಆತ್ಮನೆಂದು ಹೇಳುವೆವು.

ನ ಹ್ಯಾತ್ಮವಾನ್ ಭವೇತ್ ಸರ್ಪೋ ದಂಡಾದ್ಯಧ್ಯಾಸರೂಪಿಣಾ |
ಆತ್ಮನಾ ವಿತಥೇನೈವ ಸರ್ಪೋ ರಜ್ಜ್ವಾತ್ಮನಾತ್ಮವಾನ್ ||

ಪ್ರಾಣಾದ್ಧ್ಯೇವೇತ್ಯತೋ ನ್ಯಾಯಾತ್ ವಕ್ಷ್ಯಮಾಣಶ್ರುತೀರಿತಾತ್ |
ವ್ಯಾತ್ಪ್ರಾಪ್ಯಾನ್ನಮಯಂ ತುಚ್ಛಂ ಪ್ರಾಣೋಽಸ್ಮೀತಿ ವ್ಯವಸ್ಥಿತಃ ||
ಯಸ್ತಂ ಮನೋಮಯಾತ್ಮಾನಂ ಸಂಕ್ರಾಮಯಿತುಮುಚ್ಯತೇ ||

೩೮೬–೩೮೭. ಸುಳ್ಳೇ ಆಗಿರುವ ದಂಡವೇ ಮುಂತಾದ ಅಧ್ಯಾಸರೂಪವಾದ ವಸ್ತುವಿನಿಂದ ಸರ್ಪವು ಆತ್ಮವಂತನೆನಿಸಲಾರದು. ಆದರೆ ರಜ್ಜುವಿನಿಂದ ಸರ್ಪವು ಆತ್ಮವಂತವೆನಿಸುವದು. ಆದ್ದರಿಂದ ಮುಂದೆ ಶ್ರುತಿಯಲ್ಲಿರುವಂತೆ 'ಪ್ರಾಣ ನಿಂದಲೇ' ಎಂಬ ಮಾತಿನಿಂದ ತುಚ್ಛವಾದ ಅನ್ನಮಯಾತ್ಮನಿಗಿಂತ ಹೆಚ್ಚಿನ ಪ್ರಾಣಮಯಾತ್ಮನಿಗೆ ಏರಿಸಿ ಮತ್ತೆ ಮುಂದೆ ಮನೋಮಯಾತ್ಮನನ್ನು ವ್ಯಾಪಿಸಿ ಕೊಳ್ಳುವ ಸಲುವಾಗಿ 'ನಾನು ಪ್ರಾಣನಾಗಿರುವೆನು' ಎಂದು ತಿಳಿಸಲಾಗಿದೆ.

ತಸ್ಮಾದಿತ್ಯಾದಿವಾಕ್ಯಸ್ಯ ತ್ವರ್ಥಂ ಪೂರ್ವಮವಾದಿಷಮ್ |
ಪ್ರಾಧಾನ್ಯಂ ಯಜುಷೋ ಜ್ಞೇಯಂ ಹವಿಃಪ್ರಕ್ಷೇಪಕಾರಣಾತ್ ||
ಸ್ವಾಹಾ ಸ್ವಧಾ ವಷಟ್ ಚೇತಿ ಸಂನಿಪತ್ಯೋಪಕುರ್ವತೇ |
ಶಿರ ಆದಿ ಪ್ರಕ್ಲೃಪ್ತಿಸ್ತು ವಾಚನಿಕ್ಯಥವಾಽತ್ರ ಹ ||
ವಚನಂ ಬಲವದ್ ಯಸ್ಮಾತ್ ಪೌರುಷೇಯೀ ಹಿ ಕಲ್ಪನಾ ||

೩೮೮–೩೯೦. 'ತಸ್ಮಾದ್ವಾ' ಮುಂತಾದ ವಾಕ್ಯಕ್ಕೆ ಹಿಂದೆಯೇ ಅರ್ಥ ವನ್ನು ಹೇಳಲಾಗಿದೆ. (ಮನೋಮಯಾತ್ಮನಿಗೆ) ಯಜುಸ್ಸನ್ನು ತಲೆಯೆಂದು ಹೇಳಿರುವದು ಅದು ಯಜ್ಞದಲ್ಲಿ ಹವಿರರ್ಪಣಕ್ಕೆ ಕಾರಣವಾಗಿರುವದರಿಂದ ಪ್ರಧಾನವೆಂದು ಭಾವಿಸಿ ಹೇಳಿದ್ದಾಗಿದೆ. ಇದಕ್ಕೆ ಸ್ವಾಹಾ, ಸ್ವಧಾ, ವಷಟ್– ಎಂಬಿವುಗಳೂ ಹತ್ತಿರವಿದ್ದು ಉಪಕಾರಕಗಳಾಗಿರುತ್ತವೆ. ಅಥವಾ ಇಲ್ಲಿ ಶಿರಸ್ಸೇ ಮುಂತಾದದ್ದನ್ನು ಕಲ್ಪಿಸಿರುವದು ವಚನಬಲದಿಂದ– ಎಂದು ತಿಳಿಯಬೇಕು. ಏಕೆಂದರೆ ವಚನವು ಪ್ರಬಲವಾದ್ದರಿಂದಲೂ ಕಲ್ಪನೆಯು ಪುರುಷತಂತ್ರವಾಗಿರು ವದರಿಂದಲೂ ಇದು ಸಿದ್ಧವಾಗುತ್ತದೆ.

ಪದವಾಕ್ಯಸ್ವರಸ್ಥಾನನಾದವರ್ಣಾದಿಸಂಯುತಾ |
ಯತ್ನೋತ್ಥಮಾನಸೀವೃತ್ತಿರ್ಯಜುಃ ಸಂಕೇತವರ್ತ್ಮನಾ ||
ಈಶ್ವರಜ್ಞಾನಸಂದೃಬ್ಧಾ ಪದವಾಕ್ಯಾನುರಂಜಿತಾ |
ಶ್ರೋತ್ರಾದಿಕರಣದ್ವಾಃಸ್ಥಾ ಯಜುರಿತ್ಯಭಿಧೀಯತೇ ||

೩೯೧–೩೯೩. ಪದ, ವಾಕ್ಯ, ಸ್ವರ, ಸ್ಥಾನ–ಮುಂತಾದವುಗಳಿಂದ ಕೂಡಿದ ಪ್ರಯತ್ನಪೂರ್ವಕವಾಗಿ ಎಬ್ಬಿಸಲಾದ ಮಾನಸೀವೃತ್ತಿಯು ಯಜುಸ್ಸು ಎನಿಸು ವದು. ಇದು ಯಜುಸ್ಸೆಂಬ ಸಂಕೇತದಿಂದ ಕೂಡಿದೆ. ಈಶ್ವರನ ಸಂಬಂಧವಾದ ಜ್ಞಾನದಿಂದ ಕೂಡಿದ್ದಾಗಿದ್ದು ಪದವಾಕ್ಯಗಳಿಂದ ಅಲಂಕೃತವಾಗಿ, ಕಿವಿ ಮುಂತಾದ

13

ಕರಣಗಳ ಮೂಲಕ ಪ್ರಕಟವಾಗುತ್ತಿದ್ದು ಪ್ರಸಿದ್ಧವಾಗಿರುವ (ಅನಿಯತಾಕ್ಷರ ಪಾದಗಳುಳ್ಳ ಮಂತ್ರವಿಶೇಷವು) ಯಜುಸ್ಸೆನಿಸುವದು

ಜ್ಞಾನಾತ್ಮತ್ವೇ ಹಿ ಮಂತ್ರಾಣಾಂ ಘಟತೇ ಮಾನಸೋ ಜಪಃ |
ಜ್ಞಾನಸ್ಯಾಶಬ್ದರೂಪತ್ವಾತ್ ಋಗಾವೃತ್ತಿರ್ನ ಸಿಧ್ಯತಿ ||
ಅಶಕ್ಯತ್ವಾನ್ನ ಚಾವೃತ್ತಿಃ ಘಟಾದೇರಿವ ಶಕ್ಯತೇ |
ಆವೃತ್ತಿಶ್ಚೋದ್ಯತೇ ಚರ್ಚಾಂ ಶ್ರುತೌ ತ್ರಿಃ ಪ್ರಥಮಾಮಿತಿ ||

೨೯೩-೨೯೪. (ಚೈತನ್ಯವಿಶಿಷ್ಟವಾದ ಬುದ್ಧಿವೃತ್ತಿಯು) ಜ್ಞಾನವೆನಿಸುವದರಿಂದ ಮಂತ್ರಗಳನ್ನು ಮಾನಸಜಪಕ್ಕೆ ಅಳವಡಿಸಬಹುದಾಗಿದೆ. ಏಕೆಂದರೆ ಶಬ್ದರೂಪವಾಗದೆ ಇರುವ ಜ್ಞಾನ(ವೃತ್ತಿಯು) ಆವೃತ್ತಿಯೋಗ್ಯವಾಗುವದಿಲ್ಲ. ಆಗ ಋಗಾದಿಗಳ ಆವೃತ್ತಿಯು ಸಿದ್ಧಿಸಲಾರದು. ಘಟವೇ ಮುಂತಾದವುಗಳಂತೆ ಯಜುರಾದಿಶಬ್ದಗಳು ವಿಷಯವಾಗಿಬಿಟ್ಟರೆ ಆವೃತ್ತಿಯು ಸಾಧ್ಯವಾಗುವದಿಲ್ಲ. ಆದರೆ ಶ್ರುತಿಯಲ್ಲಿ ಋಕ್ಕುಗಳ ಆವೃತ್ತಿಯನ್ನು 'ತ್ರಿಃ ಪ್ರಥಮಾಮ್....' ಎಂದು ವಿಧಿಸಲಾಗಿದೆ.

ವಿವರಣೆ : ಮನೋಮಯಾತ್ಮನಿಗೆ ಯಜುಸ್ಸು ತಲೆಯೆಂದೂ ಋಗಾದಿಗಳು ಪಕ್ಷವೆಂದೂ ಹೇಳಿ ಶಾರೀರಾತ್ಮನೆಂದು ಶ್ರುತಿಯಲ್ಲಿ ಕಲ್ಪಿಸಿದೆಯಷ್ಟೆ. ಇಲ್ಲಿ ಯಜುರಾದಿಗಳು- ಎಂದರೆ ಚೈತನ್ಯಪ್ರಕಾಶ್ಯವಾದ ಮಾನಸವೃತ್ತಿರೂಪವಾದ ಶಬ್ದವಿಶೇಷಗಳು- ಎಂದಭಿಪ್ರಾಯ. ಈ ಶಬ್ದಗಳು ಮಾನಸಿಕವಾಗಿ ಉಚ್ಚರಿಸಲ್ಪಡಲು ಬರುತ್ತವೆಯಾದ್ದರಿಂದ ಋಕ್ಕುಗಳಿಗೆ ಮಾನಸಜಪತ್ವವು ಸಿದ್ಧವಾಗುತ್ತದೆ. ಹಾಗೆ ಋಗಾದಿಗಳನ್ನು ಆವೃತ್ತಿಮಾಡಬೇಕೆಂದು ಶ್ರುತಿಯಲ್ಲಿ ಹೇಳಿಯೂ ಇದೆ. ಹಾಗಲ್ಲದೆ ಶಬ್ದರೂಪವಾದ ಋಗಾದಿಗಳನ್ನು ಘಟಾದಿವಸ್ತುಗಳಂತೆ ಬಾಹ್ಯವೃತ್ತಿಗ್ರಾಹ್ಯವೆಂದು ತಿಳಿದರೆ ಅಂಥ ಪದಾರ್ಥಗಳನ್ನು ಆವೃತಿಮಾಡಲಾಗುವದಿಲ್ಲ. ವಸ್ತುವು ಆವೃತ್ತಿಗೆ ವಿಷಯವಲ್ಲ. ಮಾನಸಪ್ರತ್ಯಯವು ಆವೃತ್ತಿವಿಷಯವಾಗಲು ಸಾಧ್ಯವು. ಆದ್ದರಿಂದ ಮನೋಮಯಾತ್ಮನನ್ನು ಯಜುರಾದಿ ವೇದರೂಪವಾದ ಮಾನಸವೃತ್ತಿರೂಪನೆಂದೂ ಆ ವೃತ್ತಿಗಳು ಚೈತನ್ಯವಿಶಿಷ್ಟವಾಗಿಯೇ ತೋರಿಕೊಳ್ಳುವದರಿಂದಲೂ ಚೈತನ್ಯವು ನಿತ್ಯವಾದ್ದರಿಂದಲೂ ವೇದಗಳೂ ನಿತ್ಯವೆಂದು ಸಿದ್ಧವಾಗುತ್ತದೆ- ಎಂದಭಿಪ್ರಾಯ.

ಅಥರ್ಚೋ ವಿಷಯತ್ವೇಽಪಿ ಸ್ಮೃತೇರಾವೃತ್ತಿರಿಷ್ಯತೇ |
ಋಗರ್ಥವಿಷಯಾಯಾಶ್ಚೇತ್ ನೈವಂ ಗೌಣೀ ಹಿ ಸಾ ಭವೇತ್ ||
ಭೂಯೋಽಲ್ಪೀಯಃ ಫಲತ್ವಂ ಚ ಬಾಹ್ಯಮಾನಸಯೋರ್ಜಪೇ |
ಅತೋ ಮಾನಸಮುಖ್ಯತ್ವಮಿತರಸ್ಯಾಸ್ತು ಗೌಣತಾ ||

೨೯೫–೨೯೬. ಇನ್ನು ಋಕ್ಕುಗಳಿಗೆ ವಿಷಯತ್ವವೇ ಉಂಟಾದರೂ ಋಗರ್ಥ ವಿಷಯವಾದ ಸ್ಮೃತಿಯನ್ನು ಆವೃತ್ತಿಮಾಡಬಹುದಲ್ಲವೆ ? ಎಂದರೆ ಹಾಗಲ್ಲ; ಅದು ಗೌಣವಾಗುತ್ತದೆ. ಮತ್ತು ಮಾನಸಜಪಕ್ಕೆ ಫಲವು ಹೆಚ್ಚಾಗಿಯೂ ಬಾಹ್ಯಜಪಕ್ಕೆ ಅಲ್ಪವಾಗಿಯೂ ಇರುವದರಿಂದ ಮಾನಸವಾಗಿಯೇ ಋಗಾದಿ ಗಳನ್ನು ಮುಖ್ಯಾರ್ಥದಲ್ಲಿ ತೆಗೆದುಕೊಳ್ಳಬೇಕು. ಇನ್ನೊಂದು ಎಂದರೆ ವಾಚಿಕವು ಗೌಣವೆಂದಾಗಬಹುದು.

ನಾತ್ಮಾನಂ ಲಭತೇ ಗೌಣೀ ಮುಖ್ಯಾರ್ಥೇ ಸತಿ ಕಲ್ಪನಾ |
ತಸ್ಮಾದೈಶ್ವರವಿಜ್ಞಾನಂ ಯಜುರ್ಬುದ್ಧ್ಯುಪಾಶ್ರಯಮ್ ||
ಏವಂ ಚ ಸತಿ ನಿತ್ಯತ್ವಂ ವೇದಾನಾಂ ಘಟತೇಽಞ್ಜಸಾ |
ವಾಚಕತ್ವಮಶಬ್ದಸ್ಯ ಸಿದ್ಧಂ ನ ಸ್ಫೋಟರೂಪತಃ ||

೨೯೭–೨೯೮. ಗೌಣವಾದ ಕಲ್ಪನೆಯಾದರೋ, ಮುಖ್ಯಾರ್ಥವು ಹೊಂದು ತ್ತಿರುವಲ್ಲಿ ಸಿದ್ಧವಾಗುವದಿಲ್ಲ. ಆದ್ದರಿಂದ ಈಶ್ವರನ (ಸಂಬಂಧವಾದ) ಜ್ಞಾನವು ಬುದ್ಧ್ಯಾಶ್ರಯವಾದ ಯಜುಸ್ಸು- ಎನಿಸಿರುವದು. ಹೀಗೆ ಚೈತನ್ಯವಿಶಿಷ್ಟವಾದ ಯಜುಸ್ಸನ್ನು ಗ್ರಹಿಸಿದಲ್ಲಿ ವೇದಗಳ ನಿತ್ಯತ್ವವೂ ಹೊಂದುತ್ತದೆ. ಮತ್ತು ಶಬ್ದ ರಹಿತವಾದ ಬ್ರಹ್ಮಕ್ಕೆ ವೇದವು ವಾಚಕವೆಂದೂ ಸಿದ್ಧವಾಗುತ್ತದೆ. ಸ್ಫೋಟ ರೂಪದಿಂದ (ವಾಚಕತ್ವವು ಸಿದ್ಧಿಸುವದಿಲ್ಲ.)

ಸರ್ವೇ ವೇದಾಶ್ಚ ಯತ್ರೈಕಂ ಭವಂತೀತಿ ಶ್ರುತೇರ್ವಚಃ |
ಆದೇಶೋ ಬ್ರಾಹ್ಮಣಂ ವಿದ್ಯಾದ್ವಸ್ಮಾತ್ಸ ವಿಧಿರೂಪಭೃತ್ ||
ಬ್ರಹ್ಮಣೋ ವಾ ಪರಸ್ಯೇಯಮಾಜ್ಞಾ ಬ್ರಾಹ್ಮಣಲಕ್ಷಣಾ |
ತಸ್ಮಾದಾದೇಶ ಇತ್ಯೇವಂ ಬ್ರಾಹ್ಮಣಂ ಸಂಪ್ರಚಕ್ಷತೇ ||
ಅಥರ್ವಾಂಗಿರಸಾಭ್ಯಾಂ ಯೇ ದೃಷ್ಟಾಃ ಪುಷ್ಟ್ಯಾದಿಕಾರಿಣಃ |
ಏತ ಏವ ಹಿ ಮಂತ್ರಾಃ ಸ್ಯುರಥರ್ವಾಂಗಿರಸೋಽತ್ರ ತು ||

೨೯೯–೩೦೧. (ಮನೋವೃತ್ತಿಯನ್ನು ವ್ಯಾಪಿಸಿರುವ ಚಿದಾತ್ಮಕವಾದ) ವೇದಗಳು ಎಲ್ಲವೂ ಯಾವ ಪರತತ್ತ್ವದಲ್ಲಿ ಒಂದಾಗುವವೋ- ಎಂಬ ಶ್ರುತಿಯ ಮಾತು ಸಹ ಇಲ್ಲಿ ಪ್ರಮಾಣವಾಗಿದೆ. ಇನ್ನು ಮನೋಮಯಾತ್ಮನಿಗೆ ಆದೇಶವು (ಆತ್ಮನು). ಆದೇಶವೆಂದರೆ ವಿಧಿರೂಪವಾದ ಬ್ರಾಹ್ಮಣವಚನವು. ಪರಬ್ರಹ್ಮದ ಆಜ್ಞಾರೂಪವಾದ್ದರಿಂದ ಬ್ರಾಹ್ಮಣವೆನ್ನುವರು. ಆದ್ದರಿಂದ ಆದೇಶವೆಂದು ಬ್ರಾಹ್ಮಣವನ್ನು ಕರೆಯುತ್ತಾರೆ. ಅಥರ್ವರು ಹಾಗೂ ಅಂಗೀರಸರು-ಎಂಬ ಋಷಿ ಗಳಿಂದ ಕಂಡುಕೊಳ್ಳಲ್ಪಟ್ಟಿರುವ, ಪುಷ್ಟ್ಯಾದಿಫಲಪ್ರದವಾದ ಯಾವ ಮಂತ್ರ ಗಳಿರುವವೋ ಅವುಗಳೇ ಅಥರ್ವಾಂಗಿರಸಮಂತ್ರಗಳೆನಿಸಿರುತ್ತವೆ.

ಮನೋಮಯಾತ್ಮಸಾಕ್ಷ್ಯತ್ರ ಶ್ಲೋಕಃ ಪೂರ್ವವದುಚ್ಯತೇ |
ಯಥೋಕ್ತವೇದಸಿದ್ಧ್ಯರ್ಥಂ ಲಿಂಗಂ ಶ್ಲೋಕೋಽಪಿ ಕೀರ್ತ್ಯತೇ ||
ಅಭಿಧಾನನಿವೃತ್ತಿರ್ಹಿ ಬ್ರಹ್ಮಣೋ ನಾನ್ಯತೋ ಯತಃ |
ಸದಾವಗಮರೂಪತ್ವಾತ್ ಮನೋ ಯಸ್ಮಾನ್ನಿವರ್ತತೇ ||

೩೦೨–೩೦೩. ಈ ಮನೋಮಯಾತ್ಮನನ್ನು ಕುರಿತು ಹಿಂದಿನಂತೆ ಶ್ಲೋಕವು ಪಠಿಸಲ್ಪಡುತ್ತದೆ. ಮನೋಮಯನು ವೇದಪುರುಷನೆಂಬುದನ್ನು ಸಮರ್ಥಿಸಲು ಗುರುತಾಗಿ ಶ್ಲೋಕವು ಹೇಳಲ್ಪಡುತ್ತದೆ. ವೇದವು ಅಭಿಧಾನವು; ಬ್ರಹ್ಮವು ಅಭಿಧೇಯವು– ಎಂಬ (ಅಧ್ಯಾರೋಪ)ನಿವೃತ್ತಿಯು ಸಿದ್ಧಿಸುವದಕ್ಕಾಗಿ 'ಯತೋ ವಾಚೋ....ಮನಸಾ ಸಹ' ಎಂದು ಶ್ಲೋಕದಲ್ಲಿ ತಿಳಿಸಿದೆ. ಬ್ರಹ್ಮವು ಸದಾ ಅವಗತಿಸ್ವರೂಪವಾಗಿರುವದರಿಂದಲೇ ಅದನ್ನು ಹೊಸದಾಗಿ ವೇದವು ತಿಳಿಸಬೇಕಾಗಿಯೂ ಇಲ್ಲ.

ಯದ್ಧಿ ವಾಚಾಽನಭ್ಯುದಿತಂ ಮನುತೇ ಮನಸಾ ನ ಯತ್ |
ಬ್ರಹ್ಮಣೋಽವಿಷಯತ್ವಂ ಹಿ ಶ್ರುತಿರ್ವಾಙ್ಮನಸೋಽವದತ್ ||
ನಾಗೋಚರಂ ಯಯೋರಸ್ತಿ ಬ್ರಹ್ಮ ಮುಕ್ತ್ವಾ ನಿರಂಜನಮ್ |
ತೇ ಮನೋಮಯನಿರ್ದಿಷ್ಟೇ ವಿದ್ಯಾದ್ವಾಙ್ಮನಸೇ ಬುಧಃ ||
ಇತೀಮಮರ್ಥಂ ಚೋದ್ದಿಶ್ಯ ಶ್ಲೋಕಂ ಶ್ರುತಿರುದಾಹರತ್ ||

೩೦೩–೩೦೫. ಯಾವದು ಮಾತಿನಿಂದ ಹೇಳಲು ಬಾರದೋ ಮನಸ್ಸಿನಿಂದ ಮನನಮಾಡಲು ಬಾರದೋ ಆ ಬ್ರಹ್ಮವು ಅವಿಷಯವೆಂದು ಶ್ರುತಿಯು ಭಾವಿಸಿ ವಾಙ್ಮನೋಗೋಚರವಲ್ಲ– ಎಂದಿದೆ. ಆದರೆ ನಿರಂಜನವಾದ ಬ್ರಹ್ಮವನ್ನು ಬಿಟ್ಟು ಉಳಿದುದೆಲ್ಲವೂ ವಾಙ್ಮನಸ್ಸುಗಳಿಗೆ ಗೋಚರವೇ ಆಗಿದ್ದು ಅಗೋಚರವಾದದ್ದು ಯಾವದೂ ಇಲ್ಲ. ಹೀಗೆ ನಿರ್ದಿಷ್ಟವಾಗಿರುವ ಮನೋಮಯಾತ್ಮನನ್ನು ಜ್ಞಾನಿಯಾದವನು ತಿಳಿಯಬೇಕು. ಈ ಅಭಿಪ್ರಾಯವನ್ನೂ ಉದ್ದೇಶಿಸಿ ಶ್ರುತಿಯು ಶ್ಲೋಕವನ್ನು ಉದಾಹರಿಸಿದೆ.

ಬ್ರಹ್ಮಣೋಽನವರತ್ವಾತ್ತು ನೇಹ ಮಂತ್ರಾಭಿಧೇಯತಾ |
ವೃತ್ತಿಪ್ರಧಾನೋ ವೇದಾತ್ಮಾ ವೃತ್ತಿಮಾನ್ ಸ್ಯಾದಥೋತ್ತರಃ ||

೩೦೬. ಬ್ರಹ್ಮವು ಅತಿ ಹೆಚ್ಚಿನದಾಗಿರುವದರಿಂದ ಅದು ಮಂತ್ರಗಳಿಗೆ ಅಭಿಧೇಯವಲ್ಲ. ಆದ್ದರಿಂದ ಮನೋವೃತ್ತಿಪ್ರಧಾನವಾದ ವೇದಾತ್ಮನು ವೃತ್ತಿಮಾನ್ ಎನಿಸುವನು. ಅವನೇ ಮನೋಮಯಾತ್ಮನು. ಈ ಆತ್ಮನೂ ಕೋಶಾತ್ಮನೇ ಆಗಿರುವನು.

ವ್ಯವಸಾಯಾತ್ಮಿಕಾ ಬುದ್ಧಿರ್ವೃತ್ತಿಮಾನಿತ್ಯುದೀರ್ಯತೇ |
ಯಜ್ಞಂ ತನುತ ಇತ್ಯೇತತ್ ಕರ್ತೃತ್ವೇ ಸತಿ ಯುಜ್ಯತೇ ||

೩೦೭. (ಮನೋಮಯನು ಕೋಶಾತ್ಮನಾದ್ದರಿಂದ ಅವನಿಗೆ ಅಂತರನಾಗಿರುವವನು ವಿಜ್ಞಾನಾತ್ಮನು.) ವಿಜ್ಞಾನವೆಂದರೆ ನಿಶ್ಚಯಾತ್ಮಕಬುದ್ಧಿಯು. ಇದೇ ವೃತ್ತಿಯುಳ್ಳದ್ದಾಗಿರುವದರಿಂದ ಕರ್ತೃವಾಗಿರುವದು. ಹಾಗಾದರೇ ಯಜ್ಞವನ್ನು ಮಾಡುತ್ತದೆ- ಎಂಬಿದು ಹೊಂದುತ್ತದೆ.

ಆತ್ಮಚೈತನ್ಯರೂಪಾ ಧೀಃ ಕರ್ತ್ರೀತ್ಯಾತ್ಮಾ ನ ಧ್ರುವತ್ವತಃ |
ಯಜ್ಞಾರಂಭಸ್ಯ ಹೇತುತ್ವಾತ್ ತದಭಾವಾದ್ ವೃಥಾ ಯಜಿಃ ||

೩೦೮. ಆತ್ಮಚೈತನ್ಯವಿಶಿಷ್ಟವಾದ ಬುದ್ಧಿಯು ಕರ್ತ್ರಿಯು. ಆತ್ಮನೇ ನೇರಾಗಿ ಕರ್ತೃವಲ್ಲ. ಏಕೆಂದರೆ ಆತ್ಮನು ಧ್ರುವನು (ಅವಿಕಾರಿಯು). ಹೀಗೆ ಆತ್ಮನು ಕರ್ತೃವಲ್ಲದಿರುವಾಗ ಬುದ್ಧಿಯೇ ಕರ್ತೃವಾಗಬೇಕು. ಏಕೆಂದರೆ ಯಜ್ಞಾದಿಗಳ ಆರಂಭವು ಕರ್ತ್ರಧೀನವಾಗಿದೆ. ಕರ್ತೃವೇ ಇಲ್ಲವೆಂದಾದರೆ ಯಜ್ಞವು ವ್ಯರ್ಥವಾಗುವದು.

ಶ್ರದ್ಧಾಯಾ ಉತ್ತಮಾಂಗತ್ವಂ ಸ್ಮೃತಿರಶ್ರದ್ಧಯೇತಿ ಚ |
ಸತ್ಯಂ ಹಿ ಶ್ರದಿತಿ ಪ್ರಾಹುರ್ಧತ್ತೇ ಧೀಃ ಪ್ರತ್ಯಗಾತ್ಮನಿ |
ತದ್ಯತಸ್ತಾಂ ಮಹಾತ್ಮಾನಃ ಶ್ರದ್ಧಾಮಿತ್ಯೂಚಿರೇ ಧಿಯಮ್ ||

೩೦೯-೩೧೦. ಸ್ಮೃತಿಯಲ್ಲಿ ಅಶ್ರದ್ಧೆಯಿಂದ ಹೋಮಮಾಡಿದ್ದು ಅಸತ್-ಎಂದು ನಿಂದಿಸಿರುವದರಿಂದ ಶ್ರದ್ಧೆಯೇ ವಿಜ್ಞಾನಾತ್ಮನಿಗೆ ತಲೆಯು. ಸತ್ಯವನ್ನು ಶ್ರತ್ ಎನ್ನುವರು. ವಿವೇಕಬುದ್ಧಿಯು ಅದನ್ನು ತನ್ನಲ್ಲಿಯೇ ಧರಿಸಿಕೊಂಡಿರುವದು. ಆದ್ದರಿಂದ ಮಹಾತ್ಮರು ಬುದ್ಧಿಯನ್ನು ಶ್ರದ್ಧೆಯೆಂದು ಕರೆದಿರುವರು.

ಯೋಗೋ ಯುಕ್ತಿಃ ಸಮಾಧಾನಮಾತ್ಮಾ ಸ್ಯಾತ್ತದುಪಾಶ್ರಯಾತ್ |
ಶ್ರದ್ಧಾದೀನಿ ಯಥೋಕ್ತಾರ್ಥಪ್ರತಿಪತ್ತಿಕ್ಷಮಾಣಿ ಚ ||

೩೧೧. ದೇಹದ ಮಧ್ಯಭಾಗದಲ್ಲಿ ಯೋಗದೃಷ್ಟಿಯನ್ನು ಮಾಡಬೇಕು. ಕೈ ಮುಂತಾದ ಅವಯವಗಳು ದೇಹಮಧ್ಯವನ್ನವಲಂಬಿಸಿರುವಂತೆ ಸತ್ಯಾದಿಗಳು ಯೋಗವನ್ನವಲಂಬಿಸಿರುವವು. ಆದ್ದರಿಂದ ಮನಃಸಮಾಧಾನರೂಪವಾದ ಯೋಗವು ಆತ್ಮನು. ಶ್ರದ್ಧೆಯೇ ಮುಂತಾದವುಗಳು ಯೋಗಾಶ್ರಯಗಳಾಗಿದ್ದು ನಿಜವನ್ನು ತಿಳಿಯಲು ಆಗ ಸಮರ್ಥವಾಗುವವು.

ಮಹತ್ತತ್ತ್ವಂ ಮಹೋ ಗ್ರಾಹ್ಯಂ ನೀಡಂ ಕಾರ್ಯಸ್ಯ ತದ್ಯತಃ |
ವ್ಯಾಚಷ್ಟೇ ತನ್ಮಹದ್ಯಕ್ಷಂ ಶ್ರುತಿಃ ಪ್ರಥಮಜಂ ತು ಯತ್ ||

೩೧೨. 'ಮಹಃ ಪುಚ್ಛಂ' ಎಂಬಲ್ಲಿ ಮಹಃ ಎಂದರೆ ಸೂತ್ರಾತ್ಮನು. ಏಕೆಂದರೆ ಅವನೇ ಸರ್ವಕಾರ್ಯಗಳಿಗೂ ಆಶ್ರಯನಾಗಿರುತ್ತಾನೆ. ಶ್ರುತಿಯು ಕೂಡ 'ಮಹದ್ಯಕ್ಷಂ ಪ್ರಥಮಜಮ್' ಎಂದು ಸೂತ್ರಾತ್ಮನನ್ನು ತಿಳಿಸುತ್ತದೆ.

ವಿಜ್ಞಾನಂ ತನುತೇ ಯಜ್ಞಂ ಕರ್ಮಾಣ್ಯನ್ಯಾನಿ ಯಾನಿ ಚ |
ಸರ್ವೇ ಚ ದೇವಾ ವಿಜ್ಞಾನಂ ಬ್ರಹ್ಮ ಜ್ಯೇಷ್ಠಮುಪಾಸತೇ ||

೩೧೩. ವಿಜ್ಞಾನ(ಮಯನು) ಯಜ್ಞವನ್ನೂ ಉಳಿದ ಕರ್ಮಗಳನ್ನೂ ನಿರ್ವಹಿಸುವನು. ಜ್ಯೇಷ್ಠನಾದ ಈ ವಿಜ್ಞಾನಮಯಬ್ರಹ್ಮವನ್ನು ಎಲ್ಲಾ ದೇವತೆಗಳೂ ಉಪಾಸನೆಮಾಡುವರು.

ಪರಮೇವ ಹಿ ತದ್ಬ್ರಹ್ಮ ಬುದ್ಧಿಕಂಚುಕಭೃತ್ ಸ್ವಯಮ್ |
ಘಟಾದಾವಿವ ವಿಜ್ಞಪ್ತೌ ಧೀರಾತ್ಮಾನಂ ತತೋಽರ್ಪಯೇತ್ ||
ಅಗ್ರಜಂ ಬ್ರಹ್ಮ ವಿಜ್ಞಾನಂ ದೇವಾ ಅಗ್ನ್ಯಾದಯಃ ಸದಾ |
ಉಪಾಸತೇ ತದಾಪ್ತ್ಯರ್ಥಂ ತೇ ದೇವಾ ಇತಿ ಚ ಶ್ರುತಿಃ ||

೩೧೪-೩೧೫. ಬುದ್ಧಿಯೆಂಬ ಕವಚವನ್ನು ಧರಿಸಿದ ಪರಬ್ರಹ್ಮವೇ ಅದು. ಹೇಗೆ ಬುದ್ಧಿಯು ಘಟಾದಿಗಳನ್ನು ಅರಿಯುವಾಗ ತಾನೇ ಆಯಾ ವಸ್ತುರೂಪವಾದ ವೃತ್ತಿಗಳಾಗಿ ಪರಿಣಮಿಸಿ ಬೆಳಗುವದೋ ಹಾಗೆಯೇ ವಿಜ್ಞಾನವು ವಿಜ್ಞಾನರೂಪವಾದ ಬ್ರಹ್ಮದಲ್ಲಿ ತನ್ನನ್ನು ಅರ್ಪಿಸಿಕೊಂಡು ಬ್ರಹ್ಮವನ್ನು ಕಂಡುಕೊಳ್ಳಲು ದ್ವಾರವಾಗುತ್ತದೆ. ಈ ವಿಜ್ಞಾನವು ಮೊದಲು ಹುಟ್ಟಿದ ಹಿರಣ್ಯಗರ್ಭಬ್ರಹ್ಮನಾಗಿದೆ. ಅಗ್ನ್ಯಾದಿದೇವತೆಗಳು ಇವನನ್ನು ಬ್ರಹ್ಮಪ್ರಾಪ್ತಿಗಾಗಿ ಉಪಾಸನೆಮಾಡುವರು. 'ತೇ ದೇವಾಃ' ಎಂದು ಶ್ರುತಿಯೂ ಇದೆ.

ಯಥೋಕ್ತೇನ ಪ್ರಕಾರೇಣ ವಿಜ್ಞಾನಂ ಬ್ರಹ್ಮ ವೇದ ಚೇತ್ |
ಪ್ರಮಾದ್ಯತಿ ನ ಚೇತ್ ತಸ್ಮಾತ್ ಉಕ್ತಕೋಶಾತ್ಮಶಕ್ತಿತಃ ||
ಪಾಪ್ಮನಾಮಾಶ್ರಯೋ ಯಸ್ಮಾದ್ರೂಪನಾಮಕ್ರಿಯಾತ್ಮಕಃ |
ದೇಹೋಽತಸ್ತತ್ರಹಾಣೇನ ಹಾನಿಃ ಸ್ಯಾತ್ಸರ್ವಪಾಪ್ಮನಾಮ್ ||

೩೧೬-೩೧೭. ಯಾವನು ಹಿಂದೆ ತಿಳಿಸಿದಂತೆ ವಿಜ್ಞಾನ(ಮಯ)ನನ್ನು ಬ್ರಹ್ಮವೆಂದರಿಯುವನೋ ಮತ್ತು ಹಿಂದಿನ ಕೋಶತ್ರಯಗಳಲ್ಲಿ ಆತ್ಮಬುದ್ಧಿಯನ್ನು ಮಾಡುವ ಪ್ರಮಾದವನ್ನು ಮಾಡದೆಇರುವನೋ ಅವನು ಪಾಪಗಳಿಗೆ ಆಶ್ರಯವಾದ ಹಾಗೂ ರೂಪ, ನಾಮ, ಕ್ರಿಯಾತ್ಮಕವಾದ ದೇಹವನ್ನು ಬಿಟ್ಟವನಾಗಿ– ಎಂದರೆ ದೇಹಾಭಿಮಾನವಿಲ್ಲದವನಾದಲ್ಲಿ ಸಕಲ ಪಾಪಗಳಿಂದಲೂ ನಿರ್ಮುಕ್ತನಾಗುವನು.

ವಿಜ್ಞಾನಮಹಮಸ್ಮೀತಿ ತಾವನ್ಮಾತ್ರಾಭಿಮಾನ್ಯತಃ |
ಶರೀರೇ ಪಾಪ್ಮನೋ ಹಿತ್ವಾ ಸರ್ವಾನ್ ಕಾಮಾನ್ ಸಮಶ್ನುತೇ ||

೩೧೭. ವಿಜ್ಞಾನವು ನಾನಾಗಿರುವೆನು–ಎಂದಿಷ್ಟುಮಾತ್ರ–ಅಭಿಮಾನವುಳ್ಳವನಾಗುವದರಿಂದ ಶರೀರದಲ್ಲಿಯೇ ಎಲ್ಲಾ ಪಾಪಗಳನ್ನೂ ಬಿಟ್ಟವನಾಗಿ ಎಲ್ಲಾ ಕಾಮ"ಳನ್ನೂ ಅನುಭವಿಸುವವನಾಗುತ್ತಾನೆ.

ಅಣಿಮಾದಿಗುಣೈಶ್ವರ್ಯೋ ಬುದ್ಧ್ಯಾತ್ಮಾ ಕಾರ್ಯರೂಪಿಣಃ |
ಕಾರ್ಯಂ ಹಿ ಕಾರಣವ್ಯಾಪ್ತಮತಃ ಕಾಮಾನ್ ಸಮಶ್ನುತೇ ||

೩೧೯. ಅಣಿಮಾದಿರೂಪವಾದ ಸಿದ್ಧಿಗಳೆಂಬ ಐಶ್ವರ್ಯವುಳ್ಳವನಾಗಿ ಕಾರ್ಯರೂಪವಾದ ಕಾಮಗಳೆಲ್ಲವನ್ನೂ ಪಡೆಯುತ್ತಾನೆ. ಹೇಗೆಂದರೆ ಕಾರ್ಯವು ಕಾರಣದಿಂದ ವ್ಯಾಪ್ತವಾಗಿದೆಯಲ್ಲವೆ? ಆದ್ದರಿಂದ (ವಿಜ್ಞಾನಮಯಾತ್ಮಸ್ವರೂಪನಾದವನು) ಎಲ್ಲಾ ಕಾಮಗಳನ್ನೂ ಅನುಭವಿಸುವನು.

ಜ್ಞಾನಕರ್ಮಫಲೋಪಾಧಿವಿಜ್ಞಾನಂ ಪ್ರತ್ಯಗಾತ್ಮನಃ |
ಆನಂದಮಯ ಇತ್ಯತ್ರ ಭಣ್ಯತೇ ಕರ್ತೃಶಾಂತಯೇ ||
ವಿಜ್ಞಾನಮಯಶಬ್ದೇನ ಕರ್ತಾ ವ್ಯಾಖ್ಯಾಯಿ ಪೂರ್ವಯಾ |
ತಸ್ಯ ಪ್ರತ್ಯಕ್ತಯಾ ಚಾಥ ಶ್ರುತ್ಯಾ ಭೋಕ್ತೋಚ್ಯತೇಽಧುನಾ ||

೩೨೦-೩೨೧. ಜ್ಞಾನಕರ್ಮಫಲಗಳಾದ ಸುಖಾದಿರೂಪವಾದ ಅಂತಃಕರಣವು ಯಾವ ಪ್ರತ್ಯಗಾತ್ಮನಿಗೆ ಉಪಾಧಿಯಾಗಿದೆಯೋ ಅವನನ್ನು ಆನಂದಮಯನೆಂದು ಹೇಳಿರುತ್ತದೆ. ಇಲ್ಲಿ ಕರ್ತೃತ್ವವನ್ನು ನಿವೃತ್ತಿಮಾಡುವದಕ್ಕಾಗಿ ಭೋಕ್ತೃತ್ವವನ್ನು ಹೇಳಿದೆ. ಹಿಂದೆ ವಿಜ್ಞಾನಮಯಶಬ್ದದಿಂದ ಕರ್ತೃವನ್ನು ಹೇಳಲಾಗಿತ್ತು. ಈಗ ಅವನಿಗೂ ಪ್ರತ್ಯಗಾತ್ಮನಾಗಿ ಭೋಕ್ತ್ರಾತ್ಮನನ್ನು ಶ್ರುತಿಯು ತಿಳಿಸುತ್ತಿದೆ.

ಶುದ್ಧಸ್ಯಾಪಿ ಸ್ವತೋ ಬುದ್ಧ್ಯಾ ಪ್ರಿಯಾದ್ಯಾಕಾರತೋದಯೇ |
ಜಾಯತೇ ತದುಪಾಧಿತ್ವಾದ್ಭೋಕ್ತ್ರಾತ್ಮಾ ಸ್ಯಾದವಿದ್ಯಯಾ ||

೩೨೨. ಸ್ವತಃಶುದ್ಧನಾದ ಆತ್ಮನಲ್ಲಿಯೂ ಬುದ್ಧ್ಯುಪಾದಿವಶದಿಂದ ಪ್ರಿಯಾದಿ ಆಕಾರಗಳು ಅವಿದ್ಯೆಯಿಂದ ಉಂಟಾಗಲಾಗಿ ಭೋಕ್ತ್ರಾತ್ಮನೆನಿಸುತ್ತಾನೆ.

ಅಪರೇ ಪಂಡಿತಂಮನ್ಯಾಃ ಪರಮೇತಂ ಪ್ರಚಕ್ಷತೇ |
ಇತ್ಯೇವೋಪರಮಾದೂರ್ಧ್ವಂ ಭೃಗೋಶ್ಚ ವರುಣಸ್ಯ ಚ ||
ಅಪಿ ಚಾನಂದರೂಪಸ್ಯ ಬ್ರಹ್ಮತ್ವಂ ಬಹುಶಃ ಶ್ರುತಮ್ |
ತಥಾ ಚಾನಂದವಲ್ಲೀತಿ ವ್ಯಪದೇಶೋಽಪಿ ಯುಜ್ಯತೇ ||

೩೨೩-೩೨೪. ಭೃಗುವರುಣರ ಸಂವಾದವು (ಆನಂದೋ ಬ್ರಹ್ಮೇತಿ ವ್ಯಜಾನಾತ್-ಎಂಬ ಪಂಚಮಪರ್ಯಾಯದಲ್ಲೇ ಮುಗಿದಿರುವದರಿಂದಲೂ ಶ್ರುತಿಗಳಲ್ಲಿ ಬ್ರಹ್ಮವು ಆನಂದರೂಪವೆಂದು ಬಹಳ ಸಲ ಹೇಳಿರುವದರಿಂದಲೂ ಈ ವಲ್ಲಿಗೆ ಆನಂದವಲ್ಲಿ- ಎಂಬ ಹೆಸರು ಕೂಡ ಹೊಂದಿಕೆಯಾಗಿರುವದರಿಂದಲೂ ಕೆಲವು ಪಂಡಿತಂಮನ್ಯರು ಈ ಭೋಕ್ತ್ರಾತ್ಮನಾದ ಆನಂದಮಯನನ್ನೇ ಪರಬ್ರಹ್ಮವೆನ್ನುವರು.

ಕಾರ್ಯಾಧಿಕಾರಗತ್ವಾತ್ತು ನೈತದ್ಬ್ರಹ್ಮ ಪರಂ ಭವೇತ್ |
ಅನ್ನಾದಿಮಯವತ್ಕಾರ್ಯಂ ಸ್ಯಾದಾನಂದಮಯೋಽಪ್ಯಯಮ್ ||
ಮಯಟ್ ಚಾತ್ರ ವಿಕಾರಾರ್ಥೇ ಯಥೈವಾನ್ನಮಯಾದಿಷು |
ವೈರೂಪ್ಯಲಕ್ಷಣೋ ದೋಷಃ ಪ್ರಾಯೋಽರ್ಥತ್ವೇ ಪ್ರಸಜ್ಯತೇ ||

೩.೨೫-೩.೨೬. ಆದರೆ ಅದು ಸರಿಯಲ್ಲ. ಇದು ಕಾರ್ಯಾತ್ಮರುಗಳ ಪ್ರಕರಣವಾದ್ದರಿಂದ ಇದು ಪರಬ್ರಹ್ಮವಾಗಲಾರದು. ಅನ್ನಮಯಾದ್ಯಾತ್ಮರುಗಳಂತೆಯೇ ಆನಂದಮಯನೂ ಕಾರ್ಯಾತ್ಮನೆಂಬುದೇ ಸಮಂಜಸವಾಗುವದು. ಇಲ್ಲಿ 'ಆನಂದಮಯ' ಎಂಬಲ್ಲಿರುವ ಮಯಟ್ ಪ್ರತ್ಯಯವು ಅನ್ನಮಯಾದಿಗಳಲ್ಲಿ ಹೇಗೋ ಹಾಗೆ ವಿಕಾರಾರ್ಥದಲ್ಲೇ ಪ್ರಯುಕ್ತವಾಗಿದೆ. ಒಂದುವೇಳೆ ಮಯಟ್ ಪ್ರತ್ಯಯಕ್ಕೆ ಪ್ರಾಚುರ್ಯಾರ್ಥವನ್ನು ಹೇಳಿದರೂ ವಿಕಾರವಾಗುವಿಕೆ ಎಂಬ ದೋಷವಂತೂ ಇದ್ದೇಇದೆ.

ಅಪಿ ಸಂಕ್ರಮಣಾದಸ್ಯ ಕಾರ್ಯತಾಧ್ಯವಸೀಯತೇ |
ಕಾರ್ಯಾತ್ಮನಾಂ ಹಿ ಸಂಕ್ರಾಂತಿರ್ಯುಜ್ಯತೇ ಕಾರಣಾತ್ಮನಿ ||
ಅತ್ಯಯೋ ವಾಥ ಸಂಪ್ರಾಪ್ತಿಃ ಸಂಕ್ರಾಂತಿಃ ಸ್ಯಾತ್ಪರಾತ್ಮನಃ |
ನಾತ್ಮತ್ವಾದಾತ್ಮನಃ ಪ್ರಾಪ್ತಿಸ್ತದು ನಾತ್ಯೇತಿ ಕಶ್ಚನ ||

೩.೨೭-೩.೨೮. ಮತ್ತು (ಆನಂದಮಯನಿಗೆ) ಸಂಕ್ರಮಣವನ್ನು ಹೇಳಿರುವದರಿಂದಲೂ ಅವನು ಕಾರ್ಯಾತ್ಮನೆಂದು ಸಿದ್ಧವಾಗುತ್ತದೆ. ಕಾರ್ಯಾತ್ಮರುಗಳಿಗಲ್ಲವೆ, ಕಾರಣಾತ್ಮನಲ್ಲಿ ಸಂಕ್ರಮಣವು ಹೊಂದುತ್ತದೆ? ಪರಮಾತ್ಮನಿಗೆ ಸಂಕ್ರಾಂತಿ ಅಥವಾ ಪ್ರಾಪ್ತಿ ಎಂಬುದು ಹೊಂದುವದೇ ಇಲ್ಲ. ಏಕೆಂದರೆ ಅವನು ಎಲ್ಲಾ ಜೀವರುಗಳ ಆತ್ಮನೇ ಆಗಿದ್ದಾನೆ. 'ಅವನನ್ನು ಮೀರಿ ಯಾವನೂ ಎಲ್ಲಿಗೂ ಹೋಗಲಾರನು' ಎಂದೇ ಶ್ರುತಿಯು ತಿಳಿಸುತ್ತದೆ.

ನ ಚಾತ್ಮನಾ ಸ್ವಮಾತ್ಮಾನಮುಪಸಂಕ್ರಾಮತೀಶ್ವರಃ |
ನಾಲಂ ಸ್ವಸ್ಕಂಧಮಾರೋಢುಂ ನಿಪುಣೋಽಪೀಹ ಸಾಧಕಃ ||
ಶಿರ ಆದ್ಯಾಕೃತೇರತ್ರ ಮೂರ್ತಾಮೂರ್ತಾದ್ಯಸಂಭವಾತ್ |
ಅಸಂಭವಃ ಪರೇ ತತ್ತ್ವೇ ನೇತಿ ನೇತೀತಿಶಾಸ್ತ್ರತಃ ||

೩.೨೯-೩.೩೦. "ಪರಮಾತ್ಮನು ತಾನೇ ತನ್ನನ್ನೇ ಸಂಕ್ರಮಣಮಾಡುವನು" ಎಂಬಿದೂ ಹೊಂದಲಾರದು. ಎಂಥ ಜಾಣನಾದ ಸಾಧಕನು ಕೂಡ ತಾನೇ ತನ್ನ ಹೆಗಲಮೇಲೆ ಹತ್ತಲಾರನು. ಅಲ್ಲದೆ ಆನಂದಮಯನೇ ಪರಮಾತ್ಮನೆಂದರೆ ಇಲ್ಲಿ ಹೇಳಿರುವ ಶಿರಸ್ಸು, ಪುಚ್ಛಾದಿ ಆಕೃತಿಗಳು ಹೊಂದುವದಿಲ್ಲ. ಏಕೆಂದರೆ ಪರತತ್ತ್ವದಲ್ಲಿ ಅವಯವಗಳಿರುವದು ಅಸಂಭವವೇ ಸರಿ. ಶಾಸ್ತ್ರವೂ ಪರತತ್ತ್ವವನ್ನು ನೇತಿ, ನೇತಿ- ಎಂದೇ ತಿಳಿಸುತ್ತಿದೆ.

ಅದೃಶ್ಯೇಽನಾತ್ಮ್ಯ ಇತ್ಯೇವಂ ಪೂರ್ವೋತ್ತರವಿರುದ್ಧತಾ |
ನ ಸ್ಯಾದಾಕಾರವತ್ತ್ವಾದ್ಧಿ ಅಸ್ತಿ ನಾಸ್ತೀತಿ ಸಂಶಯಃ ||

೩೩೧. ಇನ್ನು ಮುಂದಿನ ಮಂತ್ರಗಳಲ್ಲಿ ಅದೃಶ್ಯ, ಅನಾತ್ಮ್ಯ- ಎಂಬ ಮಾತುಗಳು ಆನಂದಮಯನ ವಿಷಯದಲ್ಲಿ ಪೂರ್ವೋತ್ತರವಿರುದ್ಧವಾಗುವದು. ಆದ್ದರಿಂದ ಹೊಂದುವದಿಲ್ಲ. ಏಕೆಂದರೆ ಆನಂದಮಯನು ಆಕಾರವುಳ್ಳನಾಗಿದ್ದು ಅದೃಶ್ಯನೆನಿಸಿಕೊಳ್ಳಲಾರನು. ಹಾಗೂ ಅವನ ವಿಷಯದಲ್ಲಿ ಇದಾನೆ-ಇಲ್ಲ- ಎಂಬ ಸಂಶಯಗಳೂ ಬರುವಂತಿಲ್ಲ.

ಕಾರ್ಯಾತ್ಮಾಽಯಮತೋ ಗ್ರಾಹ್ಯೋ ಯಥೋಕ್ತನ್ಯಾಯಗೌರವಾತ್ |
ಭೃಗೋರುಪರಮಾಚ್ಚೇತಿ ಕಾರ್ಯಾತ್ಮತ್ವೇಽಪಿ ಯುಜ್ಯತೇ ||
ಆನಂದವಲ್ಯಾಂ ಬ್ರಹ್ಮೋಕ್ತಂ ತದುಪಾಯವಿಧಿತ್ಸಯಾ |
ಅಧೀಹಿ ಭಗವೋ ಬ್ರಹ್ಮೇತ್ಯಪೋಚದ್ವರುಣಂ ಭೃಗುಃ ||

೩೩೨-೩೩೩. ಆದ್ದರಿಂದ ಆನಂದಮಯನು ಕಾರ್ಯಾತ್ಮನೆಂದು ಗ್ರಹಿಸಬೇಕು. ಏಕೆಂದರೆ ಇದು ನ್ಯಾಯಕ್ಕೆ ಹೊಂದುವದಾಗಿದೆ. ಹಾಗಾದರೆ ಭೃಗುವು ಆನಂದವನ್ನೇ ಬ್ರಹ್ಮನೆಂದರಿತು ನೆಲೆನಿಂತನು—ಎಂದಿರುವದರಿಂದ ಕಾರ್ಯಾತ್ಮನಲ್ಲಿ ನೆಲೆಗೊಂಡಂತಾಗಲಿಲ್ಲವೆ ? ಎಂದರೆ ಹಾಗಲ್ಲ. ಆನಂದಮಯನು ಕಾರ್ಯಾತ್ಮನೆಂಬ ಪಕ್ಷದಲ್ಲಿಯೂ ಭೃಗುವರುಣರ ಸಂವಾದವು ಹೊಂದುತ್ತದೆ. ಹೇಗೆಂದರೆ (ಹಿಂದಿನ) ಆನಂದವಲ್ಲಿಯಲ್ಲಿ ಬ್ರಹ್ಮವನ್ನು ಹೇಳಿದ್ದಾಗಿದೆ. ಭೃಗುವಲ್ಲಿಯಲ್ಲಿ ಆ ಬ್ರಹ್ಮವನ್ನು ತಿಳಿಯುವ ಉಪಾಯವನ್ನು ವಿಧಾನಮಾಡುವದಕ್ಕಾಗಿ ಭೃಗುವು 'ಪೂಜ್ಯರೆ, ಬ್ರಹ್ಮವನ್ನು ಹೇಳಿಕೊಡಿರಿ' ಎಂದು ವರುಣನನ್ನು ಕೇಳಿರುತ್ತಾನೆ.

ವ್ಯಾಖ್ಯಾತತ್ವಾದುಪೇಯಸ್ಯ ಹ್ಯುಪಾಯೋಽತ್ರಾವಶಿಷ್ಯತೇ |
ಉಪಾಯಾಃ ಕೋಶಾಃ ಪಂಚಾಪಿ ಯಸ್ಮಾತ್ತೈಸ್ತಂ ಪ್ರಪದ್ಯತೇ ||
ಅನ್ವಯವ್ಯತಿರೇಕಾಭ್ಯಾಂ ಕೋಶೈರಾತ್ಮಸಮೀಕ್ಷಣಮ್ |
ಕ್ರಿಯತೇ ಹಿ ಯತಸ್ತೇಷಾಮುಪಾಯತ್ವಂ ಪ್ರತೀಯತೇ ||

೩೩೪-೩೩೫. ಉಪೇಯವಾದ ಬ್ರಹ್ಮವನ್ನು ಹಿಂದೆಯೇ ವ್ಯಾಖ್ಯಾನಮಾಡಿದೆಯಾದ್ದರಿಂದ ಉಪಾಯವನ್ನು ತಿಳಿಸುವದು ಮಾತ್ರ ಉಳಿದಿರುತ್ತದೆ. ಐದು ಕೋಶಗಳೂ ಬ್ರಹ್ಮವನ್ನರಿಯಲು ಉಪಾಯಗಳಾಗಿವೆ. ಏಕೆಂದರೆ ಅವುಗಳ ಮೂಲಕ ಸಾಧಕನು ಬ್ರಹ್ಮವನ್ನು ಪಡೆದುಕೊಳ್ಳುತ್ತಾನೆ. ಅನ್ವಯವ್ಯತಿರೇಕಗಳಿಂದ ಕೋಶಗಳಲ್ಲಿ ಆತ್ಮನನ್ನು ಹುಡುಕಿ ಕಂಡುಕೊಳ್ಳುವದರಿಂದ ಅವುಗಳು ಉಪಾಯಗಳೆಂದು ಕಂಡುಬರುತ್ತವೆ.

ಸ್ವಾತಂತ್ರ್ಯಂ ಯತ್ರ ಕರ್ತುಃ ಸ್ಯಾತ್ತತ್ರೈವಾಸೌ ನಿಯುಜ್ಯತೇ |
ಫಲಂ ಕರ್ತ್ರನಧೀನತ್ವಾತ್ ಸಂಬಂಧಾಯೈವ ಶಕ್ಯತೇ ||

ಪಂಚಕೋಶಾನತಃ ತಸ್ಮೈ ವಾಕ್ಯಾರ್ಥಪ್ರತಿಪತ್ತಯೇ ।
ಸ್ವತಃ ಪ್ರಸಿದ್ಧೇಃ ಶೇಷಸ್ಯ ಹ್ಯುಪರೇಮೇ ಭೃಗುಸ್ತತಃ ॥

೩೩೬-೩೩೭. ಕರ್ತೃವಿಗೆ ಸ್ವಾತಂತ್ರ್ಯವಿರುವಲ್ಲಿ ಮಾತ್ರ (ಅನ್ವಯ ವ್ಯತಿರೇಕವು) ಪ್ರಾಪ್ತವಾಗುತ್ತದೆ. 'ಪರಮಾಪ್ನೋತಿ' ಎಂಬ ಫಲವು ಕರ್ತೃಧೀನವಲ್ಲದ್ದರಿಂದ ಕೇವಲ ಸಾಧ್ಯಸಾಧನಸಂಬಂಧವನ್ನು ಮಾತ್ರ ಇಲ್ಲಿ ಹೇಳಬಹುದಾಗಿದೆ. ಆದ್ದರಿಂದ ಐದು ಕೋಶಗಳನ್ನು ವಾಕ್ಯಾರ್ಥಪ್ರತಿಪತ್ತಿಗಾಗಿ ಹೇಳಿದ್ದು, ಉಳಿದ (ಪಂಚಕೋಶಾತೀತವಾದ) ಬ್ರಹ್ಮವು ಪ್ರಸಿದ್ಧವೇ ಆಗಿರುವದರಿಂದ ಭೃಗುವು ಅಲ್ಲಿಗೇ ವಿರಮಿಸಿರುತ್ತಾನೆ.

ಬ್ರಹ್ಮತಾನಂದರೂಪಸ್ಯ ಕೇನ ವಾ ಪ್ರತಿಷಿಧ್ಯತೇ ।
ನಿರಸ್ತಾಶೇಷಭೇದಸ್ಯ ರೂಪಂ ತತ್ಪರಮಾತ್ಮನಃ ॥
ಪ್ರಿಯಾದ್ಯಾನಂದರೂಪಾಣಾಂ ಭೇದೋ ಯತ್ರ ನಿವರ್ತತೇ ।
ಅಮನೋವಿಷಯೇಽತ್ಯಂತಂ ತಮಾನಂದಂ ಪ್ರಚಕ್ಷ್ಮಹೇ ॥

೩೩೮-೩೩೯. ಆನಂದರೂಪ(ವಸ್ತು)ವಿಗೆ ಬ್ರಹ್ಮತ್ವವನ್ನು ಯಾರುತಾನೆ ಇಲ್ಲವೆನ್ನಲಾದೀತು ? ಅದು ಸಕಲಭೇದಗಳನ್ನೂ ತೊಡೆದುಹಾಕಿದ ಪರಮಾತ್ಮನ ರೂಪವು. ಇನ್ನು ಪ್ರಿಯವೇ ಮುಂತಾದ ಆನಂದರೂಪಗಳ ಭೇದಗಳು ಎಲ್ಲಿ ಇಲ್ಲವಾಗುವವೋ ಮತ್ತು ಯಾವದು ಅತ್ಯಂತವಾಗಿ ಮನೋಗೋಚರವಲ್ಲವೋ ಅದನ್ನು ನಾವು ಆನಂದವೆಂದು ಕರೆಯುವೆವು.

ಕೋಶಪಂಚಕ ಏತಸ್ಮಿನ್ ನಿಷಿದ್ಧೇಽಜ್ಞಾನಹೇತುಕೇ ।
ನಾನಂದಮಯತಾ ನ್ಯಾಯ್ಯಾ ಧಿಯಾಂ ವಾಚಾಮಗೋಚರೇ ॥
ಪರಾನಂದಸ್ವಭಾವೇನ ಪೂರ್ಣಾ ಹ್ಯನ್ನಮಯಾದಯಃ ।
ಕಾರ್ಯಾತ್ಮಾನೋಽಪಿ ತದ್ಧೇತೋರಾನಂದಮಯತಾ ಭವೇತ್ ॥

೩೪೦-೩೪೧. ಈ (ಬ್ರಹ್ಮದಲ್ಲಿ) ಅಜ್ಞಾನನಿಮಿತ್ತವಾದ ಐದು ಕೋಶಗಳೂ ನಿಷೇಧಿಸಲ್ಪಡಲಾಗಿ ವಾಙ್ಮನಸ್ಸುಗಳಿಗೆ ಗೋಚರವಲ್ಲದ ಈ ಸ್ವರೂಪದಲ್ಲಿ ಆನಂದಮಯತ್ವವನ್ನು ಹೇಳುವದು ನ್ಯಾಯವಲ್ಲ. ಏಕೆಂದರೆ ಕಾರ್ಯಾತ್ಮರಾದ ಅನ್ನಮಯಾದಿಗಳು ಕೂಡ ಪರಾನಂದಸ್ವಭಾವನಾದ (ಆತ್ಮನಿಂದ) ಪೂರ್ಣರಾಗಿರುವರು. ಅದರಿಂದ ಆನಂದಮಯತ್ವವು ಸಿದ್ಧಿಸಿದರೆ ಆದೀತು.

ತಸ್ಮಾತ್ ಜ್ಞಾನಕ್ರಿಯಾಕಾರ್ಯಂ ಪ್ರಿಯಾದ್ಯಾವರಕ್ಷಬುದ್ಧಿಗವರ್ ।
ಆನಂದಮಯಮಾತ್ಮಾನಂ ಶ್ರುತಿಃ ಸೋಪಾಧಿಕಂ ಜಗೌ ॥

೩೪೨. ಆದ್ದರಿಂದ ಜ್ಞಾನವೆಂಬ ಕ್ರಿಯೆಯ ಕಾರ್ಯವಾದ ಪ್ರಿಯಾದಿ ವಿಶೇಷಗಳಿಂದ ಬುದ್ಧಿಗಮ್ಯನಾಗಿರುವ ಆನಂದಮಯಾತ್ಮನನ್ನು ಶ್ರುತಿಯು ಸೋಪಾಧಿಕನೆಂದೇ ವರ್ಣಿಸಿರುತ್ತದೆ.

ಪ್ರಿಯಾದಿವಾಸನಾರೂಪೋ ಹ್ಯಾನಂದಮಯ ಈಕ್ಷ್ಯತೇ |
ವಿಜ್ಞಾನಮಯಸಂಸ್ಥೋ ಯಃ ಸ್ವಪ್ನೇ ವೈ ಸ್ವಪ್ನದರ್ಶಿಭಿಃ ||

೩೪೩. ಈ ಆನಂದಮಯನು ವಿಜ್ಞಾನಮಯನಿಗೆ ಒಳಗಿನ ಆತ್ಮನಾಗಿದ್ದು ಕೊಂಡು ಪ್ರಿಯಾದಿವಾಸನಾರೂಪನಾಗಿ, ಸ್ವಪ್ನವನ್ನು ಕಾಣುವವರಿಗೆ ಕನಸಿನಲ್ಲಿ ಕಾಣಿಸಿಕೊಳ್ಳುತ್ತಾನೆ.

ಪುತ್ರಾದಿವಿಷಯಾ ಪ್ರೀತಿರ್ವಾಸನಾ ಶಿರ ಉಚ್ಯತೇ |
ಪ್ರಿಯಲಾಭನಿಮಿತ್ತೋತ್ಥೋ ಹರ್ಷೋ ಮೋದಃ ಪ್ರಕೀರ್ತಿತಃ ||
ಪ್ರಕರ್ಷಗುಣಸಂಯುಕ್ತಃ ಪ್ರಮೋದಃ ಸ್ಯಾತ್ ಸ ಏವ ತು |
ಸುಖಸಾಮಾನ್ಯಮಾತ್ಮಾ ಸ್ಯಾದಾನಂದೋ ಭೇದಸಂಶ್ರಯಾತ್ ||

೩೪೪–೩೪೫. ಮಗನೇ ಮುಂತಾದವರ ವಿಷಯದಲ್ಲಿರುವ ಅನುರಾಗವು (ಆನಂದಮಯಾತ್ಮನಿಗೆ) ಶಿರಸ್ಸೆನಿಸುವದು. ಪ್ರಿಯವಾದ (ವಸ್ತು)ವಿನ ಪ್ರಾಪ್ತಿ ಯಾದಾಗ ಉಂಟಾಗುವ ಸಂತೋಷವು ಮೋದವೆನಿಸುವದು. ಹೆಚ್ಚಿನ ಗುಣ ದಿಂದ ಕೂಡಿದ ಮೋದವೇ ಪ್ರಮೋದವೆನಿಸುವದು. ಸುಖಸಾಮಾನ್ಯವನ್ನು ಆತ್ಮವೆನ್ನುವರು. ಆನಂದವೆಂದರೆ (ಆನಂದ–ಆನಂದಿ) ಎಂಬ ಭೇದವಿದ್ದಾಗ ಆಗುವ ಸುಖವು.

ಉತ್ಕೃಷ್ಯಮಾಣ ಆನಂದೋ ನಿಷ್ಠಾಂ ಯತ್ರಾಧಿಗಚ್ಛತಿ |
ತದೇಕಂ ಸಕಲಂ ಬ್ರಹ್ಮ ಪುಚ್ಛಂ ಸರ್ವಾಶ್ರಯತ್ವತಃ ||
ಆನಂದಃ ಪರ ಏವಾತ್ಮಾ ಭೇದಸಂಸರ್ಗವರ್ಜಿತಃ |
ಸ ಏವ ಸುಖರೂಪೇಣ ವ್ಯಜ್ಯತೇ ಪುಣ್ಯಕರ್ಮಭಿಃ ||

೩೪೬–೩೪೭. ಹೆಚ್ಚುತ್ತಿರುವ ಆನಂದವು ಎಲ್ಲಿ ನೆಲೆನಿಲ್ಲುವದೋ ಅದು ಒಂದೇ ಆದ ಸಕಲವನ್ನೂ (ವ್ಯಾಪಿಸಿರುವ) ಪುಚ್ಛವೆನಿಸಿರುವ ಬ್ರಹ್ಮವು. ಪುಚ್ಛ ವೆಂದರೆ ಸರ್ವಾಶ್ರಯವೆಂದರ್ಥ. ಇಲ್ಲಿ ಆನಂದವೆಂದರೆ ಭೇದಸಂಬಂಧವಿಲ್ಲದ ಪರಮಾತ್ಮನೇ ಎಂದಭಿಪ್ರಾಯ. ಅವನೇ ಪುಣ್ಯಕರ್ಮಗಳ ನಿಮಿತ್ತವಾಗಿ ಸುಖ ರೂಪದಿಂದ ತೋರಿಕೊಳ್ಳುತ್ತಾನೆ.

ಯಾವದ್ಯಾವತ್ತಮೋಽಪೈತಿ ಬುದ್ಧ್ಯಾ ಧರ್ಮಸಮಾಹತಮ್ |
ತಾವತ್ತಾವದ್ ಧಿಯಃ ಸ್ವಾಸ್ಥ್ಯಂ ತಾವತ್ತಾವತ್ ಸುಖೋನ್ನತಿಃ ||

ತಾರತಮ್ಯಂ ಸುಖಸ್ಯಾಪಿ ವೈಚಿತ್ರ್ಯಾದುಪಪದ್ಯತೇ |
ಪುಣ್ಯಸ್ಯ ಕರ್ಮಣಸ್ತಸ್ಮಾದಾತ್ಮೈವಾನಂದ ಉಚ್ಯತೇ ||
ತಸ್ಮಾತ್ ಕಾಮಾದಿಹಾನೇನ ಹ್ಯುತ್ತರೋತ್ತರವೃದ್ಧಿತಃ |
ಶ್ರೋತ್ರಿಯಸ್ಯೇತಿ ವಾಕ್ಯೇನ ಕಾಷ್ಠಾನಂದಸ್ಯ ಭಣ್ಯತೇ ||

೩೪೮-೩೫೦. ಧರ್ಮದಿಂದ ಬಾಧಿಸಲ್ಪಟ್ಟ ಅಜ್ಞಾನವು ಎಷ್ಟೆಷ್ಟುಮಟ್ಟಿಗೆ ಹೋಗಲಾಡಿಸಲ್ಪಡುವದೋ ಅಷ್ಟಷ್ಟುಮಟ್ಟಿಗೆ ಚಿತ್ತಸ್ವಾಸ್ಥ್ಯವೂ ಸುಖದ ಹೆಚ್ಚಳವೂ ಉಂಟಾಗುವದು. ಸುಖದ ತಾರತಮ್ಯವಾದರೊ, ಪುಣ್ಯಕರ್ಮದ ವೈಚಿತ್ರ್ಯದಿಂದ ಸಂಭವಿಸುತ್ತದೆ. ಆದ್ದರಿಂದ ಆನಂದವೆಂದರೆ ಆತ್ಮನೇ. ಕಾಮಾದಿಗಳನ್ನು ಕಳೆದುಕೊಳ್ಳುವದರಿಂದ ಹೆಚ್ಚುಹೆಚ್ಚಾಗಿ ಕಂಡುಬರುವ ಆನಂದವು 'ಶ್ರೋತ್ರಿಯಸ್ಯ....' ಎಂಬ ವಾಕ್ಯದಿಂದ ಪರಾಕಾಷ್ಠೆಯನ್ನು ಮುಟ್ಟುತ್ತದೆ- ಎಂದು ಶ್ರುತಿಯಲ್ಲಿ ಹೇಳಿರುತ್ತದೆ.

ತತ್ರೈತಸ್ಮಿನ್ ಯಥೋಕ್ತೇಽರ್ಥೇ ಶ್ಲೋಕೋಽಪ್ಯುಚ್ಚೈರ್ನಿಗದ್ಯತೇ |
ಮಂತ್ರದ್ವಾರೇಣ ವಾಕ್ಯಾರ್ಥಂ ಕಥಂ ನಾಮ ಪ್ರಪತ್ಸ್ಯತೇ ||
ಅಸನ್ನೇವೋಽಸೌ ಭವತಿ ಯೋಽಸದ್ಬ್ರಹ್ಮೇತಿ ವೇದ ಚೇತ್ |
ಅಸ್ತಿ ಬ್ರಹ್ಮೇತಿ ಚೇದ್ವೇದ ಸಂತಂ ತಂ ಬ್ರಾಹ್ಮಣಾ ವಿದುಃ ||

೩೫೧-೩೫೨. ಈ ವಿಷಯದಲ್ಲಿ ಶ್ಲೋಕವೊಂದು ಗಟ್ಟಿಯಾಗಿ ಹೇಳಲ್ಪಡುವದು. ಏಕೆಂದರೆ ಮಂತ್ರದ ಮೂಲಕ ಹೇಗಾದರೂ ವಾಕ್ಯಾರ್ಥವನ್ನು ಪ್ರಾಪ್ತಿಮಾಡಿಕೊಳ್ಳಲಿ- ಎಂಬಿದು ಆಶಯವು. ಯಾವನು ಬ್ರಹ್ಮವನ್ನು 'ಅಸತ್' ಎಂದರಿಯುವನೋ ಅವನು ತಾನೂ ಅಸತ್ತಿಗೆ ಸಮನಾಗಿಬಿಡುವನು. ಆದರೆ ಬ್ರಹ್ಮವು ಇದೆ- ಎಂದು ತಿಳಿದನಾದರೆ ಅವನನ್ನು ಸಂತನೆಂದು ಬ್ರಾಹ್ಮಣರು ಕರೆಯುವರು.

ಸದಪ್ಯಾತ್ಮಸ್ವರೂಪೇಣ ಬ್ರಹ್ಮಾಸದಿತಿ ವೇದ ಚೇತ್ |
ಸೋಽಸನ್ನೇವೇಹ ಭವತಿ ಕೋಶಾತ್ಮತ್ವಾಭಿಮಾನಭಾಕ್ ||
ನ ಹಿ ಕೋಶಾತ್ಮನಾ ಸತ್ತ್ವಮೃತೇ ಬ್ರಹ್ಮ ಸಮಶ್ನುತೇ |
ಕುತಃ ಸರ್ಪಾತ್ಮನಾ ಸತ್ತ್ವಮೃತೇ ರಜ್ಜುಂ ಸದಾತ್ಮಿಕಾಮ್ ||

೩೫೩-೩೫೪. ಆತ್ಮಸ್ವರೂಪದಿಂದ ಸತ್ತಾಗಿರುವ ಬ್ರಹ್ಮವನ್ನು ಕೂಡ ಯಾವನಾದರೂ ಅಸತ್ತೆಂದು ತಿಳಿದವನಾದರೆ ಕೋಶಾತ್ಮನ ಅಭಿಮಾನಕ್ಕೆ ಒಳಗಾದ ಆ ಅಜ್ಞನು ತಾನೂ ಇಲ್ಲವಾಗುವನು. ಹೇಗೆ ಇದ್ದುಕೊಂಡಿರುವ ಹಗ್ಗದ ಆಶ್ರಯವಿಲ್ಲದೆ ಸರ್ಪವು ಸತ್ ಎನಿಸಲಾರದೋ ಹಾಗೆ ಬ್ರಹ್ಮವಿಲ್ಲದೆ ಕೋಶಾತ್ಮನೇ ತಾನೆಂಬ ಬುದ್ಧಿಯವನೂ ಇದಾನೆ- ಎನಿಸಲಾರನು.

ಅಸದ್ಭ್ಯಃ ಖಲು ಕೋಶೇಭ್ಯಃ ಸದೇಕಂ ಬ್ರಹ್ಮ ವೇದ ಚೇತ್ |
ದೃಶೇ ರೂಪಾಂತರಾಸತ್ತ್ವಾತ್ ಸಂತಂ ತಂ ಬ್ರಾಹ್ಮಣಾ ವಿದುಃ ||
ಯಸ್ಮಾದೇವಮತೋ ಹಿತ್ವಾ ಕೋಶಾನಜ್ಞಾನಕಲ್ಪಿತಾನ್ |
ನಿರ್ವಿಕಾರಮನಾದ್ಯಂತಂ ಪರಮಾತ್ಮಾನಮಾಶ್ರಯೇತ್ ||

೩೫೫–೩೫೬. ಅಸತ್ತಾಗಿರುವ (ಅನ್ನಮಯಾದಿ)ಕೋಶಗಳ ದೆಸೆಯಿಂದ ವಿಂಗಡಿಸಿ ಏಕವಾದ ಹಾಗೂ ಸತ್ತಾದ ಬ್ರಹ್ಮವನ್ನು ಅರಿತುಕೊಂಡನಾದರೆ ಆ ಬ್ರಹ್ಮಕ್ಕೆ ಬೇರಾವ ರೂಪವೂ ಇಲ್ಲದ್ದರಿಂದ ಇದ್ದದ್ದನ್ನು ಇದ್ದಂತೆಯೇ ಅರಿತುಕೊಳ್ಳುವನಾದ್ದರಿಂದ ಅವನನ್ನು ಸಂತನೆಂದು ಬ್ರಾಹ್ಮಣರು ತಿಳಿಯುತ್ತಾರೆ. ಹೀಗಿರುವದರಿಂದ ಅಜ್ಞಾನಕಲ್ಪಿತವಾದ ಕೋಶಗಳನ್ನು ಕೈಬಿಟ್ಟು ನಿರ್ವಿಕಾರನೂ ಆದ್ಯಂತರಹಿತನೂ ಆದ ಪರಮಾತ್ಮನನ್ನಾಶ್ರಯಿಸಬೇಕು.

ಯತಃ ಕೋಶಾತಿರೇಕೇಣ ನಾಸತ್ತ್ವಂ ವಿದ್ಯತೇ ಪರಮ್ |
ಮೃತ್ಯುರ್ವಾ ಅಸದಿತ್ಯೇವಂ ಘಟತೇ ಶ್ರುತ್ಯುದೀರಣಮ್ ||
ಅಸ್ತೀತ್ಯೇವೋಪಲಬ್ಧವ್ಯಃ ಸದೇವೇತಿ ಚ ಶಾಸನಮ್ |
ಬ್ರಹ್ಮಾತ್ಮವ್ಯತಿರೇಕೇಣ ಸತ್ತ್ವಮನ್ಯತ್ರ ದುರ್ಲಭಮ್ ||

೩೫೭–೩೫೮. ಕೋಶಗಳಿಗಿಂತ ಬೇರೆಯಾಗಿ ಹೆಚ್ಚಿನ ಅಸತ್ತೆಂಬುದು ಮತ್ತೆ ಯಾವದೂ ಇಲ್ಲ. ಶ್ರುತಿಯು ಕೂಡ ಮೃತ್ಯುವೇ ಅಸತ್– ಎಂದು ಹೇಳುತ್ತಲಿದೆ. ಅದು ಹೀಗಾದರೆ ಹೊಂದುತ್ತದೆ. 'ಇದಾನೆ–ಎಂಬುದಾಗಿಯೇ (ಆತ್ಮನನ್ನು) ಅರಿತುಕೊಳ್ಳಬೇಕು' ಎಂದೂ ಸತ್ತೊಂದೇ (ಇತ್ತು) ಎಂದೂ ಶ್ರುತಿಯು ತಿಳಿಸುವದರಿಂದ ಬ್ರಹ್ಮಕ್ಕಿಂತ ಬೇರೆಯಾದ ಸತ್ತೆಂಬುದು ಬೇರೆಲ್ಲಿಯೂ ಇರುವದೇ ಇಲ್ಲ.

ತಸ್ಯೈಷ ಏವ ಶಾರೀರೋ ಯೋಽಶರೀರಃ ಸದೇಕಲಃ |
ಆನಂದಾಂತಸ್ಯ ಪೂರ್ವಸ್ಯ ಹ್ಯಾತ್ಮಾ ನಾತ್ಮವತಃ ಪರಃ ||
ಉಕ್ತಂ ಬ್ರಹ್ಮವಿದಾಪ್ನೋತಿ ಪರಂ ನಾಪ್ನೋಽಸದಾಶ್ರಯಃ |
ಇತ್ಯಸ್ಯ ನಿರ್ಣಯಾರ್ಥಾಯ ಪರೋ ಗ್ರಂಥೋಽವತಾರ್ಯತೇ ||

೩೫೯–೩೬೦. ಯಾವನು ಅಶರೀರನೂ ಸದ್ರೂಪನೂ ಏಕನೂ ಆಗಿರುವನೋ ಅವನೇ ಆನಂದ(ಮಯನ)ವರೆಗಿನ ಹಿಂದಿನ (ಕೋಶಾತ್ಮರು)ಗಳಿಗೆಲ್ಲ ಶಾರೀರನೆನಿಸಿರುತ್ತಾನೆ. ಈ ಆತ್ಮನಿಗೆ ಬೇರೊಬ್ಬ ಹೆಚ್ಚಿನ ಆತ್ಮನಿರುವದಿಲ್ಲ ಬ್ರಹ್ಮವಿದನು ಪರ(ಪ್ರಾಪ್ತಿ)ಯನ್ನು ಹೊಂದುವನೆಂದು ಈಗಾಗಲೇ ಹೇಳಿದೆ. ಅಸತ್ತನ್ನಾಶ್ರಯಿಸಿದವನಿಗೆ ಪರಪ್ರಾಪ್ತಿಯಿಲ್ಲ. ಈ ಅಭಿಪ್ರಾಯದ ನಿರ್ಣಯಕ್ಕಾಗಿ ಮುಂದಿನ ಗ್ರಂಥವು ಆರಂಭವಾಗಿದೆ.

ಸಾಧಾರಣಂ ಪರಂ ಬ್ರಹ್ಮ ವಿದುಷೋಽವಿದುಷಶ್ಚ ಚೇತ್ |
ಪ್ರಾಪ್ತ್ಯಪ್ರಾಪ್ತೀ ಸಮೇ ಸ್ಯಾತಾಂ ನಿಯಮೋ ಹೇತ್ವಸಂಭವಾತ್ ||
ಕಾರ್ಯಮಾತ್ರಾವಬದ್ಧಾಂತಃಕರಣತ್ವಾತ್ತಪಸ್ವಿನಃ |
ನ ಶಕ್ಯಾಸ್ತೀತಿ ಧೀಃ ಕರ್ತುಂ ಸ್ವತಃಸಿದ್ಧಾತ್ಮವಸ್ತುನಿ ||
ಅತೋಽಸ್ಯಾಸ್ತಿತ್ವಸಿಧ್ಯರ್ಥಂ ಕಲ್ಪನಾತೀತರೂಪಿಣಃ ||

೩೬೧-೩೬೨. ಜ್ಞಾನಿಗೂ ಅಜ್ಞಾನಿಗೂ ಬ್ರಹ್ಮವು ಆತ್ಮನಾಗಿರುವದು ಸಮಾನವಾಗಿದ್ದಲ್ಲಿ ಇಬ್ಬರಿಗೂ ಬ್ರಹ್ಮಪ್ರಾಪ್ತಿಯಾಗಬೇಕು ಅಥವಾ ಆಗಬಾರದು –ಎಂಬಿದು ಸಮವಾಗುವದು. ಏಕೆಂದರೆ ಜ್ಞಾನಿಗೆ ಬ್ರಹ್ಮಪ್ರಾಪ್ತಿಯಾಗುವದು; ಅಜ್ಞಾನಿಗೆ ಇಲ್ಲ– ಎಂಬ ನಿಯಮಕ್ಕೆ ಯಾವ ಕಾರಣವೂ ಇರುವದಿಲ್ಲ. ತಮೋವಂತನಾದ (ಅಜ್ಞಾನಿಗೆ) ಕಾರ್ಯಾತ್ಮರುಗಳಲ್ಲಿ ಮಾತ್ರವೇ ಅಂತಃಕರಣವು ಬದ್ಧವಾಗಿರುವದರಿಂದ (ಪ್ರಾಪ್ತಿಯಿಲ್ಲ) ಎಂದು ಕೂಡ ಹೇಳಲು ಬರುವದಿಲ್ಲ. ಏಕೆಂದರೆ ಆತ್ಮನು ಸ್ವತಃಸಿದ್ಧವಸ್ತುವಲ್ಲವೆ? ಆದ್ದರಿಂದ ಆತ್ಮನು ಇದಾನೆಂದೂ ಅವನು ಕಲ್ಪನೆಗಳನ್ನು ಮೀರಿದ ರೂಪದವನೆಂದೂ ಸಿದ್ಧಮಾಡುವದಕ್ಕಾಗಿ ಮುಂದಿನ ಅನುಪ್ರಶ್ನಗಳು ಹೊರಟಿವೆ.

ಅಥಾತ ಇತ್ಯನುಪ್ರಶ್ನಾ ವಕ್ಷ್ಯಂತೇ ನಿರ್ಣಯಾರ್ಥಿನೇ |
ಅಥಾನಂತರಮುಸ್ಯೈವ ಸಾಧಾರಣ್ಯಾಪ್ರಮೇಯತಃ ||
ಆಚಾರ್ಯೋಕ್ತಿಮನುಪ್ರಶ್ನಾಃ ಶಿಷ್ಯಸ್ಯ ಗುರುಸಂನಿಧೌ |

೩೬೩-೩೬೪. ನಿರ್ಣಯವನ್ನು ಬಯಸುವವನಿಗಾಗಿ 'ಅಥಾತೋಽನುಪ್ರಶ್ನಾಃ' ಎಂದು ಪ್ರಶ್ನೆಗಳು ಕೇಳಲ್ಪಡುತ್ತವೆ. ಬ್ರಹ್ಮಾತ್ಮೈಕತ್ವಜ್ಞಾನಕ್ಕೆ ಫಲವನ್ನು ಹೇಳಿದ ಅನಂತರ– ಎಂದು ಅಥಶಬ್ದಕ್ಕೆ ಅರ್ಥವು. ಜ್ಞಾನಿ, ಅಜ್ಞಾನಿಗಳಿಗೆ ಬ್ರಹ್ಮವು ಸಮಾನವು. ಹಾಗೆಯೇ ಅದು ಅಪ್ರಮೇಯವು. ಆದ್ದರಿಂದ ಆಚಾರ್ಯರು ಹೇಳಿದ ಅನಂತರ ಗುರುಸಂನಿಧಿಯಲ್ಲಿ ಶಿಷ್ಯನ ಈ ಅನುಪ್ರಶ್ನೆಗಳು ಬಂದಿವೆ ಎಂದಭಿಪ್ರಾಯ.

ಅಪ್ಯವಿದ್ವಾನಮುಂ ಲೋಕಂ ಪ್ರೇತ್ಯ ಕಶ್ಚಿತ್ ಸಮಶ್ನುತೇ |
ನ ಚೇದವಿದ್ವಾನಾಪ್ನೋತಿ ವಿದ್ವಾನೇತೀತಿ ಕಾ ಪ್ರಮಾ ||
ಸ್ಯಾನ್ನ ವೇತ್ಯಪರಃ ಪ್ರಶ್ನಃ ತ್ರಿತ್ವಾದ್ಧಿ ಬಹುವಾಗಿಯಮ್ |

೩೬೫. ಅಜ್ಞಾನಿಯಾದವನು ಈ ಲೋಕವನ್ನು ಬಿಟ್ಟನಂತರ ಬ್ರಹ್ಮವನ್ನು ಪಡೆಯುವನೊ, ಹೇಗೆ? ಒಂದುವೇಳೆ ಅಜ್ಞಾನಿಯು ಪಡೆಯಲಿಲ್ಲವಾದರೆ ಜ್ಞಾನಿಯು ಪಡೆಯುವನೆಂಬುದಕ್ಕೆ ಪ್ರಮಾಣವೇನು? ಅವಿದ್ಯಾನಿವೃತ್ತಿಗಿಂತ ಬೇರೆಯಾಗಿ ಬ್ರಹ್ಮಪ್ರಾಪ್ತಿಯು (ಕಂಡುಬರುವದರಿಂದ) ಬ್ರಹ್ಮವೆಂಬುದು ಇದೆಯೊ, ಇಲ್ಲವೊ? ಹೀಗೆ ಮೂರು ಪ್ರಶ್ನೆಗಳಿರುವದರಿಂದ ಪ್ರಶ್ನಾಃ ಎಂದು ಬಹುವಚನವನ್ನು ಪ್ರಯೋಗಿಸಿದೆ.

ಪ್ಲುತಿಶ್ಚಾತ್ರ ವಿಚಾರಾರ್ಥಾ ವಿಚಾರ್ಯಂ ವಸ್ತ್ವಿದಂ ಯತಃ |
ಏತೇಷಾಂ ಖಲು ಚೋದ್ಯಾನಾಂ ಉತ್ತರಾರ್ಥೋತ್ತರಾ ಶ್ರುತಿಃ ||

೩೬೬. ಇಲ್ಲಿ ಸಮಶ್ನುತೇ ಎಂಬಲ್ಲಿ ಪ್ಲುತಸ್ವರವನ್ನು ಪ್ರಯೋಗಿಸಿರುವದೇಕೆಂದರೆ ಈ ವಿಷಯವು ವಿಚಾರಾರ್ಹವಿದೆ–ಎಂದು ತಿಳಿಸುವದಕ್ಕಾಗಿ. ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರವನ್ನು ಹೇಳಲು ಮುಂದಿನ ಶ್ರುತಿಯು ಬಂದಿದೆ.

ದ್ವಯೋಃ ಸದ್ಭಾವಪೂರ್ವತ್ವಾದಸ್ತಿತ್ವಂ ತಾವದುಚ್ಯತೇ |
ಘಟಾಂಕುರಾದಿ ಯತ್ಕಾರ್ಯಂ ದೃಷ್ಟಂ ಸತ್ಕಾರಣಂ ಹಿ ತತ್ ||
ಆಕಾಶಾದಿ ಚ ನಃ ಕಾರ್ಯಂ ತದಪ್ಯೇವಂ ಪ್ರತೀಯತಾಮ್ |

೩೬೭–೩೬೮. ಎರಡು ಪ್ರಶ್ನೆಗಳಿಗೆ ಹೇಳಬೇಕಾದ ಉತ್ತರವು ಬ್ರಹ್ಮದ ಅಸ್ತಿತ್ವವನ್ನು ಅವಲಂಬಿಸಿರುವದರಿಂದ ಬ್ರಹ್ಮದ ಅಸ್ತಿತ್ವವನ್ನು ಕುರಿತ ನಿರ್ಣಯವನ್ನೇ ಮೊದಲು ಮಾಡಲಾಗುವದು. ಲೋಕದಲ್ಲಿ ಮಡಕೆ, ಮೊಳಕೆ–ಮುಂತಾದ ಕಾರ್ಯವಸ್ತುಗಳು (ಮಣ್ಣು, ಬೀಜ) ಮುಂತಾದ ಕಾರಣವಸ್ತುಪೂರ್ವಕವಾಗಿರುವೆ. ನಮ್ಮ ಮತದಲ್ಲಿ ಆಕಾಶಾದಿಗಳು ಕೂಡ ಕಾರ್ಯಗಳೇ ಆದ್ದರಿಂದ ಅವು ಕೂಡ ಕಾರಣವುಳ್ಳವುಗಳಾಗಿವೆ– ಎಂದು ತಿಳಿಯಿರಿ.

ಅಸತಶ್ಚೇದಿದಂ ಕಾರ್ಯಂ ಸರ್ವಂ ಸ್ಯಾದಸದನ್ವಿತಮ್ |
ಅಸತಃ ಕಾರಣತ್ವಂ ಚ ನಿರಾತ್ಮತ್ವಾನ್ನ ಸಿಧ್ಯತಿ ||

೩೬೯. ಕಾರ್ಯವು ಅಸತ್ತಿನಿಂದ ಹುಟ್ಟಿದ್ದಾದರೆ ಅಸತ್ತಿನಿಂದಲೇ ಕೂಡಿಕೊಂಡಿರಬೇಕಿತ್ತು. ಹಾಗಿಲ್ಲ, (ಸದನ್ವಿತವಾಗಿದೆ). ಆದ್ದರಿಂದ ಕಾರಣವು ಅಸತ್ತಾಗಿರಲಾರದು. ಇನ್ನು ಅಸತ್ತೆಂಬುದು ನಿರಾತ್ಮಕವಾದ್ದರಿಂದ ಅದಕ್ಕೆ ಕಾರಣತ್ವವು ಸಿದ್ಧಿಸುವದೂ ಇಲ್ಲ.

ಧ್ರುವಃ ಸನ್ ಕುರುತೇ ಕಾರ್ಯಂ ಅಯಸ್ಕಾಂತೋ ಮಣಿರ್ಯಥಾ |
ಕಾರಣತ್ವಂ ಭವೇದೇವಂ ಕುರ್ವತೋಽತಿಶಯಃ ಕುತಃ ||

೩೭೦. ಹೇಗೆ ಸೂಜಿಗಲ್ಲಿನ ಮಣಿಯು ತಾನು ಚಲಿಸದೆ (ಕಬ್ಬಿಣವನ್ನು ಸೆಳೆಯುವದೋ) ಹಾಗೆ ಬ್ರಹ್ಮವು ಧ್ರುವ (ಅಚಲ)ವಾಗಿದ್ದುಕೊಂಡೇ ಕಾರ್ಯವನ್ನು ಮಾಡುತ್ತದೆ. ಹೀಗಾದರೇ ಕಾರಣತ್ವವು ಸಿದ್ಧಿಸುತ್ತದೆ. ಹಾಗಿಲ್ಲದೆ ಕಾರ್ಯದಂತೆ ಕಾರಣವೂ ಅಧ್ರುವವಾದರೆ ಅದನ್ನು ಕಾರಣವೆಂದಾದರೂ ಏಕೆ ಹೇಳಬೇಕು ? ಅತಿಶಯವೇನಿದ್ದೀತು ?

ಸಾವಿದ್ಯಃ ಪ್ರತ್ಯಗಾತ್ಮಾ ಯೋ ವಿಯದ್ಯೋನಿಃ ಪುರೋದಿತಃ |
ಸೋಽಕಾಮಯತ ನಾವಿದ್ಯಾಂ ವಿನಾ ಕಾಮೋಽಸ್ತಿ ಕಸ್ಯಚಿತ್ ||

೩೭೧. ಆಕಾಶಾದಿಗಳಿಗೆ ಕಾರಣನೆಂದು ಹಿಂದೆ ಹೇಳಿದ ಯಾವ ಪ್ರತ್ಯಗಾತ್ಮನುಂಟೋ ಅವನು ಕಾಮಿಸಿದನು. ಅವಿದ್ಯೆಯಿಲ್ಲವಾದರೆ ಯಾರಿಗೂ ಕಾಮವಿರಲಾರದು.

ಅಲಾತಸ್ಯೈಕರೂಪಸ್ಯ ವೈಶ್ವರೂಪ್ಯಂ ಯಥಾನ್ಯತಃ |
ರೂಪಾಭಿಧಾನಭ್ರಾಂತ್ಯೋತ್ಥಾ ಬಹುತೇಯಂ ಪರಾತ್ಮನಃ ||
ಪ್ರಜಾಯೇಯೇತ್ಯತೋ ವಕ್ತಿ ನಾಮರೂಪಾತ್ಮನಾ ಪ್ರಭುಃ |

೩೭೨. ನಿಶ್ಚಲವಾಗಿದ್ದಾಗ ಏಕರೂಪವಾಗಿದ್ದ ಕೊಳ್ಳಿಗೆ ಬಹುರೂಪತ್ವವು ಹೇಗೆ ಬೇರೆಬೇರೆ ರೀತಿಯ ಚಲನವಿಶೇಷದಿಂದುಂಟಾಗುವದೋ ಹಾಗೆಯೇ ಪರಮಾತ್ಮನಲ್ಲಿ ನಾಮರೂಪಗಳ ಸಂಬಂಧದಿಂದ ಬಹುರೂಪವಾದ ಭ್ರಾಂತಿಯು ಉಂಟಾಗಿರುವದು. ಆದ್ದರಿಂದ ಶ್ರುತಿಯಲ್ಲಿ 'ನಾನು ಬಹುರೂಪನಾಗಿ ಹುಟ್ಟುವೆನು' ಎಂದು ಬ್ರಹ್ಮವು ಬಯಸುತ್ತದೆ- ಎಂದು ಹೇಳಿದೆ. ಬಹುಭವನವು ಅವಿದ್ಯೆಯ ಸಂಬಂಧವಿಲ್ಲದೆ ಆಗಲಾರದಾದ್ದರಿಂದ ಪ್ರಜಾಯೇಯ– ಎಂಬುದು ಅವಿದ್ಯೆಯಿಂದಲೇ ಆಗಿದೆ ಎಂಬರ್ಥ.

ಆತ್ಮಸ್ಥೇ ನಾಮರೂಪೇ ಯೇ ದೇಶಕಾಲಾದ್ಯಪೇಕ್ಷಿಣೀ |
ಜಗತ್ಕರ್ಮವಶಾದೀಶಾತ್ ವ್ಯಜ್ಯೇತೇ ಬಹುಧಾತ್ಮನಃ ||
ವ್ಯಾಕೃತಿರ್ಯಾ ತಯೋರ್ವಿಷ್ಣೋಃ ಪ್ರತ್ಯಹಂ ನಾಮರೂಪಯೋಃ |
ಭೂಯೋ ಭವನಮೇತತ್ ಸ್ಯಾತ್ ಮಾಯಿನೋಽನೇಕತಾ ಯಥಾ ||

೩೭೩–೩೭೪. ಆತ್ಮನಲ್ಲೇ ಇದ್ದುಕೊಂಡಿರುವ, ದೇಶಕಾಲಗಳನ್ನು ಬಯಸುವ ಯಾವ ನಾಮರೂಪಗಳಿವೆಯೋ ಅವು ಜಗತ್ತಿನ (ಸೃಷ್ಟಿ)ಕರ್ಮಾಧೀನವಾಗಿ ಪರಮೇಶ್ವರನಿಂದ ಬಹುರೂಪವಾಗಿ ಪ್ರಕಟಗೊಳ್ಳುತ್ತವೆ. ಪ್ರತಿದಿನವೂ ವಿಷ್ಣುವಿನ ಕಡೆಯಿಂದ ಹೊರಬೀಳುವ ಈ ನಾಮರೂಪಗಳ ಆವಿರ್ಭಾವವು ಹೇಗೆ ಮಾಯಾವಿಯು (ಮಾಯೆಯಿಂದ) ಅನೇಕನಾಗಿ ತೋರಿಕೊಳ್ಳುವನೋ ಹಾಗೆ-ಮತ್ತೆ ಮತ್ತೆ ಉಂಟಾಗುತ್ತಿರುವವು.

ನ ಹ್ಯನವಯವತ್ವಾಸ್ಯ ಬಹುತ್ವಂ ಯುಜ್ಯತೇಽಞ್ಜಸಾ |
ತಸ್ಮಾದ್ಭಾಕ್ತಂ ಬಹುತ್ವಂ ಸ್ಯಾದ್ ವ್ಯೋಮ್ನೋ ಯದ್ವದ್ ಘಟಾದಿಭಿಃ ||

೩೭೫. ಅವಯವಗಳಿಲ್ಲದ ಆ ಪರಬ್ರಹ್ಮಕ್ಕೆ ಬಹುವಾಗುವಿಕೆಯು ಮುಖ್ಯಾರ್ಥದಲ್ಲಿ ಹೊಂದುವದಿಲ್ಲ. ಆದ್ದರಿಂದ ಹೇಗೆ ಆಕಾಶಕ್ಕೆ ಗಡಿಗೆ–ಮುಂತಾದ (ಉಪಾಧಿಗಳ ನಿಮಿತ್ತವಾದ) ಬಹುತ್ವವು ಆಗಬಹುದೋ ಹಾಗೆಯೇ ಬ್ರಹ್ಮಕ್ಕೂ ಗೌಣವಾಗಿ ಬಹುತ್ವವು ಹೊಂದಬಹುದಾಗಿದೆ.

ಶ್ರೌತಂ ಸೃಷ್ಟ್ಯಾದಿವಿಷಯಮೀಶ್ವರಾಲೋಚನಂ ತಪಃ ।
ಕಾರ್ಯತ್ವಾಲ್ಲೌಕಿಕಸ್ಯೇಹ ತಪಸೋಽಸಂಭವೋ ಭವೇತ್ ॥

೩೭೬. ಶ್ರುತಿಯಲ್ಲಿ ಹೇಳಿರುವ ಸೃಷ್ಟ್ಯಾದಿವಿಷಯಕವಾದ ಆಲೋಚನೆಯೇ ಆ ಬ್ರಹ್ಮದ ತಪಸ್ಸೆನಿಸುವದು. ಲೌಕಿಕವಾದ ತಪಸ್ಸು ಕಾರ್ಯವಾದ್ದರಿಂದ ಅದು ಬ್ರಹ್ಮದ ವಿಷಯದಲ್ಲಿ ಸಂಭವಿಸಲಾರದು.

ಯಥಾಶ್ರುತಿ ಸಮಾಲೋಚ್ಯ ಸಸರ್ಜ ಜಗದೀಶ್ವರಃ ।
ಯಥಾಕ್ರಮಂ ಯಥಾರೂಪಂ ಯಥಾಕರ್ಮ ಯಥಾಕೃತಿ ॥

೩೭೭. ಶ್ರುತಿಯಲ್ಲಿ ಹೇಳಿರುವಂತೆ ಈಶ್ವರನು ಆಲೋಚಿಸಿ (ಹಿಂದಿನ ಕಲ್ಪದಲ್ಲಿ) ಜಗತ್ತು ಯಾವ ಕ್ರಮದಲ್ಲಿ, ಯಾವರೂಪದಲ್ಲಿ, ಯಾವಯಾವ ಕರ್ಮಾನುಗುಣವಾಗಿ ಹೇಗೆಹೇಗೆ ಉಂಟಾಗಿತ್ತೋ ಹಾಗೆಯೇ ಉಂಟುಮಾಡಿದನು.

ಮಾಯಾವೀ ಜಗದುತ್ಪಾದ್ಯ ಮಾಯಯೈವೇಶ್ವರೇಶ್ವರಃ ।
ಸರ್ಪಾದೀನ್ ಕಲ್ಪಿತಾನ್ ಸ್ರಗ್ವತ್ ತದೇವಾನುವಿವೇಶ ಹ ॥

೩೭೮. ಈಶ್ವರರಿಗೂ ಈಶ್ವರನಾದ, ಮಾಯಾವಿಯಾದ ಪರಮಾತ್ಮನು ಮಾಯೆಯಿಂದಲೇ–ಹೇಗೆ ಹಗ್ಗವು ಸರ್ಪಾದಿಕಲ್ಪಿತವಸ್ತುಗಳನ್ನು ಸೃಷ್ಟಿಸುವದೋ ಹಾಗೆ–ಜಗತ್ತನ್ನು ಉಂಟುಮಾಡಿ ಆದರಲ್ಲಿಯೇ ಒಳಹೊಕ್ಕನು.

ಮೃದ್ವಚ್ಚೇತ್ಕಾರಣಂ ಬ್ರಹ್ಮ ಕಾರ್ಯಂ ಸರ್ವಂ ತದಾತ್ಮಕಮ್ ।
ತದಾತ್ಮತಾತಿರೇಕೇಣ ಪ್ರವೇಶೋಽನ್ಯೋ ನ ವಿದ್ಯತೇ ॥

೩೭೯. ಬ್ರಹ್ಮವು ಮಣ್ಣಿನಂತೆ (ಉಪಾದಾನಕಾರಣ)ವೆಂದಾದರೆ ಎಲ್ಲ ಕಾರ್ಯವಸ್ತುವೂ ಬ್ರಹ್ಮಾತ್ಮಕವೇ ಆಗಿರುವದು. ಹೀಗೆ ಬ್ರಹ್ಮವೇ ಸ್ವರೂಪವಾಗಿರುವದಕ್ಕಿಂತ ಬೇರೆಯಾದ ಪ್ರವೇಶವೆಂಬುದಿಲ್ಲ.

ನ ಚಾನ್ಯಃ ಪ್ರಾವಿಶದ್ ವಿಷ್ಣೋಃ ಶ್ರೂಯತೇ ಹ್ಯೇಕಕರ್ತೃತಾ ।
ಸೃಷ್ಟ್ವಾ ಜಗತ್ತದೇವಾನುಪ್ರಾವಿಶಚ್ಚೇತಿ ಹಿ ಶ್ರುತಿಃ ॥

೩೮೦. ಜಗತ್ತನ್ನು ಉಂಟುಮಾಡಿ ಆದನ್ನೇ ಒಳಹೊಕ್ಕನು– ಎಂದು (ಕ್ತ್ವಾ ಪ್ರತ್ಯಯದಿಂದ) ಸೃಷ್ಟಿಕರ್ತನೂ ಪ್ರವೇಶಮಾಡಿದವನೂ ಒಬ್ಬನೇ ಎಂದೇ ಶ್ರುತಿಯು ತಿಳಿಸುವದರಿಂದ ವ್ಯಾಪಕ(ವಿಷ್ಣು)ವಾದ ಬ್ರಹ್ಮಕ್ಕಿಂತ ಮತ್ತೊಬ್ಬನು ಯಾವನೂ ಜಗತ್ತನ್ನು ಒಳಹೊಕ್ಕಿರುವದಿಲ್ಲ.

ಕಪಾಲಾದ್ಯಾತ್ಮಕಂ ಕುಂಭಂ ಮೃದ್ವಚ್ಚ ... ಪ್ರ ...
ಮೃದೋಽನೇಕಾತ್ಮಕತ್ವಾತ್ತು ಘಟತೇ ನೈಕತೋ ಧೃಶಿ

೩೮೧. ಮಣ್ಣು ಕಪಾಲಾದಿಗಳ ರೂಪದಿಂದ ಮಡಕೆಯನ್ನು ಪ್ರವೇಶಿಸಿದಂತೆ ಜಗತ್ತನ್ನು (ಬ್ರಹ್ಮವು) ಒಳಹೊಕ್ಕಿತು- (ಎಂಬಿದೂ ಹೊಂದುವದಿಲ್ಲ) ಏಕೆಂದರೆ ಮಣ್ಣು ಅವಯವಿದ್ರವ್ಯವಾಗಿರುವದರಿಂದ ಹಾಗೆ ಪ್ರವೇಶಿಸಲಡ್ಡಿಯಿಲ್ಲ. ಆದರೆ ದೃಗ್ರೂಪನಾದ ಆತ್ಮನಿಗೆ ಇಂಥ ಪ್ರವೇಶವು ಹೊಂದುವದಿಲ್ಲ.

ಅನಾಪ್ತದೇಶವನ್ಮೃದ್ವತ್ ಪ್ರವೇಶೋ ವ್ಯಾಪಿನಃ ಕಥಮ್ ।
ಪ್ರವೇಶಶ್ರವಣಾತ್ತರ್ಹಿ ಪರಿಚ್ಛಿನ್ನಂ ಪ್ರಕಲ್ಪ್ಯತಾಮ್ ॥

೩೮೨. ಸರ್ವವ್ಯಾಪಿಯಾದ ಬ್ರಹ್ಮಕ್ಕೆ- ಮಣ್ಣಿನಂತೆ ಪರಿಚ್ಛಿನ್ನವಸ್ತುವಾಗಿದ್ದು ಪ್ರವೇಶಿಸದೆ ಇರುವ ಸ್ಥಳವನ್ನು ಹೊಸದಾಗಿ ಪ್ರವೇಶಿಸುವಂತೆ-ಒಳಹೊಗುವದು ಹೇಗೆ ಹೊಂದೀತು? ಹಾಗಾದರೆ (ಶ್ರುತಿಯಲ್ಲಿ) ಪ್ರವೇಶವನ್ನು ಹೇಳಿರುವದರಿಂದ ಬ್ರಹ್ಮವು ಪರಿಚ್ಛಿನ್ನ(ವಸ್ತು)ವೆಂದು ಕಲ್ಪಿಸಬಹುದೆ?

ಮುಖೇ ಹಸ್ತಾದಿವಚ್ಛಾಯಂ ಪ್ರವೇಶೋ ನ ಘಟಿಷ್ಯತಿ ।
ಅಮೂರ್ತಸ್ಯಾಪಿ ನೈವಂ ಸ್ಯಾತ್ ಕಾರ್ಯವ್ಯಾಪ್ತಿತ್ವಹೇತುತಃ ॥

೩೮೩. ಬಾಯಲ್ಲಿ ಕೈಯನ್ನು ಇಟ್ಟುಕೊಳ್ಳುವಂತೆ (ಒಂದೇ ಶರೀರದಲ್ಲಿ ಇದು ಆಗುವದರಿಂದ ಪರಿಚ್ಛಿನ್ನತ್ವದೋಷವಿಲ್ಲ) ಬ್ರಹ್ಮದ ಪ್ರವೇಶವು ಆಗಬಹುದೆಂದರೆ ಅದು ಕೂಡ ಹೊಂದುವದಿಲ್ಲ. ಏಕೆಂದರೆ ಬ್ರಹ್ಮವು ಆಕಾರ-ರೂಪಗಳಿಲ್ಲದ್ದು. ಮತ್ತು ಕಾರ್ಯವೆಲ್ಲವನ್ನೂ ಅದು ಪೂರ್ಣವಾಗಿ ವ್ಯಾಪಿಸಿಕೊಂಡೇ ಬಿಟ್ಟಿರುವದರಿಂದ ಇದು ಸಾಧ್ಯವಿಲ್ಲ.

ವ್ಯಾಪಿ ವಾಽವ್ಯಾಪಿ ವಾ ಕಾರ್ಯಂ ವ್ಯಾಪ್ನೋತ್ಯೇವ ಹಿ ಕಾರಣಮ್ ।
ನ ಹ್ಯಾತ್ಮಶೂನ್ಯೋ ದೇಶೋಽಸ್ತಿ ಯಂ ಜೀವೇನಾವಿಶೇತ್ ಪರಃ ॥

೩೮೪. ಕಾರ್ಯವು ವ್ಯಾಪಿಯಾಗಿರಲಿ, ಆಗದೆಇರಲಿ- ಕಾರಣವು ಅದನ್ನು ವ್ಯಾಪಿಸಿಯೇತೀರುತ್ತದೆ. ಆತ್ಮಶೂನ್ಯವಾದ ಜಾಗವೇ ಇಲ್ಲ. ಹಾಗಿದ್ದಿದ್ದರೆ ಪರಮಾತ್ಮನು ಜೀವರೂಪದಿಂದ ಪ್ರವೇಶಿಸಬಹುದಾಗಿತ್ತು.

ಅಥ ಕಾರಣರೂಪೇಣ ಕಾರ್ಯಮಾಶಃ ಸಮಾವಿಶೇತ್ ।
ಅಹಂ ಬ್ರಹ್ಮೇತಿವಜ್ಜಹ್ಯಾತ್ ಕಾರ್ಯಂ ಕಾರ್ಯಾತ್ಮತಾಂ ತಥಾ ॥

೩೮೫. ಇನ್ನು ಕಾರ್ಯವು ಕಾರಣರೂಪವನ್ನು ಹೊಂದುವಂತೆ ಈಶ್ವರನು ಜಗತ್ತನ್ನು ಪ್ರವೇಶಿಸಬಹುದಲ್ಲವೆ? ಎಂದರೆ ಅದೂ ಹೊಂದುವದಿಲ್ಲ. ಏಕೆಂದರೆ 'ಅಹಂ ಬ್ರಹ್ಮಾಸ್ಮಿ' ಎಂಬಲ್ಲಿ ಕರ್ತೃತ್ವವನ್ನು ನಿರಾಸಮಾಡಿ ಆತ್ಮನು ಬ್ರಹ್ಮವೇ- ಎಂದು ಬೋಧಿಸುವಂತೆ ಕಾರ್ಯದ ಕಾರ್ಯಾತ್ಮತ್ವವನ್ನು ನಿರಾಸಮಾಡಿದಮೇಲೆ ಪ್ರವೇಶವು ಹೇಗೆತಾನೆ ಹೊಂದೀತು? (ಕಾರ್ಯವು ಉಳಿದಿದ್ದರಲ್ಲವೆ, ಪ್ರವೇಶವಾಗಬಹುದಾದೀತು?)

ಏತಂ ಜೀವಾತ್ಮಕಂ ಕಾರ್ಯಂ ಯಾತಿ ಕಾರ್ಯಾನ್ತರಂ ಯದಿ
ವಿರೋಧಾನ್ನೈವಮಪ್ಯೇತನ್ನೈತಿ ಕುಂಭಃ ಶರಾವತಾಮ್ ||

೩೮೬. ಜೀವನು ಪರಮಾತ್ಮನ ಅಹಂಕಾರಾದಿಕಾರ್ಯವಾದ್ದರಿಂದ ಹಾಗೆ ಆಗುವಿಕೆಯೇ ಪ್ರವೇಶವು– ಎಂದು ಭಾವಿಸುವದಾದರೆ ಅದು ಸರಿಯಲ್ಲ. ಏಕೆಂದರೆ ವಿರೋಧವಿರುವದರಿಂದ ಕಾರ್ಯವು ಕಾರ್ಯಾಂತರವಾಗಲಾರದು. ಮಡಕೆಯು ಶ್ರಾವೆಯಾಗುವದು ಕಂಡಿಲ್ಲವಷ್ಟೆ! ಹಾಗೆಯೇ ಜೀವನು ಅಹಂಕಾರಾದಿಕಾರ್ಯಾಂತರವಾಗಲಾರನು.

ನಾಮರೂಪಾದಿಕಾರ್ಯಾಚ್ಚ ವ್ಯತಿರೇಕಾನುವಾದಿನಿ |
ಶ್ರುತಿಃ ಕುಪ್ಯೇತ ಮೋಕ್ಷಶ್ಚ ತದಾಪತ್ತೌ ಸುದುರ್ಲಭಃ ||

೩೮೭. ಜೀವನು ಅಹಂಕಾರಾದಿಕಾರ್ಯನಾಗುವದಾದರೆ ಜೀವಾತ್ಮರೂಪದಿಂದ ಜಗತ್ತನ್ನು ಪರಮಾತ್ಮನು ಒಳಹೊಕ್ಕನು– ಎಂಬುದನ್ನು ಹೇಳುವ ಶ್ರುತಿಯು ವಿರುದ್ಧವಾಗುವದು. ಮತ್ತು ಜೀವನು ಕಾರ್ಯಾಂತರನಾಗಿಬಿಟ್ಟರೆ ಅವನಿಗೆ ಮೋಕ್ಷವೂ ದುರ್ಲಭವಾಗುವದು.

ಜಲಾರ್ಕವತ್ ಪ್ರವೇಶಶ್ಚೇನ್ನಾಪರಿಚ್ಛಿನ್ನರೂಪತಃ |
ಅಮೂರ್ತತ್ವಾಚ್ಚ ನಾಸ್ಯೈವಂ ಪ್ರವೇಶ ಉಪಪದ್ಯತೇ ||

೩೮೮. ಸೂರ್ಯನು ನೀರಿನಲ್ಲಿ ಹೊಕ್ಕಂತೆ– ಪರಮಾತ್ಮನು ಜಗತ್ತನ್ನು ಪ್ರವೇಶಿಸಿದನು– ಎನ್ನುವದಾದರೆ ಅದೂ ಹೊಂದುವದಿಲ್ಲ. ಆತ್ಮನು ಪರಿಚ್ಛಿನ್ನನಲ್ಲದ್ದರಿಂದಲೂ ಅಮೂರ್ತನಾಗಿರುವದರಿಂದಲೂ ಈ ರೀತಿಯಾದ ಪ್ರವೇಶವು ಸರಿಯಲ್ಲ.

ಏವಂ ತರ್ಹಿ ಪ್ರವೇಶೋಽಸ್ಯ ಶ್ಲಿಷ್ಯತೇ ನ ಕಥಂಚನ |
ನ ಚ ಗತ್ಯಂತರಂ ವಿದ್ಮೋ ಯೇನ ವಾಕ್ಯಂ ಸಮರ್ಥ್ಯತೇ ||

೩೮೯. ಹೀಗಾದರೆ ಯಾವರೀತಿಯಿಂದಲೂ ಪ್ರವೇಶವು ಹೊಂದುವಂತೆಯೇ ಇಲ್ಲ. ಇದನ್ನು ಹೊಂದಿಸಲು ಬೇರೆ ಯಾವ ಮಾರ್ಗವೂ ಕಂಡುಬರುತ್ತಿಲ್ಲ.

ಅನರ್ಥಕ್ಯಾದಿದಂ ತರ್ಹಿ ತ್ಯಜ್ಯತಾಂ ಶಿಶುವಾಕ್ಯವತ್ |
ಪ್ರವೇಶವಾಕ್ಯಂ ನೈವಂ ತತ್ ಗತ್ಯಂತರಸಮಾಶ್ರಯಾತ್ ||

೩೯೦. ಹಾಗಾದರೆ ಮಕ್ಕಳಮಾತಿನಂತೆ (ಬೆಲೆಯಿಲ್ಲದ್ದೆಂದು ಭಾವಿಸಿ) ಅರ್ಥರಹಿತವಾದ್ದರಿಂದ ಇದನ್ನು ಕೈಬಿಡೋಣವೆ? ಎಂದರೆ ಕೂಡದು. ಇದಕ್ಕೆ ಬೇರೆಯ ಅರ್ಥವಿದೆಯಾಗಿ ತ್ಯಾಜ್ಯವಲ್ಲ.

ಬ್ರಹ್ಮವಿತ್ ಪರಮಾಪ್ನೋತೀತ್ಯುಕ್ತಾತ್ರ ಸತ್ಯಾದಿಲಕ್ಷಣಮ್ |
ಪ್ರಾವೇಶಯದ್ಗುಹಾಂ ತಚ್ಚ ತದನಾತ್ಮತ್ವಶಾಂತಯೇ ||

೩೯೧. ಬ್ರಹ್ಮವನ್ನು ಬಲ್ಲವನು ಪರಮ(ಪದ)ವನ್ನು ಹೊಂದುತ್ತಾನೆ- ಎಂದು ಹೇಳಿದ ಅನಂತರ ಬ್ರಹ್ಮವು ಸತ್ಯಜ್ಞಾನಾನಂತವೆಂದು ಲಕ್ಷಣವನ್ನು ತಿಳಿಸಿ ಅದು ಅನಾತ್ಮವಲ್ಲವೆಂದು ತಿಳಿಸುವದಕ್ಕಾಗಿ ಹೃದಯಗುಹೆಯನ್ನು ಪ್ರವೇಶಿಸಿತು- ಎಂದು ಹೇಳಿದೆ.

ಅಬ್ರಹ್ಮತ್ವನಿವೃತ್ತ್ಯರ್ಥಂ ಬ್ರಹ್ಮಾತ್ಮೇತಿ ವಿಶೇಷಣಮ್ |
ತನ್ನಿವೃತ್ತಾವವಾಕ್ಯಾರ್ಥಂ ಕೈವಲ್ಯಂ ಪ್ರತಿಪದ್ಯತೇ ||

೩೯೨. ಆತ್ಮನು ಬ್ರಹ್ಮವೇ ಎಂದು ವಿಶೇಷಣದಿಂದ ಹೇಳಿರುವದು ಅದು ಬ್ರಹ್ಮವಲ್ಲವೆಂಬುದನ್ನು ನಿರಾಕರಿಸಲು (ಸಹಾಯಕವಾಗಿದೆ). ಅಬ್ರಹ್ಮತ್ವವು ನಿವೃತ್ತಿಯಾಗಲಾಗಿ (ಸಾಧಕನು) ಮೋಕ್ಷವನ್ನು ಪಡೆಯುತ್ತಾನೆ.

ಯಸ್ಮಾದೇವಂ ಫಲಂ ತಸ್ಮಾತ್ ಜ್ಞಾನಮತ್ರ ವಿವಕ್ಷಿತಮ್ |
ಗುಹಾಯಾಮದ್ವಯಂ ಬ್ರಹ್ಮ ತಸ್ಮಾನ್ನಿಹಿತಮುಚ್ಯತೇ ||

೩೯೩. ಹೀಗೆ ಬ್ರಹ್ಮಪ್ರಾಪ್ತಿಯು (ಸ್ವರೂಪಪ್ರಾಪ್ತಿಯೇ ಆದ್ದರಿಂದ) ಇಲ್ಲಿ ಬ್ರಹ್ಮವನ್ನರಿಯುವದೇ ವಿವಕ್ಷಿತವು. ಆದ್ದರಿಂದ ಅದ್ವಿತೀಯವಾದ ಬ್ರಹ್ಮವು ಗುಹೆಯಲ್ಲಿ ಇದೆ- ಎಂದು ಹೇಳಲಾಗಿದೆ.

ತದ್ರೂಪಾನುಗಮಾಯಾನ್ನಮಯಾನ್ತಂ ಕಾರ್ಯಮಾಹ ಹಿ |
ಪೂರ್ವಪೂರ್ವಾತಿರೇಕೇಣ ತ್ರೀನ್ ಕೋಶಾನತಿಲಂಘ್ಯ ಚ |
ವಿಜ್ಞಾನಮಯರೂಪಾಯಾಂ ಗುಹಾಯಾಂ ದರ್ಶಿತಃ ಪರಃ ||

೩೯೪-೩೯೫. ಆ ಬ್ರಹ್ಮದ ಸ್ವರೂಪವನ್ನು ಕಂಡುಕೊಳ್ಳುವದಕ್ಕಾಗಿಯೇ ಅನ್ನಮಯನ ವರೆಗಿನ ಕಾರ್ಯಾತ್ಮರುಗಳನ್ನು ಹೇಳಲಾಯಿತು. ಇನ್ನು ಪ್ರವೇಶ ವಚನವಾದರೊ, ಅನ್ನಮಯನಿಂದ ವಿಜ್ಞಾನಮಯನವರೆಗಿನ ಕೋಶಗಳಲ್ಲಿ ಹಿಂದುಹಿಂದಿನ ಮೂರು ಕೋಶಗಳನ್ನು ದಾಟಿ ವಿಜ್ಞಾನಮಯನೆನಿಸಿದ ಬುದ್ಧಿರೂಪವಾದ ಗುಹೆಯಲ್ಲಿ ಪರಮಾತ್ಮನು ಪ್ರವೇಶಿಸಿದನೆಂದು ತಿಳಿಸುತ್ತದೆ.

ತತ್ರಾನಂದಮಯೋ ಯಸ್ಮಾಲ್ಲಕ್ಷ್ಯತೇ ರಾಹುಚಂದ್ರವತ್ |
ಮಾನುಷಾದಧಿ ಯತ್ರೇದಂ ಸುಖಂ ನಿಷ್ಠಾಂ ಪ್ರಪದ್ಯತೇ ||
ಉತ್ಕೃಷ್ಯಮಾಣಂ ಕ್ರಮಶಃ ತದ್ಬ್ರಹ್ಮಾಸ್ಮೀತಿ ಬೋಧಯೇತ್ ||

೩೯೬. ಅಲ್ಲಿ ಆನಂದಮಯಾತ್ಮನು- ಹೇಗೆ ರಾಹುವು ಚಂದ್ರನ ಸಂಬಂಧದಿಂದ ಕಂಡುಬರುತ್ತಾನೋ ಹಾಗೆ- ಕಾಣಬರುತ್ತಾನೆ. ಮನುಷ್ಯಾನಂದಕ್ಕಿಂತ ಮಿಗಿಲಾದ ಆನಂದವು ಎಲ್ಲಿ ಪೂರ್ಣವಾಗಿ ನೆಲೆಗೊಳ್ಳುವದೋ, ಅದು ಕ್ರಮವಾಗಿ ಹೆಚ್ಚುಹೆಚ್ಚಾಗಿ ಬೆಳೆದು ಎಲ್ಲಿ ಅಪರಿಮಿತವಾಗುವದೋ ಅದೇ ಬ್ರಹ್ಮವು, ಅದೇ ನಾನು- ಎಂದು ಆಚಾರ್ಯನು ಶಿಷ್ಯನಿಗೆ ತಿಳಿಯಹೇಳಬೇಕು.

ವಿಕಲ್ಪಯೋನಾವೇತಸ್ಯಾಂ ನಿರ್ವಿಕಲ್ಪೋಽಧಿಗಮ್ಯತೇ ।
ತಸ್ಮಾತ್ತಸ್ಯಾಂ ಪ್ರವೇಶೋಽಸ್ಯ ಕಲ್ಪ್ಯತೇ ನಾಂಜಸೋಚ್ಯತೇ ॥

೩೯೭. ಎಲ್ಲಾ ವಿಕಲ್ಪಗಳಿಗೂ ಆಶ್ರಯವಾದ ಈ ಬುದ್ಧಿಯಲ್ಲಿ ನಿರ್ವಿಕಲ್ಪನಾದ ಆತ್ಮನು ಕಂಡುಬರುತ್ತಾನೆ. ಆದ್ದರಿಂದ ಅಲ್ಲಿ ಪ್ರವಿಷ್ಟನಾದಂತೆ–ಎಂದು ಕಲ್ಪಿಸಲಾಗಿದೆ. ನಿಜವಾಗಿ ಅಲ್ಲ.

ಪ್ರಕಾಶಾತ್ಮಕ ಏತಸ್ಮಿನ್ ದ್ರಷ್ಟೃಶ್ರೋತ್ರಾದಿಲಕ್ಷಣಮ್ ।
ಮೋಹಾದೀಕ್ಷಾಮಹೇ ಯಸ್ಮಾತ್ ಪ್ರವಿಷ್ಟಸ್ತೇನ ಕಲ್ಪ್ಯತೇ ॥

೩೯೮. ಪ್ರಕಾಶಸ್ವರೂಪವಾದ ಈ (ಬ್ರಹ್ಮ)ದಲ್ಲಿ ದ್ರಷ್ಟಾ, ಶ್ರೋತಾ–ಎಂದು ಮುಂತಾದ ಸ್ವರೂಪವ (ಆತ್ಮನನ್ನು) ಅಜ್ಞಾನದಿಂದ ನಾವು ಕಾಣುವೆವಾದ್ದರಿಂದ ಇದು ಪ್ರವೇಶಮಾಡಿತು– ಎಂದು ಹೇಳಲಾಗಿದೆ.

ತಸ್ಯೈಷ ಏವ ಶಾರೀರ ಆತ್ಮೇತ್ಯೇವಂ ಬ್ರುವಾಣಯಾ ।
ಐಕಾತ್ಮ್ಯಮುಚ್ಯತೇ ಶ್ರುತ್ಯಾ ಹೃತ್ಪ್ರವಿಷ್ಟಾಪ್ರವಿಷ್ಟಯೋಃ ॥

೩೯೯. 'ಅವನಿಗೆ ಈ ಶಾರೀರನೇ ಆತ್ಮನು' ಎಂದು ಹೇಳುತ್ತಿರುವ ಶ್ರುತಿಯಿಂದ ಹೃದಯವನ್ನು ಪ್ರವೇಶಿಸಿರುವ ಹಾಗೂ ಪ್ರವೇಶಿಸದಿರುವ ಆತ್ಮ–ಬ್ರಹ್ಮನಿಗೆ ಐಕಾತ್ಮ್ಯವನ್ನು ಶ್ರುತಿಯಲ್ಲಿ ಹೇಳಲಾಗಿದೆ.

ಪ್ರವೇಶಹೇತುದೋಷಾಣಾಮಧ್ಯಸ್ತಾನಾಂ ಪರಾತ್ಮನಿ ।
ಯದಾ ಹೀತ್ಯಾದಿನಾ ಧ್ವಂಸ ಏವಂ ಸತ್ಯುಪಪದ್ಯತೇ ॥

೪೦೦. ಪರಮಾತ್ಮನಲ್ಲಿ ಅಧ್ಯಾಸಮಾಡಿದ ಪ್ರವೇಶನಿಮಿತ್ತವಾದ ಎಲ್ಲಾ ದೋಷಗಳ ನಿರಾಕರಣೆಯೂ 'ಯದಾ ಹಿ' ಎಂಬ ಮಂತ್ರಭಾಗದಿಂದ ಮಾಡಲ್ಪಟ್ಟಿದೆ– ಎಂಬುದು ಹೀಗಾದರೆ ಹೊಂದುತ್ತದೆ.

ಅಪ್ರವಿಷ್ಟಸ್ವಭಾವಸ್ಯ ಪ್ರವೇಶಸ್ತೇನ ಕಲ್ಪ್ಯತೇ ।
ಕ್ಷೇತ್ರಜ್ಞೇಶ್ವರಹಾನೇನ ಹ್ಯೈಕಾತ್ಮ್ಯಂ ಸ್ಯಾತ್ ಕಥಂ ತ್ವಿತಿ ॥

೪೦೧. ಪ್ರವೇಶಸ್ವಭಾವರಹಿತನಾದ ಆತ್ಮನಿಗೆ ಶ್ರುತಿಯಿಂದ ಪ್ರವೇಶವು ಕಲ್ಪಿತವಾಗಿದೆ. ಜೀವ, ಈಶ್ವರ–ಎಂಬ ಭೇದವು ಹೋಗಿ ಏಕಾತ್ಮತ್ವವು ಹೇಗಾದೀತೆಂದು ಚಿಂತಿಸಿ (ಈ ಪ್ರವೇಶಶ್ರುತಿಯು ಪ್ರವೃತ್ತವಾಗಿದೆ.)

ಮೂರ್ತಾಮೂರ್ತಾತ್ಮಕಂ ಕಾರ್ಯಂ ಯತ್ಸೃಷ್ಟ್ವಾ ಪ್ರಾವಿಶತ್ ಪ್ರಭುಃ ।
ರಜತಂ ಶುಕ್ತಿಕೈವಾತ್ಮಾ ತದಾತ್ಮೇವಾಭವನ್ಮೃಷಾ ॥

೪೦೨. ಹೇಗೆ ಕಪ್ಪೆಯಚಿಪ್ಪು ಸುಳ್ಳುಸುಳ್ಳಾಗಿಯೇ ಬೆಳ್ಳಿಯಾಗುತ್ತದೆಯೋ ಹಾಗೆ ಪ್ರಭುವಾದ ಪರಮಾತ್ಮನು ಮೂರ್ತಾಮೂರ್ತಾತ್ಮಕವಾದ ಕಾರ್ಯವನ್ನುಂಟುಮಾಡಿ (ಮಿಥ್ಯಾ)ಪ್ರವೇಶವನ್ನು ಮಾಡಿರುತ್ತಾನೆ.

ಮೂರ್ತಂ ಭೂತತ್ರಯಂ ಸತ್ಸ್ಯಾದಿತರತ್ತ್ಯದಿಹೋಚ್ಯತೇ |
ಅವ್ಯಾಕೃತಾದಾಶರೀರಾತ್ ಏತಾವದ್ವಸ್ತು ನಾಪರಮ್ ||

೪೦೩. ಪೃಥಿವಿ, ಅಪ್ಪು, ತೇಜಸ್ಸು–ಈ ಮೂರು ಭೂತಗಳು ಸತ್ ಎಂದೂ ಉಳಿದೆರಡು (ವಾಯು, ಆಕಾಶಗಳು) ತ್ಯತ್– ಎಂದೂ ಕರೆಯಲ್ಪಡುತ್ತವೆ. ಅವ್ಯಾಕೃತದಿಂದ ಹಿಡಿದು ಶರೀರದವರೆಗಿನ ಎಲ್ಲವೂ ಈ ಮೂರ್ತಾಮೂರ್ತಗಳು ಮಾತ್ರವೇ. ಇವಕ್ಕಿಂತ ಬೇರೆಯಾಗಿ ವಸ್ತುವೆಂಬುದಿಲ್ಲ.

ಸಮಾನೇತರಜಾತೀಯಾನ್ನಿರ್ಧಾರ್ಯೇದಂತಯೋಚ್ಯತೇ |
ಯನ್ನಿರುಕ್ತಂ ತದತ್ರ ಸ್ಯಾದನಿರುಕ್ತಮಿತೋಽನ್ಯಥಾ ||

೪೦೪. ಯಾವದನ್ನು ಉಳಿದ ಸಮಾನಜಾತಿಯ ವಸ್ತುಗಳಿಂದ ವಿಂಗಡಿಸಿ ನಿರ್ಧರಿಸಿ 'ಇದು' ಎಂದು ತಿಳಿಸಲಾಗುತ್ತದೆಯೋ ಅದು ನಿರುಕ್ತವು. ಅದಲ್ಲದ್ದು ಅನಿರುಕ್ತವು– ಎಂದು ಇಲ್ಲಿ ತಿಳಿಯಬೇಕು.

ಸಾಕ್ಷಾತ್ ಪರೋಕ್ಷರೂಪೇ ತು ಮೂರ್ತಾಮೂರ್ತೇ ಪುರೋದಿತೇ |
ನಿರುಕ್ತೇತರರೂಪೇ ಯೇ ತಯೋರೇವ ವಿಶೇಷಣೇ ||

೪೦೫. ಹಿಂದೆ ಹೇಳಿದ ಭೂತತ್ರಯಗಳು ಮೂರ್ತಗಳು; ಇನ್ನೆರಡು ಅಮೂರ್ತಗಳು–ಎಂಬಿವನ್ನೇ ಇಲ್ಲಿ ನಿರುಕ್ತ, ಅನಿರುಕ್ತವೆಂದು ಹೇಳಲಾಗಿದೆಯೇ ಹೊರತು ಬೇರೆಯಲ್ಲ. ಆದ್ದರಿಂದ ನಿರುಕ್ತಾನಿರುಕ್ತಗಳು ಮೂರ್ತಾಮೂರ್ತಗಳಿಗೇ ವಿಶೇಷಣಗಳೆಂದು ತಿಳಿಯಬೇಕು.

ನಿಲಯೋ ಮೂರ್ತಧರ್ಮಃ ಸ್ಯಾದುತ್ತರೋಽಮೂರ್ತಸಂಶ್ರಯಃ |
ವಿಜ್ಞಾನಂ ಚೇತನಂ ವಿದ್ಯಾದವಿಜ್ಞಾನಮಚೇತನಮ್ ||

೪೦೬. ನಿಲಯು ಎಂಬಿದು ಮೂರ್ತವಸ್ತುವಿನ ಧರ್ಮವು. ಅನಿಲಯು ಎಂಬಿದು ಅಮೂರ್ತವಸ್ತುಧರ್ಮವು. ಹಾಗೆಯೇ ವಿಜ್ಞಾನವೆಂದರೆ ಚೇತನವೆಂದೂ ಅವಿಜ್ಞಾನವೆಂದರೆ ಅಚೇತನವೆಂದೂ ತಿಳಿಯಬೇಕು.

ವ್ಯಾವಹಾರಿಕಮೇವಾತ್ರ ಸತ್ಯಂ ಸ್ಯಾದಧಿಕಾರತಃ |
ಪಾರಮಾರ್ಥಿಕಸತ್ಯಸ್ಯ ವಾಕ್ಯಾನ್ತೇ ಸಮುದೀರಣಾತ್ ||

೪೦೭. ಪ್ರಕರಣಕ್ಕೆ ತಕ್ಕಂತೆ ಸತ್ಯವೆಂದರೆ ಇಲ್ಲಿ ವ್ಯಾವಹಾರಿಕಸತ್ಯವೆಂದು ತಿಳಿಯಬೇಕು. ಏಕೆಂದರೆ ವಾಕ್ಯದ ಕಡೆಯಲ್ಲಿ (ತತ್ಸತ್ಯಮಿತ್ಯಾಚಕ್ಷತೇ ಎಂಬಲ್ಲಿ) ಪಾರಮಾರ್ಥಿಕಸತ್ಯವನ್ನು ಹೇಳಲಾಗಿದೆ.

ಮೃಗತೃಷ್ಣಾದಿವನ್ಮಿಥ್ಯಾ ತದಿಹಾನೃತಮುಚ್ಯತೇ |
ಇತ್ಯೇತದಭವತ್ ಸ್ರಷ್ಟಾ ಹ್ಯವಿದ್ಯೋತ್ಥಮವಿದ್ಯಯಾ ||

೪೦೮. ಬಿಸಿಲುಕುದುರೆಯ ನೀರಿನಂತೆ ಸುಳ್ಳಾಗಿರುವುದನ್ನು ಇಲ್ಲಿ ಅನೃತವೆಂದಿದೆ. ಹೀಗೆ ಸೃಷ್ಟಿಕರ್ತನು ಅವಿದ್ಯೆಯಿಂದ ಅವಿದ್ಯಾಕಲ್ಪಿತವಸ್ತುಗಳಾಗಿ ತಾನೇ ಆದನು—ಎಂದು ತಿಳಿಯಬೇಕು.

ಪ್ರತ್ಯಾಖ್ಯಾನೇನ ಸರ್ವಸ್ಯ ಸತ್ತ್ಯದಾದ್ಯಾತ್ಮಕಸ್ಯ ಹಿ ।
ವ್ಯಾವೃತ್ತಾಖಿಲನಾನಾತ್ವಮಹಂ ಬ್ರಹ್ಮೇತಿ ಬೋಧ್ಯತೇ ॥

೪೦೯. ಹೀಗೆ ಸತ್, ತ್ಯತ್— ಎಂಬ ರೂಪಗಳಲ್ಲಿರುವ ಎಲ್ಲಾ ವಿಕಲ್ಪಗಳನ್ನೂ ಕಿತ್ತುಹಾಕಿ ಸಮಸ್ತವಿಧವಾದ ನಾನಾತ್ವವನ್ನೂ ನಿರಾಕರಿಸಿದ ಅನಂತರ ನಾನು ಬ್ರಹ್ಮವು— ಎಂದು ತಿಳಿಸಲ್ಪಡುತ್ತದೆ.

ನೈತದಸ್ತಿ ನ ನಾಸ್ತೀದಂ ದ್ವಯೋರ್ಮೋಹೋದ್ಭವತ್ವತಃ ।
ನ ಸತ್ತನ್ನಾಸದಿತ್ಯೇವಂ ಪ್ರಾಹ ವಿಶ್ವೇಶ್ವರೋಽಪಿ ಹಿ ॥

೪೧೦. ಇದು ಇಲ್ಲ. ಇದು ಇಲ್ಲವೆಂಬುದೂ ಇಲ್ಲ. ಏಕೆಂದರೆ ಇದೆ, ಇಲ್ಲ—ಎಂಬಿವೆರಡೂ ಅವಿದ್ಯೆಯಿಂದ ಕಾಣುತ್ತಿವೆ. ಭಗವಂತನೂ ಗೀತೆಯಲ್ಲಿ ಪರಬ್ರಹ್ಮತತ್ತ್ವವನ್ನು ಅದು ಸತ್ತಲ್ಲ ; ಅಸತ್ತೂ ಅಲ್ಲ— ಎಂದೇ ಹೇಳಿರುತ್ತಾನೆ.

ಆವಿರ್ಭಾವತಿರೋಭಾವೌ ಬುದ್ಧೇರ್ಯತ್ಸಾಕ್ಷಿಕಾವಿಹ ।
ತಮೇಕಮನ್ತರಾತ್ಮಾನಂ ವಿದ್ಯಾದವ್ಯಭಿಚಾರಿಣಮ್ ॥

೪೧೧. ಈ ಬುದ್ಧಿಯ ತೋರುವಿಕೆ—ಮರೆಯಾಗುವಿಕೆಗಳು ಯಾವ ಸಾಕ್ಷಿಯ ನೆರವಿನಿಂದ ಆಗುತ್ತಿವೆಯೋ ಆ ಅಂತರಾತ್ಮನೂ ಏಕನೂ ಅವ್ಯಭಿಚಾರಿಯೂ ಆದ ಆತ್ಮನನ್ನು ಅರಿತುಕೊಳ್ಳಬೇಕು.

ತಸ್ಮಾದಸ್ತಿ ಪರಂ ಬ್ರಹ್ಮ ಯಸ್ಯಾವಿದ್ಯಾವಿಕಲ್ಪಿತಾಃ ।
ಸನ್ತೀವ ಸತ್ತಾಮಾಲಂಬ್ಯ ಕಾರ್ಯಕಾರಣಲಕ್ಷಣಾಃ ॥

೪೧೨. ಯಾವ ಬ್ರಹ್ಮವನ್ನರಿಯದ್ದರ ಕಾರಣದಿಂದ, ಕಾರ್ಯಕಾರಣಲಕ್ಷಣಗಳಾದ ಅನಾತ್ಮವಸ್ತುಗಳು ಆ ಬ್ರಹ್ಮದ ಇರುವಿಕೆಯನ್ನವಲಂಬಿಸಿಕೊಂಡೇ ತಾವೂ ಇರುವಂತೆ ತೋರುತ್ತಿರುವವೋ ಆ ಬ್ರಹ್ಮವು ಇದ್ದೇ ಇದೆ.

ವಿವಾದಗೋಚರಾಪನ್ನಂ ಯತ್ಕಿಂಚಿದ್ರಚನಾತ್ಮಕಮ್ ।
ತತ್ಸರ್ವಂ ಬುದ್ಧಿಮತ್ಪೂರ್ವಂ ತದಾತ್ಮತ್ವಾತ್ ಘಟಾದಿವತ್ ॥

೪೧೩. ಜಗತ್ಸೃಷ್ಟಿರೂಪವಾದ, ವಿವಾದಕ್ಕೆ ಸಿಲುಕಿರುವ ಯಾವಯಾವ ರಚನೆಯೋ ಅದೆಲ್ಲವೂ ಬುದ್ಧಿಪೂರ್ವಕವಾದ ರಚನೆಯೇ ಆಗಿದ್ದು (ಬ್ರಹ್ಮವನ್ನೇ) ತಿರುಳಾಗಿ ಉಳ್ಳದ್ದಾಗಿದೆ. ಮಡಕೆ— ಮುಂತಾದವು ಹೇಗೆ ಕುಂಬಾರನ ಬುದ್ಧಿರಚನೆಗಳೋ ಹಾಗೆ— ಎಂದು ತಿಳಿಯಬೇಕು.

ತತ್ರೈತಸ್ಮಿನ್ ಯಥೋಕ್ತೇಽರ್ಥೇ ಶ್ಲೋಕಃ ಪೂರ್ವವದುಚ್ಯತೇ |
ಶ್ರುತ್ಯುಕ್ತಾರ್ಥಾನುವಾದೀ ತು ದೃಢಿಮ್ನೇ ಪುಂಧಿಯೋಽಧುನಾ ||

೪೧೪. ಈ ಹಿಂದೆ ಹೇಳಿದ ಅಭಿಪ್ರಾಯವನ್ನೇ ವಿವರಿಸಲು ಹಿಂದಿನಂತೆಯೇ ಶ್ಲೋಕವು ಬಂದಿರುತ್ತದೆ. ಇದು ಮನುಷ್ಯನ ಬುದ್ಧಿಯನ್ನು ದೃಢಗೊಳಿಸುವ ಸಲುವಾಗಿ ಶ್ರುತಿಯ ಅರ್ಥವನ್ನು ಅನುವಾದಮಾಡಿ ಹೇಳುತ್ತದೆ.

ಯದಿದಂ ಶಬ್ದಧೀಗಮ್ಯಂ ಪ್ರಾಗಸತ್ತದಭೂಜ್ಜಗತ್ |
ಅಸಚ್ಛಬ್ದೇನ ಚಾತ್ರ ಸ್ಯಾದ್ ಬ್ರಹ್ಮೈವಾನಾಮರೂಪಕಮ್ ||

೪೧೫. ಈಗ ಯಾವ ಜಗತ್ತು ಮಾತಿಗೂ ಮನಸ್ಸಿಗೂ ವಿಷಯವಾಗಿದೆಯೋ ಅದು ಹಿಂದೆ ಅಸತ್ತಾಗಿತ್ತು- ಎಂದರೆ ಅಸತ್ತೆಂಬುದು ನಾಮರೂಪರಹಿತವಾದ ಬ್ರಹ್ಮವೇ ಆಗಿತ್ತು- ಎಂದರ್ಥ.

ನಾಮರೂಪಾತ್ಮಕಂ ಕಾರ್ಯಮನಾತ್ಮತ್ವಾತ್ ಸ್ವತೋ ಹ್ಯಸತ್ |
ಯತ್ಸದೇಕಂ ಪರಂ ಬ್ರಹ್ಮ ತತೋ ವೈ ಸದಜಾಯತ ||

೪೧೬. ನಾಮರೂಪಾತ್ಮಕವಾದ ಕಾರ್ಯವು ಅನಾತ್ಮವಾಗಿರುವದರಿಂದ ತಾನೇ ಅಸತ್ತಾಗಿದೆ. ಆದ್ದರಿಂದ ಸದೇಕವಾದ ಪರಬ್ರಹ್ಮದಿಂದಲೇ (ಕಾರ್ಯರೂಪವಾದ) ಸತ್ತು ಉಂಟಾಗಿರುತ್ತದೆ.

ಸತ್ಯಂ ಜ್ಞಾನಮನನ್ತಂ ಯತ್ತದುಪೇತಮವಿದ್ಯಯಾ |
ಸ್ವಾತ್ಮನೈವ ಸ್ವಮಾತ್ಮಾನಂ ಸತ್ತ್ಯದ್ರೂಪಮಚೀಕ್ಲೃಪತ್ ||

೪೧೭. ಸತ್ಯಜ್ಞಾನಾನಂತವಾದ ಯಾವ ಬ್ರಹ್ಮವಿದೆಯೋ ಅದು ಅವಿದ್ಯೆಯಿಂದ ಕೂಡಿದ್ದಾಗಿ ತನ್ನಿಂದಲೇ ತನ್ನನ್ನೇ ಸತ್ತು-ತ್ಯತ್ತು-ಮುಂತಾದ ರೂಪಗಳಿಂದ ಉಂಟುಮಾಡಿಕೊಂಡಿತು.

ಯಸ್ಮಾತ್ ಸ್ವಯಮಿದಂ ಸರ್ವಮಕರೋನ್ನಿಪುಣಃ ಪ್ರಭುಃ |
ಸುಕೃತಂ ಪ್ರಭುಮೇವಾತೋ ಮಹಾತ್ಮಾನಃ ಪ್ರಚಕ್ಷತೇ ||

೪೧೮. ನಿಪುಣನೂ ಪ್ರಭುವೂ ಆದ ಬ್ರಹ್ಮವು ತಾನೇ ಎಲ್ಲವನ್ನೂ ಉಂಟುಮಾಡಿದನಾದ್ದರಿಂದ ಮಹಾತ್ಮರು ಪ್ರಭುವನ್ನೇ ಸುಕೃತವೆನ್ನುವರು.

ಯದಿ ವೇಶ್ವರನಿರ್ವೃತ್ತಂ ಕಾರ್ಯಂ ಸುಕೃತಮುಚ್ಯತೇ |
ನಿಷ್ಠಾಸಂಶ್ರವಣಾತ್ ಸಾಕ್ಷಾತ್ ನ ತು ಕರ್ತೇಶ ಉಚ್ಯತೇ ||

೪೧೯. ಒಂದು ವೇಳೆ ಈಶ್ವರನು ಕೈಗೊಂಡ ಕಾರ್ಯವು ಸುಕೃತವು-ಎನಿಸುವದಾದರೆ- ಸುಕೃತ ಎಂಬ ಪದದಲ್ಲಿನ ಕ್ತ ಪ್ರತ್ಯಯವು ನಿಷ್ಠಾಸಂಜ್ಞೆಯುಳ್ಳದ್ದಾಗಿರುವದರಿಂದ ಈಶ್ವರನ ಕಾರ್ಯವು ಸುಕೃತವೆಂದು ಹೇಳುವದೂ ಸಮಂಜಸವಾಗುವದು. ಆಗ ಕರ್ತೃವಾದ ಈಶ್ವರನು ಸುಕೃತನೆನಿಸುವದಿಲ್ಲ.

ಲೋಕೇಽಪಿ ಸ್ವಾಮಿನಾ ಸಾಕ್ಷಾದ್ ಯತ್ಕೃತಂ ಕರ್ಮ ಯತ್ನತಃ |
ತದೇವ ಸುಕೃತಂ ಪ್ರಾಹುರ್ನ ತು ಭೃತ್ಯೈಸ್ತಥಾ ಕೃತಮ್ ||

೪೨೦. ಲೋಕದಲ್ಲಿಯೂ ಕೂಡ ಯಜಮಾನನು ತಾನೇ ನೇರಾಗಿ ಪ್ರಯತ್ನಪೂರ್ವಕವಾಗಿ ಯಾವ ಕರ್ಮವನ್ನು ಮಾಡುವನೋ ಅದನ್ನೇ ಸುಕೃತವೆನ್ನುವರು. ಆದರೆ ಸೇವಕರು ಅಷ್ಟೇ ಚೆನ್ನಾಗಿ ಮಾಡಿದರೂ ಸುಕೃತವೆನ್ನುವದಿಲ್ಲ.

ಯದ್ವೈ ತತ್ಸುಕೃತಂ ಪ್ರೋಕ್ತಂ ಸತ್ತ್ಯದಾದಿಸ್ವಭಾವಕಮ್ |
ನೀರಸಸ್ಯಾಸ್ಯ ಕಾರ್ಯಸ್ಯ ರಸೋಽಸೌ ಪರಮಃ ಸ್ಮೃತಃ ||

೪೨೧. ಸತ್, ತ್ಯತ್– ಸ್ವರೂಪವಾದ ಯಾವದು ಸುಕೃತವೆಂದು ಹೇಳಲ್ಪಟ್ಟಿತೋ ನೀರಸವಾದ ಈ ಕಾರ್ಯಕ್ಕೆ ಆ ಪರಬ್ರಹ್ಮವು ರಸವೆನಿಸಿರುವದು.

ರಸಃ ಸಾರೋಽಮೃತಂ ಬ್ರಹ್ಮ ಆನಂದೋ ಹ್ಲಾದ ಉಚ್ಯತೇ |
ನಿಃಸಾರಂ ತೇನ ಸಾರೇಣ ಸಾರವಲ್ಲಕ್ಷ್ಯತೇ ಜಗತ್ ||

೪೨೨. ಸಾರವೂ ಅಮೃತವೂ ಆಗಿರುವ ಬ್ರಹ್ಮವೇ ರಸವು. ಆನಂದವು ಹ್ಲಾದವೆನಿಸುವದು. ನಿಸ್ಸಾರವಾದ ಈ ಜಗತ್ತು ಆ ಸಾರಭೂತವಾದ ಬ್ರಹ್ಮದ ಸಂಬಂಧದಿಂದ ಸಾರವುಳ್ಳದ್ದಾಗಿ ಕಂಡುಬರುವದು.

ರಸಸ್ಯಾತೀಂದ್ರಿಯಸ್ಯಾಸ್ಯ ತ್ವಾನಂದತ್ವಂ ಕುತೋ ನ್ವಿತಿ |
ಅತಸ್ತತ್ ಪ್ರತಿಪತ್ತ್ಯರ್ಥಂ ರಸಂ ಹೀತ್ಯುತ್ತರಂ ವಚಃ ||

೪೨೩. ಅತೀಂದ್ರಿಯವಾಗಿರುವ ಈ ರಸಕ್ಕೆ ಆನಂದತ್ವವು ಎಲ್ಲಿಂದ ಬಂದಿದೆ ? ಎಂಬಿದನ್ನು ತಿಳಿಸಿಕೊಡುವದಕ್ಕಾಗಿ 'ರಸಂ ಹಿ' ಎಂಬ ಮುಂದಿನ (ಮಂತ್ರಭಾಗವು) ಬಂದಿದೆ.

ಏತಸ್ಮಾದಪಿ ಹೇತೋಸ್ತದಸ್ತೀತ್ಯಭ್ಯುಪಗಮ್ಯತಾಮ್ |
ಇತಶ್ಚಾಸ್ತಿ ಪರಂ ಬ್ರಹ್ಮ ರಸತ್ವಸ್ಯ ಪ್ರಸಿದ್ಧಿತಃ ||

೪೨೪. ಈ (ಮುಂದೆ) ಹೇಳುವ ಕಾರಣದಿಂದಲೂ ಆ ಬ್ರಹ್ಮವು ಇದೆ ಎಂದು ಒಪ್ಪಬೇಕು. ಅದೇನೆಂದರೆ : ಶ್ರುತಿಪ್ರಸಿದ್ಧಿಯಿಂದ ಬ್ರಹ್ಮವು ರಸವಾಗಿರುವದರಿಂದ ಇದೆ– ಎಂದು ತಿಳಿಯಬೇಕು.

ತೃಪ್ತಿಹೇತೂ ರಸೋ ನಾಮ ಮಧುರಾಮ್ಲಾದಿಲಕ್ಷಣಃ |
ಅನ್ನಾದಿರಸಲಾಭೇನ ಯಥಾ ತೃಪ್ತಾಃ ಸಮಾಸತೇ ||
ಆನಂದಿನಃ ಕಾಮಹೀನಾ ನಿರೀಹಾಃ ಸಾಧ್ಯಸಿದ್ಧಯೇ ||

೪೨೫–೪೨೬. ರಸ ಎಂದರೆ ಸಿಹಿ, ಹುಳಿ– ಮುಂತಾದ ರೂಪದ್ದೆಂದು ಪ್ರಸಿದ್ಧಿಯಿದೆ. ಅದು ತೃಪ್ತಿಗೆ ಕಾರಣವೂ ಆಗಿದೆ. ಹೇಗೆ ಅನ್ನವೇ ಮುಂತಾದ

ರಸ (ಪದಾರ್ಥ)ಗಳ ಪ್ರಾಪ್ತಿಯಿಂದ ಜನರು ತೃಪ್ತರಾಗಿರುವದೂ ಆನಂದಿಗಳೂ, ಕಾಮರಹಿತರೂ ಬಯಕೆಯಿಲ್ಲದವರೂ ಆಗಿ (ತತ್ಕಾಲಕ್ಕೆ) ಕಂಡುಬರುವರೋ ಹಾಗೆ ಸಾಧ್ಯ(ಬ್ರಹ್ಮಾನಂದ)ಪ್ರಾಪ್ತಿಗಾಗಿ ಪ್ರಯತ್ನಪಡುವವರೂ ಕಂಡುಬರುವದರಿಂದ ಬ್ರಹ್ಮವು ರಸರೂಪವಾಗಿದ್ದುಕೊಂಡಿದೆ.

ಅಪವಿದ್ಧೈಷಣಾಸ್ತದ್ವತ್ ಬಾಹ್ಯೋಪಾದಾನವರ್ಜಿತಾಃ |
ನಿಃಸಂಬೋಧಂ ಪರಾನಂದಂ ಪ್ರಾಪ್ತಾಃ ಸಂನ್ಯಾಸಿನೋಽಮಲಾಃ ||
ನೂನಂ ತೇಷಾಂ ಪರಂ ಸ್ವಾಸ್ಥ್ಯಂ ಚೇತಾಂಸ್ಯಾಹ್ಲಾದಯಸ್ತ್ಯಲಮ್ |
ಪ್ರಹ್ಲಾದಚೇತಸಾಂ ಯಾನಿ ತಾನಿ ಲಿಂಗಾನಿ ತೇಷು ಹಿ ||

೪೨೭-೪೨೮. ಹೀಗೆಯೇ ಹೊರಗಿನ ಸಾಧನಸಾಮಗ್ರಿಗಳಿಲ್ಲದೆ, ಬಯಕೆಗಳನ್ನು ತ್ಯಾಗಮಾಡಿದವರಾಗಿ ಪರಿಶುದ್ಧರಾಗಿರುವ ಸಂನ್ಯಾಸಿಗಳು ಮಾತುಗಳನ್ನು ಮೀರಿದ ಪರಾನಂದವನ್ನು ಹೊಂದಿರುತ್ತಾರೆ. ಹೆಚ್ಚಿನ ಆನಂದರೂಪವಾದ ಆ ಬ್ರಹ್ಮವು ಅವರುಗಳ ಮನಸ್ಸನ್ನು ಸಂತೋಷಗೊಳಿಸುತ್ತದೆ ಎಂಬುದು ಸತ್ಯವು. ಇಂಥ ಆನಂದಚೇತಸ್ಕರಾದವರ ಯಾವ ಚಿಹ್ನೆಗಳಿವೆಯೋ ಅವೇ ಬ್ರಹ್ಮಲಿಂಗಗಳಾಗಿವೆ.

ಉಪಾಗ್ನಿ ಪಾಮನಸ್ಯೇವ ಸುಖಸಂಸಕ್ತಚೇತಸಃ |
ಲಿಂಗಂ ಕಂಡೂಯಮಾನಸ್ಯ ಲಕ್ಷ್ಯಯಾಮ್ಯಾತ್ಮವೇದಿಷು ||
ಅಜ್ಞಾತಾನಂದತತ್ತ್ವಾನಾಮನುಮಾನಮಿದಂ ಭವೇತ್ |
ಸಾಕ್ಷಾತ್ಕೃತಾತ್ಮತತ್ತ್ವಾನಾಂ ಪ್ರತ್ಯಕ್ಷತಮಮೇವ ತತ್ ||

೪೨೯-೪೩೦. ಕಜ್ಜಿಯಾಗಿರುವವನಿಗೆ ಅದು ಕಡಿಯುತ್ತಿರುವಾಗ ಬೆಂಕಿಯ ಮುಂದೆ ಕುಳಿತುಕೊಂಡಾಗ ಹೇಗೆ ಮನಸ್ಸು ಸುಖಸಂಸ್ತಕವಾಗಿ ಇಂದ್ರಿಯಗಳ ಪ್ರಸನ್ನತೆಯು ಕಂಡುಬರುವದೋ ಹಾಗೆಯೇ ಆನಂದತತ್ತ್ವವನ್ನರಿಯದವರಿಗೂ ಬ್ರಹ್ಮವು ಸುಖಕಾರಣವೆಂದು ಊಹಿಸಬಹುದಾಗಿದೆ. ಇನ್ನು ಆತ್ಮತತ್ತ್ವವನ್ನು ಸಾಕ್ಷಾತ್ಕಾರಮಾಡಿಕೊಂಡವರಿಗಂತೂ ಅದು ಅತಿ ಹೆಚ್ಚಿನ ಅನುಭವವೇದ್ಯವೇ ಆಗಿದೆ.

ಬಾಹ್ಯೇಂದ್ರಿಯಾಣಾಮಧ್ಯಾತ್ಮಂ ಸಂಹತಿರ್ಯೇನ ಲಕ್ಷ್ಯತೇ |
ಏಕಾರ್ಥವೃತ್ತಿರೂಪೇಣ ಸಾ ದೃಷ್ಟಾಽಸಂಹತೇ ಸತಿ ||

೪೩೧. ಹೊರಗಿನ ಇಂದ್ರಿಯಗಳೂ ಭೋಗವಸ್ತುಗಳೂ ಪರಸ್ಪರ ಕೂಡಿದಾಗ ಒಂದಾಗಿ ಕಂಡುಬರುವ ಆನಂದವು ಅವುಗಳೊಡನೆ ಕೂಡಿರದ ಬೇರೊಬ್ಬನಿಗಾಗಿ ಎಂಬುದು ಸಿದ್ಧವಾಗಿದೆ.

ಅತಃ ಸಾಪೇಕ್ಷಮಾಹೇಯಂ ಕೋ ಹ್ಯೇವಾನ್ಯಾದಿತಿ ಶ್ರುತಿಃ |
ಆಕಾಶೇ ಪರಮೇ ವ್ಯೋಮ್ನಿ ಹ್ಯಾನಂದೋ ನ ಭವೇದ್ಯದಿ ||

೪೩.೨. ಪರಮವ್ಯೋಮವಾದ ಆಕಾಶದಲ್ಲಿ ಆನಂದವು ಇಲ್ಲವಾಗಿದ್ದಿದ್ದರೆ ಯಾವನು ತಾನೆ ಉಸಿರಾಡುತ್ತಿದ್ದನು? ಎಂದು ಶ್ರುತಿಯು (ಬ್ರಹ್ಮ)ಸಾಪೇಕ್ಷವಾಗಿ (ಆನಂದವನ್ನು) ಹೇಳುತ್ತಲಿದೆ.

ಆ ಬ್ರಹ್ಮಸ್ತಂಬಲೋಕೇಽಸ್ಮಿನ್ ಪುಣ್ಯಕರ್ಮಾನುರೂಪತಃ |
ಆನಂದಃ ಪರಮೋ ಯಸ್ಮಾತ್ ಆನಂದಯತಿ ನಃ ಸದಾ ||
ಸೋಽಯಂ ಲೌಕಿಕ ಆನಂದಃ ನಿಷ್ಠಾಂ ಸಾಧನಸಂಪದಾ |
ಯತ್ರ ಪ್ರಪದ್ಯತೇ ಭೂಮ್ನಿ ಸೋಽಸ್ತ್ಯಾನಂದಃ ಪರೋ ರಸಃ ||

೪೩.೩–೪೩.೪. ಬ್ರಹ್ಮನಿಂದ ಹಿಡಿದು ಸ್ಥಾವರದವರೆಗಿನ ಜೀವರುಳ್ಳ ಈ ಲೋಕದಲ್ಲಿ ಪುಣ್ಯಕರ್ಮಗಳಿಗನುಗುಣವಾಗಿ ಯಾವ ಆನಂದವು ಪರಮವಾಗಿ ದೊರಕಿ ನಮ್ಮನ್ನು ಆನಂದಗೊಳಿಸುವದೋ ಆ ಲೌಕಿಕಾನಂದವು ಸಾಧನ ಸಂಪತ್ತುಗಳ ಬಲದಿಂದ ಎಲ್ಲಿ ನೆಲೆಗೊಳ್ಳುವದೋ ಆ ಭೂಮಾನಂದವು ಪರಮ ರಸರೂಪವಾಗಿ ಯಾವಾಗಲೂ ಇದೆ.

ಅಸ್ತಿತ್ವೇ ಹೇತವಃ ಸಮ್ಯಕ್ ಬ್ರಹ್ಮಣೋಽಭಿಹಿತಾ ಯತಃ |
ಉತಾವಿದ್ವಾನಿತಿ ಪ್ರಶ್ನಃ ಶ್ರುತ್ಯಾ ವಿಸ್ಪಷ್ಟ್ಯತೇಽಧುನಾ ||

೪೩.೫. ಹೀಗೆ ಬ್ರಹ್ಮವು ಇದೆ– ಎಂಬ ವಿಷಯಕ್ಕೆ ಕಾರಣಗಳನ್ನು ಸಾಕಷ್ಟು ಹೇಳಿದಮೇಲೆ ಈಗ 'ಉತಾವಿದ್ವಾನ್' ಎಂಬ ಪ್ರಶ್ನೆಯನ್ನು ಶ್ರುತಿಯು ವ್ಯಾಖ್ಯಾನಮಾಡಿ ವಿವರಿಸುತ್ತದೆ.

ವಿದ್ವಾನೇವೈತಿ ತದ್ಬ್ರಹ್ಮ ಹ್ಯಭಯಂ ಭಯಹೇತು ಯತ್ |
ತಮೋಮಾತ್ರಾವರುದ್ಧತ್ವಾತ್ ತತ್ಪ್ರಾಪ್ತೇರ್ನಾನ್ಯದಸ್ತಿ ಹಿ ||

೪೩.೬. ಬ್ರಹ್ಮಪ್ರಾಪ್ತಿಯೆಂಬುದು ಅಜ್ಞಾನಮಾತ್ರದಿಂದ ಮರೆಯಾಗಿರುವದರಿಂದ ಜ್ಞಾನಿಯಾದವನೇ ಆ ಬ್ರಹ್ಮವನ್ನು ಹೊಂದುತ್ತಾನೆಂಬುದು ಸಮಂಜಸವಾಗಿದೆ. ಅದಕ್ಕಿಂತ (ಜ್ಞಾನಕ್ಕಿಂತ) ಬೇರೆ ಪ್ರಾಪ್ತಿಯೆಂಬುದಿಲ್ಲ. ಆ ಬ್ರಹ್ಮವು ಜ್ಞಾನಿಗೆ ಅಭಯಕ್ಕೂ ಅಜ್ಞಾನಿಗೆ ಭಯಕ್ಕೂ ಕಾರಣವಾಗಿದೆ.

ವ್ಯವಧಾನಂ ಹಿ ಯದ್ಯಸ್ಮಾತ್ತತ್ತನ್ಮೋಕ್ಷೈಕಹೇತುಕಮ್ |
ಯಸ್ಮಾತ್ತಸ್ಮಾದವಿದ್ಯೈವ ಮೋಕ್ಷಾಪ್ತೇರ್ವ್ಯವಧಿರ್ಭವೇತ್ ||

೪೩.೭. ಯಾವದು ಯಾವದರಿಂದ ವ್ಯವಧಾನವುಳ್ಳದ್ದೋ ಅದು ತಾನೊಂದೇ ಮೋಕ್ಷಕಾರಣವು. ಆದ್ದರಿಂದ ಅವಿದ್ಯೆಯೇ ಮುಕ್ತಿಗೆ ವ್ಯವಧಾನವಾಗಿದ್ದುಕೊಂಡಿದೆ. (ಬ್ರಹ್ಮವು ಅವಿದ್ಯಾವ್ಯವಧಾನದಿಂದ ಮುಕ್ತಿಗೆ ದೂರವಾಗಿದೆ. ಆದರೆ ಆ ಬ್ರಹ್ಮದ ಜ್ಞಾನವೇ ಮುಕ್ತಿಕಾರಣವಾಗಿದೆ. ಜ್ಞಾನಕ್ಕೆ ಅವಿದ್ಯೆಯು

ಅಡ್ಡಿಯಾಗಿದೆ. ಹೀಗೆ ಮುಕ್ತಿಗೆ ಅವಿದ್ಯೆಯು ಮಾತ್ರವೇ ವ್ಯವಧಾನವಾಗಿದ್ದು ವಿದ್ಯೆಯೇ ಮುಕ್ತಿಹೇತುವಾಗಿರುತ್ತದೆ– ಎಂದರ್ಥ.)

ಅವಿದ್ಯಾಸಾಕ್ಷ್ಯಪಿ ಪ್ರತ್ಯಕ್ ಸದಾನಸ್ತಮಿತೋದಿತಃ |
ಅವಿದ್ಯಯಾ ವ್ಯವಹಿತಃ ತದ್ಬಲೇನೈವ ತದ್ವಚಃ ||

೪೩೮. ಪ್ರತ್ಯಗಾತ್ಮನಾದ ಅವಿದ್ಯಾಸಾಕ್ಷಿಯು ಯಾವಾಗಲೂ ಉದಯಾಸ್ತ ಗಳಿಲ್ಲದವನಾಗಿದ್ದಾನೆ. ಆತ್ಮನು ಅವಿದ್ಯಾವ್ಯವಹಿತನಾಗಿರುತ್ತಾನೆ–ಎಂಬ ಮಾತ ನ್ನೂ ಅವಿದ್ಯೆಯ ಆಶ್ರಯದಿಂದಲೇ ಹೇಳಲಾಗುವದು. ಆದ್ದರಿಂದ ಅವಿದ್ಯಾ ವಶದಿಂದಲೇ ಬ್ರಹ್ಮಪ್ರಾಪ್ತಿಯಾಗಿಲ್ಲವೆಂದು ಸಿದ್ಧವಾಗುತ್ತದೆ.

ವಿದ್ವತ್ತ್ವವ್ಯತಿರೇಕೇಣ ಯದಿ ತತ್ಪ್ರಾಪ್ತಿರುಚ್ಯತೇ |
ಚೋದ್ಯಮೇತತ್ತದಾ ಯುಕ್ತಂ ನ ತ್ವೇವಂ ಸತಿ ಯುಕ್ತಿಮತ್ ||

೪೩೯. ಜ್ಞಾನಕ್ಕಿಂತ ಬೇರೆಯಾಗಿ ಬ್ರಹ್ಮಪ್ರಾಪ್ತಿಯನ್ನು ಹೇಳಿದ್ದರೆ ಆಗ ಅವಿದ್ಯಾವಂತನು ಬ್ರಹ್ಮವನ್ನು ಪಡೆಯುವನೊ, ಇಲ್ಲವೊ? ಎಂದು ಕೇಳುವದು ಯುಕ್ತವಾಗುತ್ತಿತ್ತು. ಆದರೆ ಹಾಗಿಲ್ಲ. ಆದ್ದರಿಂದ ಪ್ರಶ್ನೆಯು ಯುಕ್ತಿ ಯುಕ್ತವಾಗಿಲ್ಲ.

ಯಾ ತು ಸಾಧಾರಣೀಪ್ರಾಪ್ತಿರಾತ್ಮತ್ವಾದ್ ಬ್ರಹ್ಮಣಃ ಸ್ವತಃ |
ವಿದುಷೋಽವಿದುಷೋ ವಾಸೌ ಅಸ್ಮಾಭಿರ್ನ ನಿಯಮ್ಯತೇ ||
ಅತೋಽವಿದ್ಯಾನಿಷೇಧೇನ ಸರ್ವದಾವಾಪ್ತಿರೂಪಿಣಃ |
ಪ್ರಾಪ್ತಿಃ ಸ್ಯಾದಾತ್ಮಹೇತುತ್ವಾದಿತಿ ಪೂರ್ವಮುವಾದಿಷಮ್ ||

೪೪೦–೪೪೧. ಇನ್ನು ಬ್ರಹ್ಮವು ಎಲ್ಲರ ಆತ್ಮನೇ ಆಗಿರುವದರಿಂದ ಎಲ್ಲರಿಗೂ ಸಂಭವಿಸಿರುವ ಸಾಧಾರಣಬ್ರಹ್ಮಪ್ರಾಪ್ತಿಯನ್ನು ಅದು ಜ್ಞಾನಿಗಾಗಲಿ, ಅಜ್ಞಾನಿ ಗಾಗಲಿ ನಾವು ಇಲ್ಲವೆನ್ನುವದಿಲ್ಲ. ಆದ್ದರಿಂದ ಅವಿದ್ಯೆಯನ್ನು ಅಲ್ಲಗಳೆಯುವ ಮೂಲಕ ಆಗುವ ಬ್ರಹ್ಮಪ್ರಾಪ್ತಿಯು ಯಾವಾಗಲೂ ಪ್ರಾಪ್ತವಾಗಿಯೇ ಇರುವ ಬ್ರಹ್ಮದ ಸ್ವರೂಪವೆಂದು ಹಿಂದೆಯೇ ಹೇಳಿರುತ್ತೇವೆ.

ಅತಃ ಪರೀಕ್ಷ್ಯತೇ ಶ್ರುತ್ಯಾ ತದಿದಾನೀಂ ಪ್ರಯತ್ನತಃ |
ವಿದ್ವಾನೇವೈತಿ ನಾವಿದ್ವಾನ್ ಯದಾ ಹೀತ್ಯೇವಮಾದ್ಯಯಾ ||

೪೪೨. ಆದ್ದರಿಂದ ಈಗ ಶ್ರುತಿಯು 'ಯದಾ ಹಿ' ಮುಂತಾದ ವಾಕ್ಯ ದಿಂದ ವಿದ್ವಾಂಸನಾದವನಿಗೇ ಬ್ರಹ್ಮಪ್ರಾಪ್ತಿಯೇ ಹೊರತು ಅವಿದ್ವಾಂಸನಿಗಲ್ಲ– ಎಂಬಿದನ್ನು ಪ್ರಯತ್ನಪೂರ್ವಕವಾಗಿ ಪರೀಕ್ಷಿಸಿ ಹೇಳುತ್ತದೆ.

ವಿಷಯಾನುಪಾತಿನೀ ಯಾ ತು ಹ್ಯಶೇಷಕರಣಾಶ್ರಯಾ |
ಲೌಕಿಕತ್ವಾತ್ ಪದಾರ್ಥಸ್ಯ ದೃಶಿರತ್ರಾಭಿಧೀಯತೇ ||

೪೪೩. ಅದೃಶ್ಯೇ–ಎಂಬ ಮಾತಿಗೆ ಅರ್ಥವು ಹೀಗಿದೆ: ದೃಕ್ ಎಂದರೆ ಎಲ್ಲಾ ಕರಣಗಳಿಗೂ ಆಶ್ರಯವಾಗಿದ್ದು ವಿಷಯಗಳನ್ನು ಅನುಸರಿಸಿ ಹೋಗುವ ಕಣ್ಣು ಮುಂತಾದ ಇಂದ್ರಿಯಗಳಿಗೆ ಆಶ್ರಯವಾಗಿರುವ ವಸ್ತುವು–ಎಂದು ತಿಳಿಯಬೇಕು. ಏಕೆಂದರೆ ಆ ಪದಾರ್ಥವು (ದೃಗ್ವಸ್ತುವು) ಲೌಕಿಕವಾಗಿದೆ.

ವಿಶೇಷವದ್ ಭವೇದ್ ದೃಶ್ಯಂ ತದ್ಧಿ ದರ್ಶನಮರ್ಹತಿ |
ನಿತ್ಯಾ ದೃಷ್ಟಿರಭಾವೋ ವಾ ನೈವ ದರ್ಶನಮರ್ಹತಿ ||

೪೪೪. ದೃಶ್ಯವೆಂಬುದು ದೃಕ್‌ಗೆ ವಿಶೇಷವಾಗಿ ಕಂಡುಬರುತ್ತದೆ. ಆಗ ದೃಶ್ಯವು ದರ್ಶನಯೋಗ್ಯವೆನಿಸುವದು. ಆದರೆ ಯಾವಾಗಲೂ ನೋಡುವ ಸ್ವಭಾವದ ವಸ್ತುವಾಗಲಿ ಅಭಾವವಾಗಲಿ ದೃಶ್ಯವನ್ನು ದರ್ಶನಮಾಡುತ್ತದೆ ಎಂದು ಹೇಳಲಾಗುವದಿಲ್ಲ. (ಬ್ರಹ್ಮವು ದೃಕ್ಕೂ ಅಲ್ಲ; ದೃಶ್ಯವೂ ಅಲ್ಲ; ಏಕೆಂದರೆ ಅಖಂಡವಾದ ಬ್ರಹ್ಮವನ್ನು ದೃಗ್–ದೃಶ್ಯಗಳೆಂದು ವಿಭಾಗಮಾಡಲಾಗುವದಿಲ್ಲ; ಆದ್ದರಿಂದ ಲೌಕಿಕವಾಗಿ ದೃಕ್ ಎನಿಸಿರುವವನು ಜೀವಾತ್ಮನು. ಅವನನ್ನು ಸದಾ ಬೆಳಗುವ ಪರಮಾತ್ಮನು ಅದೃಕ್ ಎನಿಸುವನು ಎಂದರ್ಥ.)

ದೃಶ್ಯಾನ್ವಯಿ ಹಿ ಯದ್ವಸ್ತು ತದಾತ್ಮ್ಯಮಿತಿ ಭಣ್ಯತೇ |
ಸ್ವತೋ ಹ್ಯಸ್ಯಾತ್ಮದಾರಿದ್ರ್ಯಾದರ್ಹಾರ್ಥೇ ಲಭತೇ ಚ ಯತ್ ||

೪೪೫. ದೃಶ್ಯವನ್ನು ಹೊಂದಿಕೊಂಡಿರುವ ವಸ್ತುವು ಆತ್ಮ್ಯ–(ಆತ್ಮನನ್ನು ಹೊಂದಲು ತಕ್ಕದ್ದು) ಎನಿಸುತ್ತದೆ. ಏಕೆಂದರೆ ಅದಕ್ಕೆ ಸ್ವತಃ ಆತ್ಮತ್ವವಿರುವದಿಲ್ಲ. ಈ ದಾರಿದ್ರ್ಯನಿಮಿತ್ತದಿಂದಲೇ ಅದು ಅರ್ಹಾರ್ಥದಲ್ಲಿ ಆತ್ಮ್ಯವೆನಿಸುವದು. (ಹೀಗೆ ಜೀವನು ಆತ್ಮ್ಯನು– ಎನಿಸಿದರೆ ಪರಬ್ರಹ್ಮವು ಆತ್ಮ್ಯವಲ್ಲದ ಅನಾತ್ಮ್ಯವೆನಿಸುವದು– ನಿಃಸಾಮಾನ್ಯವಿಶೇಷವು– ಎಂದರೆ ಸಾಮಾನ್ಯವಿಶೇಷಗಳಿಲ್ಲದ್ದು ಎಂದಭಿಪ್ರಾಯ.)

ಸ್ಯಾದ್ವಾ ಜಾಗ್ರದವಸ್ಥೇಯಂ ದೃಶ್ಯತ್ವೇನ ಪ್ರಸಿದ್ಧಿತಃ |
ಕೋಶತ್ರಯಮಿಹಾತ್ಮ್ಯಂ ಸ್ಯಾದಾತ್ಮಾರ್ಥತ್ವಸಮನ್ವಯಾತ್ ||

೪೪೬. ಅನಾತ್ಮ್ಯವೆಂಬುದಕ್ಕೆ ಹೀಗೂ ಅರ್ಥಮಾಡಲೂ ಬಹುದು. ಜಾಗ್ರದವಸ್ಥೆಯಲ್ಲಿ ದೃಶ್ಯಗಳು ಕಾಣುವದರಿಂದ ಅದು ದೃಶ್ಯವೆನಿಸಿದರೆ ಅನ್ನಮಯಾತ್ಮನೆನಿಸಿದರೆ, ಇನ್ನು ಪ್ರಾಣಮಯನೇ ಮೊದಲಾದ ಮೂರು ಆತ್ಮರುಗಳು (ಕೋಶಾತ್ಮರು) ಆತ್ಮ್ಯರೆನಿಸುವರು. ಏಕೆಂದರೆ ಆತ್ಮನೆಂಬರ್ಥವು ಅವರುಗಳಿಗೆ ಹೊಂದಿಕೊಳ್ಳುತ್ತದೆ.

ಪಂಚಮೋಽತ್ರ ನಿರುಕ್ತಃ ಸ್ಯಾತ್ ಪಾರಿಶೇಷ್ಯಾತ್ ಫಲಾತ್ಮಕಃ |
ಆತ್ಮಾನಂದಮಯಂ ಬ್ರಹ್ಮ ತ್ವನಿರುಕ್ತಂ ಪರಂ ಪದಮ್ ||

೪೪೭. ಇನ್ನುಳಿದ ಫಲಾತ್ಮಕನಾದ ಐದನೆಯವನೇ ಆನಂದಮಯನು. ಈತನು ಸೋಪಾಧಿಕನಾದ್ದರಿಂದ ನಿರುಕ್ತನಾಗಿರುವನು. ಈ ಆನಂದಮಯನನ್ನು ದಾಟಿದ ಪರಬ್ರಹ್ಮವು ಅನಿರುಕ್ತವೂ ಅನಾತ್ಮ್ಯವೂ ಆಗಿರುವದು.

ನಿಲೀಯತೇ ಜಗದ್ಯಸ್ಮಿನ್ ನಿಲೀನಂ ಜಾಯತೇ ಯತಃ ।
ನಿಲಯಂ ತತ್ ಪರಂ ಬ್ರೂಮಃ ಕೋಶಪಂಚಕಕಾರಣಮ್ ॥

೪೪೮. ಈಗ ಅನಿಲಯನ- ಎಂಬಿದನ್ನು ವಿವರಿಸಲಾಗುವದು. ಯಾವ ವಸ್ತುವಿನಲ್ಲಿ ಜಗತ್ತೆಲ್ಲ ಲೀನವಾಗುವದೋ ಹಾಗೂ ಯಾವ ವಸ್ತುವಿನಿಂದಲೇ ಮತ್ತೆ ಎದ್ದುಬರುವದೋ ಅದು ನಿಲಯವು. ಐದು ಕೋಶಗಳಿಗೂ ಕಾರಣವಾದ ಆ ಪರಬ್ರಹ್ಮವು ತಚ್ಛಬ್ದವಾಚ್ಯವಾಗಿರುವದು. ಆದರೆ ಅದು ಶಬ್ದವಾಚ್ಯತ್ವವನ್ನೂ ಮೀರಿದ್ದಾದ್ದರಿಂದ ಅನಿಲಯನವೆನಿಸಿರುವದು.

ಸಚ್ಚ ತ್ಯಚ್ಚಾದಿ ವಾಪೇಕ್ಷ್ಯ ನಿಷೇಧೋಽಯಮಿಹೋಚ್ಯತೇ ।
ಪ್ರಾಪ್ತಿರ್ಹ್ಯಭವದಿತ್ಯುಕ್ತಾ ಚಾರು ಪ್ರಾಪ್ತನಿಷೇಧನಮ್ ॥

೪೪೯. ಅಥವಾ ಸತ್-ತ್ಯದಾದಿಗಳನ್ನು ನಿಲಯನವೆನ್ನುವದಾದರೆ ಅವುಗಳಲ್ಲದ್ದು ಅನಿಲಯನವೆನಿಸಿರುವ ಬ್ರಹ್ಮವು ಎಂದೂ ಹೇಳಬಹುದು. ಬ್ರಹ್ಮದಲ್ಲಿ ಜಗತ್ತಿನ ಉತ್ಪತ್ತ್ಯಾದಿಗಳು ಪ್ರಾಪ್ತವಾದದ್ದನ್ನು ಇಲ್ಲಿ ನಿಷೇಧಿಸಿ ಶುದ್ಧವಾದ ನಿರ್ವಿಶೇಷಬ್ರಹ್ಮದ ಪ್ರತಿಪಾದನೆಯೇ ಅನಿಲಯನ ಶಬ್ದಾರ್ಥವು.

ಮೂರ್ತಾಮೂರ್ತೌ ಹಿ ರಾಶೀ ದ್ವೌ ಸಚ್ಚತ್ಯಚ್ಚಾದಿನೋದಿತೌ ।
ಶ್ರುತ್ಯಂತರೇಣ ಸಂಗಾನಾತ್ ತಯೋರೇವಾಸ್ತ್ವಪಹ್ನುತಿಃ ॥

೪೫೦. ಸತ್-ತ್ಯತ್-ಮುಂತಾದ ಮಾತುಗಳಿಂದ ಮೂರ್ತಾಮೂರ್ತಗಳೆಂಬ ಎರಡು ರಾಶಿಗಳನ್ನು ಹೇಳಿದೆ. ಇದು ಬೇರೊಂದು ಶ್ರುತಿಯೊಡನೆಯೂ ಹೊಂದಿಕೊಳ್ಳುತ್ತದೆ. ಆದ್ದರಿಂದ ಅವುಗಳನ್ನೇ ಇಲ್ಲಿ ಅಪಲಾಪಮಾಡಿದೆ.

ಅಸ್ಮಿನ್ ಪಕ್ಷೇ ತು ನಿಲಯೋ ವಾಸನಾನಿಲಯೋ ಭವೇತ್ ।
ಏವಂ ಚ ನೇತಿ ನೇತೀತಿ ಸಾಕ್ಷಾದ್ ಸ್ಯಾದ್ ಬ್ರಹ್ಮದರ್ಶನಮ್ ॥

೪೫೧. ಈ ಪಕ್ಷದಲ್ಲಿ ನಿಲಯವೆಂದರೆ ವಾಸನೆಗಳಿಗೆ ಆಶ್ರಯವಾದ (ಮನಸ್ಸು ಎಂದರ್ಥ.) ಅದನ್ನೂ ನಿಷೇಧಿಸುವ ಮೂಲಕ ನೇತಿ ನೇತಿ ಎಂದು ಶ್ರುತಿಯು ಬ್ರಹ್ಮದರ್ಶನವನ್ನು ಮಾಡಿಸುತ್ತದೆ.

ಭಾವಾಭಾವಾತ್ಮಿಕಾ ಬುದ್ಧಿಃ ಯತ ಆತ್ಮಾಪಚಾರಿಣೀ ।
ಭಾವಾಭಾವನಿಷೇಧೇನ ಪ್ರತೀಚಿ ಸ್ಥಾಪ್ಯತೇ ತತಃ ॥

೪೫೨. ಬುದ್ಧಿಯು ಭಾವರೂಪವಾಗಿರಲಿ, ಅಭಾವರೂಪವಾಗಿರಲಿ–ಅದು ತ್ಮನನ್ನು ತಿಳಿಸಲಾರದೆ ಅಪಚಾರವೆಸಗುತ್ತದೆ. ಆದ್ದರಿಂದ ಭಾವಾಭಾವಗಳೆರಡ ನ್ನು ಪ್ರತಿಷೇಧಮಾಡಿ ಪ್ರತ್ಯಗಾತ್ಮನಲ್ಲಿ (ಶ್ರುತಿಯು) ನೆಲೆಗೊಳಿಸುತ್ತದೆ.

ದೃಶ್ಯಾದಿಪ್ರತಿಷೇಧೋಕ್ತ್ಯಾ ಪ್ರತೀಚಿ ಬ್ರಹ್ಮ ಬೋಧ್ಯತೇ |
ನ ತದನ್ಯತ್ತದನ್ಯಸ್ಯ ಪರಮಾರ್ಥಾತ್ಮತಾ ಕುತಃ ||

೪೫೩. 'ಅದೃಶ್ಯೇ ಅನಾತ್ಮ್ಯೇ....' ಮುಂತಾದ ಮಾತುಗಳಿಂದ ಬ್ರಹ್ಮವು ದೃಶ್ಯಾದಿಗಳಲ್ಲವೆಂದು ಪ್ರತಿಷೇಧಮಾಡಿ ಪ್ರತ್ಯಗಾತ್ಮನೇ ಬ್ರಹ್ಮವೆಂದು ಶ್ರುತಿಯು ತಿಳಿಸುತ್ತದೆ. ಆ ಬ್ರಹ್ಮಕ್ಕಿಂತ ಬೇರೆಯಾದುದೊಂದು ಇಲ್ಲವೇಇಲ್ಲ. ಬ್ರಹ್ಮಕ್ಕೆ ಅನ್ಯವಾದದ್ದು ಪರಮಾರ್ಥವಾದರೂ ಹೇಗಾದೀತು ?

ನ ನಞಾರ್ಥೋ ವಿಕಲ್ಪೋ ವಾ ಪರಮಾರ್ಥಮಕಲ್ಪಿತಮ್ |
ಅಸಂಪ್ರವಿಶ್ಯ ಸಂಸಿದ್ಧಿಂ ಲಭತೇ ಕ್ವಚಿದನ್ಯತಃ ||

೪೫೪. ಪರಮಾರ್ಥವು ನ ಎಂಬುದಕ್ಕಾಗಲಿ ವಿಕಲ್ಪಕ್ಕಾಗಲಿ ವಿಷಯವಲ್ಲ. ಆದರೆ ಪರಮಾರ್ಥವನ್ನು ಒಳಹೊಗದೆ ಯಾವ ವಸ್ತುವೂ ಬೇರೊಂದರಿಂದ ತನ್ನ ಇರುವಿಕೆಯನ್ನು ಪಡೆಯಲಾರದು.

ದೃಶ್ಯಾದಿಗುಣಹೀನಸ್ಯ ಸ್ವತ ಆತ್ಮತ್ವಕಾರಣಾತ್ |
ವೇತ್ತಿ ವಿಂದತ ಇತ್ಯಸ್ಯಾದೈಕಾರ್ಥ್ಯಾದುಪಸಂಹೃತಿಃ ||

೪೫೫. ದೃಶ್ಯಾದಿಗುಣಗಳಿಲ್ಲದ ಬ್ರಹ್ಮವು ತಾನೇ ಆತ್ಮನಾಗಿರುವದರ ಣೆಯಿಂದ ಬ್ರಹ್ಮವನ್ನು ಅರಿತವನು ಪರವನ್ನು ಪಡೆಯುತ್ತಾನೆ– ಎಂಬ ವಾಕ್ಯ ನೊಡನೆ ಕೂಡಿಕೊಂಡು ಏಕಾರ್ಥವನ್ನು ಕೊಟ್ಟು ಸಮಾಪ್ತವಾಗುತ್ತದೆ.

ದೃಶ್ಯಾದಿಗುಣಹೀನೇಽಸ್ಮಿನ್ ನಿರವಿದ್ಯೋ ಯದಾಽಭಯಮ್ |
ಸಾಕ್ಷಾದ್ವೇತ್ತಿ ತಥೈವಾಯಮಭಯಂ ವಿಂದತೇ ಪರಮ್ ||

೪೫೬. ದೃಶ್ಯಾದಿಗುಣಗಳಿಲ್ಲದ ಅಭಯವಾದ ಅವಿದ್ಯಾರಹಿತವಾದ ಈ ಬ್ರಹ್ಮವನ್ನು ಯಾವನು ತನ್ನ ಆತ್ಮನೆಂದು ನೇರಾಗಿ ಅರಿಯುತ್ತಾನೋ ಆಗಲೇ ಅಭಯವಾದ ಪರಪ್ರಾಪ್ತಿಯನ್ನು ಪಡೆಯುತ್ತಾನೆ.

ಬ್ರಹ್ಮ ಪುಚ್ಛಂ ಪ್ರತಿಷ್ಠೇತಿ ಯದಭಾಣಿ ಪುರಾ ಸಕೃತ್ |
ತೇನೈಕವಾಕ್ಯತಾರ್ಥಾಯ ಪ್ರತಿಷ್ಠಾಮಿತಿ ಭಣ್ಯತೇ ||

೪೫೭. ಪುಚ್ಛದಂತಿರುವ ಬ್ರಹ್ಮವೇ ಪ್ರತಿಷ್ಠೆಯು ಎಂದು ಹಿಂದೊಮ್ಮೆ ಏನು ಹೇಳಿದೆಯೋ ಅದರೊಡನೆ ಏಕವಾಕ್ಯತೆಯನ್ನು ಸಾಧಿಸುವದಕ್ಕಾಗಿ ಇಲ್ಲಿ 'ಪ್ರತಿಷ್ಠಾಂ ವಿಂದತೇ' ಎಂದು ಹೇಳಿದೆ.

ಅಥಾಧುನಾ ಯಥಾಽವಿದ್ವಾನ್ ಪ್ರೇತ್ಯ ನೈತಿ ಪರಂ ಪದಮ್ ।
ವ್ಯಾಖ್ಯಾಯತೇ ತಥಾ ಸ್ಪಷ್ಟಂ ಯದಾ ಹೀತ್ಯೇವಮಾದ್ಯಯಾ ॥

೪೫೮. ಈಗ ಬ್ರಹ್ಮವನ್ನರಿಯದವನು ದೇಹವನ್ನು ಬಿಟ್ಟ ಅನಂತರ ಪರಮಪದವನ್ನು ಪಡೆಯುವದಿಲ್ಲವೆಂಬುದು ಹೇಗೆಂಬುದನ್ನು ಸ್ಪಷ್ಟವಾಗಿ ಯದಾ ಹಿ– ಮುಂತಾದ ಮಂತ್ರಭಾಗದಿಂದ ವ್ಯಾಖ್ಯಾನಮಾಡಲಾಗುತ್ತದೆ.

ಸದಾ ಲಬ್ಧಾತ್ಮಕಸ್ಯಾಪಿ ಯತೋಽಜ್ಞಾನಮನಾಪ್ತಿಕೃತ್ ।
ಅವಾದ್ಯುಚ್ಚೈರತಃ ಶ್ರುತ್ಯಾ ವಿದ್ವಾನೇತೀತಿ ಸಾದರಮ್ ॥

೪೫೯. ಯಾವಾಗಲೂ ಪಡೆಯಲ್ಪಟ್ಟದ್ದೇ ಆಗಿರುವ ವಸ್ತುವಿಗೆ ಕೂಡ ಅನಾಪ್ತಿಯೆಂಬುದು ಅಜ್ಞಾನದಿಂದಲೇ ಸಂಭವಿಸುತ್ತದೆ. ಆದ್ದರಿಂದ ಶ್ರುತಿಯು 'ಬಲ್ಲವನೇ ಬ್ರಹ್ಮವನ್ನು ಹೊಂದುತ್ತಾನೆ' ಎಂದು ಗಟ್ಟಿಯಾಗಿ ಆದರದಿಂದ ಹೇಳುತ್ತಿದೆ.

ಯಸ್ಮಾದೇವ ತತೋಽವಿದ್ವಾನ್ ಲಭತೇ ನ ತಮೀಶ್ವರಮ್ ।
ಅವಿದ್ಯಾವ್ಯವಧಾನಾದ್ಧಿ ಲಬ್ಧ ಏವ ನ ಲಭ್ಯತೇ ॥

೪೬೦. ಹೀಗಿರುವದರಿಂದಲೇ ಅಜ್ಞಾನಿಯು ಆ ಬ್ರಹ್ಮವನ್ನು ಪಡೆಯುವದಿಲ್ಲ. ಏಕೆಂದರೆ ಅವಿದ್ಯಾವ್ಯವಧಾನದಿಂದ ಪಡೆಯಲ್ಪಟ್ಟದ್ದೇ ಅಪ್ರಾಪ್ತವಾಗಿರುತ್ತದೆ.

ಯದಾ ಹ್ಯೇವೈಷ ಆತ್ಮೈಕೋ ದೃಶ್ಯತ್ವಾದಿವಿವರ್ಜಿತಃ ।
ಏತಸ್ಮಿನ್ ವರ್ತಮಾನೋಽಪಿ ವಂಚಿತೋಽವಿದ್ಯಯೈವ ಹಿ ॥

೪೬೧. ದೃಶ್ಯತ್ವಾದಿಗಳಿಲ್ಲದ ಆತ್ಮನೊಬ್ಬನೇ ಯಾವಾಗ ಎಲ್ಲೆಲ್ಲಿಯೂ ಇರುವನಾಗಿರುವನೋ– ಅವನೇ ಈ (ಅಜ್ಞಾನಿಯಲ್ಲಿಯೂ) ಇದ್ದರೂ ಇವನು ವಂಚಿತನಾಗಿರುವನು. ಇದು ಅವಿದ್ಯೆಯಿಂದಾಗಿರುವದೇ ನಿಜ.

ಹಸ್ತಪ್ರಾಪ್ತಮಪಿ ದ್ರವ್ಯಮಪ್ರಾಪ್ತಮಿವ ಮನ್ಯತೇ ।
ಮೋಹಾದೇವಮನಾಪ್ತಿಃ ಸ್ಯಾದಾತ್ಮನೋಽಪಿ ಮಮಾತ್ಮನಃ ॥

೪೬೨. ತನ್ನ ಕೈಗೆ ಪ್ರಾಪ್ತವಾಗಿ ಬಂದ ಪದಾರ್ಥವನ್ನು ಕೂಡ ಅಜ್ಞಾನದಿಂದ ಅಪ್ರಾಪ್ತವಾದಂತೆ ಭಾವಿಸುತ್ತಾನೆ. ಹೀಗೆ ತನ್ನ ಆತ್ಮನೇ ಆದದ್ದೂ ಸಹ ಮೋಹದಿಂದ ಅನಾಪ್ತವಾಗಬಹುದಾಗಿದೆ.

ಅವಿದ್ಯಯಾ ತದೋದ್ಧೃತ್ಯ ರಜ್ವಾ ರಜ್ಜುಮಿವ ಸ್ವಯಮ್ ।
ಅಹಿತ್ವೇನಾದ್ವಯಾತ್ ಬೋಧಾತ್ ಕುರುತೇ ಕರ್ತೃಭೋಕ್ತೃಭಿಃ ॥

೪೬೩. ಹೇಗೆ ಹಗ್ಗವು ಅದನ್ನರಿಯದವನಿಗೆ ಹಾವಾಗಿ ತೋರಿ ಹಗ್ಗವಾಗಿರುವಿಕೆಯನ್ನು ಬಿಟ್ಟು (ಭಯಕಾರಣವಾಗುವದೋ) ಹಾಗೆ ಅದ್ವಯಜ್ಞಾನದಿಂದ ದೂರನಾದ ಆತ್ಮನೂ ಕರ್ತೃಭೋಕ್ತೃವೆನಿಸಿಕೊಂಡು ದುಃಖಿಯಾಗುವನು.

ಅರಂ ಛಿದ್ರಂ ಭಿದಾನ್ಯತ್ವಂ ವೇದ್ಯವೇತ್ತೃತ್ವಲಕ್ಷಣಮ್ |
ಯಸ್ಮಾದುತ್ಕುರುತೇ ಮೋಹಾತ್ ಆತ್ಮನೋ ಬ್ರಹ್ಮಣಃ ಸ್ವತಃ ||

೪೬೪. ಅರ–ಎಂದರೆ ಛಿದ್ರ ಅಥವಾ ಭೇದವು, ಅನ್ಯತ್ವವು ಎಂದರ್ಥ. ಇದು ವೇತ್ತೃ, ವೇದ್ಯ ಎಂಬ ವಿಂಗಡವುಳ್ಳದ್ದು. ಆತ್ಮನಿಗೂ ಬ್ರಹ್ಮಕ್ಕೂ ಅಜ್ಞಾನನಿಮಿತ್ತವಾಗಿ ಒದಗಿದ ಈ ಭೇದವು ಭಯವನ್ನುಂಟುಮಾಡುತ್ತದೆ.

ಅನ್ಯೋಽಸಾವೀಶ್ವರೋ ಮತ್ತಃ ತಸ್ಮಾಚ್ಚಾಹಮನೀಶ್ವರಃ |
ಇತಿ ಛಿದ್ರಯತೋಽಚ್ಛಿದ್ರಂ ಛಿದ್ರೇಽನರ್ಥೋ ಭವೇದ್ಭಯಮ್ ||

೪೬೫. ಈಶ್ವರನು ನನಗಿಂತ ಬೇರೆ; ನಾನು ಈಶ್ವರನಿಗಿಂತ ಬೇರೆ; ಅದ್ದರಿಂದ ನಾನು ಅನೀಶ್ವರನು– ಈ ರೀತಿಯಾಗಿ ಅಚ್ಛಿದ್ರವಾದ ಬ್ರಹ್ಮದಲ್ಲಿ ಛಿದ್ರವನ್ನು (ಭೇದವನ್ನು) ಮಾಡುವವನು (ಮೂರ್ಖನು). ಏಕೆಂದರೆ ಈ ಭೇದದಲ್ಲಿ ಅನರ್ಥವೂ ಭಯವೂ ಇದ್ದುಕೊಂಡಿರುವದು.

ನಿರ್ಭಯೋಽಪಿ ಸ್ವತೋಽವಿದ್ವಾನೇಕಂ ಸನ್ತಮನೇಕಧಾ |
ಪ್ರಕಲ್ಪ್ಯಾವಿದ್ಯಯಾತ್ಮಾನಂ ತಮೇವ ಭಯಮಾಪ್ನುಯಾತ್ ||

೪೬೬. ಬ್ರಹ್ಮವು ಸ್ವತಃ ನಿರ್ಭಯವಾಗಿದ್ದರೂ ಏಕವಾಗಿದ್ದರೂ ಅಜ್ಞಾನಿಯು ಅದನ್ನು ಅವಿದ್ಯೆಯಿಂದ ಅನೇಕವೆಂದು ಕಲ್ಪಿಸಿ ಅದೇ ಬ್ರಹ್ಮದಿಂದಲೇ ಭಯವನ್ನು ಹೊಂದುವನು.

ಭಯಹೇತೋರ್ದ್ವಿತೀಯಸ್ಯ ಹಿಶಬ್ದೇನ ಪರಿಗ್ರಹಾತ್ |
ದ್ವಿತೀಯಾದ್ವೈ ಭಯಂ ಹೀತಿ ಶ್ರುತಿರುಚ್ಚೈರತೋಽನ್ವಶಾತ್ ||

೪೬೭. ಭಯಕ್ಕೆ ಕಾರಣವಾದದ್ದೇ ಎರಡನೆಯದು ಎಂಬಿದನ್ನು (ಶ್ರುತಿ)ಯಲ್ಲಿ 'ಹಿ' ಎಂಬ ಶಬ್ದದಿಂದ ಗ್ರಹಿಸಿ ಎರಡನೆಯದರಿಂದ ಭಯವಷ್ಟೆ! ಎಂದು ಶ್ರುತಿಯು ಗಟ್ಟಿಯಾಗಿ ಅನುಶಾಸನಮಾಡಿರುತ್ತದೆ.

ಈಶಿತವ್ಯಾದ್ವಿಭಕ್ತೋ ಯದ್ಯಸ್ಮಾದೀಶೋ ಭಯಂಕರಃ |
ಇತಿ ಕಲ್ಪಯತಸ್ತಸ್ಮಾದಭಯಂ ಜಾಯತೇ ಭಯಮ್ ||

೪೬೮. ಆಳಲ್ಪಡುವ ವಸ್ತುವಿಗಿಂತ ಬೇರೆಯಾಗಿರುವ ಈಶ್ವರನು ಎಂದರೆ ಆಳುವವನು ಭಯಂಕರನು– ಎಂದು ಕಲ್ಪಿಸುವವನಿಗೆ ಅಭಯವಾದ (ಬ್ರಹ್ಮವೇ) ಭಯ(ಕಾರಣವಾಗಿ) ಪರಿಣಮಿಸುತ್ತದೆ.

ಅಹೋ ಬಲವದವಿದ್ಯಾಯಾ ಅತಿಶೇತೇ ನ ಕಶ್ಚನ |
ಅಗ್ನ್ಯಾದಿಭಯಹೇತೋರ್ಯಾ ಬ್ರಹ್ಮಣೋಽಪಿ ಭಯಂಕರೀ ||

೪೭೯. ಅಗ್ನಿಯೇ ಮುಂತಾದ ದೇವತೆಗಳಿಗೂ ಯಾವದು ಭಯಕಾರಣವಾಗಿರುವದೋ ಆ ಬ್ರಹ್ಮವನ್ನು (ಆತ್ಮನಿಗಿಂತ ಬೇರೆಯೆಂದು ಕಲ್ಪಿಸಿದ) ಅವಿದ್ಯೆಯ ಬಲವು ಅತಿಶಯವಾದದ್ದೇ ಸರಿ. ಅದನ್ನು ಯಾರೂ ಮೀರಿ ಹೋಗಲಾರರು. ಒಂದು ರೀತಿಯಿಂದ ಅದು ಬ್ರಹ್ಮಕ್ಕೂ ಭಯವನ್ನುಂಟು ಮಾಡತಕ್ಕದ್ದಾಗಿರುವದು.

ನಿರ್ಭಯೋ ಭಯಕೃದ್ದೇವ ಈಶ್ವರಾಣಾಮಪೀಶ್ವರಃ |
ಭಯಂ ತಸ್ಯಾಪಿ ಜನಯೇನ್ನಾಜ್ಞಾನಸ್ಯಾಸ್ತ್ಯಗೋಚರಃ ||

೪೮೦. ಈಶ್ವರರಿಗೂ ಒಡೆಯನೂ ನಿರ್ಭಯನೂ ಉಳಿದವರಿಗೆ ಭಯವುಂಟುಮಾಡುವವನೂ ಆದ ದೇವನಿಗೂ ಅದು (ಅವಿದ್ಯೆಯು) ಭಯವನ್ನುಂಟು ಮಾಡೀತು. ಹೀಗೆ ಅಜ್ಞಾನಕ್ಕೆ ಒಳಗಾಗದ ವಸ್ತುವೇ ಇಲ್ಲ.

ಯಜ್ಜ್ಞಾತ್ವಾ ವಿಂದತೇ ವಿದ್ವಾನ್ ಅಭಯಂ ಹೀತ್ಯವಾದಿಷಮ್ |
ತತ್ತ್ವೇವಾಭಯಕೃದ್ ಬ್ರಹ್ಮ ಸ್ಯಾನ್ಮೋಹಾದಾತ್ಮನೋ ಭಯಮ್ ||

೪೮೧. ಯಾವ ಬ್ರಹ್ಮವನ್ನರಿತರೆ ಜ್ಞಾನಿಯು ಅಭಯವನ್ನು ಪಡೆಯುತ್ತಾನೆ– ಎಂದು ಹೇಳಲಾಯಿತೋ ಅದೊಂದೇ ಅಭಯಕಾರಣವು. ಅದು ಬ್ರಹ್ಮವೇ. ಆದರೆ (ಅಜ್ಞಾನದಿಂದ) ಆತ್ಮನಿಗೆ ಬ್ರಹ್ಮದ ಕಡೆಯಿಂದ ಭಯವಾಗಿರುತ್ತದೆ.

ನಿಷಿದ್ಧದೃಶ್ಯತ್ವಾದ್ಯೇಕಮಭಯಂ ಮೋಹನಿಹ್ನವಾತ್ |
ಯತ್ತಸ್ಯೈವ ಭಯಂ ತತ್ ಸ್ಯಾದ್ ಅವಿದ್ಯಾವಶವರ್ತಿನಃ ||

೪೮೨. ದೃಶ್ಯತ್ವಾದಿಗಳಿಲ್ಲವೆಂದು ನಿಷೇಧಿಸಲ್ಪಟ್ಟ ಏಕವಾದ ಬ್ರಹ್ಮವೇ ಅಭಯವು. ಅದು ಮೋಹವನ್ನು ನೀಗಿ ಅದಕ್ಕಿಂತ ಮಿಗಿಲಾದುದಾಗಿದೆ. ಆದರೆ ಅವಿದ್ಯೆಗೆ ವಶನಾದವನಿಗೆ ಅದೇ ಭಯ(ಕಾರಣ)ವಾಗಿರುತ್ತದೆ.

ಅಪಿ ವಾಲಾಗ್ರಮಾತ್ರೇಣ ವಿದುಷಃ ಪ್ರತ್ಯಗಾತ್ಮನಃ |
ಭಿನ್ನಂ ಬ್ರಹ್ಮೇತಿ ಸಂಮೋಹಾದಾತ್ಮೈವಾಸ್ಯ ಭಯಂ ಭವೇತ್ |
ವ್ಯಾಖ್ಯಾನಂ ವಾ ಪುರೋಕ್ತಸ್ಯ ಛಿದ್ರಸ್ಯ ಕ್ರಿಯತೇಽನಯಾ ||

೪೮೩. ಒಂದು ಕೂದಲೆಳೆಯಷ್ಟು ಭೇದವನ್ನು ಜ್ಞಾನಿಗೂ ಪ್ರತ್ಯಗಾತ್ಮನಿಗೂ ನಡುವೆ ಕಲ್ಪಿಸಿದರೂ ಬ್ರಹ್ಮವು ತನಗಿಂತ ಬೇರೆ– ಎಂಬ ತಪ್ಪು ತಿಳಿವಳಿಕೆಯ ನಿಮಿತ್ತವಾಗಿ ಆತ್ಮನೇ ಭಯಕಾರಣನಾಗುವನು. ಹೀಗೆ ಹಿಂದೆ ಹೇಳಿದ್ದರ ವಿವರಣೆಯನ್ನೇ ಈ (ಮುಂದಿನ ಮಂತ್ರದಿಂದ) ತಿಳಿಸಲಾಗುವದು.

ಅಮನಸ್ತ್ವಾನಸ್ಯ ತದ್ಬ್ರಹ್ಮ ವಿದುಷೋಽಪಿ ಭಯಂಕರಮ್ |
ವೇದ್ಯವೇತೃತ್ವಶೂನ್ಯತ್ವಾದ್ವಿದ್ವತ್ತಾಪಿ ತಮೋ ಮಯೀ ||
ರಜತತ್ವಾದಿವಚ್ಛುಕ್ತಾವಮನಸ್ತ್ವಾನೋ ಭವೇದತಃ ||

೪೭೪–೪೭೫. ಶಾಸ್ತ್ರಜ್ಞಾನಾದವನಿಗೂ ಆ ಬ್ರಹ್ಮವು (ತನ್ನ) ಆತ್ಮನೆಂದು ತಿಳಿಯದೆ ಇದ್ದಾಗ ಭಯಕಾರಣವಾಗುವದು. ಬ್ರಹ್ಮದಲ್ಲಿ ವೇದ್ಯ, ವೇತೃ ವಿಭಾಗವಿಲ್ಲವಾದ್ದರಿಂದ ಅದನ್ನು ಹಾಗೆ ತಿಳಿಯುವ ವಿದ್ವತ್ತೆಯೂ ಅಜ್ಞಾನವೇ ಸರಿ. ಹೇಗೆ ಕಪ್ಪೆಯಚಿಪ್ಪಿನಲ್ಲಿ ಬೆಳ್ಳಿಯು ಜ್ಞಾನವು ಜ್ಞಾನವೆನಿಸುವದಿಲ್ಲವೋ ಹಾಗೆ ಶಾಸ್ತ್ರಪಂಡಿತನೂ ಅಜ್ಞಾನಿಯೇ ಎಂದು ತಿಳಿಯಬೇಕು.

ಯಸ್ಯಾಮತಂ ತಸ್ಯ ಮತಂ ಮತಂ ಯಸ್ಯ ನ ವೇದ ಸಃ |
ವಿದಿತಾವಿದಿತಾಭ್ಯಾಂ ತದನ್ಯದೇವೇತಿ ಹಿ ಶ್ರುತಿಃ ||

೪೭೬. ಯಾರಿಗೆ ಬ್ರಹ್ಮವು ತಿಳಿದಿಲ್ಲವೋ ಅವರಿಗೆ ತಿಳಿದಿದೆ. ಯಾರು ಬ್ರಹ್ಮವನ್ನು ಬಲ್ಲೆನೆನ್ನುವರೋ ಅವರಿಗೆ ತಿಳಿಯದು. ಹೀಗೆ ಬ್ರಹ್ಮವು ವಿದಿತಕ್ಕಿಂತಲೂ ಅವಿದಿತಕ್ಕಿಂತಲೂ ಬೇರೆಯೆಂದೇ ಶ್ರುತಿಯು ಹೇಳುತ್ತಿದೆ.

ಅನ್ಯದೇವ ಹಿ ತದ್ವೇದ್ಯಾದವೇದ್ಯಾದನ್ಯದೇವ ತತ್ |
ವೇದ್ಯವೇತೃದ್ವಯಾಚ್ಚಾನ್ಯತ್ ಇತಿ ಶ್ರುತ್ಯನುಶಾಸನಮ್ ||

೪೭೭. ಅದು ವೇದ್ಯಕ್ಕಿಂತಲೂ ಬೇರೆಯೇ. ಅವೇದ್ಯಕ್ಕಿಂತಲೂ ಬೇರೆಯೇ ಆಗಿರುವದು. ವೇತೃ, ವೇದ್ಯ– ಈ ಎರಡಕ್ಕಿಂತಲೂ ಅದು ಬೇರೆಯಾಗಿರುವದೆಂದು ಶ್ರುತಿಯ ಅಪ್ಪಣೆಯಿರುವದು.

ವೇದ್ಯಾವೇದ್ಯಾತ್ಮತಾ ಯಸ್ಮಾತ್ ಶಬ್ದಾದ್ಯರ್ಥಾನುಪಾತಿನೀ |
ವೇದ್ಯವೇತೃತ್ವಮಪ್ಯೇವಂ ಅನ್ಯಥಾ ತದಸಂಗತೇಃ ||

೪೭೮. ಯಾವ ಬ್ರಹ್ಮದ ಬಲದಿಂದಲೇ ವೇದ್ಯವೆಂದೂ ಅವೇದ್ಯವೆಂದೂ (ಮನಸ್ಸು) ಗೊತ್ತುಮಾಡುತ್ತದೆಯೋ, ಶಬ್ದಾದಿವಿಷಯಗಳಲ್ಲಿ ತೊಡಗುವದೋ ಆ ವೇದ್ಯತ್ವವೂ ವೇತೃತ್ವವೂ ಮನಸ್ಸಿಗೇ ಅನ್ವಯಿಸುವದೇ ಹೊರತು ಬ್ರಹ್ಮಕ್ಕಲ್ಲ. ಏಕೆಂದರೆ ಬ್ರಹ್ಮದ ಅನುಗ್ರಹವಿಲ್ಲವಾದರೆ ಆ ಮನಸ್ಸಿಗೆ ವೇದ್ಯಾವೇದ್ಯಗಳು ತಿಳಿಯಲೇಆರವು.

ವ್ಯುತ್ಥಾಯ ವೇದ್ಯಾದ್ವಿದ್ಯಾಯಾ ವೇತ್ತುಶ್ಚಾಜ್ಞಾನಕಲ್ಪಿತಾತ್ |
ತದನ್ಯೇಭ್ಯಶ್ಚ ಜಾನೀಯಾದಹಂ ಬ್ರಹ್ಮೇತಿ ವಾಕ್ಯತಃ ||

೪೭೯. ವೇದ್ಯ, ವಿದ್ಯೆ, ವೇತ್ತಾ ಹಾಗೂ ಅವೇದ್ಯ, ಅವಿದ್ಯಾ, ಅವೇತ್ತಾ– ಎಂಬೀ ಅಜ್ಞಾನಕಲ್ಪಿತವಾದ ವಿಕಲ್ಪಗಳಿಂದ ಮೇಲೆದ್ದು ಇವುಗಳೆಲ್ಲಕ್ಕಿಂತಲೂ ಬೇರೆಯಾದ ನಾನು ಬ್ರಹ್ಮವೇ–ಎಂದು ವೇದಾಂತವಾಕ್ಯದಿಂದ ತಿಳಿಯಬೇಕು.

ಯಥೋಕ್ತಬೋಧವಿರಹಾದೀಶ್ವರಾಣಾಮಪೀಶ್ವರಾಃ |
ಪ್ರತೀಚೋ ಬ್ರಹ್ಮಣೋ ಭೀತಾಃ ಸ್ವಕರ್ಮಾಣಿ ಪ್ರಕುರ್ವತೇ ||

೪೮೦. ಮೇಲೆ ತಿಳಿಸಿದ ರೀತಿಯ ಜ್ಞಾನವಿಲ್ಲದ್ದರಿಂದ ಈಶ್ವರರಿಗೂ ಈಶ್ವರರೆನಿಸಿದ (ವಾಯು-ಮುಂತಾದವರೂ) ಪ್ರತ್ಯಗಾತ್ಮನಾದ ಬ್ರಹ್ಮಕ್ಕೆ ಹೆದರಿದವರಾಗಿ ತಮ್ಮತಮ್ಮ ಕೆಲಸಗಳನ್ನು ಮಾಡುತ್ತಿರುವರು.

ವಾತಾದಯೋ ಮಹಾವೀರ್ಯಾಃ ಸ್ವತಂತ್ರಾಃ ಬಾಹುಶಾಲಿನಃ |
ತೇಽಪಿ ಭೀತಾಃ ಪ್ರವರ್ತಂತೇ ಬ್ರಹ್ಮಣೋಽಪಿ ಮಹತ್ತಮಾಃ ||

೪೮೧. ಮಹಾವೀರ್ಯಶಾಲಿಗಳಾದ ವಾಯು- ಮುಂತಾದವರು ಸ್ವತಂತ್ರರೂ ಬಾಹುಬಲವುಳ್ಳವರೂ ಮಹತ್ತಮರೂ ಆಗಿದ್ದರೂ ಅಂಥವರು ಕೂಡ ಬ್ರಹ್ಮಕ್ಕೆ ಹೆದರಿದವರಾಗಿ ತಮ್ಮ ಕೆಲಸಗಳಲ್ಲಿ ತೊಡಗುವರು.

ಯಸ್ಮಾತ್ ಬ್ರಹ್ಮಣ ಆನಂದಾದ್ಭೀತಾ ವಾತಾದಯೋಽವಶಾಃ |
ಸ್ವಕರ್ಮಸು ಪ್ರವರ್ತಂತೇ ಭೃತ್ಯಾಃ ಸ್ವಾಮಿಭಯಾದಿವ |
ತಸ್ಯಾನಂದಸ್ಯ ಮೀಮಾಂಸಾ ವಿಚಾರಃ ಕ್ರಿಯತೇಽಧುನಾ ||

೪೮೨. ವಾಯು ಮುಂತಾದವರು ಅವಶರಾಗಿ ಆನಂದರೂಪವಾದ ಪರಬ್ರಹ್ಮದಿಂದ ಭೀತರಾಗಿ- ಹೇಗೆ ಸೇವಕರು ಯಜಮಾನನ ಭಯದಿಂದ ಕರ್ಮಗಳಲ್ಲಿ ತೊಡಗುವರೋ ಹಾಗೆ- ಪ್ರವರ್ತಿಸುವರೋ ಆ ಆನಂದರೂಪವಾದ ಪರಬ್ರಹ್ಮದ ವಿಚಾರವನ್ನು ಈಗ ಮಾಡಲಾಗುವದು.

ಉತ್ಕರ್ಷೇತರಹೀನೋಽಸೌ ಯ ಆನಂದೋಽಧಿಗಮ್ಯತೇ |
ದೃಷ್ಟಃ ಸಾತಿಶಯಸ್ತಾವದಾನಂದಃ ಕರ್ಮಹೇತುಕಃ ||
ಆಬ್ರಹ್ಮನರಪರ್ಯಂತೇ ಲೋಕೇಽಸ್ಮಾಭಿಃ ಪ್ರಮಾಣತಃ ||

೪೮೩-೪೮೪. ಯಾವ (ಸ್ವರೂಪಾನಂದ)ವಿದೆಯೋ ಅದು ಉತ್ಕರ್ಷಾಪಕರ್ಷಗಳಿಲ್ಲದ್ದಾಗಿರುತ್ತದೆ. ಆದರೆ ಕರ್ಮನಿಮಿತ್ತವಾದ ಆನಂದವು ಸಾತಿಶಯ (ಒಂದಕ್ಕಿಂತ ಮತ್ತೊಂದು ಮಿಗಿಲಾಗಿರುವದು)ವಾಗಿರುವದು ತಿಳಿದುಬರುತ್ತದೆ. ಇದು ನಮಗೆ ಲೋಕದಲ್ಲಿ ಬ್ರಹ್ಮನಿಂದಾರಂಭಿಸಿ ಮನುಷ್ಯನವರೆಗಿನ ಪ್ರಾಣಿಗಳಲ್ಲಿ ಪ್ರಮಾಣಭೂತವಾಗಿ ಇದ್ದುಕೊಂಡಿರುವದು ಕಂಡುಬಂದಿದೆ.

ಉತ್ಕೃಷ್ಯಮಾಣೋ ಯತ್ರಾಯಂ ಪರಾಂ ನಿಷ್ಠಾಂ ಪ್ರಪದ್ಯತೇ |
ಅನಾಪನ್ನಾದಿಮಧ್ಯಾಂತಂ ತದ್ಬ್ರಹ್ಮೇತ್ಯವಧಾರಯೇತ್ ||

೪೮೫. ಎಲ್ಲಿ ಈ ಆನಂದವು ಅಧಿಕವಾಗುತ್ತಾ ಬಂದು ಮಿಗಿಲಿಲ್ಲದ್ದಾಗಿ ನೆಲೆಗೊಳ್ಳುವದೋ ಅದು ಆದಿಮಧ್ಯಾಂತಗಳು ಇಲ್ಲದ್ದಾಗಿಬಿಡುವದೋ ಅದನ್ನೇ ಬ್ರಹ್ಮವೆಂದು ನಿಶ್ಚಯಿಸಬೇಕು.

ಬ್ರಹ್ಮಾದಿನರಪರ್ಯಂತಂ ಪುಣ್ಯಕರ್ಮಾನುರೂಪತಃ ।
ಉಪಜೀವತಿ ಲೋಕೋಽಯಂ ಯಸ್ಯಾನಂದಸ್ಯ ವಿಪ್ರುಷಮ್ ॥

೪೮೬. ಪುಣ್ಯಕರ್ಮಾನುಗುಣವಾಗಿ ಬ್ರಹ್ಮನಿಂದ ಹಿಡಿದು ಮನುಷ್ಯನ ವರೆಗಿನ ಪ್ರಾಣಿಗಳೆಲ್ಲವೂ ಯಾವ ಆನಂದದ ತುಣುಕಿನಿಂದ ಬದುಕಿರುವವೋ ಅದೇ ಬ್ರಹ್ಮಾನಂದವು.

ಉತ್ತರೋತ್ತರವೃದ್ಧ್ಯೈವಂ ಮನುಷ್ಯಾದಧಿ ತಂ ವಯಮ್ ।
ಪ್ರತಿಪದ್ಯಾಮಹೇ ಸಾಕ್ಷಾದಾನಂದಂ ಸ್ವಾತ್ಮನಿ ಸ್ಥಿತಮ್ ॥

೪೮೭. ಮನುಷ್ಯನಿಗಿಂತ ಮೇಲಾದ ಹೆಚ್ಚುಹೆಚ್ಚಿನ ಬೆಳವಣಿಗೆಯುಳ್ಳ ಆ ಆನಂದವನ್ನು ನಾವು ನಮ್ಮ ಆತ್ಮಸ್ವರೂಪದಲ್ಲಿಯೇ ಇದೆಯೆಂಬುದನ್ನು ತಿಳಿದಿರುತ್ತೇವೆ.

ವಿಷಯೇಂದ್ರಿಯಸಂಬಂಧಸಮುತ್ಥೋ ವಾ ಭವೇದಯಮ್ ।
ಲೌಕಿಕಾನಂದವತ್ ಸ್ಯಾದ್ವಾ ಸರ್ವಸಾಧನನಿಃಸ್ಪೃಹಃ ॥

೪೮೮. ಇದು ವಿಷಯೇಂದ್ರಿಯಗಳ ಸಂಬಂಧದಿಂದುಂಟಾದದ್ದಾಗಿರಬಹುದು. ಲೌಕಿಕಾನಂದದಂತೆಯೂ ಇರಬಹುದು. ಆದರೆ ಈ ಆವಿರ್ಭಾವವಾದ ಸುಖವು ಮೂಲತಃ ಎಲ್ಲಾ ಸಾಧನಗಳನ್ನೂ ಬಯಸದೆ ತಾನೇತಾನಾಗಿ ಇದ್ದುಕೊಂಡಿದೆ.

ತತ್ರ ಲೌಕಿಕ ಆನಂದೋ ಬಾಹ್ಯಾಧ್ಯಾತ್ಮಿಕಸಾಧನಃ ।
ಸಂಪನ್ನಿಮಿತ್ತೋ ಯೋ ದೃಷ್ಟಃ ಸೈಷೇತಿ ಸ ಇಹೋಚ್ಯತೇ ॥

೪೮೯. ಇಲ್ಲಿ ಬಾಹ್ಯಾಧ್ಯಾತ್ಮಿಕಸಾಧನಗಳ ಸಂಪತ್ತಿನ ದೆಸೆಯಿಂದ ತೋರಿಕೊಂಡ ಯಾವ ಲೌಕಿಕಾನಂದವಿದೆಯೋ ಅದನ್ನೇ 'ಸೈಷಾ....' ಎಂಬ ಶ್ರುತಿಯಿಂದ ಹೇಳಿದೆ.

ಉತ್ಕೃಷ್ಯಮಾಣೇನಾನೇನ ಹ್ಯಸ್ಮದ್ಗೋಚರವರ್ತಿನಾ ।
ಅಸಾಧನಮಸಾಧ್ಯಂ ತಮಾನಂದಂ ವ್ಯಾಚಚಕ್ಷ್ಮಹೇ ॥

೪೯೦. ಉತ್ಕರ್ಷವನ್ನು ಹೊಂದಲಿರುವ, ನಮಗೆಲ್ಲ ಅನುಭವಗೋಚರವಾದ ಈ ಆನಂದದ ಮೂಲಕ ಸಾಧನಪ್ರಾಪ್ಯವಲ್ಲದ ಸಾಧ್ಯವಲ್ಲದ ಆನಂದವನ್ನು ವ್ಯಾಖ್ಯಾನಮಾಡುವೆವು.

ನಿಷ್ಠಾಂ ಸಾತಿಶಯಂ ಯಸ್ಮಾತ್ ಸ್ವತೋಽನತಿಶಯಾತ್ಮನಿ ।
ಗಚ್ಛದೀಕ್ಷಾಮಹೇ ಯಸ್ಮಾದೇವಮಾನಂದ ಈಕ್ಷ್ಯತಾಮ್ ॥

೪೯೧. ಅತಿಶಯರಹಿತನಾದ ಆತ್ಮನಲ್ಲಿ ಅತಿಶಯವನ್ನು ಹೇಗೆ (ಲೌಕಿಕಾನಂದದಲ್ಲಿ) ಮೇಲೇರುತ್ತಾ ಕಾಣುವೆವೋ ಹಾಗೆ ಪರಮಾನಂದವನ್ನೂ ಕಂಡುಕೊಳ್ಳುವವರಾಗಬೇಕು.

ಯೇಯಂ ಸಾತಿಶಯಾಸಂಖ್ಯಾ ಸಂಖ್ಯೇಯಾರ್ಥಾವಸಾಯಿನೀ |
ಯಥೈವಮಸ್ಮದಾನಂದಃ ಸ್ಯಾತ್ ಪರಾನಂದನಿಷ್ಠಿತಃ ||

೪೯೨. ಸಂಖ್ಯೇಯವಾದ ವಸ್ತುವಿನಲ್ಲಿ ನೆಲೆಗೊಳ್ಳುವ ಯಾವ ಸಾತಿಶಯ ಸಂಖ್ಯೆಯಿರುವದೋ– ಇದು ಹೇಗೆ (ವಸ್ತುವಿನಲ್ಲಿ ನಿಂತುಬಿಡುವದೋ) ಹಾಗೆ ನಾವು ತಿಳಿಸುತ್ತಿರುವ ಆನಂದವೂ ಪರಮಾನಂದದಲ್ಲಿ ನೆಲೆಗೊಂಡಿರುವದು.

ಆವಿಷ್ಕರಿಷ್ಯನ್ನ್ಯಾಹಾತ ಇಮಮರ್ಥಂ ಶ್ರುತಿಃ ಸ್ವಯಮ್ |
ಬಹಿಷ್ಪ್ರವಣದೃಷ್ಟೀನಾಂ ಸ್ವತೋಽಸಾಮರ್ಥ್ಯದರ್ಶನಾತ್ ||

೪೯೩. ಈ ಅಭಿಪ್ರಾಯವನ್ನು ಸ್ಫುಟಗೊಳಿಸುತ್ತಾ ಶ್ರುತಿಯು ತಾನೇ ಹೇಳಲಾರಂಭಿಸಿ 'ಯುವಾ ಸ್ಯಾತ್....' ಮುಂತಾಗಿ ವಿವರಿಸುತ್ತದೆ. ಇದು ಹೊರಮುಖವಾದ ದೃಷ್ಟಿಯುಳ್ಳವರ ಅಸಾಮರ್ಥ್ಯವನ್ನು ಕಂಡು ಹೇಳಿದ್ದಾಗಿದೆ.

ಯುವಾ ಪ್ರಥಮವಯಾಃ ಸ್ಯಾದ್ ಯೂನಃ ಸಾಧು ಯುವೇತಿ ಕಿಮ್ |
ಪಂಚವಿಂಶಾಬ್ದಿಕಃ ಸಾಧುರಿತಿ ಸಾಧುಯುವೋಚ್ಯತೇ ||

೪೯೪. ಯುವಕನೆಂದರೆ ಪೂರ್ವವಯಸ್ಸನು. ಅವನಿಗೆ ಸಾಧುಯುವಾ ಎಂಬ ವಿಶೇಷಣವೇಕೆ ? ಎಂದರೆ ೨೫ ವರ್ಷ ವಯಸ್ಸಿನ ಸಾಧುಗುಣವಂತನಾದವನೇ ಇಲ್ಲಿ ವಿವಕ್ಷಿತನಾಗಿರುತ್ತಾನೆ– ಎಂದರ್ಥ.

ಮಿಥಃ ಸವ್ಯಭಿಚಾರಿತ್ವಾತ್ ಸಾಧುಯೌವನಯೋರತಃ |
ವಿಶೇಷಣಮಿದಂ ತಸ್ಮಾತ್ ಪುನಃ ಸಾಧುಯುವೇತಿ ಹಿ ||

೪೯೫. ಸಾಧುತ್ವವೂ ಯೌವನವೂ ಅನ್ಯೋನ್ಯವಾಗಿ ಕೂಡುವದಿಲ್ಲವಾದ್ದರಿಂದ– ಒಂದಿದ್ದರೆ ಮತ್ತೊಂದಿರುವದಿಲ್ಲವಾಗಿ– ಮತ್ತೆ ಈ ವಿಶೇಷಣವು ಸಾಧುಯುವಾ ಎಂದು ಒಂದುಗೂಡಿಸಿ ಹೇಳಲ್ಪಟ್ಟಿದೆ.

ಅಧ್ಯೇತಿ ಸರ್ವಮಧ್ಯೇಯಂ ಅತೋಽಧ್ಯಾಪಕ ಉಚ್ಯತೇ |
ಕ್ಷಿಪ್ರಕಾರ್ಯತಿಶಾಯಿತ್ವಾದಾಶಿಷ್ಠೋಽಸೌ ಭವೇದತಃ ||

೪೯೬. ಅಧ್ಯಯನಮಾಡಬೇಕಾದದ್ದೆಲ್ಲವನ್ನೂ ಮಾಡಿದವನಿಗೆ ಅಧ್ಯಾಪಕನೆನ್ನುವರು. ಹಾಗೆಯೇ ಚುರುಕಾಗಿ ಕೆಲಸಮಾಡುವವರ ನಡುವೆ ಅತ್ಯಂತ ಚುರುಕಾದವನು ಆಶಿಷ್ಠನೆನಿಸುವನು.

ಸಮಗ್ರಾಶೇಷಚಾರ್ವಂಗೋ ದೃಢಿಷ್ಠಃ ಪರಿಕೀರ್ತ್ಯತೇ |
ಅಭಿಭೂಯ ಯತಃ ಸರ್ವಾನ್ ಬಲಿನೋ ವರ್ತತೇ ತತಃ ||
ಬಲಿಷ್ಠಸ್ತೇನ ವಿದ್ವದ್ಭಿಃ ಕೀರ್ತ್ಯತೇ ಪೃಥುಕೀರ್ತಿಭಿಃ ||

೯೭. ಸಂಪೂರ್ಣವಾದ ಎಲ್ಲಾ ಅವಯವಗಳೂ ಸುಂದರವಾಗಿದ್ದು ಸಮರ್ಥವಾಗಿದ್ದರೆ ದೃಢಿಷ್ಠನೆನಿಸುವನು. ಎಲ್ಲಾ ಬಲಶಾಲಿಗಳನ್ನೂ ಹಿಮ್ಮೆಟ್ಟಿ ಸಿರುವವನೇ ಬಲಿಷ್ಠನೆಂದು ಹೆಚ್ಚಿನ ಕೀರ್ತಿಶಾಲಿಗಳಾದ ಬಲ್ಲವರು ಹೇಳುವರು.

ಯಾವದಾಧ್ಯಾತ್ಮಿಕಂ ಕಿಂಚಿತ್ ಪುಂಭಿರಾಪೇಕ್ಷ್ಯತೇ ಕ್ವಚಿತ್ |
ದೃಷ್ಟಾದೃಷ್ಟೇಷ್ಟಭೋಗಾಯ ತೇನ ಸರ್ವೇಣ ಸಂಯುತಃ ||
ತಸ್ಯೇಯಂ ಪೃಥಿವೀ ಸರ್ವಾ ಪೂರ್ಣಾ ವಿತ್ತಸ್ಯ ಚೇದ್ ಭವೇತ್ |
ಇತಿ ಸಾಧನಮುಕ್ತಂ ಸ್ಯಾತ್ ದೃಷ್ಟಾದೃಷ್ಟಾರ್ಥಕರ್ಮಣಃ ||

೯೮-೯೯. ಆಧ್ಯಾತ್ಮಿಕವಾದ ಸುಖದವರೆಗಿನ ಎಲ್ಲಾ ದೃಷ್ಟಾದೃಷ್ಟ ಭೋಗಗಳಿಗಾಗಿ ಮನುಷ್ಯರು ಏನೇನು ಸಾಮಗ್ರಿಗಳನ್ನು ಬಯಸುತ್ತಾರೋ ಆ ಎಲ್ಲಾ ಭೋಗಸಾಮಗ್ರಿಗಳಿಂದ ಕೂಡಿದವನಾಗಿರುವ ಮನುಷ್ಯನಿಗೆ ಈ ಭೂಮಿಯೆಲ್ಲವೂ ಸಮಸ್ತಸಂಪತ್ತುಗಳೊಡನೆ ಪೂರ್ಣವಾಗಿ ಅಧೀನವಾಗಿದ್ದಲ್ಲಿ ಸುಖಸಾಧನೆಗಳೆಲ್ಲವನ್ನೂ ಹೇಳಿದಂತಾಗುವದು. ಇವು ದೃಷ್ಟಾದೃಷ್ಟಕರ್ಮಗಳ ಫಲವನ್ನೆಲ್ಲ ಒಳಗೊಂಡಿದೆ.

ಬಾಹ್ಯೈರಾಧ್ಯಾತ್ಮಿಕೈಶ್ಚೈವ ಸಂಪನ್ನಃ ಸಾಧನೈಃ ಪುಮಾನ್ |
ಲಭತೇ ಯಮಸೌ ಹ್ಲಾದಂ ನರಾನಂದಃ ಸ ಉಚ್ಯತೇ ||

೫೦೦. ಯಾವ ಮನುಷ್ಯನು ಬಾಹ್ಯ-ಆಧ್ಯಾತ್ಮಿಕವಾದ ಎಲ್ಲಾ ಸಾಧನ ಗಳಿಂದ ಕೂಡಿದವನಾಗಿದ್ದಲ್ಲಿ ಯಾವ ಆನಂದವನ್ನು ಪಡೆಯುವನೋ ಅದನ್ನು ಮಾನುಷಾನಂದವೆನ್ನುವರು.

ಯ ಏತೇ ಶತಮಾನಂದಾ ಮಾನುಷಾಣಾಂ ಸಮಾಹೃತಾಃ |
ನರಗಂಧರ್ವಕಾಣಾಂ ಸ್ಯಾತ್ತಾವಾನೇಕಃ ಪ್ರಮಾಣತಃ ||

೫೦೧. ಈ ಮಾನುಷಾನಂದಗಳು ಒಂದು ನೂರು ಒಟ್ಟುಗೂಡಿದರೆ ಆ ಪ್ರಮಾಣದ ಆನಂದವು ಮನುಷ್ಯಗಂಧರ್ವಾನಂದವೆನಿಸುವದು.

ಸುಗಂಧಿನಃ ಕಾಮರೂಪಾ ಅಂತರ್ಧಾನಾದಿಶಕ್ತಯಃ |
ನೃತ್ಯಗೀತಾದಿಕುಶಲಾ ಗಂಧರ್ವಾ ಸ್ಯುಃ ನೃಲೌಕಿಕಾಃ ||

೫೦೨. ಮನುಷ್ಯಗಂಧರ್ವರೆಂದರೆ- ಸುಗಂಧವುಳ್ಳವರೂ ಇಚ್ಛಾರೂಪ ಧಾರಿಗಳೂ ಅಂತರ್ಧಾನಾದಿಶಕ್ತಿಯುಳ್ಳವರೂ ನೃತ್ಯ, ಸಂಗೀತಾದಿಕಲಾಕುಶಲರೂ ಆಗಿರುವವರು- ಎಂದರ್ಥ.

ಭೂಯೋ ದ್ವಂದ್ವಪ್ರತೀಘಾತಶಕ್ತಿಸಾಧನಸಂಪದಾ |
ನಾರಗಂಧರ್ವಿಕೋ ಭೂಯಾನಾನಂದೋ ಮಾನುಷಾದಧಿ ||

೫೦೩. ಮತ್ತು ಅನೇಕ ಸುಖದುಃಖಾದಿರೂಪವಾದ ದ್ವಂದ್ವಗಳನ್ನು ಸಹಿಸಿಕೊಳ್ಳುವ ಶಕ್ತಿಗಳಿಂದಲೂ ಸಾಧನಸಂಪತ್ತುಗಳಿಂದಲೂ ಕೂಡಿದ ಮನುಷ್ಯ ಗಂಧರ್ವಾನಂದವು ಮನುಷ್ಯಾನಂದಕ್ಕಿಂತಲೂ ಅಧಿಕವಾಗಿರುವದು.

ಆ ವಿರಿಂಚಾದ್ ಭವೇದೇವಂ ಪೂರ್ವಸ್ಮಾದುತ್ತರೋಽಧಿಕಃ |
ಸಹಸ್ರದಶಭಾಗೇನ ಹ್ಯುತ್ತರೋತ್ತರತಃ ಕ್ರಮಾತ್ ||

೫೦೪. ಈ ಆನಂದಗಳು ಹಿಂದುಹಿಂದಿನವುಗಳಿಗಿಂತ ಮುಂದುಮುಂದಿನವುಗಳು ನೂರುಮಡಿಯಾಗಿ ಕ್ರಮವಾಗಿ ಹೆಚ್ಚಿನವುಗಳಾಗಿರುವವು.

ಶ್ರೋತ್ರಿಯೋಽಧೀತವೇದಃ ಸ್ಯಾತ್ ಸಾಧ್ವಾಚಾರಃ ಪ್ರಸಿದ್ಧಿತಃ |
ಕಾಮಾನುಪಹತಾತ್ಮಾಪಿ ಸ್ಯಾದಕಾಮಹತಃ ತಥಾ ||

೫೦೫. ವೇದಾಧ್ಯಯನವನ್ನು ಮಾಡಿದವನು ಶ್ರೋತ್ರಿಯನು. ಮತ್ತು ಸದಾಚಾರಗಳಿಂದ ಕೂಡಿದವನಾಗಿರುವವನೂ ಕಾಮಗಳಿಂದ ಪೀಡಿಸಲ್ಪಡದ ಮನಸ್ಸಿನವನೂ ಆಗಿದ್ದಲ್ಲಿ ಅಕಾಮಹತನೆನಿಸುವನು.

ಮಾರ್ತ್ಯಾದ್ ಭೋಗಾದ್ವಿರಕ್ತಸ್ಯ ಹ್ಯುತ್ತರಾಹ್ಲಾದಕಾಮಿನಃ |
ಸಹಸ್ರದಶಭಾಗೇನ ಮಾನುಷಾದ್ ಗುಣತೋ ಭವೇತ್ ||
ಇತ್ಯೇತಸ್ಯ ಪ್ರಸಿದ್ಧ್ಯರ್ಥಂ ಆದಾವಗ್ರಹಣಂ ಕೃತಮ್ |
ಅಕಾಮಹತ ಇತ್ಯಸ್ಯ ಹೇತೋರಾನಂದವೃದ್ಧಯೇ ||

೫೦೬–೫೦೭. ಮಾನುಷಭೋಗಗಳಲ್ಲಿ ವಿರಕ್ತನಾದವನಿಗೆ, ಮುಂದಿನ ಆನಂದವನ್ನು ಬಯಸುವವನಿಗೆ– ಮಾನುಷಾನಂದಕ್ಕಿಂತ ನೂರುಪಟ್ಟು ಹೆಚ್ಚಿನದಾದ ಆನಂದವು ವೃದ್ಧಿಯಾಗುತ್ತದೆ–ಎಂಬ ಅಭಿಪ್ರಾಯವನ್ನು ಪ್ರಕಟಗೊಳಿಸುವದಕ್ಕಾಗಿ ಪ್ರಾರಂಭದ ಪರ್ಯಾಯದಲ್ಲಿ 'ಶ್ರೋತ್ರಿಯಸ್ಯ....' ಎಂಬುದನ್ನು ಗ್ರಹಣಮಾಡಿಲ್ಲ, (ಪ್ರಥಮಪರ್ಯಾಯದಲ್ಲಿಯೇ ಅಕಾಮಹತಸ್ಯ–ಎಂಬುದನ್ನು ಹೇಳಿದರೆ ಮಾನುಷಆನಂದಭೋಗಿಯೂ ವಿರಕ್ತನೂ ಸಮರೆಂದಾಗುವದು. ಆದರೆ ಭೋಗವೂ ವಿರಕ್ತಿಯೂ ಏಕಕಾಲಕ್ಕೆ ಹೊಂದುವದಿಲ್ಲ. ಆದ್ದರಿಂದ ಮನುಷ್ಯಾನಂದದಲ್ಲಿ ವಿರಕ್ತನಾದವನಿಗೆ ಶತಗುಣೋತ್ತರವಾದ ಮನುಷ್ಯಗಂಧರ್ವಾನಂದವೇ ಸಿಗುತ್ತದೆ– ಎಂದು ತಿಳಿಸಲು ಪ್ರಥಮಪರ್ಯಾಯದಲ್ಲಿ ಶ್ರೋತ್ರಿಯಸ್ಯ.... ಎಂಬಿದನ್ನು ಕೈಬಿಡಲಾಗಿದೆ.)

ಶ್ರೋತ್ರಿಯಾವೃಜಿನತ್ವೇ ದ್ವೇ ಸರ್ವತ್ರೈವ ಸಮೇ ಅಪಿ |
ಕಾಮಾನುಪಹತತ್ವಸ್ಯ ವೃದ್ಧ್ಯಾ ಹ್ಲಾದೋ ವಿವರ್ಧತೇ ||

೫೦೮. ಶ್ರೋತ್ರಿಯತ್ವ, ಪಾಪವಿಶುದ್ಧತ್ವ– ಈ ಎರಡೂ ಸಮವಾಗಿದ್ದುಕೊಂಡಮೇಲೂ ಕಾಮಗಳಿಂದ ಪೀಡಿತನಾಗದಿರುವದು ಬೆಳೆದಂತೆಲ್ಲ ಆನಂದವು ಬೆಳೆಯುವದು.

ಯತೋಽಕಾಮಹತತ್ವಂ ಸ್ಯಾತ್ ಸರ್ವಾತಿಶಯಿನೋಽಙ್ಗ ಸಾ |
ಸುಖಸ್ಯ ಪ್ರಾಪ್ತಯೇ ತಸ್ಮಾತ್ ತದೇವೋತ್ಕೃಷ್ಟಿಕೃದ್ಭವೇತ್ ||

೫೦೯. ನಿರತಿಶಯಾನಂದಪ್ರಾಪ್ತಿಯಾಗಲು ನಿರತಿಶಯವಾದ ಅಕಾಮ ಹತತ್ವವು ಆಗತ್ಯವಾದ್ದರಿಂದ ಸುಖಪ್ರಾಪ್ತಿಗೆ ಅದೇ ಉತ್ಕೃಷ್ಟತಮವಾದ ಸಾಧನವಾಗಿರುವದು.

ತಸ್ಮಾದ್ಯಥೋದಿತಾನಂದಪ್ರಾಪ್ತಯೇ ಸಾಧನತ್ರಯಮ್ |
ಶ್ರೋತ್ರಿಯಾವೃಜಿನತ್ವೇ ದ್ವೇ ತಥಾಽಕಾಮಹತಾತ್ಮತಾ ||

೫೧೦. ಅದ್ದರಿಂದ ಇಲ್ಲಿ ಹೇಳಿರುವ ಆನಂದಪ್ರಾಪ್ತಿಗೆ ಶ್ರೋತ್ರಿಯನಾಗಿ ರುವದು, ಪಾಪರಹಿತನಾಗಿರುವದು, ಕಾಮಗಳಿಂದ ಪೀಡಿತನಾಗದಿರುವದು— ಈ ಮೂರೂ ಕಾರಣವಾಗಿರುವದು.

ತುಲ್ಯೇ ಆ ಬ್ರಹ್ಮಣಃ ಪೂರ್ವೇ ಉತ್ಕರ್ಷಸ್ತೂತ್ತರಸ್ಯ ಚ |
ಅಕಾಮಹತತ್ವೈವಾತಃ ಪೂರ್ವಾಭ್ಯಾಂ ಸಾಧನಂ ಪರಮ್ ||

೫೧೧. ಬ್ರಹ್ಮಾನಂದದವರೆಗಿನ ಆನಂದಪ್ರಾಪ್ತಿಗೆ ಶ್ರೋತ್ರಿಯತ್ವಾ ವೃಜಿನತ್ವಾದಿಗಳು ಎರಡೂ ಸಮಾನವಾಗಿದ್ದು ಅಕಾಮಹತತ್ವವು ಮಾತ್ರ ಹೆಚ್ಚಾ ಗುತ್ತಾ ಬರಬೇಕು. ಹೀಗೆ ಅಕಾಮಹತತ್ವವು ಉಳಿದೆರಡಕ್ಕಿಂತಲೂ ಹೆಚ್ಚಿನ ಸಾಧನವಾಗಿರುವದು.

ಚಿರಕಾಲಸ್ಥಿತಿರ್ಯೇಷು ಪಿತೃಲೋಕೇಷು ತೇ ಸ್ಮೃತಾಃ |
ಚಿರಲೋಕಲೋಕಾಸ್ತೇಽಪಿ ಸ್ಯುಃ ಪಿತೃಶ್ರಾದ್ಧಾದಿಕಾರಿಣಃ ||

೫೧೨. ಪಿತೃಶ್ರಾದ್ಧಾದಿಗಳನ್ನು ಅನುಷ್ಠಿಸುವವರಾದ ಸಾಧಕರು ಅದರ ಫಲವಾಗಿ ಚಿರಕಾಲ ಆ ಪಿತೃಲೋಕದಲ್ಲಿ ಉಳಿಯುವವರಾದ್ದರಿಂದ ಅವರನ್ನು ಚಿರಲೋಕಲೋಕರೆಂದು ಕರೆಯಲಾಗಿದೆ.

ಆಜಾನೋ ದೇವಲೋಕಃ ಸ್ಯಾತ್ತಜ್ಜಾ ಅಜಾನಜಾಃ ಸ್ಮೃತಾಃ |
ಸ್ಮಾರ್ತಕರ್ಮಕೃತಸ್ತತ್ರ ಜಾಯಂತೇ ದೇವಭೂಮಿಷು ||

೫೧೩. ಅಜಾನವೆಂದರೆ ದೇವಲೋಕವು. ಅಲ್ಲಿ ಹುಟ್ಟಿದವರು ಅಜಾನ ಜರೆನಿಸುವರು. ಸ್ಮಾರ್ತಕರ್ಮಗಳನ್ನು ಅನುಷ್ಠಾನಮಾಡುವವರು ಆ ದೇವ ಭೂಮಿಗಳಲ್ಲಿ ಹುಟ್ಟುವರು.

ಕರ್ಮಣೈವ ತ್ವವಿದ್ವಾಂಸೋ ಯೇ ಜಾತಾಃ ಸುರಸದ್ಮಸು |
ಕರ್ಮದೇವಾಂಸ್ತು ತಾನ್ ವಿದ್ಯಾತ್ ದೇವಾಂಶ್ಚೋತ್ತರಮಾರ್ಗಗಾನ್ ||

೫೧೪. ಉಪಾಸಕರಲ್ಲದವರಾಗಿ ಕೇವಲ ಕರ್ಮನಿಷ್ಠರಾದವರು ದೇವಲೋಕ ಗಳಲ್ಲಿ ಹುಟ್ಟಿದಾಗ ಕರ್ಮದೇವರೆನಿಸುವರು. ಇನ್ನು ಉಪಾಸಕರೂ ಆಗಿದ್ದು ಉತ್ತರಮಾರ್ಗದಿಂದ ದೇವಲೋಕವನ್ನು ಸೇರಿದವರು ದೇವತೆಗಳೆನಿಸುವರು.

ತ್ರೈಲೋಕ್ಯದೇಹಶ್ಚಾತ್ರ ಸ್ಯಾತ್ ವಿರಾಡೇವ ಪ್ರಜಾಪತಿಃ |
ಸಮಷ್ಟಿವ್ಯಷ್ಟಿರೂಪಶ್ಚ ಬ್ರಹ್ಮೇಹ ಪರಿಗೃಹ್ಯತೇ ||

೫೧೫. ಇಲ್ಲಿ ತ್ರೈಲೋಕ್ಯದೇಹನಾದ ವಿರಾಡಾತ್ಮನನ್ನೇ ಪ್ರಜಾಪತಿಯೆಂದು ಕರೆಯಲಾಗಿದೆ. ಬ್ರಹ್ಮನೆಂದರೆ ಸಮಷ್ಟಿವ್ಯಷ್ಟಿರೂಪವಾದ ತತ್ತ್ವವು ಎಂದರ್ಥ.

ತ ಏತೇ ಸರ್ವ ಆನಂದಾಃ ಯತ್ರೈಕತ್ವಂ ಪ್ರಜನ್ತಿ ನಃ |
ಕಾಮಶ್ಚ ತನ್ನಿಮಿತ್ತೋಽಥೋ ಜ್ಞಾತಂ ಯಚ್ಚ ದ್ವಯಾತ್ಮಕಮ್ ||
ತಥಾಽಕಾಮಹತತ್ವಂ ಚ ನಿಷ್ಠಾಂ ಯತ್ರ ಪ್ರಪದ್ಯತೇ |
ತಮಾನಂದಂ ವಿಜಾನೀಯಾದ್ ವರ್ತ್ಮನಾನೇನ ವಾಕ್ಯತಃ ||

೫೧೬–೫೧೭. ಈ ಎಲ್ಲಾ ಆನಂದಗಳೂ ಎಲ್ಲಿ ಒಂದಾಗುವವೋ ಆಯಾ ಆನಂದವಿಷಯಕವಾದ ಕಾಮಗಳೂ, ಆನಂದ, ಆನಂದಿ– ಎಂಬ ದ್ವೈತವೂ ಆಯಾ ಆನಂದದಲ್ಲಿ ಉಂಟಾಗುವ ಕಾಮದ ಉಪಟಳವಿಲ್ಲದಿರುವಿಕೆಯೂ– ಹೀಗೆ ಎಲ್ಲವೂ ಎಲ್ಲಿ ನೆಲೆಗೊಂಡು ಇಲ್ಲವಾಗುವವೋ ಅದನ್ನೇ ಪರಮಾನಂದವೆಂದು ತಿಳಿಯಬೇಕು. ವೇದವಾಕ್ಯದ ಹಾದಿಯಿಂದ ಇದು ಗೊತ್ತಾಗುತ್ತದೆ.

ಆನಂದಾನಂದಿನೋಶ್ಚಾತ್ರ ನ ಭೇದಃ ಸ್ಯಾನ್ಮನಾಗಪಿ |
ಶ್ರುತ್ಯೈವಾಪೋದಿತೋ ಯಸ್ಮಾತ್ ಛಿದ್ರಂ ಕುರ್ವನ್ ಮನಾಗಪಿ ||

೫೧೮. ಇಲ್ಲಿ ಆನಂದಾನಂದಿಗಳಿಗೆ ಸ್ವಲ್ಪವೂ ಭೇದವಿರುವದಿಲ್ಲ. ಏಕೆಂದರೆ ಸ್ವಲ್ಪವಾದ ಭೇದವೂ ಕೂಡದೆಂದು ಶ್ರುತಿಯೇ ಭೇದವನ್ನು ತಳ್ಳಿಹಾಕಿದೆ.

ನ ಸಾಧನಮಯಂ ಕಿಂಚಿತ್ ಸ್ವಾತ್ಮಸಿದ್ಧಾವಪೇಕ್ಷತೇ |
ಸ್ವತಃಸಿದ್ಧೇರವಿದ್ಯಾಯಾ ಹಾನಮಾತ್ರಮಪೇಕ್ಷತೇ ||

೫೧೯. ತನ್ನ ಆತ್ಮನನ್ನು ಕಂಡುಕೊಳ್ಳಲು ಯಾವ ಸಾಧನದ ಆವಶ್ಯಕತೆಯೂ ಇರುವದಿಲ್ಲ. ಸ್ವತಃಸಿದ್ಧವಸ್ತುವಿನ ದರ್ಶನಕ್ಕೆ ಅವಿದ್ಯೆಯನ್ನು ಕಳೆದುಕೊಳ್ಳುವದು ಮಾತ್ರವೇ ಬೇಕಾಗಿರುತ್ತದೆ.

ಗುರುಭಾರಾವಸನ್ನಸ್ಯ ಭಾರಾಪನಯತೋ ಯಥಾ |
ಉತ್ಪದ್ಯತೇ ಕ್ರಮಾತ್ ಸ್ವಾಸ್ಥ್ಯಂ ಸ್ವಾತ್ಮನ್ಯೇವಂ ತಮಃಕ್ಷಯಾತ್ ||

೫೨೦. ಬಹಳವಾದ ಭಾರದಿಂದ ಕುಗ್ಗಿದವನಿಗೆ ಭಾರವನ್ನು ಕಳಚಿದಾಗ ಸುಖವಾಗುವದು ಹೇಗೋ ಹಾಗೆ ಅಜ್ಞಾನವು ನಾಶವಾಗುವದರಿಂದ ತನ್ನಲ್ಲಿಯೇ ಆನಂದವು ವರ್ಧಿಸುತ್ತದೆ.

ಅಥೇದಾನೀಂ ಪರೀಕ್ಷಾಯಾ ಅದ್ವೈತಾನಂದಲಕ್ಷಣಮ್ |
ಉಪಸಂಹ್ರಿಯತೇ ಸಾಕ್ಷಾತ್ ಫಲಂ ಸಾಧನನಿಃಸ್ಪೃಹಮ್ ||

೫.೨೧. ಈಗ ಆನಂದವಿಚಾರದ ಪರೀಕ್ಷೆಯ ಫಲವಾದ ಅದ್ವೈತಾನಂದ ರೂಪವಾದ ಫಲವು ಯಾವ ಸಾಧನಗಳ ಸಂಬಂಧವೂ ಇಲ್ಲದ್ದಾದುದು– ಎಂದು ಉಪಸಂಹಾರಮಾಡಲಾಗುವದು.

ನಿರ್ಧೂತಾಶೇಷಸಂಸಾರಃ ಸತ್ಯಮಿತ್ಯಾದಿನೋದಿತಃ |
ವ್ಯಾವೃತ್ತ್ಯಾಸ್ಯಾಸತ್ಯಜ್ಞಾನಾದೇಃ ಬುದ್ಧೌ ಚಾತ್ಮನಿ ದರ್ಶಿತಃ ||

೫.೨೨. ಸತ್ಯಂ ಜ್ಞಾನಮ್– ಮುಂತಾದ ಶ್ರುತಿವಾಕ್ಯದಿಂದ ಹೇಳಲ್ಪಟ್ಟ ಸಮಸ್ತಸಂಸಾರಧರ್ಮಗಳನ್ನೂ ಕೊಡವಿಹಾಕಿರುವ ಬ್ರಹ್ಮವನ್ನು ಅಸತ್ಯ–ಅಜ್ಞಾನಗಳಿಂದ ಮೇಲೆತ್ತಿ ಬುದ್ಧಿಯಲ್ಲಿಯೂ ಅದರ ಸ್ವರೂಪದಲ್ಲಿಯೂ ತೋರಿಸಲಾಗಿರುತ್ತದೆ.

ನಿಕೃಷ್ಯಾವಿದ್ಯೋತ್ಸಂಗಸ್ಥಾತ್ತತ್ಸಾಕ್ಷಿಣಮನಾತ್ಮನಃ |
ಸಾಕ್ಷಾತ್ತ್ವೇನೈವ ತಂ ವಿದ್ಮಃ ಪ್ರಾತ್ಯಕ್ಷ್ಯಾತ್ ಸೋಽಯಮಿತ್ಯತಃ ||

೫.೨೩. ಅವಿದ್ಯಾಕಾರ್ಯವಾದ ಅಹಂಕಾರಾದಿ ಅನಾತ್ಮಗಳಿಂದ ಆ ಸಾಕ್ಷಿಯನ್ನು ಮೇಲೆತ್ತಿ ಸಾಕ್ಷಾತ್ತಾಗಿ–ಆದರಿಂದಲೇ ಅದನ್ನೇ–ಅವನೇ ಇವನು–ಎಂದು ಪ್ರತ್ಯಕ್ಷವಾಗಿ ಅರಿತವರಾಗಿರುತ್ತೇವೆ.

ಅಕಾಮಹತ ಇತ್ಯೇವಂ ನಿರವಿದ್ಯೋಽಭಿಧೀಯತೇ |
ತಸ್ಯಾಮಸತ್ಯಾಂ ತದ್ಬ್ರಹ್ಮ ಸ್ವಯಮೇವಾನುಭೂಯತೇ ||

೫.೨೪. ಅಕಾಮಹತನು– ಎಂಬಿದರಿಂದ ಅವಿದ್ಯೆಯಿಲ್ಲದವನನ್ನು ಹೇಳಲಾಗಿದೆ. ಅವಿದ್ಯೆಯಿಲ್ಲವಾಗಲು ಆ ಬ್ರಹ್ಮವು ತಾನೇ ಅನುಭವಿಸಲ್ಪಡುತ್ತದೆ.

ಅಜ್ಞಾತಂ ಜ್ಞಾಯತೇ ಯತ್ರ ಪ್ರಮಾತೃತ್ವಾದ್ಯನಿಹ್ನವಾತ್ |
ತತ್ರ ಮಾನಾಂತರಾಪೇಕ್ಷಾ ನ ಸ್ವತೋಽವಗಮಾತ್ಮಕೇ ||

೫.೨೫. ಪ್ರಮಾತೃತ್ವಾದಿಗಳನ್ನು ಅಲ್ಲಗಳೆಯದೆ ಎಲ್ಲಿ ತಿಳಿಯದೆ ಇರುವದನ್ನು ತಿಳಿಯುವೆವೋ ಅಲ್ಲಿ ಪ್ರಮಾಣಾಂತರಗಳ ಅಪೇಕ್ಷೆಯಿರುತ್ತದೆ. ಆದರೆ ತಾನೇ ಜ್ಞಾನಸ್ವರೂಪವಾದ ಬ್ರಹ್ಮದಲ್ಲಿ ಹಾಗೆ ಇರುವದಿಲ್ಲ.

ಪ್ರಮೈವಾತ್ಮಾತ್ಮಿಕಾ ಯತ್ರ ತ್ವನನ್ಯಾನುಭವಾತ್ಮಿಕಾ |
ನಾತ್ರ ಮಾನಾಂತರಾಪೇಕ್ಷಾ ಸೈವಾನಸ್ತಮಿತೋದಿತಾ ||

೫.೨೬. ಎಲ್ಲಿ ಪ್ರಮೆಯೇ ತನ್ನ ಅನುಭವಕ್ಕಿಂತ ಬೇರೆಯಲ್ಲದ್ದಾಗಿ ತೋರಿಕೊಳ್ಳುವದೋ ಅಂಥ ಸ್ಥಳದಲ್ಲಿ ಪ್ರಮಾಣಾಂತರಾಪೇಕ್ಷೆಯಿರುವದಿಲ್ಲ. ಅದೇ ಅಸ್ತವಾಗದ ಹಾಗೂ ಉದಯವಾಗದ ಬ್ರಹ್ಮವಾಗಿರುತ್ತದೆ.

ಅಥೇಯಮಾರ್ಥಪ್ರಧಾನೇಯಂ ಸಪ್ತಮೀ ಪುರುಷಾತ್ ಪರಾ |
ಯೋಽಯಮಿತ್ಯಾದಿನಾ ತದ್ವತ್ ಶ್ರುತಿರೇವಂ ಪ್ರಮಾದಿನೀ ||

೫೨೭. ಪುರುಷೇ, ಆದಿತ್ಯೇ–ಎಂಬ ಮಾತುಗಳು ಸಪ್ತಮೀವಿಭಕ್ತಿಯಲ್ಲಿದ್ದರೂ ಆಧೇಯಾರ್ಥಬ್ರಹ್ಮಪ್ರಧಾನವಾಗಿಯೇ ಇವೆ. 'ಯೋಽಯಂ ವಿಜ್ಞಾನಮಯಃ ಪ್ರಾಣೇಷು'– ಮುಂತಾದ ವಾಕ್ಯಗಳಲ್ಲಿ ಆಧೇಯಾರ್ಥಪ್ರಧಾನವಾದ ಸಪ್ತಮೀವಿಭಕ್ತಿಯಿರುವಂತೆಯೇ ಇಲ್ಲಿಯೂ ತಿಳಿಯಬೇಕು.

ಅಕಾಮಹತಧೀಗಮ್ಯಃ ಯೋಽಯಂ ಬುದ್ಧೇಃ ಸದೇಕ್ಷಕಃ |
ಅಯಂ ಪುರುಷ ಇತ್ಯತ್ರ ಸ ಏವ ತ್ವಭಿಧೀಯತೇ ||

೫೨೮. ಕಾಮವಿಲ್ಲದ ಬುದ್ಧಿಗೆ ಕಂಡುಬರುವ ಯಾವ ಬುದ್ಧಿಯ ದ್ರಷ್ಟೃವಿರುತ್ತಾನೋ 'ಅಯಂ ಪುರುಷೇ' ಎಂಬಲ್ಲಿ ಅವನನ್ನೇ ಹೇಳಿರುತ್ತದೆ.

ಪ್ರಧ್ವಸ್ತಾಸ್ಮದ್ವಿಭಾಗಶ್ಚ ರೋಚಿಷ್ಣುರ್ಯಶ್ಚ ಭಾಸ್ಕರೇ |
ಸೂರ್ಯ ಆತ್ಮೇತಿ ಮಂತ್ರೋಽಪಿ ಯೋಽಸಾವಿತಿ ಚ ಸಾಕ್ಷ್ಯಥ ||

೫೨೯. ನಾನು ಎಂಬ ವಿಭಾಗವಿಲ್ಲದ್ದಾದ, ಪ್ರಕಾಶಮಯವಾದ ಸೂರ್ಯನಲ್ಲಿಯೂ ಕಂಡುಬರುವ ಪುರುಷನು ಒಬ್ಬನೇ ಎಂದು "ಸೂರ್ಯ ಆತ್ಮಾ" ಎಂಬ ಮಂತ್ರವೂ "ಯೋಽಸಾವಸೌ" ಎಂಬ ವಾಕ್ಯವೂ ತಿಳಿಸುತ್ತದೆ. ಅವನೇ ಸಾಕ್ಷಿಯೆನಿಸಿದ ಆತ್ಮನು.

ಕ್ಷೇತ್ರಜ್ಞೇಶ್ವರಭೇದೇನ ಹ್ಯಭಿನ್ನಂ ವಸ್ತ್ವವಿದ್ಯಯಾ |
ತಸ್ಮಾತ್ತದ್ಧಾನತಶ್ಚೈಕ್ಯಂ ಘಟೇತರಖಯೋರಿವ ||

೫೩೦. ಅವಿದ್ಯೆಯಿಂದ ಒಂದೇ ವಸ್ತುವೇ ಕ್ಷೇತ್ರಜ್ಞ, ಈಶ್ವರ–ಎಂದು ಭಿನ್ನವಾಗಿ ಕಂಡುಬರುತ್ತದೆ. ಆದ್ದರಿಂದ ಆ ಅವಿದ್ಯೆಯು ಹೋಗುವದರಿಂದ– ಹೇಗೆ ಘಟಾಕಾಶಮಹಾಕಾಶಗಳು ಘಟೋಪಾಧಿಯು ನಷ್ಟವಾಗಲು ಒಂದಾಗುವವೋ ಹಾಗೆ– ಐಕ್ಯವು ಸಿದ್ಧವಾಗುವದು.

ಮೂರ್ತಾಮೂರ್ತಾತ್ಮಕಸ್ಯಾಸ್ಯ ಹ್ಯುತ್ಕರ್ಷಃ ಪರಮೋ ರವಿಃ |
ಸ್ವಾಂತರ್ಗತೇನ ತಸ್ಯೈಕ್ಯಂ ತನ್ನಿಮಿತ್ತನಿಷೇಧತಃ ||

೫೩೧. ಮೂರ್ತಾಮೂರ್ತಾತ್ಮಕವಾದ ಈ ಪ್ರಪಂಚದ ಉತ್ಕೃಷ್ಟ ಉಪಾಧಿಯೇ ಸೂರ್ಯನು. ಅವನ ಒಳಗಿರುವ ಆತ್ಮನೊಡನೆ (ಅವಿದ್ಯಾ)ನಿಮಿತ್ತನಿಷೇಧದ ಮೂಲಕ ಈ ಜೀವಾತ್ಮನಿಗೆ ಐಕ್ಯವನ್ನು ಹೇಳಲಾಗಿದೆ.

ಅನೂದ್ಯ ಸ ಯ ಇತ್ಯೇವಂ ಅಪಕೃಷ್ಟಂ ನೃಬುದ್ಧಿಗಮ್ |
ಉತ್ಕೃಷ್ಟೇನೇಶ್ವರೇಣಾಥ ವಿಶಿನಷ್ಟ್ಯಹಿರಜ್ಜುವತ್ ||

೫೩೨. ಮನುಷ್ಯಬುದ್ಧಿಗೋಚರವಾದ ಅಪಕೃಷ್ಟವಾದ ಜೀವಸ್ವರೂಪವನ್ನು "ಸ ಯಃ" ಎಂಬ ಮಾತಿನಿಂದ ಅನುವಾದಮಾಡಿಕೊಂಡು ಉತ್ಕೃಷ್ಟನಾದ

ಶ್ವರನೊಡನೆ– ಹೇಗೆ ಹಾವೆಂದರೆ ಹಗ್ಗವೇ– ಎನ್ನುವರೋ ಹಾಗೆ– ವಿಶೇಷ
ವಾಗಿ ಐಕ್ಯಮಾಡಿ ಹೇಳಲಾಗಿದೆ.

ಉತ್ಕೃಷ್ಟೋ ಯದಪೇಕ್ಷ್ಯೇಶಃ ತತ್ತ್ವವಿದ್ ಬಾಧ್ಯತೇ ಬಲಾತ್ |
ಜಹಾತಿ ಪಶ್ಚಾದುತ್ಕರ್ಷಂ ಅಪಕೃಷ್ಟಾಶ್ರಯೋ ಹಿ ಸಃ ||

೫೩.೩. ಜೀವನಿಗಿಂತ ಉತ್ಕೃಷ್ಟನಾದ ಈಶ್ವರನು ಜೀವನಲ್ಲಿರುವ ಅಪ
ಕೃಷ್ಟತ್ವವನ್ನು ಸಹಿಸಲಾರನಾದ್ದರಿಂದ ಅದನ್ನು ಬಾಧಿಸುತ್ತಾನೆ. ಅನಂತರ
ಅಪಕೃಷ್ಟತ್ವವು ತೊಲಗಲಾಗಿ ಉತ್ಕೃಷ್ಟತ್ವವು ಸಾಪೇಕ್ಷವಾದ್ದರಿಂದ ಈಶ್ವರನು
ಅದನ್ನು ತ್ಯಜಿಸುತ್ತಾನೆ. ಹೀಗೆ ಉತ್ಕೃಷ್ಟತ್ವಾಪಕೃಷ್ಟತ್ವಗಳು ಇಲ್ಲವಾಗಲು
ಐಕ್ಯವು ಸಿದ್ಧಿಸುತ್ತದೆ.

ನಾದಿತ್ಯಸ್ಥಸ್ತದೋತ್ಕರ್ಷೋ ನಾಪಕೃಷ್ಟಿಸ್ತಥಾತ್ಮನಿ |
ಹಿತ್ವೋಭಯಮವಾಕ್ಯಾರ್ಥಂ ನೇತಿ ನೇತೀತಿ ವಿಂದತೇ ||

೫೩.೪. ಆದಿತ್ಯನಲ್ಲಿರುವ ಉತ್ಕರ್ಷವಾಗಲಿ, ಜೀವಾತ್ಮನಲ್ಲಿರುವ ಅಪಕರ್ಷ
ವಾಗಲಿ– ಇಲ್ಲವಾದಾಗ ಎರಡನ್ನೂ ದಾಟಿದ ಅವಾಕ್ಯಾರ್ಥವೆನಿಸಿದ ನೇತಿ ನೇತಿ
ಎಂಬ ಬ್ರಹ್ಮವನ್ನು ಪಡೆಯುತ್ತಾನೆ.

ಉತ್ಕೃಷ್ಟಿರ್ವಾಪಕೃಷ್ಟಿರ್ವಾ ನೇಹ ಸ್ವಾತ್ಮನಿ ವಿದ್ಯತೇ |
ತಮೋಽಪಹತದೃಷ್ಟೀನಾಂ ಉತ್ಕರ್ಷೇತರವೀಕ್ಷಣಮ್ ||

೫೩.೫. ಸ್ವರೂಪಭೂತನಾದ ಆತ್ಮನಲ್ಲಿ ಉತ್ಕರ್ಷವಾಗಲಿ, ಅಪಕರ್ಷ
ವಾಗಲಿ ಇರುವದಿಲ್ಲ. ಆದರೆ ಅಜ್ಞಾನದಿಂದ ಪೀಡಿತರಾದ ದೃಷ್ಟಿಯುಳ್ಳವರಿಗೆ
ಮಾತ್ರ ಉತ್ಕರ್ಷಾಪಕರ್ಷಗಳ ನೋಟವಿರುತ್ತದೆ.

ಅವಿದ್ಯೈವ ಯತೋ ಹೇತುರುತ್ಕೃಷ್ಟ್ಯಾದೇರ್ನ ವಸ್ತುತಃ |
ಜಗ್ಧಾಯಾಂ ವಿದ್ಯಯಾ ತಸ್ಯಾಂ ನಾನಾತ್ವಂ ವಿನಿವರ್ತತೇ ||

೫೩.೬. ಉತ್ಕರ್ಷವೇ ಮುಂತಾದ ಭೇದಕ್ಕೆ ಅವಿದ್ಯೆಯೇ ಕಾರಣವಾಗಿರು
ವದರಿಂದ ವಿದ್ಯೆಯಿಂದ ಅದು ನಾಶಗೊಳಿಸಲ್ಪಡಲಾಗಿ ನಾನಾತ್ವವು ತೊಲಗಿ
ಹೋಗುತ್ತದೆ. ನಿಜವಾಗಿ ನಾನಾತ್ವವೆಂಬುದಿಲ್ಲವೇ ಇಲ್ಲ.

ಅತೀತೇ ಯತಃ ಸರ್ವಾನಾನಂದಾನಗ್ರಜಾದಧಿ |
ವಿಕಲ್ಪಭೂಮೇರ್ವ್ಯಾವೃತ್ತೇರೈಕ್ಯಂ ಸ್ವಾತ್ಮರವಿಸ್ಥಯೋಃ ||

೫೩.೭. ಹಿರಣ್ಯಗರ್ಭನವರೆಗಿನ ಎಲ್ಲಾ ಆನಂದಗಳನ್ನೂ ಮೀರಿರುವ (ಪರ
ಮಾನಂದವು) ವಿಕಲ್ಪಗಳ ಮಟ್ಟದಿಂದ ಮೇಲೆದ್ದು ಅದನ್ನು ದೂರಮಾಡಿರುವದ
ರಿಂದ ಆತ್ಮನಿಗೂ ಸೂರ್ಯನಿಗೂ ಐಕ್ಯವು ಸಿದ್ಧವಾಗುತ್ತದೆ.

ಸತ್ಯಂ ಜ್ಞಾನಮಿತಿ ಹ್ಯಸ್ಮಾದಸತ್ಯಾದ್ಯರ್ಥವಾರಣಾತ್ |
ಭೇದಾಶ್ರಯಸ್ಯ ವ್ಯಾವೃತ್ತೇರೈಕ್ಯಂ ಸ್ಯಾತ್ಮರವಿಸ್ಥಯೋಃ ||

೫೩೮. ಬ್ರಹ್ಮವು ಸತ್ಯಜ್ಞಾನಸ್ವರೂಪವಾಗಿದೆ– ಎಂಬ ವಾಕ್ಯದಿಂದ ಅಸತ್ಯಾದ್ಯರ್ಥಗಳನ್ನು ನಿರಾಕರಿಸಿದ್ದರಿಂದ ಭೇದಾಶ್ರಯವನ್ನು ಕೈಬಿಟ್ಟಂತಾಗಿ ಆತ್ಮನಿಗೂ ಸೂರ್ಯನಿಗೂ ಐಕ್ಯವು ಸಿದ್ಧವಾಗುತ್ತದೆ.

ಕಾರ್ಯೇಣ ರಸಲಾಭೇನ ಪ್ರಾಣನಾದ್ಯುಪಪತ್ತಿಭಿಃ |
ಅಸ್ತೀತ್ಯಪಾಕ್ರಿಯೈತಸ್ಯ ಪ್ರಾಹುರ್ಭಾಷ್ಯಕೃತಃ ಸ್ವಯಮ್ ||
ಪ್ರಶ್ನಯೋರಸ್ತಿ ನಾಸ್ತೀತಿ ವ್ಯಾಖ್ಯಾತತ್ವಾದಥಾಧುನಾ |
ಆಹೋ ವಿದ್ವಾನಮುಂ ಲೋಕಮಿತ್ಯಸ್ಯಾಪಾಕ್ರಿಯೋಚ್ಯತೇ ||

೫೩೯–೫೪೦. ಜಗತ್ತು ಬ್ರಹ್ಮಕಾರ್ಯವಾದ್ದರಿಂದ, ಜೀವನವು ರಸರೂಪವಾದ ಬ್ರಹ್ಮದ ಇರುವಿಕೆಯಿಂದ ಎಲ್ಲರಿಗೂ ಇಷ್ಟವಾದ್ದರಿಂದ, ಬ್ರಹ್ಮದ ಇರುವಿಕೆಯಿಂದಲೇ ಜೀವರುಗಳು ಉಸಿರಾಡುತ್ತಿರುವದರಿಂದ ಬ್ರಹ್ಮವು ಇದೆ–ಎಂದು ಪ್ರತಿಪಾದಿಸಲಾಗಿದೆ. ಹೀಗೆ ಅಸ್ತಿ–ನಾಸ್ತಿಪ್ರಶ್ನೆಯು ವಿವರಿಸಲ್ಪಟ್ಟ ಅನಂತರ ಜ್ಞಾನಿಯು ಬ್ರಹ್ಮವನ್ನು ಪಡೆಯುತ್ತಾನೆ; ಅಜ್ಞಾನಿಯು ಪಡೆಯುವದಿಲ್ಲ–ಎಂದೂ ನಿರ್ಧರಿಸಿದಂತಾಗಿದೆ– ಎಂದು ಭಾಷ್ಯಕಾರರು ವ್ಯಾಖ್ಯಾನಮಾಡಿರುತ್ತಾರೆ.

ತದ್ಭಾಷ್ಯಭಾನುಸಂಪ್ಲುಷ್ಟಬಹುಲಾಜ್ಞಾನಧೀರಹಮ್ |
ಯದಾ ಹೀತ್ಯಾದಿನಾ ಮನ್ಯೇ ಉತೇತ್ಯಾದೇರ್ವಿನಿರ್ಣಯಮ್ ||

೫೪೧. ಆ ಭಾಷ್ಯಕಾರರ ವಾಣಿಯೆಂಬ ಸೂರ್ಯನಿಂದ ತೊಳೆಯಲ್ಪಟ್ಟ ನಿಬಿಡವಾದ ಅಜ್ಞಾನಬುದ್ಧಿಯ ನಾನು ಉತಾವಿದ್ವಾನ್– ಎಂಬ ಪ್ರಶ್ನೆಯ ನಿರ್ಣಯವು 'ಯದಾ ಹ್ಯೇವೈಷ' ಎಂಬ ವಾಕ್ಯದಿಂದ ಆಗಿರುತ್ತದೆ– ಎಂದು ತಿಳಿಯುತ್ತೇನೆ.

ಉತಾವಿದ್ವಾನಮುಂ ಲೋಕಮಿತಿ ಪ್ರಶ್ನವಿನಿರ್ಣಯಾತ್ |
ಅಸ್ತಿ ನಾಸ್ತೀತಿ ಸಿದ್ಧಃ ಸ್ಯಾತ್ ಪ್ರಶ್ನಯೋರಪಿ ನಿರ್ಣಯಃ ||

೫೪೨. 'ಉತಾವಿದ್ವಾನ್' ಎಂಬ ಪ್ರಶ್ನವು ನಿರ್ಣಯವಾದದ್ದರಿಂದಲೇ ಅಸ್ತಿ, ನಾಸ್ತಿ–ಎಂಬೀ ಪ್ರಶ್ನೆಗಳೆರಡರ ನಿರ್ಣಯವೂ ಸಿದ್ಧವಾಯಿತು.

ವಿದ್ವತ್ತಾವ್ಯತಿರೇಕೇಣ ಫಲಂ ಭಿನ್ನಂ ಯಥಾ ತಥಾ |
ಅಕಾಮಹತತಾಯಾಸ್ತು ಪರಾನಂದೋ ನ ಭಿದ್ಯತೇ ||

೫೪೩. ಹೇಗೆ ಬ್ರಹ್ಮವನ್ನು ಅರಿತುಕೊಳ್ಳುವದೆಂಬುದಕ್ಕಿಂತ ಬೇರೆಯಾಗಿ ಬ್ರಹ್ಮಪ್ರಾಪ್ತಿಯೆಂಬುದು ಭಿನ್ನವಲ್ಲವೋ ಹಾಗೆಯೇ ಕಾಮಹತನಾಗದೆ ಇರುವವೆಂಬುದಕ್ಕಿಂತ ಪರಮಾನಂದವು ಬೇರೆಯಲ್ಲವಾಗಿದೆ.

ಅನೇಕಜನ್ಮಸಂಸಿದ್ಧಃ ಸ ಯಃ ಕಶ್ಚಿತ್ ಭವೇದಿಹ |
ಯಥೋದಿತಾರ್ಥವಿತ್ ಸಾಕ್ಷಾತ್ ಅಸ್ಮಾದ್ಭೋಗೇತರಾತ್ಮಕಾತ್ |
ಲೋಕಾದಾಧ್ಯಾತ್ಮಿಕಾತ್ ಪ್ರೇತ್ಯ ಯಶ್ಚ ಸ್ಯಾದಾಧಿಭೌತಿಕಃ ||
ತದುತ್ಕ್ರಾನ್ತೋಽರ್ಥವೇದ್ಧೇತುರನ್ನಸೃಷ್ಟಿಸ್ಥಿತಿಕ್ಷಯಃ ||

೫೪೪–೫೪೫. ಯಾವನೊಬ್ಬನು ಹಿಂದಿನ ಅನೇಕ ಜನ್ಮಗಳಲ್ಲಿ ಸಾಧನೆಗಳನ್ನು ಮಾಡಿ ಸಂಸಿದ್ಧನಾಗಿ ಹಿಂದೆ ಹೇಳಿದ ಬ್ರಹ್ಮವಸ್ತುವಿನ ಸ್ವರೂಪದ ಜ್ಞಾನದಿಂದ ಕೂಡಿದವನಾಗಿರುವನೋ ಅವನು ಈ ಕಾಮಗಳ ಉಪಟಳವಿಲ್ಲದ ಪದವಿಯನ್ನು– ಎಂದರೆ ಅನ್ನದ ಸೃಷ್ಟಿಸ್ಥಿತಿಕ್ಷಯಹೇತುವೂ ಆಧಿಭೌತಿಕ, ಆಧ್ಯಾತ್ಮಿಕವಿಭಾಗವುಳ್ಳ ಜಗತ್ತಿಗಿಂತಲೂ ಮಿಗಿಲಾದದ್ದೂ ಆದ ಪರಬ್ರಹ್ಮಪದವಿಯನ್ನು ಹೊಂದಿ ಕೃತಾರ್ಥನಾಗುವನು.

ಲೋಕಾದಸ್ಮಾತ್ ಸಮುತ್ಕ್ರಮ್ಯ ಹ್ಯೇವಂವಿದಿತಿ ವಾಚಕಃ |
ಸರ್ವಶೇಷಮಿತಿನ್ಯಾಯಂ ತದ್ವ್ಯಾಖ್ಯಾನಾಯ ಚೋತ್ತರಮ್ ||

೫೪೬. 'ಏವಂವಿತ್' ಎಂಬ ಶಬ್ದವ್ಯವಹಾರಗೋಚರನಾಗಿ ಈ ಭೋಗ್ಯಲೋಕವನ್ನು ದಾಟಿ ಎಲ್ಲಾ ಅನ್ನಮಯಾದ್ಯಾತ್ಮರುಗಳನ್ನೂ ಸಂಕ್ರಮಣ ಮಾಡಿದ ಅನಂತರ ಉಳಿಯುವ ನಿರ್ವಿಶೇಷವಾದ ಬ್ರಹ್ಮದಲ್ಲಿ ಈ ಸಾಧಕನು ನೆಲೆಗೊಳ್ಳುವನು. ಇದನ್ನು ವಿವರಿಸಲು ಮುಂದಿನ ಗ್ರಂಥಭಾಗವು ಹೊರಟಿದೆ.

ಗತ್ವೇಹಾನ್ನಮಯಾತ್ಮಾನಂ ತತ್ಕಾರ್ಯಂ ಯದ್ವದತ್ಯಗಾತ್ |
ಅನ್ನೇನಾನ್ನಮಯಂ ತದ್ವತ್ ವಿದ್ವಾನ್ ಪ್ರಾಣಮಯಾತ್ಮನಾ ||
ತಸ್ಯಾಪಿ ಹ್ಯಂತರಾತ್ಮಾನಮಹೀ ರಜ್ಜುಮಿವ ಸ್ವತಃ ||
ಮನೋಮಯಾತ್ಮನಾ ಬಾಹ್ಯಮುಪಸಂಕ್ರಾಮತೀಶ್ವರಃ |
ಪೂರ್ವಪೂರ್ವಪ್ರಹಾಣಂ ಸ್ಯಾದುತ್ತರೋತ್ತರಗಾಮಿಭಿಃ ||

೫೪೭–೫೪೮. ಅನ್ನಮಯಾತ್ಮನಾಗಿ ನಿಂತವನಾಗಿ ಹೇಗೆ ಅನ್ನವಿಜ್ಞಾನದಿಂದ ಅನ್ನಮಯನನ್ನು ದಾಟಿದನೋ ಹಾಗೆ ಜ್ಞಾನಿಯು ಪ್ರಾಣಮಯಾತ್ಮರೂಪದಿಂದಲೂ ಸಹ ತನ್ನನ್ನು ಕಂಡುಕೊಂಡು– ಹೇಗೆ ಹಾವು ಹಗ್ಗವನ್ನು ಹೊಂದಿ ಇಲ್ಲವಾಗುವದೋ ಹಾಗೆ– ಮುಂದೆ ಮನೋಮಯಾತ್ಮನಾಗಿ ಬಾಹ್ಯವಾದ ಕೋಶಾತ್ಮರುಗಳನ್ನು ದಾಟುತ್ತಾ ಮುಂದುಮುಂದಿನ ಆತ್ಮರುಗಳನ್ನು ಕಂಡುಕೊಂಡಂತೆಲ್ಲ ಹಿಂದುಹಿಂದಿನ ಕೋಶಗಳಲ್ಲಿ ಆತ್ಮಬುದ್ಧಿಯನ್ನು ಬಿಡುತ್ತಾನೆ.

ದೃಷ್ಟಾದೃಷ್ಟಾದಿಹೀನೋಽಥ ಪ್ರತಿಷ್ಠಾಂ ವಿಂದತೇಽಭಯಮ್ |
ಯೋಽಸಾವೇವಂವಿದುತ್ಕ್ರಾಂತಃ ಪರಸ್ಮಾತ್ ಕಿಮಸೌ ಭವೇತ್ ||
ಸ್ವತೋ ಭಿನ್ನೋಽಥವಾಽಭಿನ್ನೋ ಯದಿ ವೋಭಯಲಕ್ಷಣಃ ||

೫೪೯-೫೫೦. ದೃಶ್ಯಾದೃಶ್ಯಾದಿವಿಶೇಷಗಳಿಲ್ಲದ (ಬ್ರಹ್ಮದಲ್ಲಿ) ಅಭಯುವನ್ನು ಹೊಂದುತ್ತಾನೆ- ಎಂದು ಹೇಳಲಾಗಿದೆಯಷ್ಟೆ. ಹೀಗೆ ಬ್ರಹ್ಮವನ್ನು ಬಲ್ಲವನು ಆ ಪರಬ್ರಹ್ಮಕ್ಕಿಂತ ಭಿನ್ನನೊ ? ಅಭಿನ್ನನೊ ? ಅಥವಾ ಭಿನ್ನಾಭಿನ್ನನೊ ? ಏನಾಗಿರಬಹುದು ? ಎಂದು ಪ್ರಶ್ನೆಯೇಳುತ್ತದೆ.

ಭೇದೇ ಶ್ರುತಿವಿರೋಧಃ ಸ್ಯಾತ್ ಅನ್ಯೋಽಸಾವಿತಿ ನಿಂದನಾತ್ |
ಕರ್ಮಕರ್ತೃತ್ವಮೇಕಸ್ಯ ದೋಷೋಽಭೇದೇಽಪಿ ವಿದ್ಯತೇ ||
ಪರಸ್ಯ ದುಃಖಿತಾ ಚೈವಂ ಪರಾಭಾವಃ ಪ್ರಸಜ್ಯತೇ |
ತಸ್ಮಾನ್ನಿರ್ಧಾರಣಾರ್ಥೋಽಯಂ ವಿಚಾರಃ ಕ್ರಿಯತೇಽಧುನಾ ||

೫೫೧-೫೫೨. ಭಿನ್ನನೆಂದರೆ 'ಅನ್ಯೋಽಸೌ....' ಎಂಬ ಶ್ರುತಿವಿರೋಧವಾಗುವದು. (ಏಕೆಂದರೆ ಭೇದಜ್ಞಾನಿಯು ಬ್ರಹ್ಮವನ್ನರಿತವನಲ್ಲ- ಎಂದು ಹೇಳಿದೆ.) ಅಭಿನ್ನನೆಂದರೆ ಕರ್ತೃವೂ ಕರ್ಮವೂ ಒಬ್ಬನೇ- ಎಂದಾಗುವದು. ಇದೂ ದೋಷವೇ ಆಗುತ್ತದೆ. ಮತ್ತು ದುಃಖಿತ್ವಾದಿಗಳು ಪರಮಾತ್ಮನಿಗೇ ಎಂದಾಗುವದು. ಅಥವಾ ಪರಮಾತ್ಮನೆಂಬುವನೇ ಇಲ್ಲವೆಂದಾದರೂ ಆಗುವದು. ಆದ್ದರಿಂದ ಈ ವಿಷಯವನ್ನು ನಿರ್ಣಯಿಸುವದಕ್ಕಾಗಿ ಈಗ ವಿಚಾರಮಾಡಲಾಗುತ್ತದೆ.

ನಿಶ್ಚಿತಂ ಹಿ ಪರಿಜ್ಞಾನಂ ಫಲವತ್ ಸ್ಯಾತ್ ಪ್ರಸಿದ್ಧಿತಃ |
ನಾನ್ಯಸ್ಯಾನ್ಯಾತ್ಮತಾ ಯಸ್ಮಾತ್ ಧ್ವಂಸೇ ವಾಽಧ್ವಂಸ ಏವ ವಾ ||
ತಸ್ಮಾದನನ್ಯೋ ವಿಜ್ಞೇಯಃ ಪರಸ್ಮಾದಾತ್ಮನೋ ಬುಧಃ ||

೫೫೩-೫೫೪. ನಿಶ್ಚಿತವಾದ ಜ್ಞಾನವು ಮಾತ್ರವೇ ಫಲವುಳ್ಳದ್ದಾಗಿರುವದೆಂದು ಪ್ರಸಿದ್ಧವಾಗಿದೆ. ಯಾವದೇ ವಸ್ತುವು ನಷ್ಟವಾಗಲಿ, ಆಗದಿರಲಿ-ಅದು ಬೇರೊಂದು ವಸ್ತುವಾಗಿ ಎಂದಿಗೂ ಆಗಲಾರದು. ಆದ್ದರಿಂದ ಜ್ಞಾನಿಯು ಪರಬ್ರಹ್ಮಕ್ಕಿಂತ ಅನನ್ಯನೆಂದೇ ತಿಳಿಯಬೇಕು.

ಅನನ್ಯಶ್ಚೇತ್ ಭವೇದ್ವಿದ್ವಾನ್ ಭೂತತ್ವಾತ್ ಭವತೀತಿ ಕಿಮ್ |
ಬಾಢಂ ಪ್ರಾಪ್ತಂ ಪರಂ ಬ್ರಹ್ಮ ನಾನಾತ್ಮಾಪ್ನೋತಿ ಯೇನ ತತ್ ||

೫೫೫. ಜ್ಞಾನಿಯು ಬ್ರಹ್ಮಕ್ಕಿಂತ ಅನನ್ಯನೆಂದಾದರೆ ಎಂದೆಂದೂ ಬ್ರಹ್ಮವಾಗಿಯೇ ಇರುವದರಿಂದ ಬ್ರಹ್ಮವಾಗುತ್ತಾನೆ-ಎಂದೇಕೆ ಹೇಳಬೇಕು ? ಏಕೆಂದರೆ ಪರಬ್ರಹ್ಮವು ನಿತ್ಯಪ್ರಾಪ್ತವೇ ಆಗಿದೆ. ಅನಾತ್ಮವು ಅದನ್ನು ಪಡೆಯಲಾರದು.

ದಶಮಾಪ್ತಿವದಜ್ಞಾನಾತ್ ಸ್ವರೂಪಾದಿವ ವರ್ಣ್ಯತೇ |
ವಿದ್ಯಯಾ ತದವಾಪ್ನೋತಿ ಯದನಾಪ್ತಮವಿದ್ಯಯಾ ||

೫೫೬. ಮೇಲಿನ ಆಕ್ಷೇಪಕ್ಕೆ ಉತ್ತರವೇನೆಂದರೆ : ಅವಿದ್ಯೆಯಿಂದ ಮಾತ್ರವೇ ಅಪ್ರಾಪ್ತವಾಗಿದ್ದುದನ್ನು ವಿದ್ಯೆಯಿಂದ ಪ್ರಾಪ್ತಿಮಾಡಿಕೊಂಡಾಗ ಅಜ್ಞಾನದಿಂದ ದಶಮನು ನಷ್ಟನಾಗಿದ್ದು ಜ್ಞಾನದಿಂದ ಪ್ರಾಪ್ತವಾದಾಗ ಹೇಗೋ ಹಾಗೆ– ಇಲ್ಲಿಯೂ ವರ್ಣಿಸಲಾಗಿದೆ.

ತಮೋಽಹ್ನುತ್ಯತಿರೇಕೇಣ ನೇಹ ಗ್ರಾಮಾದ್ಯವಾಪ್ತಿವತ್ |
ತತ್ಪ್ರಾಪ್ತಿಸಾಧನಂ ಜ್ಞಾನಂ ಗ್ರಾಮಮಾರ್ಗಪ್ರಬೋಧವತ್ ||
ಇತ್ಯೇವಂ ಚೇನ್ನ ವೈಧರ್ಮ್ಯಾತ್ ನ ಹಿ ತತ್ರೋಪದಿಶ್ಯತೇ |
ಗನ್ತವ್ಯವಿಷಯಂ ಜ್ಞಾನಂ ಯಥಾ ಸತ್ಯಾದಿಲಕ್ಷಣಮ್ ||

೫೫೭–೫೫೮. ಗ್ರಾಮವನ್ನು ಹೋಗಿ ಪಡೆಯುವಂತೆ ಇಲ್ಲಿ ಅಜ್ಞಾನವನ್ನು ಕಳೆಯುವದನ್ನು ಬಿಟ್ಟರೆ ಮತ್ತೇನೂ ಪಡೆಯತಕ್ಕದ್ದಿಲ್ಲ. ಗ್ರಾಮಕ್ಕೆ ಹೋಗುವ ದಾರಿಯನ್ನು ತಿಳಿಸುವಂತೆ ಬ್ರಹ್ಮಪ್ರಾಪ್ತಿಸಾಧನವನ್ನೂ ತಿಳಿಯಬೇಕು–ಎನ್ನುವದಾದರೆ ಹಾಗಿಲ್ಲ. ಏಕೆಂದರೆ ಬ್ರಹ್ಮಪ್ರಾಪ್ತಿಗೂ ಗ್ರಾಮಪ್ರಾಪ್ತಿಗೂ ವೈಲಕ್ಷಣ್ಯವಿದೆ. ಸತ್ಯಜ್ಞಾನಾದಿಲಕ್ಷಣವಾದ ಜ್ಞಾನವು ಇಲ್ಲಿ ಉಪದೇಶಿಸಲ್ಪಟ್ಟಿದೆಯೇ ಹೊರತು ಗ್ರಾಮವನ್ನು ಕುರಿತು ಅದನ್ನು ಪಡೆಯುವ ಹಾದಿಯನ್ನು ತಿಳಿಸಿದಂತೆ ಅಲ್ಲ. (ದೃಷ್ಟಾಂತದಲ್ಲಿ ಮಾರ್ಗೋಪದೇಶದಿಂದಲೇ ಗ್ರಾಮಪ್ರಾಪ್ತಿಯಾಗುವದಿಲ್ಲ. ಗಮನವೆಂಬ ಕರ್ತವ್ಯಾಂತರವಿದೆ. ಇಲ್ಲಿ ಜ್ಞಾನವನ್ನು ಹೊರತು ಬೇರೆ ಕರ್ತವ್ಯವಿರುವದಿಲ್ಲ.)

ಕರ್ಮಾಪೇಕ್ಷಂ ಪರಪ್ರಾಪ್ತೌ ಜ್ಞಾನಂ ಸ್ಯಾದಿತಿ ಚೇನ್ನ ತತ್ |
ಮುಕ್ತೌ ನ ಕರ್ಮಣಃ ಕಾರ್ಯಂ ಯಸ್ಮಾದಣ್ವಪಿ ವಿದ್ಯತೇ ||

೫೫೯. ಪರಪ್ರಾಪ್ತಿವಿಷಯದಲ್ಲಿ ಜ್ಞಾನವು ಕರ್ಮದ ಸಹಾಯವನ್ನೂ ಬಯಸುತ್ತದೆ–ಎಂದಾಗಬಹುದಲ್ಲ ? ಎಂದರೆ ಹಾಗಿಲ್ಲ. ಏಕೆಂದರೆ ಮುಕ್ತಿಯನ್ನು ಉಂಟುಮಾಡುವ ವಿಷಯದಲ್ಲಿ ಕರ್ಮದ ಕೆಲಸವು ಏನೇನೂ ಇರುವದೇಇಲ್ಲ.

ಬುದ್ಧಂ ಯಸ್ಮಾತ್ ಸ್ವತಸ್ತತ್ತ್ವಂ ಅತಃ ಶುದ್ಧಂ ಸ್ವತೋ ಭವೇತ್ |
ಅತೋ ಮುಕ್ತಂ ಸ್ವತೋ ಬ್ರಹ್ಮ ವದ ಸ್ಯಾತ್ ಕರ್ಮಣಾತ್ರ ಕಿಮ್ ||

೫೬೦. ಬ್ರಹ್ಮತತ್ತ್ವವು ಸ್ವತಃ ನಿತ್ಯಬುದ್ಧವಾಗಿರುವದರಿಂದಲೇ ನಿತ್ಯಶುದ್ಧವೂ ಆಗಿರಲೇಬೇಕು. ಆದ್ದರಿಂದಲೇ ನಿತ್ಯಮುಕ್ತವೂ ಹೌದು. ಹೀಗೆ ಸ್ವತಃ ನಿತ್ಯಶುದ್ಧಬುದ್ಧಮುಕ್ತವಾದ ಬ್ರಹ್ಮಪ್ರಾಪ್ತಿಗೆ ಕರ್ಮದಿಂದಾಗಬೇಕಾದದ್ದಾದರೂ ಏನು ? ಹೇಳಬಲ್ಲೆಯಾ ?

ಸ್ರಷ್ಟೃಪ್ರವೇಷ್ಟ್ರೋಶ್ಚೈಕತ್ವಾದಭಿನ್ನಃ ಸ್ಯಾತ್ ಪರಾದ್ ಬುಧಃ |
ವಿಪಶ್ಚಿದ್ ವ್ಯತಿರೇಕೇಣ ಯದೀಶೋಽನ್ಯೋ ನ ವಿದ್ಯತೇ ||
ತತಃ ಸ್ಯಾದಭಯಪ್ರಾಪ್ತಿರ್ದ್ವಿತೀಯಾದ್ಧ್ಯೈ ಭಯಶ್ರುತೇಃ ||

೫೬೧. ಸೃಷ್ಟಿಕರ್ತನೂ ಪ್ರವೇಶಕರ್ತನೂ ಒಬ್ಬನೇ ಆದ್ದರಿಂದ ಜ್ಞಾನಿಯು ಪರಬ್ರಹ್ಮಕ್ಕಿಂತ ಅಭಿನ್ನನೇ ಆಗಿರುತ್ತಾನೆ. ಜ್ಞಾನಿಗಿಂತ ಬೇರೆಯಾಗಿ ಈಶ್ವರನು ಇಲ್ಲವೆಂದಾದರೆ ಅಭಯಪ್ರಾಪ್ತಿಯೆಂಬುದು ಹೊಂದುತ್ತದೆ. ಏಕೆಂದರೆ ಶ್ರುತಿಯಲ್ಲಿ 'ಎರಡನೆಯದರಿಂದಲೇ ಭಯ'ವೆಂದು ತಿಳಿಸಲಾಗಿದೆ.

ದ್ವಿತೀಯಂ ಚೇದವಿದ್ಯೋತ್ಥಮೇಕಂ ವಸ್ತು ಸ್ವತೋ ಯದಿ |
ನ ಸ ವೇದೈಕಧೈವೇತಿ ವಿಭಾಗೋಕ್ತಿಸ್ತದಾ ಭವೇತ್ ||

೫೬೨. ಅವಿದ್ಯೆಯಿಂದ ಹೊರತೋರಿದ ಒಂದು ವಸ್ತುವು ತಾನು ಇದ್ದುಕೊಂಡು ಎರಡನೆಯದಾಗಿ ಜೊತೆಗೂಡಿದರೆ (ಎಂದರೆ ಅದರ ಹುಟ್ಟೇ ಅವಿದ್ಯೆಯಿಂದಾಗಿರುವಲ್ಲಿ ನಿಜವಾಗಿರುವ ವಸ್ತುವಿಗೆ ಅದರಿಂದ ಸದ್ವಿತೀಯತ್ವವೇ ಬರಲಾರದು– ಆದ್ದರಿಂದ) 'ನ ಸ ವೇದ' ಎಂದೂ 'ಏಕಧೈವಾನುದ್ರಷ್ಟವ್ಯಮ್' ಎಂದೂ ಎರಡು ಬಗೆಯಾಗಿ ಹೇಳಿರುವದು ಹೊಂದಾಣಿಕೆಯಾಗುವದು.

ಯದಿ ತೈಮಿರಿಕಾದನ್ಯೈರ್ದ್ವಿತೀಯೋ ನೇಕ್ಷ್ಯತೇ ಶಶೀ |
ಚಂದ್ರ ಏಕ ಇತಿ ಜ್ಞಾನಂ ತದಾ ಸ್ಯಾತ್ ಪಾರಮಾರ್ಥಿಕಮ್ ||
ತದ್ಗೃಹ್ಯತೇ ದ್ವಿತೀಯಂ ಚೇನ್ನ ಸುಷುಪ್ತೇಽಗ್ರಹಃ ಶ್ರುತೇಃ ||

೫೬೩–೫೬೪. ತೈಮಿರಿಕದೋಷವಿಲ್ಲದ ಕಣ್ಣುಳ್ಳವರಿಂದ ಎರಡನೆಯ ಚಂದ್ರನು ನೋಡಲ್ಪಡಲಿಲ್ಲವಾದರೆ ಆಗ ಚಂದ್ರನು ಒಬ್ಬನೇ ಎಂಬ ಸರಿಯಾದ ಜ್ಞಾನವಾಗುವದು. ಹಾಗೆಯೇ ಎರಡನೆಯ ವಸ್ತುವು ಗ್ರಹಿಸಲ್ಪಡಲಿಲ್ಲವಾದರೆ ಅದ್ವೈತಜ್ಞಾನವಾಗುವದು. ಏಕೆಂದರೆ ಶ್ರುತಿಯಲ್ಲಿ ಸುಷುಪ್ತಿಯಲ್ಲಿ ದ್ವೈತಗ್ರಹಣವಿಲ್ಲವೆಂದು (ಅನುಭವಾನುಸಾರವಾಗಿ ಹೇಳಿದೆ.)

ನ ಚೇಹಾನ್ಯಮನಸ್ತ್ವಾತ್ ಸ್ಯಾತ್ ಸರ್ವೇಷಾಮಗ್ರಹೋ ಯತಃ |
ಅಸ್ಯೇವೈತದ್ ದ್ವಿತೀಯಂ ಚೇತ್ ಗ್ರಹಣಾತ್ ಸ್ವಪ್ನಬೋಧಯೋಃ ||

೫೬೫. ಸುಷುಪ್ತಿಯಲ್ಲಿ ಅನ್ಯಮನಸ್ಕತೆಯು ನಿಮಿತ್ತ ದ್ವೈತಗ್ರಹಣವಾಗದೆ ಇರಬಹುದು. ಆದರೆ ಎಚ್ಚರಕನಸುಗಳಲ್ಲಿ ದ್ವೈತಗ್ರಹಣವಿದ್ದೇ ಇದೆಯಾಗಿ ದ್ವೈತವಿಲ್ಲವೆಂಬುದು ಹೇಗೆ ಸರಿ ?

ಅವಿದ್ಯೋತ್ಥಾನತೋ ನೈವಂ ತದಾ ತದ್ಭಾವಭಾವತಃ |
ದ್ವಯಾಬೋಧಃ ಸುಷುಪ್ತೇಽಪಿ ತ್ವಜ್ಞಾನಾದಿತಿ ಚೇನ್ನ ತತ್ ||
ಸ್ವಾಭಾವಿಕತ್ವಾತ್ತಸ್ಯಾಪಿ ನಿಮಿತ್ತಸ್ಯಾನಪೇಕ್ಷಣಾತ್ ||

೫೬೬. ಸುಷುಪ್ತಿಯಲ್ಲಿ ಅವಿದ್ಯೆಯು ಎದ್ದುಕೊಂಡದ್ದರಿಂದ ದ್ವೈತವು ಕಾಣಲಿಲ್ಲವೇ ಹೊರತು ದ್ವೈತವೇ ಇಲ್ಲದ್ದರಿಂದಲ್ಲ–ಹಾಗೂ ದ್ವೈತವು ಅಜ್ಞಾನದ

ಪ್ರಭಾವದಿಂದ ತಿಳಿಯದೆಹೋಯಿತು– ಎನ್ನಬೇಕಲ್ಲವೆ ? ಎಂದರೆ ಹಾಗಲ್ಲ. ಸುಷುಪ್ತಿಯಲ್ಲಿ ಏನನ್ನೂ ಅರಿಯದಿರುವದು ಸ್ವಾಭಾವಿಕವು– ಎಂದರೆ ಅರಿಯಲ್ಪಡತಕ್ಕ ದ್ವೈತವಿಲ್ಲದ್ದರಿಂದಲೇ–ಎಂದು ತಿಳಿಯಬೇಕು. ಹಾಗಲ್ಲದೆ ಅರಿಯದೆ ಇರಲು ಮತ್ತೇನೂ ನಿಮಿತ್ತವಿರುವದಿಲ್ಲ.

ಅನ್ಯಾಪೇಕ್ಷಂ ಹಿ ಯದ್ರೂಪಂ ನ ತತ್ತಸ್ಯ ಸ್ವತೋ ಭವೇತ್ |
ವಿಕ್ರಿಯಾವಿಕ್ರಿಯಾ ತ್ವಸ್ಯ ತತ್ತ್ವಮನ್ಯಾನಪೇಕ್ಷಣಾತ್ ||

೫೭೭. ಯಾವ ವಸ್ತುವಿನ ರೂಪವು ಅನ್ಯಾಪೇಕ್ಷವಾಗಿದೆಯೋ ಆ ರೂಪವು ಅದರ ಸ್ವಂತದ್ದಲ್ಲ. ಬೇರೊಂದರ ಅಪೇಕ್ಷೆಯಿಲ್ಲದ್ದೇ ತತ್ತ್ವವಾದೀತು. ದ್ವೈತಗ್ರಹಣವಾದರೋ ಗ್ರಹಣವೆಂಬ ವಿಕಾರಾಪೇಕ್ಷವಾಗಿರುವದರಿಂದಲೇ ಅದು ತತ್ತ್ವವೆನಿಸಲಾರದು. ಆತ್ಮನು ಅವಿಕ್ರಿಯನಾದ್ದರಿಂದಲೇ ಅನ್ಯಾನಪೇಕ್ಷನು.

ಸ್ವಪ್ನವನ್ನ ಸುಷುಪ್ತೋಽತಃ ಸ್ವತ ಏವಾದ್ವಯತ್ವತಃ
ದ್ರಷ್ಟುರ್ದೃಷ್ಟೇರ್ನ ಲೋಪಃ ಸ್ಯಾತ್ ಸತ್ಯಮೇವಂ ಶ್ರುತೇರ್ವಚಃ

೫೭೮. ಸ್ವಪ್ನದಲ್ಲಿ ಕಂಡದ್ದು (ರೂಪಾದಿಗಳು) ಮಿಥ್ಯೆಯಾದ್ದರಿಂದ ಸುಷುಪ್ತರೂಪವೂ ಮಿಥ್ಯೆಯಾಗಲಿ–ಎಂದರೆ ಹಾಗಿಲ್ಲ. ಸುಷುಪ್ತಿಯು ಅನ್ಯಾಪೇಕ್ಷವಲ್ಲದ ಅದ್ವಯಾತ್ಮಸ್ವರೂಪವಾಗಿದೆ. ಆದ್ದರಿಂದಲೇ ಶ್ರುತಿಯು ದೃಷ್ಟಿಯ ದ್ರಷ್ಟೃವಿಗೆ ಲೋಪವಿಲ್ಲ– ಎಂದು ಹೇಳಿರುತ್ತದೆ. ಹೀಗೆ ಶ್ರುತಿವಚನವು ಸತ್ಯವಾಗಿದೆ.

ಆತ್ಮನೋಽನ್ಯೋ ಭವೇದ್ಯೇಷಾಮೀಶ್ವರಃ ಕಾರಣಾತ್ ತಥಾ |
ಕಾರ್ಯಂ ಭಯಾನಿವೃತ್ತಿಃ ಸ್ಯಾದನ್ಯಹೇತುತ್ವಸಂಶ್ರಯಾತ್ ||

೫೭೯. ಯಾರ ಮತದಲ್ಲಿ ಈಶ್ವರನು ಆತ್ಮನಿಗಿಂತ ಬೇರೆಯಾಗಿರುವನೋ ಹಾಗೂ ಕಾರಣಕ್ಕಿಂತ ಭಿನ್ನನೋ ಅವರ ಮತದಲ್ಲಿ (ಈಶ್ವರನ ಜ್ಞಾನದಿಂದ) ಭಯವು ನಿವೃತ್ತಿಯಾಗಲಾರದು. ಏಕೆಂದರೆ ಭಯವೆಂಬ ಕಾರ್ಯವು ಬೇರೆಯ ಹೇತುವನ್ನು ಆಶ್ರಯಿಸಿರುತ್ತದೆಯಷ್ಟೆ.

ಅನ್ಯಸ್ಯ ಭಯಹೇತುತ್ವಮಧರ್ಮಾಪೇಕ್ಷಯೇತಿ ಚೇತ್ |
ನೈವಂ ತಸ್ಯಾಪಿ ತುಲ್ಯತ್ವಾತ್ ನಿವೃತ್ತೇಃ ಸ್ಯಾದಸಂಭವಃ ||

೫೮೦. ಈಶ್ವರನು ಅನ್ಯನಾಗಿದ್ದರೂ ಅಧರ್ಮಾದಿಗಳ ಅಪೇಕ್ಷೆಯಿಂದ ಅವನು ಭಯಕಾರಣನಾಗುತ್ತಾನೆ–ಎನ್ನಬಹುದಲ್ಲ ? ಎಂದರೆ ಹಾಗಲ್ಲ. ಆಗಲೂ ಅಧರ್ಮಾದಿಗಳಂತೆಯೇ ಈಶ್ವರನೂ ಭಯಕ್ಕೆ ಸಹಕಾರಿಯಾಗಿರುವನೆಂಬುದು ಇದ್ದೇ ಇದೆ. ಆದ್ದರಿಂದ ಭಯನಿವೃತ್ತಿಸಂಭವವಿಲ್ಲ.

ನಿರ್ನಿಮಿತ್ತಂ ಭಯಂ ಚೇತ್ ಸ್ಯಾನ್ನ ತಸ್ಯಾಸ್ತಿ ನಿವಾರಣಮ್ |
ಧ್ವಂಸೇನ ವಾ ನಿವೃತ್ತಿಃ ಸ್ಯಾದಾತ್ಮನೋ ನೇಷ್ಯತೇ ತಥಾ ||

೫೭೧. ಭಯವು ಯಾವ ನಿಮಿತ್ತವೂ ಇಲ್ಲದೆ ಉಂಟಾಗುತ್ತದೆ–ಎಂದಾದರೆ ಅದಕ್ಕೆ ಪರಿಹಾರವೇ ಇಲ್ಲವೆಂದಾಗುವದು. ಅಥವಾ ಭಯವು ಆತ್ಮನಿಗೆ ಸ್ವಭಾವವೇ ಎಂದಾದರೆ ಆತ್ಮನಾಶದಿಂದಲೇ ಭಯನಾಶವಾಗಬೇಕಾಗುವದು. ಆದರೆ ಹಾಗೆ ಹೇಳುವದು ಸರಿಯಾಗಲಾರದು.

ಏಕತ್ವಪಕ್ಷೇ ತ್ವೇತೇಷಾಂ ದೋಷೋ ನಾನ್ಯತಮೋ ಭವೇತ್ |
ಭಯಸ್ಯಾಜ್ಞಾನಹೇತುತ್ವಾತ್ ತನ್ನಿವೃತ್ತೌ ನಿವರ್ತತೇ ||

೫೭೨. ಈಶ್ವರನೂ ಆತ್ಮನೂ ಒಬ್ಬನೇ ಎಂಬ ಪಕ್ಷದಲ್ಲಿ ಈ ದೋಷಗಳಲ್ಲಿ ಯಾವದೊಂದೂ ಸಂಭವಿಸುವದಿಲ್ಲ. ಮತ್ತು ಭಯಕ್ಕೆ ಅಜ್ಞಾನವು ಕಾರಣವಾಗಿರುವದರಿಂದ ಅಜ್ಞಾನವು ಹೋಗಲಾಗಿ ಭಯವೂ ಹೋಗುತ್ತದೆ.

ಅನ್ಯಹೇತುಃ ಸ್ವತೋ ವಾ ಸ್ಯಾದ್ಭಯಂ ನೋಭಯಥಾಪಿ ಹಿ |
ಸ್ವಾತಂತ್ರ್ಯಾಭಾವಾದನ್ಯಸ್ಮಿನ್ ಸ್ವಾತ್ಮಹಾನಂ ಚ ನೇಷ್ಯತೇ ||

೫೭೩. ಭೇದಪಕ್ಷದಲ್ಲಿ ಭಯವು ಸ್ವತಃ ಆಗಿರಲಿ, ಬೇರೊಂದು ಹೇತುವಿನಿಂದಾಗಿರಲಿ– ಎರಡು ರೀತಿಯಿಂದಲೂ ನಿವೃತ್ತಿಯಾಗುವದಿಲ್ಲ. ಏಕೆಂದರೆ ಅನ್ಯನಿಮಿತ್ತದಿಂದಾದರೆ ಆತ್ಮನಿಗೆ ಸ್ವಾತಂತ್ರ್ಯವಿಲ್ಲವಾಗಿ ಭಯನಿವೃತ್ತಿಯಿಲ್ಲ. ಸ್ವತಃ ಆದರೆ ಭಯವು ತನ್ನನ್ನು ತಾನೇ ನಾಶಗೊಳಿಸಿಕೊಳ್ಳುವ ಸಂಭವವಿಲ್ಲದ್ದರಿಂದ ಭಯನಿವೃತ್ತಿಯಿಲ್ಲ.

ಅನಿವರ್ತ್ಯ ಸ್ವಮಾತ್ಮಾನಂ ನ ಭಯಸ್ಯ ನಿರಾಕ್ರಿಯಾ |
ನಿವೃತ್ತಾವಪಿ ನೈವ ಸ್ಯಾನ್ನಿವೃತ್ತ್ಯೈವ ಸಮಾಪ್ತಿತಃ ||

೫೭೪. ಇನ್ನು ಭಯವನ್ನು ನಿರಾಕರಣೆಮಾಡಲು ಮೊದಲು ತನ್ನನ್ನು ನಿರಾಕರಣೆಮಾಡದೆ ಸಾಧ್ಯವಿಲ್ಲ. ಏಕೆಂದರೆ ಅದು ಆತ್ಮನನ್ನೇ ಆಶ್ರಯಿಸಿದೆ. ಒಂದುವೇಳೆ ಆತ್ಮನಿರಾಕರಣೆಯಿಂದಲೇ ಭಯನಿರಾಕರಣೆಯೂ ಆಗಲಿ ಎನ್ನುವದಾದರೆ ಭಯವು ಹೋದರೂ ಅದರ ಫಲವು ಆತ್ಮನಿಲ್ಲದಾಗ ಯಾರಿಗಾಗಬೇಕು ? ಹೀಗಾಗಿ ಭಯನಾಶಕ್ಕೆ ಅವಕಾಶವೇ ಇಲ್ಲವಾದೀತು.

ಅವಿದ್ಯಾಮಾತ್ರಹೇತೌ ತು ಸರ್ವಮೇತತ್ ಸಮಂಜಸಮ್ |
ತಸ್ಯಾಮಸತ್ಯಾಂ ತನ್ನ ಸ್ಯಾತ್ ಸತ್ಯಾಮೇವ ಹಿ ಭೀರ್ಯತಃ ||

೫೭೫. ಭಯವು ಕೇವಲ ಅವಿದ್ಯಾಮಾತ್ರನಿಮಿತ್ತವಾಗಿದ್ದರೆ ಇದೆಲ್ಲವೂ ಹೊಂದುತ್ತದೆ. ಆ ಅವಿದ್ಯೆಯು ಇಲ್ಲವಾದಲ್ಲಿ ಭಯವೂ ಇಲ್ಲ. ಏಕೆಂದರೆ ಅವಿದ್ಯೆಯಿದ್ದರೆ ಮಾತ್ರವೇ ಭಯವುಂಟಾಗುತ್ತದೆಯಲ್ಲವೆ ?

ಯದಜ್ಞಾನಾದ್ ಭಯಂ ಯತ್ ಸ್ಯಾತ್ ತದ್ಜ್ಞಾನಾತ್ ತತ್ಕುತೋ ಭವೇತ್|
ರಜ್ಜುಸರ್ಪಾದಿವತ್ ತಸ್ಮಾದವಿದ್ಯೈವ ಭಯೋದ್ಭವಃ ||

೫೭೬. ಯಾವ ವಸ್ತುವನ್ನರಿಯದ್ದರಿಂದ ಭಯವಾಗಿದೆಯೋ ಆ ವಸ್ತುವು ತಿಳಿಯಲ್ಪಟ್ಟಾಗ ಭಯವು ಹೇಗಾಗಬೇಕು ? ಉದಾಹರಣೆಗೆ ರಜ್ಜುಜ್ಞಾನದಿಂದ ಸರ್ಪಭಯವು ದೂರವಾಗುವದಲ್ಲವೆ ? ಆದ್ದರಿಂದ ಅವಿದ್ಯೆಯಿಂದಲೇ ಭಯವು ಹುಟ್ಟುತ್ತದೆ.

ವಿದ್ಯಾವಿದ್ಯಾತ್ಮಕಂ ಬ್ರಹ್ಮ ಮತಂ ಚೇನ್ನ ವಿರೋಧತಃ |
ಪೃಥಕ್ ಚ ದೃಶ್ಯಮಾನತ್ವಾತ್ ಆತ್ಮನೋ ಘಟರೂಪವತ್ ||

೫೭೭. ಬ್ರಹ್ಮವು ಹೀಗೆ ವಿದ್ಯಾವಿದ್ಯಾತ್ಮಕವೆಂದೊಪ್ಪಿದರೆ ಆ ವಿದ್ಯಾವಿದ್ಯೆಗಳು ಬ್ರಹ್ಮದ ಸ್ವರೂಪವೋ, ಧರ್ಮವೋ ? ಎಂಬಿದನ್ನು ಹೇಳಬೇಕಾಗುವದು. ಆದರೆ ಎರಡೂ ಅಲ್ಲ. ವಿದ್ಯೆ, ಅವಿದ್ಯೆಗಳು ಬೇರೆಯಾಗಿ ದೃಶ್ಯವಾಗಿ ಕಂಡುಬರುವದರಿಂದ ಇವೆರಡೂ ಆತ್ಮನಿಗೆ ಸಂಬಂಧಿಸಿರುವದಿಲ್ಲ. ಘಟದ ರೂಪವು ದೃಶ್ಯವಾಗಿದ್ದು ಆತ್ಮನಿಗಿಂತ ಬೇರೆಯಾಗಿರುವಂತೆಯೇ ವಿದ್ಯಾವಿದ್ಯೆಗಳೂ ಬೇರೆಯಾಗಿವೆ.

ಪ್ರತ್ಯಕ್ಷೇಣ ಹಿ ದೃಶ್ಯೇತೇ ವಿದ್ಯಾವಿದ್ಯೇ ಮನೋಗತೇ |
ನ ತಯೋರಾತ್ಮಧರ್ಮತ್ವಂ ತಸ್ಮಾತ್ತೇ ನಾಮರೂಪಯೋಃ ||

೫೭೮. ವಿದ್ಯಾವಿದ್ಯೆಗಳು ಅಂತಃಕರಣಧರ್ಮಗಳಾಗಿ ಪ್ರತ್ಯಕ್ಷವಾಗಿ ಕಂಡುಬರುತ್ತಿವೆ. ಇವುಗಳಿಗೆ ಆತ್ಮಧರ್ಮತ್ವವಿರುವದಿಲ್ಲ. ಆದ್ದರಿಂದ ಇವು ನಾಮರೂಪಪಕ್ಷಕ್ಕೇ ಸೇರಿರುತ್ತವೆ.

ಅಂತರಾ ನಾಮರೂಪೇ ಯೇ ಬ್ರಹ್ಮಬಾಹ್ಯೇ ತಯೋರ್ಹಿ ತತ್ |
ನ ಸ್ತೋ ಬ್ರಹ್ಮಣಿ ತೇ ಭಾನಾವುದಯಾಸ್ತಮಯಾವಿವ ||

೫೭೯. ನಾಮರೂಪಗಳು ಬ್ರಹ್ಮಕ್ಕಿಂತ ವಿಲಕ್ಷಣವೂ ಬಾಹ್ಯವೂ ಆಗಿವೆ. ಅವುಗಳು ಬ್ರಹ್ಮಸ್ವರೂಪದಲ್ಲಿ ಸೇರಿರುವದಿಲ್ಲ. ಹೇಗೆ ಸೂರ್ಯನಲ್ಲಿ ಉದಯಾಸ್ತಮಯಗಳಿಲ್ಲವೋ ಹಾಗೆ ನಾಮರೂಪಗಳು ಬ್ರಹ್ಮದಲ್ಲಿರುವದಿಲ್ಲ.

ಕರ್ಮಕರ್ತೃಕತ್ವೈಕಸ್ಯ ದೋಷಃ ಸ್ಯಾದಿತಿ ಚೇನ್ನ ತತ್ |
ಸಂಕ್ರಾಂತೇರ್ಜ್ಞಾನಮಾತ್ರತ್ವಾತ್ ತದ್ಧಿ ಭೇದನಿರಾಸಿ ನಃ ||

೫೮೦. ಜೀವಬ್ರಹ್ಮರು ಒಂದೇ– ಎಂದಾದರೆ ಕರ್ಮ–ಕರ್ತೃಗಳು ಒಂದೇ ಆಗಿ ದೋಷವುಂಟಾಗುವದಿಲ್ಲವೆ ? ಎಂದರೆ ಹಾಗಲ್ಲ. ಸಂಕ್ರಮಣವೆಂಬುದು ಕೇವಲ ಜ್ಞಾನಮಾತ್ರವಾದ್ದರಿಂದ ಹಾಗೂ ಅದು ಭೇದವನ್ನು ಕಳೆಯತಕ್ಕದ್ದಾದ್ದರಿಂದ ದೋಷವಿಲ್ಲ.

ಸುಖದುಃಖಾದಿಸಂಬದ್ಧಮಾತ್ಮಾತ್ಮಾನಂ ನ ವೇತ್ತಿ ಚೇತ್ |
ಭವತೋ ಮುಮುಕ್ಷುತಾ ಕಸ್ಮಾತ್ ವಿಸ್ರಂಭಾದೇತದುಚ್ಯತಾಮ್ ||

೫೮೧. ವ್ಯವಹಾರದಲ್ಲಿ ಆತ್ಮನು ಸುಖದುಃಖಾದಿಗಳಿಂದ ಕೂಡಿರುವಂತೆ ಕಂಡುಬರುವದರಿಂದ ಅವನು ತನ್ನನ್ನು ತಾನು ಅರಿತುಕೊಂಡು ಮುಕ್ತನಾಗ ಬೇಕು. ಹಾಗೆ ಇಲ್ಲವೆಂದಾದರೆ ಮೋಕ್ಷಶಾಸ್ತ್ರವು ವ್ಯರ್ಥವಾದೀತು. ಇನ್ನು ನೀನು ಮುಮುಕ್ಷುವು ಹೇಗಾದೀಯೆ ? ಎಂಬಿದನ್ನಾದರೂ ವಿಶ್ವಾಸದಿಂದ ಹೇಳು.

ಜಾಗ್ರತ್‌ಸ್ವಪ್ನಸುಷುಪ್ತೇಷು ವಸ್ತ್ವೃತ್ತಾನುರೋಧತಃ
ಶ್ಯಾಮಃ ಸುಖೀ ನ ವೇದ್ಮೀತಿ ವೇತ್ತ್ಯಾತ್ಮಾನಂ ಪ್ರಸಿದ್ಧಿತಃ ||

೫೮೨. ಇನ್ನು ಅನುಭವದಿಂದಲೂ ಆತ್ಮನು ಸಂಸಾರಿಯೆಂದು ಗೊತ್ತಾಗು ತ್ತದೆ. ಹೇಗೆಂದರೆ : ಎಚ್ಚರದಲ್ಲಿ 'ನಾನು ಕಪ್ಪಗಿದ್ದೇನೆ-(ಇತ್ಯಾದಿ) ಅನುಭವ ವಾಗುತ್ತದೆ. ಕನಸಿನಲ್ಲಿ 'ನಾನು (ರಾಜನು) ಸುಖಿಯು' ಎಂದು ಕಾಣುತ್ತದೆ. ಸುಷುಪ್ತಿಯಲ್ಲಿ 'ನಾನು ಏನನ್ನೂ ಅರಿಯಲಿಲ್ಲ' ಎನಿಸುತ್ತದೆ. ಹೀಗೆ ಆಯಾ ಅವಸ್ಥಾನುಭವವೂ ಆತ್ಮನ ಸಂಸಾರಿತ್ವವನ್ನು ತೋರಿಸುತ್ತದೆ. ಆದ್ದರಿಂದ ಜ್ಞಾನದಿಂದ ಮುಕ್ತನಾಗಬೇಕೆಂಬುದು ಸಿದ್ಧಿಸುತ್ತದೆ.

ಕಾರ್ಯಕಾರಣಹಾನಾಚ್ಚ ನ ವಿಭಾಗಃ ಪರಾತ್ಮನಿ |
ಅಭಾವಾತ್ ಕರ್ಮಕರ್ತ್ರಾದೇರ್ಬೋಧ ಏವಾವಶಿಷ್ಯತೇ ||

೫೮೩. ಪರಮಾತ್ಮನಲ್ಲಿ ಕಾರ್ಯಕಾರಣವಿಭಾಗವು ನಿಜವಾಗಿಲ್ಲ. ಆದ್ದರಿಂದ ಕರ್ತೃಕರ್ಮವಿಭಾಗವೂ ಇಲ್ಲ. ಹೀಗೆ ಜ್ಞಾನಮಾತ್ರನಾಗಿಯೇ ಆತ್ಮನು ಉಳಿದು ಕೊಳ್ಳುತ್ತಾನೆ. (ಈ ಎಲ್ಲಾ ಕಾರಣಗಳಿಂದ ಆತ್ಮನೊಬ್ಬನೇ ಎಂದಾಗ ಕರ್ಮ ಕರ್ತೃಗಳು ಒಬ್ಬನೆಂಬ ದೋಷವು ಬರುವದಿಲ್ಲ. ವ್ಯವಹಾರದಲ್ಲಾದ ವಿಭಾಗ ದಿಂದ ಪರಮಾರ್ಥವಾದ ಏಕತ್ವಕ್ಕೆ ಹಾನಿಯೂ ಇಲ್ಲ.)

ಕಾರಕಾಣ್ಯುಪಮೃದ್ನಾತಿ ವಿದ್ಯಾ ಬುದ್ಧಿಮಿವೋಷರೇ |
ಕಾರಕತ್ವಮವಿದ್ಯೋತ್ಥಂ ಸ್ವತಶ್ಚಾಕಾರಕಾತ್ಮತಾ ||

೫೮೪. ವಿದ್ಯೆಯು (ಬ್ರಹ್ಮಜ್ಞಾನವು) ಕ್ರಿಯಾಕಾರಕಫಲಬುದ್ಧಿಯನ್ನು ಬಂಜರುನೆಲವು ಬೀಜವನ್ನು ನಾಶಗೊಳಿಸುವಂತೆ ನಾಶಗೊಳಿಸುತ್ತದೆ. ಮತ್ತು ಕಾರಕತ್ವಾದಿಗಳು ಅವಿದ್ಯೆಯಿಂದುಂಟಾದದ್ದೇ ಹೊರತು ಸ್ವತಃ ಆತ್ಮನು ಅಕಾರಕ ಸ್ವಭಾವನೇ ಆಗಿರುವನು.

ಯದ್ಧಿ ಯಸ್ಯ ಸ್ವತೋ ರೂಪಂ ನ ತತ್ ಪ್ರಾಪ್ತಾವಪೇಕ್ಷತೇ |
ಕ್ರಿಯಾಮನ್ಯನಿಮಿತ್ತತ್ವಾತ್ ಅಪೇಕ್ಷಾ ಕರ್ತೃಸದ್ಮನೇ ||

೫೮೫. ಯಾವದು ಯಾವ ವಸ್ತುವಿನ ಸ್ವರೂಪವೋ ಅದರ ಪ್ರಾಪ್ತಿಗಾಗಿ ಕ್ರಿಯಾಪೇಕ್ಷೆಯಿರುವದಿಲ್ಲ. ಏಕೆಂದರೆ ಸ್ವರೂಪವು ನಿತ್ಯಪ್ರಾಪ್ತವು. ಆದರೆ

ಕರ್ತೃವು ಆತ್ಮನಲ್ಲಿ ಎಂಬ ಅಕರ್ತ್ರಾತ್ಮಜ್ಞಾನವು ಉಂಟಾಗಲು ಕರ್ಮಶಾಸ್ತ್ರದ ಅಪೇಕ್ಷೆಯಿರುತ್ತದೆ.

ನೈವೇಹಾನ್ನಮಯಾತ್ಮಾನಂ ಜಲೂಕಾವತ್ ಪರೋಽಞ್ಜಸಾ |
ಉಪಸಂಕ್ರಾಮತೀತ್ಯಸ್ಮಾತ್ ಗೌಣೀ ಸಂಕ್ರಾಂತಿರಿಷ್ಯತೇ ||

೨೮೬- ಇಲ್ಲಿ ಗಿಡದಲ್ಲಿ ವಾಸವಾಗಿರುವ ಜಲೂಕಾ ಎಂಬ ಹುಳುವು ಒಂದು ಎಲೆಯಿಂದ ಮತ್ತೊಂದು ಎಲೆಗೆ ದಾಟುವಂತೆ ಪರಮಾತ್ಮನು ಅನ್ನಮಯಾದಿಗಳನ್ನು ದಾಟುತ್ತಾನೆ–ಎಂದಿಲ್ಲ. ಆದ್ದರಿಂದ ಸಂಕ್ರಮಣವು ಗೌಣಾರ್ಥದಲ್ಲಿ ಹೇಳಲ್ಪಟ್ಟಿದೆ.

ಬಹಿಃ ಪ್ರವೃತ್ತೇಃ ಸಂಕ್ರಾಂತಿಃ ಪ್ರತ್ಯಾವೃತ್ತ್ಯೇತಿ ಚೇನ್ಮತಮ್ |
ಮನೋಮಯಾದಿವನ್ನೈವಂ ವಿರುದ್ಧಾ ಸ್ವಾತ್ಮನಿ ಕ್ರಿಯಾ ||

೨೮೭. ಮನೋಮಯಾತ್ಮನು– ಹೇಗೆ (ಮನಸ್ಸು) ಹೊರಮುಖವಾಗಿ ಪ್ರವರ್ತಿಸಿ ಮತ್ತೆ ಒಳಕ್ಕೆ ಬಂದಿರುವಾಗ ತನ್ನನ್ನೇ ದಾಟಿಹೋಗುವನೋ ಹಾಗೆ ಆತ್ಮನೂ ಸಂಕ್ರಮಣಮಾಡುತ್ತಾನೆ– ಎನ್ನಬಹುದಲ್ಲವೆ ? ಎಂದರೆ ಹಾಗಲ್ಲ. ಆತ್ಮನಲ್ಲಿ ಕ್ರಿಯೆಯು ಸಂಭವಿಸುವದು ವಿರುದ್ಧವಾಗಿರುತ್ತದೆ.

ಸ್ಫುರಂತೀ ನ ಜಲೂಕಾಪಿ ಸ್ವಾತ್ಮಾನಂ ಸ್ವಾತ್ಮನಾಂಜಸಾ |
ಉಪಸಂಕ್ರಾಮತೀತ್ಯತ್ರ ನಿರ್ಭಾಗತ್ವಾತ್ತಥಾಪಿ ನ ||

೨೮೮. ಜಲೂಕಾ ಎಂಬ ಹುಳುವು ಕೂಡ ಹರಿಯುವಾಗ ತಾನೇ ತನ್ನನ್ನೇ ದಾಟುವದು ಎಲ್ಲಿಯೂ ಕಂಡಿಲ್ಲ. ಆದ್ದರಿಂದ ಉಪಸಂಕ್ರಾಮತಿ ಎಂಬಲ್ಲಿ ಇಲ್ಲಿ ವಿಭಾಗವಿಲ್ಲವಾದ್ದರಿಂದ (ಜಲೂಕೆಯಷ್ಟು ಚಲನವೂ) ಇರುವದಿಲ್ಲ.

ತಸ್ಮಾತ್ ಪ್ರಾಪ್ತಿರ್ನ ಸಂಕ್ರಾಂತಿಃ ನ ಚ ಕೋಶಾತ್ಮಕರ್ತೃತಾ |
ಪಂಚಕೋಶಾತಿರಿಕ್ತಾತ್ಮಕರ್ತೃಕಾ ಪರಿಶಿಷ್ಯತೇ ||

೨೮೯. ಆದ್ದರಿಂದ ಪ್ರಾಪ್ತಿ ಎಂದರೆ ಸಂಕ್ರಾಂತಿಯಲ್ಲ. ಹಾಗೂ ಕೋಶಾತ್ಮರುಗಳು ಸಂಕ್ರಾಂತಿಕರ್ತೃಗಳೂ ಅಲ್ಲ. ಪಂಚಕೋಶಾತಿರಿಕ್ತನಾದ ಆತ್ಮನಾಗಿರುವೆನೆಂದು ಅರಿಯುವದೇ ಸಂಕ್ರಾಂತಿಯೆಂದು ಸಿದ್ಧವಾಗುತ್ತದೆ.

ಕೋಶಾತಿರಿಕ್ತರೂಪಸ್ಯ ಸರ್ವಾಂತರತಮಾತ್ಮನಃ |
ಅಕ್ರಿಯಸ್ಯೈವ ಸಂಕ್ರಾಂತಿರ್ನಭೋವತ್ ಸ್ಯಾತ್ ಪರಾತ್ಮನಃ ||

೨೯೦. ಸರ್ವಾಂತರತಮನೂ ಪಂಚಕೋಶಾತೀತನೂ ಅವಿಕ್ರಿಯನೂ ಆದ ಆತ್ಮನಿಗೆ ಸಂಕ್ರಾಂತಿಯೆಂದರೆ 'ಅವಕಾಶವನ್ನು ಕೊಟ್ಟಿರುವದೇ ಆಕಾಶವು' ಎಂದಂತೆ ಆಗಬಹುದಾಗಿದೆ.

ಗುಹಾಶ್ರಯಾಭಿಸಂಬಂಧೋ ಯೋಽವಿದ್ಯಾವಿಭ್ರಮಾತ್ ಭವೇತ್ |
ಆತ್ಮಜ್ಞಾನಾದ್ ಭ್ರಮಧ್ವಸ್ತಿಃ ಸಂಕ್ರಾಂತಿರಿತಿ ಗೀರಿಯಮ್ ||

೫೯೧. ಅವಿದ್ಯೆಯ ನಿಮಿತ್ತದಿಂದ ಆತ್ಮನಿಗೆ ಬುದ್ಧಿಸಂಬಂಧವು ಉಂಟಾಗಿರುವಲ್ಲಿ ಆತ್ಮಜ್ಞಾನವಾದಮೇಲೆ ಆ ಭ್ರಾಂತಿಯು ನಾಶವಾಗಲು ಸಂಕ್ರಾಂತಿಯಾಯಿತು– ಎಂದು ಹೇಳುತ್ತಾರೆ.

ತಸ್ಮಾತ್ ಸತ್ಯಮನನ್ತಂ ಯತ್ ಸರ್ವದಾವಿಕಲೇಕ್ಷಣಮ್ ।
ತದಸ್ಮೀತಿ ಪ್ರಬೋಧಾರ್ಥಂ ಬಹು ಸ್ಯಾಮಿತಿ ಕಲ್ಪ್ಯತೇ ॥

೫೯೨. ಆದ್ದರಿಂದ ಯಾವದು ಸತ್ಯಜ್ಞಾನಾನಂತವೂ ಯಾವಾಗಲೂ ಲೋಪವಿಲ್ಲದ ದೃಷ್ಟಿಯುಳ್ಳದ್ದೂ ಆಗಿರುವ ಬ್ರಹ್ಮವಿದೆಯೋ ಅದೇ ನಾನಾಗಿರುವೆನು–ಎಂದು ಬೋಧಿಸುವದಕ್ಕಾಗಿ 'ಬಹು ಸ್ಯಾಮ್' ಎಂದು ಕಲ್ಪಿಸಲಾಗಿದೆ.

ಪಂಚಕೋಶಾತಿವರ್ತ್ಯಾತ್ಮಾ ಜ್ಞಾನಭಾನೂದಯಾತ್ ಕ್ರಮಾತ್ ।
ಜಗ್ಧ್ವಾ ಪಂಚಾಪಿ ಕೋಶಾಂಸ್ತಾನ್ ನಿರ್ವಾತ್ಯಾತ್ಮನಿ ದೀಪವತ್ ॥

೫೯೩. ಪಂಚಕೋಶಗಳನ್ನು ಮೀರಿರುವ ಆತ್ಮನು ಜ್ಞಾನವೆಂಬ ಸೂರ್ಯನು ಹುಟ್ಟಿದ್ದರಿಂದ ಕ್ರಮವಾಗಿ ಐದು ಕೋಶಗಳನ್ನೂ ನುಂಗಿ ದೀಪವು ಅವ್ಯಕ್ತವಾಗುವಂತೆ ತಾನೂ ಬ್ರಹ್ಮದಲ್ಲಿ ಲೀನನಾಗಿಬಿಡುವನು.

ತದೇತಸ್ಮಿನ್ ಯಥೋಕ್ತೇಽರ್ಥೇ ಶ್ಲೋಕೋ ಮಂತ್ರೋಽಪಿ ವಿದ್ಯತೇ ।
ಅಶೇಷಾನಂದವಲ್ಲ್ಯರ್ಥಸಾರಸ್ಯಾಸ್ಯ ಪ್ರಕಾಶಕಃ ॥

೫೯೪. ಇದೇ ಅರ್ಥವನ್ನು ತಿಳಿಸುವದಕ್ಕಾಗಿ ಮುಂದೆ ಮಂತ್ರರೂಪವಾದ ಶ್ಲೋಕವೂ ಇರುತ್ತದೆ. ಅದು ಇಡಿಯ ಆನಂದವಲ್ಲಿಯ ಅರ್ಥದ ಸಾರವನ್ನು ಪ್ರಕಾಶಗೊಳಿಸತಕ್ಕದ್ದಾಗಿದೆ.

ಯತೋ ವಾಚೋ ನಿವರ್ತಂತೇ ತದ್ಬ್ರಹ್ಮೇತಿ ಪ್ರತೀಯತಾಮ್ ।
ಶಬ್ದಪ್ರವೃತ್ತಿಹೇತೂನಾಂ ಪ್ರತ್ಯಗಾತ್ಮನ್ಯಸಂಭವಾತ್ ।
ಶಬ್ದಾರ್ಥಾಸಂಭವಂ ಪ್ರಾಹ ಹ್ಯಪ್ರಾಪ್ಯೇತ್ಯಾದರಾತ್ ಶ್ರುತಿಃ ॥

೫೯೫–೫೯೬. ಯಾವದನ್ನು ತಿಳಿಸಲು ಹೊರಟ ಮಾತು (ತಿಳಿಸಲಾರದೆ) ಹಿಂದಿರುಗುವದೋ ಅದು ಬ್ರಹ್ಮವೆಂದು ತಿಳಿಯಿರಿ. ಪ್ರತ್ಯಗಾತ್ಮನಲ್ಲಿ ಶಬ್ದಪ್ರವೃತ್ತಿಕಾರಣಗಳು ಸಂಭವಿಸುವದಿಲ್ಲವಾದ್ದರಿಂದ ಶ್ರುತಿಯು 'ಅಪ್ರಾಪ್ಯ' ಎಂದು ಶಬ್ದಾರ್ಥಾಸಂಭವವನ್ನು ಹೇಳುತ್ತದೆ.

ತಸ್ಮಾಲ್ಲಕ್ಷಣವಾಚೀನಿ ಸತ್ಯಾದೀನಿ ಪುರಾಬ್ರವಮ್ ।
ವಿಶೇಷಣವಿಶೇಷ್ಯಾಣಾಂ ನಿಷೇಧಾತ್ ಕೋಶಶಾಯಿನಾಮ್ ॥

೫೯೭. ಆದ್ದರಿಂದ ಬ್ರಹ್ಮದಲ್ಲಿ ಕೋಶಾತ್ಮರುಗಳಿಗೆ ಸಂಬಂಧಿಸಿದ ವಿಶೇಷಣವಿಶೇಷ್ಯತ್ವಗಳನ್ನು ನಿಷೇಧಿಸಿರುವದರಿಂದ ಸತ್ಯಾದಿಶಬ್ದಗಳು ಲಕ್ಷಣವಾಚಕಗಳೆಂದು ನಾನು ಹಿಂದೆ ಹೇಳಿರುತ್ತೇನೆ.

ನಿರ್ಗುಣಂ ನಿರಹಂಕಾರಂ ಬ್ರಹ್ಮೈವಾತ್ಮೇತ್ಯುಪಾಸ್ಮಹೇ |
ದ್ರವ್ಯಾದಿವಿಷಯೇ ಯಾನಿ ಪ್ರಯುಕ್ತಾನಿ ಪ್ರಯೋಕ್ತೃಭಿಃ |
ಸ್ವಾರ್ಥಹೇತೋರ್ನಿವೃತ್ತ್ಯೈವ ನಿವರ್ತಂತೇ ವಚಾಂಸ್ಯತಃ ||

೫೯೮. ನಿರ್ಗುಣವೂ ನಿರಹಂಕಾರವೂ ಆದ ಬ್ರಹ್ಮವೇ ಆತ್ಮನೆಂದು ಧ್ಯಾನಿಸುತ್ತೇವೆ. ಇನ್ನು ದ್ರವ್ಯಾದಿವಸ್ತುಗಳ ವಿಷಯದಲ್ಲಿ ಆಯಾ ವಸ್ತುವಾಚಕವಾಗಿ ಯಾವ ಶಬ್ದಗಳನ್ನು ಪ್ರಯೋಕ್ತೃಗಳು ಬಳಸುವರೋ ಆ ಶಬ್ದಗಳು ತಮ್ಮ ಕೆಲಸವಿಲ್ಲದಾಗಲು (ಬ್ರಹ್ಮದಿಂದ) ಹಿಂದಿರುಗುವವು.

ನ ಮಾತೃಯಾಯಿನೋ ಯಸ್ಮಾತ್ ಪ್ರತ್ಯಯಾ ಬುದ್ಧಿಕರ್ತೃಕಾಃ |
ತನ್ನಿವೃತ್ತೌ ನಿವರ್ತಂತೇ ತಸ್ಮಾತ್ ತೇ ಮನಸಾ ಸಹ ||

೫೯೯. ಬುದ್ಧಿಯ ವಿಪರಿಣಾಮಗಳಾದ ಪ್ರತ್ಯಯಗಳು ಬುದ್ಧಿಸಾಕ್ಷಿಯಾಗಿರುವ ಪ್ರಮಾತೃವನ್ನು ಮುಟ್ಟಲು ಸಮರ್ಥವಲ್ಲವುಗಳಾದ್ದರಿಂದ ಅವು ಸಾಕ್ಷಿಯ ದೆಸೆಯಿಂದ ಹಿಂದಿರುಗಲಾಗಿ ಅವುಗಳಿಂದ ಹುಟ್ಟಿದ ಶಬ್ದಗಳೂ ಕೂಡ ಬ್ರಹ್ಮವನ್ನು ಮುಟ್ಟಲಾರದೆ ಹಿಮ್ಮೆಟ್ಟುವವು.

ಯತೋ ವಾಚೋಽಭಿಧಾನಾನಿ ಪ್ರಯುಕ್ತಾನ್ಯುಪಲಬ್ಧಯೇ |
ಸರ್ವಾಣ್ಯನಭಿಧಾಯ್ಯೈವ ನಿವರ್ತಂತೇಽವಬೋಧ್ಯ ಚ ||

೬೦೦. ವಾಕ್ಕುಗಳು ಅಭಿಧಾನವೆನಿಸಿದ್ದು ಅಭಿಧೇಯಗಳನ್ನು ಕುರಿತು ಬಳಸಲ್ಪಡುವವಷ್ಟೆ. ಬ್ರಹ್ಮದ ವಿಷಯದಲ್ಲಿ ಮಾತ್ರ ಅವು ಬಳಸಲ್ಪಟ್ಟಮೇಲೂ ಏನನ್ನೂ ತಿಳಿಸಲಾರದೆ ಹೋಗುವವಾದರೂ 'ಮಾತುಗಳಿಗೆ ಬ್ರಹ್ಮವು ಅಭಿಧೇಯವಲ್ಲ'ವೆಂದೇ ತಿಳಿಸಿ ನಿವೃತ್ತವಾಗುವವು.

ಉದಯಾದಿ ಚ ಯಚ್ಛಬ್ದೈಃ ಜ್ಞಾನಮಾಕಾರವದ್ಧಿಯಃ |
ಸ್ವತೋ ಬುದ್ಧಂ ತದಪ್ರಾಪ್ಯ ನಾಮ್ನಾ ಸಹ ನಿವರ್ತತೇ ||

೬೦೧. ಬುದ್ಧಿಯ ಆಕಾರ (ಪ್ರತ್ಯಯ)ರೂಪವಾದ ಯಾವ ಜ್ಞಾನವು ಶಬ್ದಗಳಿಂದ ಉದಯಿಸುವದೋ ಅದು ಸ್ವಯಂಬುದ್ಧವಾದ ಆ ಬ್ರಹ್ಮವನ್ನು ಮುಟ್ಟದೆ ಶಬ್ದ(ನಾಮ)ದೊಡನೆ ಹಿಂತಿರುಗುತ್ತದೆ.

ಮಾಹಾತ್ಮ್ಯಮೇತಚ್ಛಬ್ದಸ್ಯ ಯದವಿದ್ಯಾಂ ನಿರಸ್ಯತಿ |
ಸುಷುಪ್ತ ಇವ ನಿದ್ರಾಯಾ ದುರ್ಬಲತ್ವಾಚ್ಚ ಬಾಧ್ಯತೇ ||

೬೦೨. ಅವಿದ್ಯೆಯನ್ನು ಕಳೆಯುವದೆಂಬುದೇ ಈ ಶಬ್ದದ ಮಾಹಾತ್ಮ್ಯವು. ಹೇಗೆ ನಿದ್ರೆಮಾಡುತ್ತಿರುವವನನ್ನು ಎಬ್ಬಿಸುವಾಗ ಎಚ್ಚರದಲ್ಲಿ ಪ್ರಯೋಗಿಸಿದ

ಶಬ್ದವು ನಿದ್ರೆಯನ್ನು ಪ್ರವೇಶಿಸದೆ ಇದ್ದರೂ ಎಚ್ಚರಗೊಳಿಸುವದೋ ಹಾಗೆ ಎಂದು ತಿಳಿಯಬೇಕು. ಮತ್ತು ಅವಿದ್ಯೆಯು ದುರ್ಬಲವಾದ್ದರಿಂದ ಶಬ್ದ ಬಾಧಿತವೂ ಆಗಿದೆ.

ದುರ್ಬಲತ್ವಾದವಿದ್ಯಾಯಾ ಆತ್ಮತ್ವಾತ್ ಬೋಧರೂಪಿಣಃ ।
ಶಬ್ದಶಕ್ತೇರಚಿಂತ್ಯತ್ವಾತ್ ವಿದ್ಮಸ್ತಂ ಮೋಹಹಾನತಃ ॥

೭೦೩. ಅವಿದ್ಯೆಯು ದುರ್ಬಲವಾದ್ದರಿಂದಲೂ ವಿದ್ಯೆಯು ಆತ್ಮನಾಗಿದ್ದು ಬೋಧರೂಪವಾಗಿರುವದರಿಂದಲೂ ಶಬ್ದಶಕ್ತಿಯು ಅಚಿಂತ್ಯವಾದದ್ದರಿಂದಲೂ ಮೋಹವು ನಾಶವಾಗಲಾಗಿ ಆ ಬ್ರಹ್ಮವನ್ನು ಅರಿಯುವೆವು.

ಅಗೃಹೀತ್ವೈವ ಸಂಬಂಧಮಭಿಧಾನಾಭಿಧೇಯಯೋಃ ।
ಹಿತ್ವಾ ನಿದ್ರಾಂ ಪ್ರಬುಧ್ಯಂತೇ ಸುಷುಪ್ತೇ ಬೋಧಿತಾಃ ಪರೈಃ ॥

೭೦೪. ಅಭಿಧಾನಾಭಿಧೇಯಗಳ ಸಂಬಂಧವನ್ನು ಗ್ರಹಿಸದೆ ಇದ್ದಾಗಲೂ ಬೇರೊಬ್ಬ ಎಚ್ಚರಿಸಿದಾಗ ಸುಷುಪ್ತಿಯಲ್ಲಿದ್ದವರು ನಿದ್ರೆಯನ್ನು ಬಿಟ್ಟು ಏಳುವರು.

ಜಾಗ್ರದ್ವನ್ನ ಯತಃ ಶಬ್ದಂ ಸುಷುಪ್ತೇ ವೇತ್ತಿ ಕಶ್ಚನ ।
ಧ್ವಸ್ತೇಽತೋ ವಚಸಾಽಜ್ಞಾನೇ ಬ್ರಹ್ಮಾಸ್ಮೀತಿ ಭವೇನ್ಮತಿಃ ॥

೭೦೫. ಸುಷುಪ್ತಿಯಲ್ಲಿ ಯಾವನೂ ಎಚ್ಚರದಂತೆ ಶಬ್ದವನ್ನು ಅರಿಯುವದಿಲ್ಲ. (ಆದರೆ ಎಚ್ಚರದಲ್ಲಾದ ಶಬ್ದವನ್ನು ನೆಪಮಾಡಿಕೊಂಡು ಏಳುವದು ನಿಜ. ಇದೇ ಶಬ್ದಶಕ್ತಿಯು.) ಹಾಗೆಯೇ ಶ್ರುತಿವಾಕ್ಯದಿಂದ ಅಜ್ಞಾನವು ನಷ್ಟವಾಗಲಾಗಿ 'ನಾನು ಬ್ರಹ್ಮವಾಗಿರುವೆನು' ಎಂದು ಅನುಭವವಾಗುತ್ತದೆ.

ನ ಭೇದಃ ಕ್ರಿಯಯೋರತ್ರ ಕ್ರಿಯಾ ತತ್ಫಲಭೇದತಃ ।
ಕಿಂ ಪೂರ್ವಮಿತಿ ಚೋದ್ಯಸ್ಯ ನಾತ್ರಾತಃ ಸಂಭವೋ ಭವೇತ್ ॥

೭೦೬. ಕ್ರಿಯೆ ಮತ್ತು ಅದರ ಫಲಗಳು ಬೇರೆಯಾದ್ದರಿಂದ ಇಲ್ಲಿಯೂ ಅಜ್ಞಾನನಾಶ ಎಂಬುದಕ್ಕೂ ಜ್ಞಾನಪ್ರಾಪ್ತಿ ಎಂಬಿದಕ್ಕೂ ಭೇದವಿರಬೇಕೆನ್ನುವದಾದರೆ ಹಾಗೆ ಇರುವದಿಲ್ಲ. ಅದ್ದರಿಂದ ಇವುಗಳಲ್ಲಿ ಯಾವದು ಮೊದಲು- ಎಂಬ ಚೋದ್ಯಕ್ಕೂ ಅವಕಾಶವಿಲ್ಲ.

ಅವಿದ್ಯಾಘಾತಿನಃ ಶಬ್ದಾದಹಂ ಬ್ರಹ್ಮೇತಿ ಧೀರ್ಭವೇತ್ ।
ನಶ್ಯತ್ಯವಿದ್ಯಯಾ ಸಾರ್ಧಂ ಹತ್ವಾ ರೋಗಮಿವೌಷಧಮ್ ॥

೭೦೭. ಅವಿದ್ಯೆಯನ್ನು ಕಳೆಯುವ ಶಬ್ದದಿಂದ ನಾನು ಬ್ರಹ್ಮವು- ಎಂಬ ಜ್ಞಾನವಾಗುವದು. ಅದು- ಹೇಗೆ ರೋಗವನ್ನು ಕಳೆದು ಅನಂತರ ಔಷಧವು ತಾನೂ ನಾಶವಾಗುವದೋ ಹಾಗೆ- ಅವಿದ್ಯೆಯೊಡನೆ ನಾಶವಾಗುವದು.

ಅವಶಿಷ್ಟಂ ಸ್ವತೋ ಬುದ್ಧಂ ಶುದ್ಧಂ ಮುಕ್ತಂ ತತೋ ಭವೇತ್ |
ನಾತಃ ಸ್ಯಾದ್ ಭಾವನಾಪೇಕ್ಷಾ ನಾಪಿ ಮಾನಾಂತರಂ ಪ್ರತಿ ||

೬೦೮. ಇನ್ನು ಉಳಿದ ವಸ್ತುವೇ ನಿತ್ಯಶುದ್ಧಬುದ್ಧಮುಕ್ತವಾದದ್ದಾಗಿ ಗೋಚರವಾಗುವದು. ಆದ್ದರಿಂದ ಬೇರೆಯ ಪ್ರಮಾಣಗಳ ಅಪೇಕ್ಷೆಯಾಗಲಿ, ಜ್ಞಾನಾಭ್ಯಾಸದ ಅಪೇಕ್ಷೆಯಾಗಲಿ ಇರುವದಿಲ್ಲ.

ಅಲೌಕಿಕತ್ವಾತ್ ಬೋಧಸ್ಯ ಸ್ವತಶ್ಚಾವಗಮಾತ್ಮನಃ |
ಬೋಧ್ಯೇ ಹಿ ಲೌಕಿಕೇಽಪೇಕ್ಷಾ ಪರತೋಽಪಗತಾ ತಥಾ ||

೬೦೯. ಆತ್ಮನು ಸ್ವತಃ ಅವಗತಿಸ್ವರೂಪನಾದ್ದರಿಂದಲೂ ಬೋಧವು ಅಲೌಕಿಕವಾದ್ದರಿಂದಲೂ (ಪ್ರಮಾಣಾಂತರಾಪೇಕ್ಷೆಯಿರುವದಿಲ್ಲ). ಬೇರೊಂದು ಪ್ರಮಾಣದಿಂದ ತಿಳಿಯಬೇಕಾಗಿರುವ ಲೌಕಿಕವಾದ ವಸ್ತುವಿನ ವಿಷಯದಲ್ಲಿ ಆದರೆ ಪ್ರಮಾಣಾಪೇಕ್ಷೆಯಿರುತ್ತದೆ.

ನದ್ಯಾಸ್ತೀರೇ ಫಲಾನೀವ ಪ್ರತ್ಯಕ್ಷಾದ್ಯನಪೇಕ್ಷತಃ |
ಕಿಮುವೇಹಾನ್ಯಮಾನೇಷು ತವಾಪೇಕ್ಷಾಭಿಧಾಶ್ರುತೇಃ ||

೬೧೦. ನದಿಯತೀರದ (ಮರದಲ್ಲಿ) ಹಣ್ಣುಗಳಿವೆ-ಎಂಬ ವಾಕ್ಯಕ್ಕೆ ಹೇಗೆ ಪ್ರತ್ಯಕ್ಷಪ್ರಮಾಣಾಪೇಕ್ಷೆಯುಂಟೋ (ಆಪ್ತನಾದವನು ಹೇಳಿದಮೇಲೂ ಅಲ್ಲಿ ಹೋಗಿನೋಡಬೇಕಾದದ್ದಿದೆಯೋ ಹಾಗೆ) ಇಲ್ಲಿ 'ತತ್ತ್ವಮಸಿ' ಎಂಬ ಅಭಿಧಾ ಶ್ರುತಿಯು ಹೇಳಿದಮೇಲೆ ನಿನಗೆ ಬೇರೆ ಪ್ರಮಾಣಗಳ ಅಪೇಕ್ಷೆಯೇನಿದ್ದೀತು ?

ಪ್ರಮಾತಾ ಚ ಪ್ರಮಾಣಂ ಚ ಪ್ರಮೇಯೋ ನಿಶ್ಚಿತಿಸ್ತಥಾ |
ಯತ್ಸಾನ್ನಿಧ್ಯಾತ್ ಪ್ರಸಿಧ್ಯಂತಿ ತತ್ಸಿದ್ಧೌ ಕಿಮಪೇಕ್ಷತೇ ||

೬೧೧. ಪ್ರಮಾತೃ, ಪ್ರಮಾಣ, ಪ್ರಮೇಯ, ನಿಶ್ಚಯ- ಈ ಎಲ್ಲವೂ ಯಾವ ಬ್ರಹ್ಮದ ಸಾನ್ನಿಧ್ಯದಿಂದ ಸಿದ್ಧವಾಗುತ್ತಿವೆಯೋ ಆ ಬ್ರಹ್ಮವು ತಾನು ಸಿದ್ಧವಾಗಲು ಏನನ್ನುತಾನೆ ಬಯಸೀತು ?

ಜಾಗ್ರತ್ಸ್ವಪ್ನಸುಷುಪ್ತೇಷು ಘಟೋಽಯಮಿತಿ ಸಂವಿದಃ |
ವ್ಯವಧಾನಂ ನ ಚೇಹಾಸ್ತಿ ತದ್ಭಾವಾಭಾವಸಾಕ್ಷಿತಃ ||

೬೧೨. ಇದು ಗಡಿಗೆ- ಎಂಬ ಜ್ಞಾನಕ್ಕೆ ಹೇಗೆ ದೇಶಕಾಲಕಾರ್ಯ ಕಾರಣಗಳ ವ್ಯವಧಾನವಿದೆಯೋ ಹಾಗೆ ಎಚ್ಚರಕನಸುನಿದ್ರೆಗಳಲ್ಲಿ ಆಯಾ ಅವಸ್ಥೆಗಳ ಇರುವಿಕೆ, ಇಲ್ಲದಿರುವಿಕೆಗಳಿಗೆ ಸಾಕ್ಷಿಯಾದ ಆತ್ಮನಿಗೆ ವ್ಯವಧಾನವಿರುವದಿಲ್ಲ.

ಇದಮೇವಮಿದಂ ನೈವಮಿತಿ ಬುದ್ಧಿರ್ವಿಭಾಗಭಾಕ್ |
ಅನಾತ್ಮಕಾತ್ಮವತ್ಯತ್ರ ಯೇನಾಸೌ ಕಿಮಪೇಕ್ಷತೇ ||

೬೧೩. ಇದು ಹೀಗೆ, ಅಥವಾ ಹೀಗಲ್ಲ–ಎಂಬ ಬುದ್ಧಿಯು ವಿಭಾಗವುಳ್ಳದ್ದಾಗಿರುತ್ತದೆ. ಅದು ಅನಾತ್ಮವಿಷಯದ್ದಾಗಿದೆ. ಆದರೆ ಇಲ್ಲಿ ಆತ್ಮವಿಷಯಕ ಬುದ್ಧಿಯು ಒಂದೇ ಆಗಿದ್ದು ಏತರಿಂದ ಏನನ್ನು ತಾನೆ ಬೇರೆಯಾಗಿ ಬಯಸೀತು ?

ಕರ್ತ್ರಾದಿವ್ಯಾಪೃತೇಃ ಪೂರ್ವಂ ಅಸಂಕೀರ್ಣ ಉಪಾಧಿಭಿಃ |
ಅವಿಕ್ಷಿಪ್ತೋ ಹ್ಯಸಂಸುಪ್ತೋಽನುಭವಃ ಕಿಮುಪೇಕ್ಷತೇ ||

೬೧೪. ಕರ್ತ್ರಾದಿಕಾರಕವ್ಯಾಪಾರಗಳಿಗಿಂತ ಮೊದಲೇ ಯಾವ ಉಪಾಧಿಯೊಡನೆಯೂ ಬೆರೆಯದ, ಹಾಗೂ ವಿಕ್ಷೇಪವಿಲ್ಲದ ನಿದ್ರಾದಿಗಳಿಲ್ಲದ ಸ್ವರೂಪಾನುಭವವು ತನ್ನ ಸಿದ್ಧಿಗೆ ಏನನ್ನು ತಾನೆ ಬಯಸೀತು ?

ಅಭಿಧೇಯಂ ನ ಯದ್ವಸ್ತು ಪ್ರತ್ಯಯಶ್ಚ ನ ಢೌಕತೇ |
ನಿಯುಕ್ತೋಽಪಿ ನಿಯೋಗೇನ ಕಥಂ ತದ್ದ್ರಷ್ಟುಮರ್ಹಸಿ ||

೬೧೫. ಯಾವ ವಸ್ತುವು ಅಭಿಧೇಯವಲ್ಲವೋ ಬುದ್ಧಿಪ್ರತ್ಯಯವು ಎಲ್ಲಿ ಪ್ರವರ್ತಿಸುವದಿಲ್ಲವೋ ಅಲ್ಲಿ ನಿಯೋಗದಿಂದ ನಿಯುಕ್ತನಾದವನೇ ಹೇಗೆ ತಾನೆ ಕಂಡುಕೊಳ್ಳಲು ಸಮರ್ಥನಾದಾನು ?

ಅಪಿ ಮಾನಾಂತರಂ ಪ್ರಾಪ್ತಂ ವಸ್ತುವೃತ್ತಂ ನಿವರ್ತಯೇತ್ |
ನಿಯೋಗಾರ್ಥಾನುರೋಧೇನ ಯದಿ ವಸ್ತ್ವವಬೋಧ್ಯತೇ ||

೬೧೬. ನಿಯೋಗಾರ್ಥಕ್ಕೆ ಅನುಗುಣವಾಗಿ ವಸ್ತುವು ತಿಳಿಸಲ್ಪಡುವದಾದರೆ ಆಗ ಪ್ರಮಾಣಾಂತರದಿಂದ ತಿಳಿದುಬಂದ ವಸ್ತುಜ್ಞಾನವನ್ನು ನಿವರ್ತನಮಾಡೀತು (ಆದರೆ ಇಲ್ಲಿ ಹಾಗಿಲ್ಲ. ಬ್ರಹ್ಮವು ಪ್ರಮಾಣಸಿದ್ಧವೇ ಅಲ್ಲ.)

ಭಾವ್ಯತೇಽಸನ್ನಪೀಹಾರ್ಥಃ ಪ್ರಸಿದ್ಧೋಲೋಕವಹ್ನಿವತ್ |
ಬ್ರಹ್ಮಣಸ್ತ್ವಪ್ರಸಿದ್ಧತ್ವಾತ್ ತಥಾಪ್ಯತ್ರ ಸುದುರ್ಲಭಮ್ ||

೬೧೭. (ದ್ಯುಲೋಕಾದಿಗಳಲ್ಲಿ) ಅಗ್ನಿಭಾವನೆಯನ್ನು ಶಾಸ್ತ್ರವು ಹೇಳುವಂತೆ–ಎಂದರೆ ಅಗ್ನಿಯಲ್ಲದ್ದರಲ್ಲಿಯೂ ಲೋಕಪ್ರಸಿದ್ಧವಾದ ಅಗ್ನಿಯಂತೆ ಭಾವನೆಯನ್ನು ಹೇಳಿದ್ದರೆ ಆಗ ನಿಯೋಗಾಧೀನವಾಗಿ ಜ್ಞಾನವು ಇರಬಹುದು. ಆದರೆ ಇಲ್ಲಿ ಅಗ್ನ್ಯಾದಿಗಳಂತೆ ಬ್ರಹ್ಮವು ಪ್ರಸಿದ್ಧವಸ್ತುವಲ್ಲದ್ದರಿಂದ ಅದು ಕೂಡ ದುರ್ಲಭವೇ ಸರಿ.

ಕ್ರಿಯತೇ ಲೌಕಿಕೋಽಪ್ಯರ್ಥಃ ಪದಾರ್ಥಾನ್ವಯರೂಪತಃ |
ಅವಾಕ್ಯಾರ್ಥಾತ್ಮಕಂ ಬ್ರಹ್ಮ ತಥಾಪ್ಯತ್ರ ಸುದುಷ್ಕರಮ್ ||

೬೧೮. ಇನ್ನು ಬ್ರಹ್ಮಶಬ್ದಕ್ಕೆ ಪದಾರ್ಥಾನ್ವಯಕ್ರಮದಿಂದ ಲೌಕಿಕಾರ್ಥವನ್ನು ಮಾಡಲು ಹೊರಟರೂ ಅವಾಕ್ಯಾರ್ಥಾತ್ಮಕವಾದ ಬ್ರಹ್ಮವು ಅದಕ್ಕೆ ಗೋಚರವಾಗಲಾರದು. ಹೀಗೆ ಬ್ರಹ್ಮವನ್ನು ಪ್ರಮಾಣಸಿದ್ಧವಾಗಿ ಮಾಡುವದು ದುಷ್ಕರವೇ ಆಗಿದೆ.

ಪ್ರಮಾಣಮಪ್ರಮಾಣಂ ಚ ಪ್ರಮಾಭಾಸಸ್ತಥೈವ ಚ |
ಕುರ್ವನ್ತ್ಯೇವ ಪ್ರಮಾಂ ಯತ್ರ ತದಸಂಭಾವನಾ ಕುತಃ ||

೬೨೯. (ಇನ್ನು ಬ್ರಹ್ಮವು ಇರುವದು ಅಸಂಭವವೆಂದೇ ತರ್ಕಿಸುವದಾದರೆ ಹಾಗಿಲ್ಲ- ಏಕೆಂದರೆ) ಲೋಕದಲ್ಲಿ ಪ್ರಮಾಣ, ಅಪ್ರಮಾಣ, ಪ್ರಮಾಭಾಸ-ಗಳೆಂಬಿವು ಯಾವ ಬ್ರಹ್ಮದ ನೆರವಿನಿಂದಲೇ ತಿಳಿದುಬರುವವೋ ಅದು ಇಲ್ಲವೆಂದು ಹೇಳುವದಾದರೂ ಹೇಗಾದೀತು ?

ಪ್ರಾಮಾಣ್ಯಮೇತತ್ಸ್ಪೃಷ್ಟ್ವೈನ ಕಸ್ಮಾನ್ನೈತ್ಯಭಿಧಾಶ್ರುತಿಃ |
ನಿಯೋಗಸ್ಯಾಪಿ ಮಾನತ್ವಂ ನಾನಪೇಕ್ಷ್ಯ ಪ್ರಮಾಮಿಮಾಮ್ ||

೬೩೦. ಅಭಿಧಾಶ್ರುತಿಯು ಕೂಡ ಈ ಬ್ರಹ್ಮವನ್ನು ಹಿನ್ನೆಲೆಯಾಗಿ ಹೊಂದಿಯೇ ಪ್ರಾಮಾಣ್ಯವನ್ನು ಹೊಂದಿದೆಯೆಂದೇಕೆ ಆಗಬಾರದು ? ಹೀಗೆ ನಿಯೋಗಕ್ಕೆ ಕೂಡ ಈ ಸ್ವಯಂಸಿದ್ಧಪ್ರಮಾರೂಪವಾದ ಬ್ರಹ್ಮವನ್ನು ಬಯಸದೆ ಪ್ರಾಮಾಣ್ಯವು ಸಿದ್ಧವಾಗುವದಿಲ್ಲ.

ಪಶ್ಯೇದಾತ್ಮಾನಮಿತ್ಯಾದಿ ವಾಕ್ಯಂ ಯತ್ ಸ್ಯಾದ್ವಿಧಾಯಕಮ್ |
ಜ್ಞಾನಕರ್ತವ್ಯತಾಯಾಂ ತನ್ನಿಯೋಜ್ಯಪುರುಷಂ ಪ್ರತಿ ||

೬೩೧. 'ಆತ್ಮಾನಂ ಪಶ್ಯೇತ್' ಮುಂತಾದ ವಿಧಿರೂಪವಾದ ವೇದಾಂತ ವಾಕ್ಯವು ನಿಯೋಜ್ಯನಾದ ಪುರುಷನನ್ನು ಕುರಿತು ಜ್ಞಾನವನ್ನುಂಟುಮಾಡಿ ಕೊಳ್ಳುವಂತೆ ಹೇಳಿದ್ದೇ ಹೊರತು ಬ್ರಹ್ಮವನ್ನು ತಿಳಿಸುವದರಲ್ಲೇನೂ ಅದಕ್ಕೆ ವ್ಯಾಪಾರವಿರುವದಿಲ್ಲ.

ಸ್ವವ್ಯಾಪಾರೇಽನಪೇಕ್ಷ್ಯೈವ ವಸ್ತುವೃತ್ತಂ ವಚೋ ಯತಃ |
ನಿಯುಂಕ್ತೇ ಪುರುಷಂ ತಸ್ಮಾತ್ ವಸ್ತುವೃತ್ತಂ ಸುದುರ್ಲಭಮ್ ||

೬೩೨. ವಸ್ತುಸ್ಥಿತಿಯನ್ನು ಬಯಸದೆಯೇ ವಾಕ್ಯವು ಪುರುಷನನ್ನು ನಿಯೋಗಮಾಡುವದರಲ್ಲಿ ಸಮರ್ಥವಾಗಿರುವದರಿಂದ ಅದು ವಸ್ತುಸಾಧಕವಾಗ ಲಾರದು. (ಹೀಗೆ ವಾಕ್ಯವು ಬ್ರಹ್ಮವನ್ನು ವಿಧಿಗೆ ಅಧೀನವಾಗಿಮಾಡಿಕೊಳ್ಳ ಲಾರದೆ ಇದೆ.)

ಸ್ವಶಕ್ತ್ಯನನುರೂಪಂ ಚೇತ್ ಕಾರ್ಯಂ ವಾಕ್ಯಶತೈರಪಿ |
ನಿಯುಕ್ತೋಽಪಿ ನ ತತ್ಸಿದ್ಧಾವಲಂ ಶಕ್ತೋ ಸ ಹೀಶ್ವರಃ ||

೬೩೩. (ಜ್ಞಾನವೆಂಬ) ಕಾರ್ಯವು ಪುರುಷಾಧೀನವಾಗಿದ್ದು ತನ್ನ ಯೋಗ್ಯತೆಗೆ ತಕ್ಕದ್ದಲ್ಲದೆ- (ವಸ್ತುತಂತ್ರ)ವಲ್ಲವಾಗಿದ್ದಲ್ಲಿ ಪುರುಷನು ನೂರು ವಾಕ್ಯಗಳಿಂದ ನಿಯುಕ್ತನಾದರೂ ಆ ಜ್ಞಾನಸಿದ್ಧಿಯನ್ನು ಪಡೆಯಲು ಸಮರ್ಥ ನಾಗಲಾರನು. (ಏಕೆಂದರೆ ಅದು ಪ್ರಮಾಣಪರತಂತ್ರವಾದರೆ ವಿಧಿಯಾದರೂ ಏನುಮಾಡೀತು ?)

ಅಭಿಧಾಶ್ರುತಿತತ್ಸಿದ್ಧ್ಯೈ ವ್ಯಾಪೃಚ್ಛೇತ ಪ್ರಯತ್ನತಃ ।
ವಿಧಿವಾಕ್ಯಾನುಗಾಮಿತ್ವಾತ್ ನಾರ್ಥಸ್ಪೃಕ್ ಸ್ಯಾತ್ ಸ್ವತಂತ್ರತಃ ॥

೬೨೪. ಅಭಿಧಾಶ್ರುತಿಯು ವಿಧಿವಾಕ್ಯವನ್ನನುಸರಿಸುವದರಿಂದಲೂ ಅದು ಸ್ವತಂತ್ರವಾಗಿ ವಸ್ತುವನ್ನು ಮುಟ್ಟಲಾರದು. ಆದರೆ ಮುಟ್ಟುವ ಪ್ರಯತ್ನವನ್ನು ಮಾಡಬಹುದು.

ಸ್ವಮಾಂಸಾನ್ಯಪಿ ಖಾದನ್ತಿ ನಿಯೋಗಾನತಿಲಂಘಿನಃ ।
ಜುಹ್ವತ್ಯಪಿ ಪ್ರಿಯಾನ್ ಪ್ರಾಣಾನ್ ಶಕ್ಯಾರ್ಥತ್ವಾತ್ತತೋಽಪಿ ಹಿ ।
ಅಶಕ್ಯೇ ವಿನಿಯುಕ್ತೋಽಪಿ ಕೃಷ್ಣಲಾನ್ ಶ್ರಪಯೇದಿತಿ ॥

೬೨೫-೬೨೬. ಸಂಸ್ಕಾರಕ್ಕಾಗಿ ಮಾಡುವ-ಕಬ್ಬಿಣದ ಗುಂಡನ್ನು ಹುರಿಯುವ ಕರ್ಮದಲ್ಲಿ ಅದು ಬದಲಾಗದಿದ್ದರೂ ಹೇಗೆ ವಿಧಿಪ್ರಯುಕ್ತರಾಗಿ ಮಾಡುವರೋ ಹಾಗೆ ನಿಯೋಗವನ್ನು ಮೀರಲು ಅಸಮರ್ಥರಾದ ಈ ವಾದಿಗಳು ವೇದ ವಿಧಿಗೆ ಕಟ್ಟುಬಿದ್ದು ತಮ್ಮ ಮಾಂಸವನ್ನಾದರೂ ತಿಂದಾರು ; ಪ್ರಾಣವನ್ನಾದರೂ ಹೋಮಮಾಡಿಯಾರು. (ವಿಧಿಗೋಚರವಲ್ಲದ ಬ್ರಹ್ಮಜ್ಞಾನದಲ್ಲಿಯೂ ಪ್ರಯೋಜನವಿಲ್ಲದ ವಿಧಿನಿಯಮವನ್ನು ಗಂಟುಹಾಕಿಯಾರು- ಎಂದರ್ಥ.)

ಸರ್ವಾತ್ಮನಾಪ್ಯಸೌ ಕುರ್ವನ್ ಕುರ್ಯಾತ್ ತಸ್ಕರಕಂಡುವತ್ ।
ನ ಚೋಪಾಸಾಂತರಾಧೀನೋ ಬ್ರಹ್ಮಜ್ಞಾನೋದಯೋ ಭವೇತ್ ॥
ತಂ ಯಥಾ ತಂ ತಮೇವೇತಿ ನ್ಯಾಯವದ್ಬದ್ಧಶ್ರುತೇಃ ಸ್ಮೃತೇಃ ॥

೬೨೭-೬೨೮. ಎಲ್ಲಾ ರೀತಿಯಿಂದಲೂ ಕ್ರಿಯಾನಿರ್ವರ್ತ್ಯವಲ್ಲದ ಬ್ರಹ್ಮಜ್ಞಾನವನ್ನು ವಿಧಿಗೆ ಒಳಪಡಿಸಿ ಸಾಧಿಸಹೊರಟರೆ ತಸ್ಕರಕಂಡುವಿನಂತೆ ವ್ಯರ್ಥವಾದ ಪ್ರಯಾಸಕ್ಕೆ ಭಾಗಿಯಾಗುವನು. ಬೇರೊಂದು ಉಪಾಸನೆಗೆ ಅಧೀನವಾಗಿ ಬ್ರಹ್ಮಜ್ಞಾನವು ಹುಟ್ಟಲಾರದು. ಏಕೆಂದರೆ ಶ್ರುತಿಸ್ಮೃತಿಗಳಲ್ಲಿ ನ್ಯಾಯಪೂರ್ವಕವಾಗಿ 'ಹೇಗೆಹೇಗೆ ಉಪಾಸನೆಮಾಡುತ್ತಾನೋ ಹಾಗೆ ಫಲವಾಗುತ್ತದೆ'- ಎಂದಿರುವದರಿಂದ ಜ್ಞಾನವು ಎಂದಿಗೂ ಪುರುಷತಂತ್ರವಾದ ಉಪಾಸನಾಫಲವಾಗಿರಲಾರದು.

ವಿವರಣೆ : ಒಬ್ಬ ಕಳ್ಳನು ಕಳ್ಳತನಮಾಡಿದ ಅನಂತರ ತಪ್ಪಿಸಿಕೊಳ್ಳಲು ಒಂದು ಮದ್ಯತಯಾರಿಕೆಯ ಮನೆಯೊಳಗೆ ಹೊಕ್ಕನು. ಅಲ್ಲಿಯ ಯಜಮಾನನು ಇವನನ್ನು ತನ್ನ ಕೆಲಸಕ್ಕೆ ನೇಮಿಸಿದನು. ಸ್ವಲ್ಪ ಸಮಯದಲ್ಲಿಯೇ ರಾಜಭಟರು ಬಂದು ಈ ಹೊಸಬನು ತನ್ನ ಕೆಲಸವನ್ನು ಮಾಡಲು ಬಾರದೆ ಚಡಪಡಿಸುತ್ತಿದ್ದದನ್ನು ಕಂಡು ಇವನೇ ಕಳ್ಳನೆಂದು ಗುರುತಿಸಿ ಹಿಡಿದುಕೊಂಡರು. ಹಾಗೆಯೇ

ಕ್ರಿಯೆಯಿಂದ ಜನಿಸಲಾರದ ಬ್ರಹ್ಮಜ್ಞಾನವನ್ನು ವಿಧಿಯಿಂದ ಸಾಧಿಸಹೊರಟರೆ ತಸ್ಕರಕಂದುವಿನಂತೆಯೇ ಕಷ್ಟಕ್ಕೀಡಾಗುವನು. ಬ್ರಹ್ಮವಿದ್ಯೆಯೂ ಲಭಿಸಲಾರದು– ಎಂದರ್ಥ.

ಸಾರ್ಥಸ್ಪೃಕ್ ಭಾವನಾ ಚೇತ್ ಸ್ಯಾತ್ ಬ್ರಹ್ಮಧೀಜನ್ಮನೇ ನ ಸಾ |
ಸ್ವಾಭ್ಯಸ್ತಾ ರಾಜತೀ ನೋ ಧೀಃ ಶುಕ್ತಿಕಾಜ್ಞಾನಜನ್ಮನೇ ||

೬೨೯. ಉಪಾಸನೆಯು ವಸ್ತುವನ್ನು ಮುಟ್ಟಲಾರದು–ಎಂದಾದರೆ ಅದು ಬ್ರಹ್ಮಜ್ಞಾನಕ್ಕೂ ಕಾರಣವಾಗಲಾರದು. ಹೇಗೆಂದರೆ ಚೆನ್ನಾಗಿ ಧ್ಯಾನಿಸಲ್ಪಟ್ಟ ಬೆಳ್ಳಿಯ ಬುದ್ಧಿಯು ಕೂಡ ಎಂದಿಗೂ ಕಪ್ಪೆಯಚಿಪ್ಪಿನ ಜ್ಞಾನಕ್ಕೆ ಕಾರಣವಾಗಲಾರದು.

ದೃಷ್ಟವ್ಯಶ್ಚೇದ್ ಭವೇದಾತ್ಮಾ ಸ್ಯಾನ್ನಿಯೋಗಸ್ತದಾತ್ಮನಿ |
ನಿಷೇಧಾದ್ದರ್ಶನಸ್ಯೇಹ ನ ನಿಯೋಗೋಽಸ್ತ್ಯತಃ ಪರೇ ||

೬೩೦. ಆತ್ಮನು ಕಾಣಲ್ಪಡುವ ವಸ್ತುವಾಗಿದ್ದರೆ ಆಗ ಆತ್ಮನಲ್ಲಿ ನಿಯೋಗವು ಆಗಬಹುದಾಗಿತ್ತು. ಆದರೆ ಆತ್ಮನ ವಿಷಯಕ್ಕೆ ದರ್ಶನನಿಷೇಧವಿರುವದರಿಂದ ಆ ಪರಬ್ರಹ್ಮದಲ್ಲಿ ನಿಯೋಗವಿರುವದಿಲ್ಲ.

ನಿಯೋಗಾನುಪ್ರವೇಶೇನ ವಸ್ತುತತ್ತ್ವಂ ಪ್ರಬೋಧ್ಯತೇ |
ನ ಹಿ ವಿಧ್ಯನಪೇಕ್ಷಸ್ಯ ಪ್ರಾಮಾಣ್ಯಮನುವಾದಿನಃ ||

೬೩೧. (ಆಕ್ಷೇಪ) : ನಿಯೋಗದ ಪ್ರವೇಶದ ಮೂಲಕವೇ (ಶಾಸ್ತ್ರದಲ್ಲಿ) ವಸ್ತುತತ್ತ್ವವನ್ನು ತಿಳಿಸಲಾಗುತ್ತದೆ. ಏಕೆಂದರೆ ವಿಧಿಯ ಸಂಬಂಧವಿಲ್ಲವಾದರೆ ಶಾಸ್ತ್ರವು ಅನುವಾದವೆಂದಾಗಿ ಅಪ್ರಮಾಣವಾಗುತ್ತದೆ.

ನೈವಂ ಯತಃ ಕ್ರಿಯೈವೇಹ ಚೋದನಾಭಿರ್ವಿಧೀಯತೇ |
ಸ್ವವ್ಯಾಪಾರೇ ಯತಸ್ತಾಭಿಃ ನಿಯೋಕ್ತುಂ ಶಕ್ಯತೇ ಪುಮಾನ್ |
ದ್ರವ್ಯಸ್ವರೂಪೇಽಸಾಧ್ಯತ್ವಾತ್ ಕಥಂ ತಾಭಿಃ ಪ್ರವರ್ತ್ಯತೇ ||

೬೩೨. ಹಾಗಿಲ್ಲ; ಇಲ್ಲಿ ಕ್ರಿಯೆಯು ಮಾತ್ರವೇ ಚೋದನೆಗಳಿಂದ ವಿಧಿಸಲ್ಪಡುತ್ತದೆ. ಆ ಚೋದನೆಗಳಿಂದ ಮನುಷ್ಯನು ನಿಯೋಗದಲ್ಲಿ ಕಟ್ಟುಬೀಳುವನು. ಆದರೆ ವಸ್ತುಸ್ವರೂಪವಾದ ಆತ್ಮಜ್ಞಾನದಲ್ಲಿ ಚೋದನೆಯು ಅಸಾಧ್ಯವಾದ್ದರಿಂದ ಮನುಷ್ಯನು ಹೇಗೆತಾನೆ ಪ್ರವರ್ತಿಸಿಯಾನು ?

ನ ಚಾಪೀಹಾತ್ಮವಿಜ್ಞಾನಂ ಚೋದನಾಭಿರ್ವಿಧೀಯತೇ |
ಸ್ವಾಧ್ಯಾಯೋಽಧ್ಯೇತವ್ಯ ಇತಿ ಹ್ಯೇತಸ್ಮಾತ್ತಸ್ಯ ಸಿದ್ಧಿತಃ ||

೬೩೩. ಇಲ್ಲಿ ಆತ್ಮವಿಜ್ಞಾನವು ಚೋದನೆಗಳಿಂದ ವಿಧಿಸಲ್ಪಟ್ಟಿರುವದೂ ಇಲ್ಲ. 'ಸ್ವಾಧ್ಯಾಯೋಽಧ್ಯೇತವ್ಯಃ' ಎಂಬಲ್ಲಿ ಆಗಲೆ ಈ ವಿಧಿಯು ಸಾರ್ಥಕವಾಗಿಬಿಟ್ಟಿದೆ.

ಕರ್ಮಾವಬೋಧೋ ನ ಯಥಾ ನಿಯೋಗಾನ್ತರವಿಾಕ್ಷತೇ |
ತಥೈವಾತ್ಮಾವಬೋಧೋಽಪಿ ನ ನಿಯೋಗಾನ್ತರಾದ್ ಭವೇತ್ ||

೬೩೪. ಹೇಗೆ ಕರ್ಮಜ್ಞಾನವು ಬೇರೊಂದು ನಿಯೋಗವನ್ನು ಬಯಸುವದಿಲ್ಲವೋ ಹಾಗೆಯೇ ಆತ್ಮಜ್ಞಾನವೂ ನಿಯೋಗಾಂತರವನ್ನು ಬಯಸಲಾರದು.

ಸ್ಯಾದೇತದಾತ್ಮಬೋಧಸ್ಯ ನಿಯೋಗವಿರಹಾದ್ಯದಿ |
ಪುರುಷಾರ್ಥಕಾರಿತಾ ಪುಂಭಿಃ ಲಭ್ಯತೇ ನ ತು ಲಭ್ಯತೇ ||
ನಿಯೋಗೈಕಾಧಿಗಮ್ಯತ್ವಾತ್ ಜ್ಞಾನಕಾರ್ಯಸ್ಯ ನಾನ್ಯತಃ |
ಪ್ರಮಾನ್ತರಾದಿದಂ ಸಿಧ್ಯೇನ್ನಾಪಿ ಸ್ಯಾದಭಿಧಾನತಃ ||

೬೩೫-೬೩೬. (ಆಕ್ಷೇಪ) ಆತ್ಮಜ್ಞಾನಕ್ಕೆ ನಿಯೋಗವಿಲ್ಲದೆಯೂ ಪುರುಷಾರ್ಥಕಾರಿತ್ವವು ಆಗಲಿ- ಎಂದಾದರೆ ಆಗ ವಿಧೇಯತ್ವವಿಲ್ಲದೆ ಫಲಸಿದ್ಧಿಯಿಲ್ಲವಾದ್ದರಿಂದ ಜನರಿಗೆ ಅದು ಸಿಗಲಾರದು ; ಮತ್ತು ಪಡೆಯಲಾರರು. ಆದ್ದರಿಂದ ಜ್ಞಾನಕಾರ್ಯವಾದ ಫಲಸಿದ್ಧಿಯು ನಿಯೋಗಮಾತ್ರಗಮ್ಯವೆಂದೇ ತಿಳಿಯಬೇಕು. ಬೇರೊಂದು ಪ್ರಮಾಣದಿಂದಾಗಲಿ, ಅಭಿಧಾನದಿಂದಲಾಗಲಿ ಇದರ ಸಿದ್ಧಿಯಾಗಲಾರದು.

ನೈತದೇವಂ ಯತೋ ನೇಹ ಜ್ಞೇಯಾರ್ಥವ್ಯಾಪ್ತಿಮಾತ್ರತಃ |
ಫಲಾನ್ತರಂ ಪ್ರಬೋಧಸ್ಯ ಕಿಂಚಿತ್ ಸಂಭಾವ್ಯತೇಽಣ್ವಪಿ ||

೬೩೭. ಹಾಗಿಲ್ಲ ; ಏಕೆಂದರೆ ಇಲ್ಲಿ ಜ್ಞೇಯಾರ್ಥವನ್ನು ವ್ಯಾಪಿಸಿರುವದೇ ಜ್ಞಾನದ ಫಲವಾದ್ದರಿಂದ ಬೇರೊಂದು ಅಲ್ಪಫಲವನ್ನುಕೂಡ ಇಲ್ಲಿ ಕಲ್ಪಿಸಲಾಗುವದಿಲ್ಲ.

ಅಂತರೇಣ ನಿಯೋಗಂ ಚ ಸ್ವಾತ್ಮಬೋಧಸ್ಯ ಸಿದ್ಧಿತಃ |
ಸ್ವಾಧ್ಯಾಯೋಽಧ್ಯೇತವ್ಯ ಇತಿ ಬ್ರೂಹಿ ಸ್ಯಾತ್ ಕಿಂ ನಿಯೋಗತಃ ||

೬೩೮. ನಿಯೋಗವಿಲ್ಲದೆ ಆತ್ಮಬೋಧವು ಸಿದ್ಧವಾಗುವದರಿಂದ ಹೀಗೆ ಹೇಳಬೇಕಾಗಿದೆ. "ಸ್ವಾಧ್ಯಾಯೋಽಧ್ಯೇತವ್ಯಃ" ಎಂಬ ವಿಧಿಗೆ ಮತ್ತೊಂದು ನಿಯೋಗವೇನಾದರೂ ಇದ್ದೀತೆ ? ಇದ್ದರೆ ಹೇಳು. (ವಿಧಿಗೆ ಹೇಗೆ ಮತ್ತೊಂದು ವಿಧಿ ಬೇಕಿಲ್ಲವೋ ಹಾಗೆ ಆತ್ಮಜ್ಞಾನಕ್ಕೂ ವಿಧಿ ಬೇಕಿರುವದಿಲ್ಲ.

ನೈವಂ ಯತೋಽನ್ಯದೇವೇದಂ ವಿಜ್ಞಾನಾಂತರಮಾತ್ಮನಿ |
ಸೋಪಾಯಂ ಕಾರ್ಯಮಿತ್ಯೇವಂ ಚೋದ್ಯತೇ ಕೇವಲಂ ಪರಮ್ ||

೬೩೯. (ಆಕ್ಷೇಪ) ಹಾಗಲ್ಲ ; ನಾವು ಶಬ್ದಜ್ಞಾನವನ್ನು ವಿಧೇಯವೆನ್ನುವದಿಲ್ಲ. ಆದರೆ ಶಮದಮಾದಿಗಳಿಂದ ಕೂಡಿದ ಬೇರೊಂದು ವಿಜ್ಞಾನವನ್ನು ಮಾಡಿಕೊಳ್ಳಬೇಕೆಂಬುದನ್ನು ಚೋದನೆಮಾಡಲಿಕ್ಕದ್ದಿದೆ-ಎನ್ನುತ್ತೇವೆ.

ಶಬ್ದಾಜ್ಜನಿತವಿಜ್ಞಾನಾದ್ ವ್ಯತಿರಿಕ್ತಂ ಪರಾತ್ಮಗವಮ್ |
ನ ಹಿ ಶಬ್ದಸಮುತ್ಥೇನ ಬ್ರಹ್ಮ ಜ್ಞಾನೇನ ಶಕ್ಯತೇ |
ತಸ್ಯಾವಾಕ್ಯಾರ್ಥರೂಪತ್ವಾತ್ ಪರಿಚ್ಛೇತ್ತುಂ ಘಟಾದಿವತ್ ||

೬೪೦–೬೪೧. (ಉತ್ತರ) (ಹಾಗಲ್ಲ). ಶಬ್ದದಿಂದ ಹುಟ್ಟಿದ ವಿಜ್ಞಾನ ಕ್ಕಿಂತ ಬೇರೆಯಾದ ಪರಬ್ರಹ್ಮವನ್ನು ಹೊಗುವ ಯಾವ ಜ್ಞಾನವೂ ಇರುವದಿಲ್ಲ. ಏಕೆಂದರೆ ಬ್ರಹ್ಮವನ್ನು ಜ್ಞಾನದಿಂದ ತಿಳಿಯಲಾಗುವದಿಲ್ಲ. ಏಕೆಂದರೆ ಅದು ಅವಾಕ್ಯಾರ್ಥರೂಪವಾಗಿದೆ. ಅದನ್ನು ಘಟಾದಿಗಳಂತೆ ಪರಿಚ್ಛೇದಮಾಡಿ ತಿಳಿಯ ಲಾಗುವದಿಲ್ಲ.

ನಾನಾಪದಾರ್ಥಸಂಸರ್ಗಲಕ್ಷಣೋಽಯಂ ಯತಃ ಸ್ಮೃತಃ |
ವಾಕ್ಯಾರ್ಥೋ ವಾಕ್ಯವಿದ್ಭಿರ್ಹಿ ಪ್ರಮಾವಾಕ್ಯಂ ಚ ನೋ ಮತಮ್ ||
ತಸ್ಯ ಚಾವಿಷಯತ್ವಾತ್ತು ಬ್ರಹ್ಮಾವಾಕ್ಯಾರ್ಥರೂಪಭೃತ್ ||

೬೪೨. ವಾಕ್ಯಾರ್ಥವೆಂದರೆ ಅನೇಕಪದಾರ್ಥಗಳ ಸಂಸರ್ಗರೂಪವಾಗಿದ್ದು ಕೊಂಡಿರುವದು. ಅದೇ ವಾಕ್ಯಾರ್ಥಲಕ್ಷಣವು. ವಾಕ್ಯವಿದರು ಅದನ್ನು ಪ್ರಮಾ ವಾಕ್ಯವೆನ್ನುವರು. ಅದಕ್ಕೆ ಬ್ರಹ್ಮವು ವಿಷಯವಲ್ಲವಾದ್ದರಿಂದ ಅವಾಕ್ಯಾರ್ಥ ವೆನಿಸಿರುವದು.

ವಿಜ್ಞಾನಾಂತರಗಮ್ಯಂ ತದಭ್ಯುಪೇಯಂ ಬಲಾದಪಿ |
ನ ಚೇದ್ವಾಕ್ಯೋತ್ಥವಿಜ್ಞಾನಗ್ರಾಹ್ಯಂ ಬ್ರಹ್ಮಾಭ್ಯುಪೇಯತೇ ||
ನಾಮ್ನಾಯಾರ್ಥೋ ಭವೇತ್ತರ್ಹಿ ಸ್ಯೈವಂ ವೇದಾರ್ಥ ಏವ ಚ ||

೬೪೩. ಬ್ರಹ್ಮವು ಅವಾಕ್ಯಾರ್ಥವೆಂದು ಸಿದ್ಧವಾದ್ದರಿಂದ ಶಬ್ದಜ್ಞಾನಕ್ಕಿಂತ ಬೇರೆಯಾದ ವಿಜ್ಞಾನಕ್ಕೆ ಗೋಚರವೆಂದು ಒತ್ತಾಯಪೂರ್ವಕವಾಗಿ ಒಪ್ಪಬೇಕಾ ಗುವದು. ಇಲ್ಲವಾದರೆ ಎಂದರೆ ಬ್ರಹ್ಮವು ವಾಕ್ಯದಿಂದುಂಟಾದ ವಿಜ್ಞಾನಕ್ಕೆ ಗೋಚರವಲ್ಲವೆಂದಾದರೆ ಅದು ವೇದಾರ್ಥವೆನಿಸಲಾರದು. ವೇದಾರ್ಥವು ಹಾಗಿರಲೂ ಅರದು.

ಕಥಂ ವೇದಾರ್ಥತೈತಸ್ಯ ನ ಚೇದ್ವಾಕ್ಯಾರ್ಥ ಇಷ್ಯತೇ |
ಪುಂವ್ಯಾಪಾರಾನಧೀನತ್ವಾತ್ ನ ನಿಯೋಗಾದಯಂ ಭವೇತ್ ||
ಪದಾರ್ಥಾನನ್ವಯಾನ್ನಾಪಿ ವಾಕ್ಯೋತ್ಥೋ ಬೋಧ ಆತ್ಮನಿ ||

೬೪೪–೬೪೫. ಬ್ರಹ್ಮವು ಹೀಗೆ ವಾಕ್ಯಾರ್ಥವಲ್ಲದೆಹೋದರೆ ವೇದಾರ್ಥವು ಹೇಗಾದೀತು ? ಎನ್ನಬಾರದು. ಏಕೆಂದರೆ ಬ್ರಹ್ಮಜ್ಞಾನವು ಮನುಷ್ಯನ ವ್ಯಾಪಾ ರಾಧೀನವಲ್ಲವಾದ್ದರಿಂದ ನಿಯೋಗದಿಂದಾಗಲಾರದು. ಪದಾರ್ಥಾನ್ವಯವೂ ಆಗ ಲಾರದಾದ್ದರಿಂದ ವಾಕ್ಯದಿಂದುಂಟಾದ ಆತ್ಮಬೋಧವು ಬೇರೆಯಾಗಿರುವದು.

ತದನ್ವಯೇऽಪಿ ನೈವಾಯಂ ವಾಕ್ಯಾರ್ಥತ್ವಂ ಸಮಶ್ನುತೇ |
ಸಾಮಾನ್ಯಮಾತ್ರವಾಚಿತ್ವೇ ಪದಾನಾಂ ಸಂಕ್ಷಯೋ ಯತಃ ||

೭೪೭. ಪದ-ಪದಾರ್ಥಾನ್ವಯರೂಪವಾಗಿ ಬ್ರಹ್ಮಜ್ಞಾನವುಂಟಾದರೂ ಬ್ರಹ್ಮವು ವಾಕ್ಯಾರ್ಥವಾಗುವದಿಲ್ಲ. ಏಕೆಂದರೆ ಬ್ರಹ್ಮವು ಸಾಮಾನ್ಯವಾಚಿಯಾಗಿದ್ದರೂ ಅದರಲ್ಲಿ ವಿಶೇಷವಿಲ್ಲವಾದ್ದರಿಂದಲೂ ಪದಗಳು ಸಾಮಾನ್ಯವನ್ನು ಹೇಳಿ ವಿಶ್ರಾಂತವಾಗುವದರಿಂದಲೂ ಬ್ರಹ್ಮವನ್ನು ತಿಳಿಸಲಾರವು.

ಪದಾರ್ಥವ್ಯತಿರೇಕೇಣ ನ ಚಾವಾಕ್ಯಾರ್ಥವಾಚಕಃ |
ಅತೋऽವಾಕ್ಯಾರ್ಥರೂಪೋऽಯಂ ಯೋऽಹಂ ಬ್ರಹ್ಮೇತಿ ನಿಶ್ಚಯಃ ||

೭೪೭. ಪದವಾಚ್ಯವಾದ ಪದಾರ್ಥಕ್ಕಿಂತ ಬೇರೆಯಾದ ಬ್ರಹ್ಮವು ಅವಾಕ್ಯಾರ್ಥವಾದ್ದರಿಂದ ಅದನ್ನು ಹೇಳುವ ಶಬ್ದವು ಇರುವದಿಲ್ಲ. ಆದ್ದರಿಂದ 'ಅಹಂ ಬ್ರಹ್ಮ' ಎಂಬ ನಿಶ್ಚಯವು ಅವಾಕ್ಯಾರ್ಥರೂಪವಾಗಿರುತ್ತದೆ.

ನಿಯೋಗಾನುಪ್ರವೇಶೇನ ವಸ್ತುತತ್ತ್ವಮಿತೀರಿತಮ್ |
ಯತ್ತಸ್ಯ ಪರಿಹಾರಾಯ ಶ್ಲೋಕೋऽಸ್ಮಾಭಿರ್ಯಥೋದಿತಃ ||

೭೪೮. ನಿಯೋಗವನ್ನು ಅನುಸರಿಸಿಯೇ ವಸ್ತುತತ್ತ್ವಸಿದ್ಧಿಯಾಗುವದೆಂದು ನೀವು ಏನು ಹೇಳುತ್ತೀರೋ ಅದರ ಪರಿಹಾರಕ್ಕಾಗಿಯೇ ಉಪನಿಷತ್ತು 'ಯತೋ ವಾಚೋ....' ಎಂಬ ಶ್ಲೋಕವನ್ನು ಹೇಳಿದೆ–ಎಂದು ನಾವು ತಿಳಿಸುತ್ತಿದೇವೆ.

ಇದಂ ಜ್ಞೇಯಮಿದಂ ಜ್ಞಾನಂ ಜ್ಞಾತಾಸ್ಮೀತಿ ವಿಭಾಗಶಃ |
ಸರ್ವದಾ ದರ್ಶನಾತ್ತಾವತ್ ನಾವಿದ್ಯಾऽಸ್ಯೈಷು ವಿದ್ಯತೇ ||

೭೪೯. ಇದು ಜ್ಞೇಯವು, ಇದು ಜ್ಞಾನವು, ನಾನು ಜ್ಞಾತೃವಾಗಿರುವೆನು ಎಂದು ಯಾವಾಗಲೂ ಬೇರೆಬೇರೆಯಾಗಿ ತಿಳಿದುಬರುವದರಿಂದ ಇವುಗಳ ವಿಷಯಕ್ಕೆ ಅವಿದ್ಯೆಯು ಇವನಿಗೆ ಇರುವದಿಲ್ಲ.

ಚಿನ್ಮಾತ್ರವ್ಯತಿರೇಕೇಣ ಸರ್ವಪ್ರತ್ಯಯಸಾಕ್ಷಿಣಃ |
ರೂಪಾಂತರಂ ನ ಸಂಭಾವ್ಯಂ ಪ್ರಮಾಭಾಸಾತ್ತಥಾ ಹ್ಯಸ್ಫೂರ್ತಿಃ ||

೭೫೦. ಸರ್ವಪ್ರತ್ಯಯಸಾಕ್ಷಿಯಾದ ಪರಬ್ರಹ್ಮಕ್ಕೆ ಚಿನ್ಮಾತ್ರವಾಗಿರುವಿಕೆಗಿಂತ ಬೇರೆ ಅವಿದ್ಯಾಕಲ್ಪಿತವಾದ ರೂಪಾಂತರವು ಸಂಭವಿಸಲಾರದು. ಹಾಗೆಯೇ ಅಸ್ಫುರಣವೂ ಅಜ್ಞಾನನಿಮಿತ್ತವೇ ಆಗಿರುತ್ತದೆ.

ಹಾನೋಪಾದಾನಹೀನೋऽಯಂ ತತ್ಸಾಕ್ಷಿತ್ವಾತ್ ಸ್ವತೋ ಧ್ರುವಃ |
ದ್ರಷ್ಟ್ರಾದಿಸಾಕ್ಷಿತಾಪ್ಯಸ್ಯ ತತ್ಕಾರಣಸಮಾಶ್ರಯಾತ್ ||

೬೫೧. ಈ ಆತ್ಮನು ಹಾನೋಪಾದಾನಗಳಿಲ್ಲದವನು. ಅವುಗಳಿಗೂ ಸಾಕ್ಷಿಯಾಗಿರುವದರಿಂದ ಸ್ವತಃ ನಾಶರಹಿತನು. ಇವನು ದ್ರಷ್ಟಾ, ದೃಶ್ಯ, ದರ್ಶನಗಳಿಗೂ ಸಾಕ್ಷಿಯೆಂಬುದು ಅವುಗಳು ಇವನನ್ನು ಆಶ್ರಯಿಸಿರುವದರಿಂದಲೇ ಸಿದ್ಧವಾಗುತ್ತದೆ.

ಇದಂ ವೇದ್ಮಿ ನ ವೇದ್ಮೀದಮಿತಿ ಬುದ್ಧಿರ್ವಿವರ್ತತೇ |
ಪ್ರತ್ಯಭಿಜ್ಞಾಶ್ರಯಾ ಸಾ ಸ್ಯಾತ್ ದ್ರಷ್ಟೃತ್ವೋಭಯರೂಪಭಾಕ್ ||

೬೫೨. ಇದನ್ನು ನಾನು ಅರಿಯುತ್ತೇನೆ, ಇದನ್ನು ನಾನು ಅರಿಯುವದಿಲ್ಲ–ಎಂಬೀ ಎರಡೂ ರೀತಿಯಿಂದ ಬುದ್ಧಿಯೇ ವಿಕಾರವನ್ನು ಹೊಂದುತ್ತದೆ. ಅದು ಪ್ರತ್ಯಭಿಜ್ಞಾರೂಪವಾದ (ಆತ್ಮನನ್ನು) ಆಶ್ರಯಿಸಿರುತ್ತದೆ. ದ್ರಷ್ಟೃತ್ವವನ್ನು ಹೊಂದಿರುವ ಬುದ್ಧಿಯೇ ಎರಡು ವಿಧವಾಗಿಯೂ ವರ್ತಿಸುವದು. (ಆತ್ಮನು ಅವಿಕಾರಿಯಾದ್ದರಿಂದ ಜ್ಞಾನಾಜ್ಞಾನರಹಿತನಾಗಿರುವನು.)

ನಿರ್ವಿಭಾಗಾತ್ಮಕತ್ವಾತ್ತು ಸರ್ವಕೋಶಾತಿವರ್ತಿನಃ |
ರೂಪಂ ನಾನಾತ್ಮವನ್ನಾಸ್ತ್ಯಯ್ಯಂ ಪ್ರತ್ಯಭಿಜ್ಞಾಸಮಾಶ್ರಯಮ್ ||

೬೫೩. ಎಲ್ಲಾ ಕೋಶಗಳನ್ನೂ ಮೀರಿರುವ ನಿರ್ವಿಭಾಗನಾದ ಆತ್ಮನಿಗೆ ಅನಾತ್ಮವಾದ ಬುದ್ಧಿಯಂತೆ ಜ್ಞಾನಾಜ್ಞಾನಗಳೆಂಬ ರೂಪವು ಹೊಂದುವಂತಿಲ್ಲ. ಆ ರೂಪಗಳೇನಿದ್ದರೂ ಪ್ರತ್ಯಭಿಜ್ಞೆಯನ್ನಾಶ್ರಯಿಸಿದ ಬುದ್ಧಿಗೇ ಸೇರಿದ್ದಾಗಿದೆ.

ಪ್ರತಿಸ್ಮೃತ್ಯಾನ್ಯತಃ ಪ್ರಾಪ್ತಂ ರೂಪಂ ಯತ್ಪಾರಿಣಾಮಿಕಮ್ |
ಜ್ಞಾತಾ ಪ್ರತ್ಯಭಿಜಾನಾತಿ ಪ್ರತ್ಯಕ್ತ್ವಾಥೋಽಪಸಂಸ್ಕೃತಃ ||

೬೫೪. ಜ್ಞಾತೃವು ತನಗೆ ಹಿಂದೆ ಆದ ಅನುಭವದ ನೆನಪಿನಿಂದ ಈಗ ಎದುರಿಗೆ ಪ್ರಾಪ್ತವಾದ ಪಾರಿಣಾಮಿಕರೂಪವನ್ನು ಗುರುತಿಸುತ್ತಾನೆ. (ಆದರಿಂದ ಅವನು ಕೂಟಸ್ಥನಲ್ಲ. ಜ್ಞಾತೃವಿಗೂ ಆತ್ಮನಾದ ಬ್ರಹ್ಮವು ಕೂಟಸ್ಥವು.)

ಬುದ್ಧೇಃ ಸ್ಯಾದಪರಾಧೋಽಯಂ ಯದ್ಬಾಹ್ಯಾರ್ಥಾನುಕಾರಿತಾ |
ಪ್ರತ್ಯಕ್ತ್ವಂ ಚಿನ್ನಿಭತ್ವಂ ಚ ಕೌಟಸ್ಥ್ಯನ್ನಾಯಮಾತ್ಮನಿ ||

೬೫೫. ಹೊರಗಿನ ವಸ್ತುಗಳ ರೂಪವನ್ನು ಅನುಸರಿಸಿ ಪರಿಣಾಮವಾಗುವಿಕೆಯು ಬುದ್ಧಿಯ ತಪ್ಪಾಗಿದೆ. ಹಾಗೆಯೇ ಅದು ಪ್ರತ್ಯಗಾತ್ಮನಂತೆಯೂ ಚಿತ್ ಪ್ರಕಾಶದಂತೆಯೂ ಕಂಡುಬರುತ್ತದೆ. ಆದರೆ ಕೂಟಸ್ಥನಾದ ಆತ್ಮನಲ್ಲಿ ಈ ರೀತಿಯ ಪರಿಣಾಮಗಳಾಗಲಿ ಆಭಾಸಗಳಾಗಲಿ ಇರುವದಿಲ್ಲ.

ಅನ್ವಯವ್ಯತಿರೇಕಾಭ್ಯಾಂ ಜಾಗ್ರತ್ಸ್ವಪ್ನಸುಷುಪ್ತಿಷು |
ಬಾಹ್ಯಂ ನಿರಸ್ಯ ಧೀರೂಪಂ ಚಿನ್ಮಾತ್ರಾತ್ಮಾವಭಾಸಯಾ ||

ಧಿಯೋಪಲಕ್ಷ್ಯವಾಕ್ಯಾರ್ಥಂ ಸರ್ವದಾವ್ಯಭಿಚಾರತಃ |
ವ್ಯಭಿಚಾರಿಣಶ್ಚ ಬಾಧೇನ ತತ್ತ್ವಮಸ್ಯಾದಿರೂಪಿಣೀ |
ದಹನ್ತ್ಯಖಿಲಮಜ್ಞಾನಂ ಬೋಧಯತ್ಯೇವ ಕೇವಲಮ್ ||

೬೫೬–೬೫೭. ಎಚ್ಚರ-ಕನಸು-ನಿದ್ರೆಗಳಲ್ಲಿ ಅನ್ವಯವ್ಯತಿರೇಕಗಳಿಂದ ಹೊರಗಿನ ಧೀರೂಪವನ್ನು ನಿರಾಕರಿಸಿ ಚಿನ್ಮಾತ್ರವಾಗಿ ತೋರುವ ಬುದ್ಧಿಯಿಂದ ಅವಾಕ್ಯಾರ್ಥವಾದ ಹಾಗೂ ಯಾವಾಗಲೂ ವ್ಯಭಿಚಾರವಾಗದಿರುವ (ಆತ್ಮನನ್ನು) ಗುರುತಿಸಿ 'ತತ್ತ್ವಮಸಿ' ಮುಂತಾದ ರೂಪದ ವಿದ್ಯೆಯು ವ್ಯಭಿಚಾರಿಯಾದ ಅಹಂಪ್ರತ್ಯಯವನ್ನೂ ಬಾಧಿಸಿ ಅಜ್ಞಾನವನ್ನೆಲ್ಲ ಸುಟ್ಟು ಕೇವಲಾತ್ಮನನ್ನೇ ಬೋಧಿಸುತ್ತದೆ.

ಸಾಮಾನಾಧಿಕರಣ್ಯಾದೇರ್ಘಟೇತರಖಯೋರಿವ |
ವ್ಯಾವೃತ್ತೇಃ ಸ್ಯಾದವಾಕ್ಯಾರ್ಥಃ ಸಾಕ್ಷಾನ್ನಸ್ತತ್ತ್ವಮರ್ಥಯೋಃ ||

೬೫೮. ಘಟಾಕಾಶ–ಮಹಾಕಾಶಗಳಲ್ಲಿ ಹೇಗೆ ಆಕಾಶಸಾಮಾನಾಧಿಕರಣ್ಯದಿಂದ ಆಕಾಶಮಾತ್ರವನ್ನು ತಿಳಿಸಲಾಗುವದೋ ಹಾಗೆ ತತ್–ತ್ವಂ ಪದಾರ್ಥಗಳಲ್ಲಿಯೂ ವಿರುದ್ಧಾಂಶಗಳನ್ನು ವ್ಯಾವೃತ್ತಿಮಾಡುವದರಿಂದ ಅವಾಕ್ಯಾರ್ಥವಾದ ಬ್ರಹ್ಮವನ್ನು ತಿಳಿಸಲಾಗುವದು.

ವಾಕ್ಯಾದೇವಮವಾಕ್ಯಾರ್ಥೋ ಯಸ್ಮಾತ್ ಸಾಕ್ಷಾತ್ ಪ್ರಸಿಧ್ಯತಿ |
ಅನ್ಯದೇವೇದಮಿತ್ಯಾದಿ ಸರ್ವಂ ಸ್ಯಾತ್ತ್ವಷಕಂಡನಮ್ ||

೬೫೯. ಹೀಗೆ ವಾಕ್ಯದಿಂದಲೇ ಅವಾಕ್ಯಾರ್ಥವಾದ ಬ್ರಹ್ಮವು ಸಿದ್ಧಿಸುವದರಿಂದ 'ಅನ್ಯದೇವ ತದ್ವಿದಿತಾತ್' ಇತ್ಯಾದಿ ಆಗಮೋಪದೇಶಗಳೆಲ್ಲವೂ ಅಕ್ಕಿಕಾಳಿನಿಂದ ಹೊಟ್ಟುತೆಗೆದಂತೆ–ಅನಾತ್ಮನಿರಾಕರಣಮಾತ್ರವೇ ಆಗಿದೆ.

ಅಜ್ಞಾನಮನ್ಯಥಾಜ್ಞಾನಂ ಸಂಶಯಜ್ಞಾನಮೇವ ಚ
ಘಟಾದಾವೇವ ತದ್ದೃಷ್ಟಂ ನ ಜ್ಞಾತೃಜ್ಞಾನಸಾಕ್ಷಿಷು

೬೬೦. ಅಜ್ಞಾನ, ಅನ್ಯಥಾಜ್ಞಾನ, ಸಂಶಯಜ್ಞಾನಗಳು ಜ್ಞೇಯವಾದ ಘಟಾದಿಗಳ ವಿಷಯದಲ್ಲಿ ಮಾತ್ರವೇ ಕಂಡುಬರುವವು. ಆದರೆ ಅವು ಜ್ಞಾತೃವಿನಲ್ಲಾಗಲಿ, ಜ್ಞಾನದಲ್ಲಾಗಲಿ ಸಾಕ್ಷಿಯಲ್ಲಾಗಲಿ– ಕಂಡುಬರುವದಿಲ್ಲ.

ಅಜ್ಞಾನಾದಿ ತ್ರಯಂ ತಾವತ್ ಪ್ರತ್ಯಯೇಽಪಿ ನ ವಿದ್ಯತೇ |
ತಸ್ಯ ಹ್ಯವ್ಯವಧಾನೇನ ಪ್ರತ್ಯಕ್ತ್ವಾನ್ನಾನ್ಯಮಾನತಾ ||
ಜ್ಞಾತುರವ್ಯವಧಾನೇಷು ಸಂಶಯೋ ನಿಶ್ಚಯೋಽಪಿ ವಾ |
ಪ್ರತ್ಯಯಃ ಪ್ರಥತೇ ಯಸ್ಮಾತ್ ತ ಮಾನಾಂತರಕಾಂಕ್ಷ್ಯತಃ ||

೬೬೧-೬೬೨. ಅಜ್ಞಾನವೇ ಮುಂತಾದ ಮೂರು ಬಗೆಗಳು ಅಂತಃಕರಣ ಪ್ರತ್ಯಯದಲ್ಲಿಯೂ ಇರುವದಿಲ್ಲ. ಏಕೆಂದರೆ ಅದು ಜ್ಞಾತೃವಿಗೆ ನೇರಾಗಿ ಸಂಬಂಧಿಸಿರುತ್ತದೆ. ಅದು ಜ್ಞಾತೃಪ್ರತ್ಯಕ್ಷವೇ ಹೊರತು ಬೇರೆ ಪ್ರಮಾಣಸಿದ್ಧ ವಲ್ಲ. ಆದರೆ ಜ್ಞಾತೃವಿನ ಸಂಬಂಧದಿಂದ ಸಂಶಯ ಅಥವಾ ನಿಶ್ಚಯರೂಪವಾದ ಪ್ರತ್ಯಯವು ಅಂತಃಕರಣದಲ್ಲಿ ಕಾಣಿಸಿಕೊಳ್ಳುವದು. ಆದ್ದರಿಂದ ಈ ಪ್ರತ್ಯಯವು ಬೇರೊಂದು ಪ್ರಮಾಣಸಿದ್ಧವಲ್ಲ.

ಅಜ್ಞಾನಾದಿ ತ್ರಯಂ ತಾವತ್ ಜ್ಞಾತರ್ಯಪಿ ನ ವಿದ್ಯತೇ |
ಕಿಮಂಗ ಸರ್ವದಾಽಲುಪ್ತಚಕ್ಷುಷ್ಯಾತ್ಮನಿ ಕೇವಲೇ

೬೬೩. ಅಜ್ಞಾನವೇ ಮುಂತಾದ ಮೂರು ಬಗೆಗಳು ಜ್ಞಾತೃವಿನಲ್ಲಿಯೂ ಇರುವದಿಲ್ಲ. ಹೀಗಿರುವಲ್ಲಿ ಅಯ್ಯ, ಯಾವಾಗಲೂ ಲೋಪವಿಲ್ಲದ ಚಿತ್‌ಸ್ವರೂಪ ವಾದ ದರ್ಶನವುಳ್ಳ ಕೇವಲಾತ್ಮನಲ್ಲಿ ಇವು ಹೇಗೆತಾನೆ ಇದ್ದಾವು ?

ನಿರ್ಧೂತಾಶೇಷಭೇದೋಽಯಂ ಅವಾಕ್ಯಾರ್ಥಾತ್ಮಕಸ್ತಥಾ |
ಸುಷುಪ್ತೇ ಗಮ್ಯತೇಽಸ್ಮಾಭಿಃ ನಾನೃತಂ ಶ್ರುತಿಗೌರವಾತ್ ||

೬೬೪. ಈ ಬ್ರಹ್ಮವು ಸಕಲವಿಧವಾದ ಭೇದವನ್ನೂ ಕೊಡವಿಹಾಕಿರ ತಕ್ಕದ್ದು ಹಾಗೂ ವಾಕ್ಯಾರ್ಥವನ್ನು ಮೀರಿದ್ದಾಗಿರುವದು. ಆದರೆ ನಮ್ಮೆಲ್ಲರಿಗೂ ಇದು ಸುಷುಪ್ತಿಯಲ್ಲಿ ಅನುಭವಕ್ಕೆ ಬರುತ್ತಿರುವದು. ಅನೃತವಾದ (ದ್ವೈತವು) ಅಲ್ಲಿ ಕಂಡುಬರುವದಿಲ್ಲ. ಶ್ರುತಿಯೂ ಕೂಡ ಹೀಗೆಯೇ ಹೇಳುವದರಿಂದ ಶ್ರುತಿ ಪ್ರಮಾಣಗೌರವದಿಂದಲೂ ಇದು ಗೊತ್ತಾಗುತ್ತದೆ.

ಸರ್ವದಾ ಚಾತ್ಮರೂಪತ್ವಾತ್ ವ್ಯಭಿಚಾರಾದನಾತ್ಮನಃ |
ಬ್ರಹ್ಮಾತ್ಮನಿ ಸ್ವತಃ ಸಿದ್ಧಂ ಜ್ಞಾನಂ ಮೋಹಾಪನೋದಿ ಯತ್ ||

೬೬೫. ಮೋಹವನ್ನು ಕಳೆಯುವ ಜ್ಞಾನವು ಯಾವಾಗಲೂ ಬ್ರಹ್ಮಾತ್ಮ ವಸ್ತುವಿನಲ್ಲಿ ಸ್ವತಃ ಸಿದ್ಧವಾಗಿದೆ. ಅದು ಯಾವಾಗಲೂ ಆತ್ಮರೂಪವಾಗಿರು ತ್ತದೆ. ಅನಾತ್ಮವಾದರೊ, ವ್ಯಭಿಚಾರಸ್ವರೂಪದ್ದಾಗಿದೆ.

ಜ್ಞಾತಾಜ್ಞಾತವಿಭಾಗೋಽಸ್ಮಿನ್ ಜ್ಞಾನಾಜ್ಞಾನಾತ್ಮತಾ ತಥಾ |
ಜ್ಞಾತ್ರಜ್ಞಾತೃತ್ವಮಪ್ಯೇವಂ ಸ್ವತಃ ಸಿದ್ಧೇರ್ನ ಸಾಕ್ಷಿಣಃ ||

೬೬೬. ಈ ಬ್ರಹ್ಮದಲ್ಲಿಯೇ ಜ್ಞಾತಾಜ್ಞಾತವಿಭಾಗವುಳ್ಳ, ಹಾಗೂ ಜ್ಞಾನಾಜ್ಞಾನವಿಭಾಗವುಳ್ಳ ಮತ್ತು ಜ್ಞಾತೃ-ಅಜ್ಞಾತೃವಿಭಾಗವುಳ್ಳ ಜಗತ್ತು ಕಲ್ಪಿತವಾಗಿರುತ್ತದೆ. ಸಾಕ್ಷಿಯು ಸಾಕ್ಷಿತ್ವವೂ ಕಲ್ಪಿತವೇ. ಸ್ವತಃಸಿದ್ಧನಾದ ಸಾಕ್ಷಿಯಲ್ಲಿ ಯಾವ ವಿಭಾಗವೂ ಇರುವದೇ ಇಲ್ಲ.

ಸ್ವವ್ಯಾಪಾರೇ ನಿಯೋಗೋಽಪಿ ನಿಯುಂಕ್ತೇ ಪುರುಷಂ ಬಲಾತ್ |
ಯಥಾಭೂತಾರ್ಥತಾ ಬುದ್ಧೇರ್ವಾಸ್ತವೀ ನ ತು ಪೌರುಷೀ ||

೬೬೭. ನಿಯೋಗವು ಕೂಡ ತನ್ನ ವ್ಯಾಪಾರದಲ್ಲಿ ಸ್ವಸಾಮರ್ಥ್ಯದಿಂದ ಪುರುಷನನ್ನು ಬಲದಿಂದ ಕಟ್ಟುಪಾಡುಮಾಡುತ್ತದೆ. ಆದರೆ ಜ್ಞಾನವು ಇದ್ದದ್ದನ್ನು ತಿಳಿಸುತ್ತದೆಯಾದ್ದರಿಂದ ಇದು ವಾಸ್ತವವು. ಪುರುಷಾಧೀನವಲ್ಲ.

ಇದಮೇವಮದೋ ನೇತಿ ಯಥೈವಾರ್ಥಪ್ರವೃತ್ತೇ ವಿಧಿವತ್ |
ವೇತ್ತಿ ತತ್ತ್ವಮಸೀತ್ಯೇವಂ ಕಿಂ ನ ವೇತ್ತ್ಯಭಿಧಾಶ್ರುತೇಃ ||

೬೬೮. ಇದು ಹೀಗೆ ; ಇದು ಹೀಗಲ್ಲ–ಎಂದು ವಿಧಿಯನ್ನು ಕೈಬಿಟ್ಟು ವಸ್ತುವನ್ನು ಕರ್ಮಕಾಂಡದಲ್ಲಿ ಹೇಗೆ ತಿಳಿಯುವರೋ ಹಾಗೆಯೇ ತತ್ತ್ವಮಸಿ ಎಂಬ ವಾಕ್ಯದಿಂದಲೂ ಶ್ರೋತೃವು ವಸ್ತುವನ್ನೇಕೆ ತಿಳಿಯಲಾರನು ? ಅಭಿಧಾ ಶ್ರುತಿಯ ಬೋಧನೆಯೂ ಇದೆಯಷ್ಟೆ ?

ಕ್ರಿಯಾಯಾಂ ವಿಧಿಸಂಪಾತಃ ಕರ್ತ್ರಾದಿಷು ನ ಸಿದ್ಧಿತಃ |
ನ ಚಾನೇಕಾರ್ಥತೈಕಸ್ಯ ವಾಕ್ಯಸ್ಯ ಭವತೇಷ್ಯತೇ ||

೬೬೯. ವಿಧಿವಾಕ್ಯದಲ್ಲಿ ಕ್ರಿಯೆಯಲ್ಲಿ ಅದು ಸಂಬಂಧಿಸುವದರಿಂದ ಕರ್ತೃವೇ ಮುಂತಾದವರಲ್ಲಿ ವಿಧಿಯು ಕೆಲಸಮಾಡಲಾರದು. ಏಕೆಂದರೆ ಒಂದು ವಾಕ್ಯಕ್ಕೆ ಅನೇಕ ತಾತ್ಪರ್ಯವನ್ನು ನೀನು ಒಪ್ಪುವದಿಲ್ಲವಷ್ಟೆ ?

ಪ್ರತ್ಯಕ್ಷಾದೇವ ಭೇದೋಽಯಮಭಿಧಾನನಿಯೋಗಯೋಃ |
ತಸ್ಯ ಚೇದ್ ವ್ಯಭಿಚಾರಿತ್ವಂ ವ್ಯರ್ಥಂ ಸರ್ವಜ್ಞಭಾಷಿತಮ್ ||

೬೭೦. ಅಭಿಧಾನ–ನಿಯೋಗಗಳಿಗೆ ಭೇದವು ಪ್ರತ್ಯಕ್ಷವಾಗಿದೆ. ಪ್ರತ್ಯಕ್ಷಕ್ಕೆ ಭ್ರಾಂತವಾದ್ದರಿಂದ ವ್ಯಭಿಚಾರಿತ್ವವೆಂದು ಕಲ್ಪಿಸಿದರೆ ಸರ್ವಜ್ಞನಾದವನು ಹೇಳಿದ ಪ್ರತ್ಯಕ್ಷಲಕ್ಷಣವೆಲ್ಲವೂ ವ್ಯರ್ಥವಾಗುವದು.

ಕರ್ತುಃ ಕ್ರಿಯಾಯಾಂ ಸ್ವಾತಂತ್ರ್ಯಂ ವಸ್ತುವೃತ್ತೇ ಹ್ಯನೀಶ್ವರಃ |
ವಸ್ತುವೃತ್ತಂ ಚ ನೋ ಮುಕ್ತಿಃ ಕ್ರಿಯಾತಶ್ಚೇದನಿತ್ಯತಾ ||

೬೭೧. ಕರ್ತೃವಿಗೆ ಕ್ರಿಯೆಯಲ್ಲಿ ಸ್ವಾತಂತ್ರ್ಯವಿರುವದು. ವಸ್ತುವಿನ ವಿಷಯದಲ್ಲಿ ಇರುವದಿಲ್ಲ. ನಮ್ಮ ಪಕ್ಷದಲ್ಲಿ ಮುಕ್ತಿಯು ವಸ್ತುತಂತ್ರವಾಗಿದೆ. ಏಕೆಂದರೆ ಕ್ರಿಯೆಯಿಂದಾಗುವದಾದರೆ ಅದು ಅನಿತ್ಯವಾಗುತ್ತದೆ.

ಯಥಾವಸ್ತು ಹಿ ಯಾ ಬುದ್ಧಿಃ ಸಮ್ಯಗ್ಜ್ಞಾನಂ ತದೇವ ನಃ |
ಪೌರುಷಾಯಾಸಮಾತ್ರೋತ್ಥಮಜ್ಞಾನಂ ರಜತಾದಿವತ್ ||

೬೬೨. ಯಾವ ಬುದ್ಧಿಯು ವಸ್ತುವಿಗೆ ಅನುಗುಣವಾಗಿರುವದೋ ನಮಗೆ ಅದೇ ಸಮ್ಯಗ್ಜ್ಞಾನವೆನಿಸುವದು. ಕಪ್ಪೆಯಚಿಪ್ಪಿನಲ್ಲಿ ಬೆಳ್ಳಿಯ ಜ್ಞಾನದಂತಿರುವ ಅಜ್ಞಾನವು ಪುರುಷನ ಭ್ರಮಮಾತ್ರದಿಂದ ಉಂಟಾದದ್ದಾಗಿದೆ.

ವಸ್ತುಮಾತ್ರಾನುರೋಧಿತ್ವಾತ್ ಸಮ್ಯಗ್ಜ್ಞಾನಸ್ಯ ದುಷ್ಕರಮ್ ।
ನಿಯೋಗಾನುಪ್ರವೇಶೇನ ವಸ್ತುತತ್ತ್ವಾವಬೋಧನಮ್ ॥

೬೬೩. ಸಮ್ಯಗ್ಜ್ಞಾನವು ಯಾವಾಗಲೂ ವಸ್ತುವಿಗೆ ಅನುಗುಣವಾಗಿರುವದರಿಂದ ನಿಯೋಗವನ್ನು ಅದು ಒಡಗೂಡಿಸಿಕೊಂಡು ವಸ್ತುತತ್ತ್ವವನ್ನು ತಿಳಿಸುವದು ದುಷ್ಕರವೇ ಆಗಿದೆ.

ನಿಯೋಗಾನುಪ್ರವೇಶೇ ವಾ ಹೇತೋರ್ವ್ಯಾಪ್ತಿಃ ಪ್ರದರ್ಶ್ಯತಾಮ್ ।
ಗಮಕತ್ವಮೃತೇ ವ್ಯಾಪ್ತಿಂ ನೈವ ಹೇತೋಃ ಪ್ರಸಿಧ್ಯತಿ ॥

೬೬೪. ಅಥವಾ ನಿಯೋಗಾನುಪ್ರವೇಶವಿಷಯಕ್ಕೆ ಹೇತುವಿಗೆ ವ್ಯಾಪ್ತಿಯನ್ನಾದರೂ ತೋರಿಸಿರಿ. ವ್ಯಾಪ್ತಿಯಿಲ್ಲದೆ ಹೇತುವಿಗೆ ಗಮಕತ್ವವು ಸಿದ್ಧಿಸುವದಿಲ್ಲ.

ವಿಧಿಶೂನ್ಯಸ್ಯ ವಾಕ್ಯಸ್ಯ ಪ್ರಾಮಾಣ್ಯಂ ಪ್ರತ್ಯಗಾತ್ಮನಿ ।
ಯೇಷಾಂ ಪ್ರಕಾಶ್ಯತ ಇತಿ ನ ತೇಷಾಂ ಮತಿರೀದೃಶೀ ॥

೬೬೫. ವಿಧಿಸಂಪರ್ಕವಿಲ್ಲದ ಉಪನಿಷದ್ವಾಕ್ಯಕ್ಕೆ ಪ್ರತ್ಯಗಾತ್ಮನ ವಿಷಯದಲ್ಲಿ ಪ್ರಾಮಾಣ್ಯವು ಪ್ರತಿಪಾದಿಸಲ್ಪಡುವವರ ಮತದಲ್ಲಿ ಈ ರೀತಿಯಾದ (ವಿಧಿಯು ಜ್ಞಾನಕ್ಕೆ ಬೇಕೆಂಬ) ಬುದ್ಧಿಯು ಇರಲಾರದು.

ಪ್ರಕಾಶ್ಯತ್ವಾಶ್ರಯಶ್ಚಾಯಂ ವ್ಯಾಪಾರಃ ಸರ್ವ ಏವ ಚ ।
ತಸ್ಮಿನ್ನಸತಿ ತನ್ಮಿಥ್ಯಾ ಯದೇತತ್‌ಭವತೇರಿತಮ್ ॥

೬೬೬. ಈ ಜ್ಞಾನವ್ಯಾಪಾರವು ವಸ್ತುವನ್ನು ಪ್ರಕಾಶನಗೊಳಿಸುವದನ್ನು ಆಶ್ರಯಿಸಿದೆ. ಈ ಜ್ಞಾನವಿಲ್ಲವಾದರೆ ಆ ವಸ್ತುವು ಸುಳ್ಳೇ ಸರಿ. ಇದನ್ನೇ ನೀನು ಹೇಳಿರುತ್ತೀಯೆ.

ಅಸ್ಥೂಲಾಶಬ್ದತಾವಾದಿ ಪ್ರಕಾಶ್ಯತ್ವಾದಿ ಕುಪ್ಯತಿ ।
ನಿಯೋಗಾನುಪ್ರವೇಶೇನ ಯದಿ ವಸ್ತು ಪ್ರಕಾಶ್ಯತೇ ॥

೬೬೭. 'ಅಸ್ಥೂಲಮನಣು', 'ಅಶಬ್ದಮಸ್ಪರ್ಶಮ್' ಇವೇ ಮುಂತಾದ ವಾಕ್ಯಗಳು–ನಿಯೋಗವನ್ನು ವಾಕ್ಯಕ್ಕೆ ಅಳವಡಿಸಿದ್ದೇ ಆದರೆ, ಹಾಗೂ ಅದರಿಂದಲೇ ವಸ್ತುಜ್ಞಾನವಾಗುತ್ತದೆಯೆನ್ನುವದಾದರೆ–ಕೋಪಗೊಳ್ಳುತ್ತವೆ.

ನ ಚಾಪ್ರಮಾಣತಾ ತಸ್ಯ ನಿಯೋಗೋತ್ಸಙ್ಗಸಂಶಯಾತ್ ।
ಏವಮಪ್ಯಪ್ರಮಾಣಂ ಚೇನ್ನಿಯೋಗೋಽವಿಷಯೋ ಭವೇತ್ ॥

೬೭೮. ಇನ್ನು ಅಸ್ಥೂಲಾದಿವಾಕ್ಯಗಳಿಗೆ ನಿಯೋಗದ ಆಶ್ರಯವನ್ನು ಕಲ್ಪಿಸಿದ್ದರಿಂದ ಅವು ನಿಯೋಗಪರವಾಗಿಬಿಡುವದರಿಂದ ಬ್ರಹ್ಮಸ್ವರೂಪಕ್ಕೆ ಪ್ರಮಾಣವಲ್ಲವೆಂದಾಗುವದು. ನಿಯೋಗವನ್ನು ಅನ್ವಯಿಸದೆಇದ್ದರೆ ನಿಯೋಗವಿಲ್ಲದ್ದೆಂದಾಗಿ ಆಗಲೂ ಅಪ್ರಮಾಣವಾಗುವವು.

ಅದೃಶ್ಯಂ ಪಶ್ಯ ಇತ್ಯೇವಂ ನಿಯುಕ್ತೋಽಪಿ ನ ಶಕ್ನುಯಾತ್ |
ಶಕ್ನುಯಾತ್ ಸಂನಿಯೋಗಾಚ್ಚೇತ್ ಕುರ್ಯಾತ್ತಸ್ಕರಕಂದುವತ್ ||

೬೭೯. ಕಾಣದೆಇರುವದನ್ನು 'ನೋಡು' ಎಂದು ನಿಯೋಗಮಾಡಿದರೂ ನೋಡಲಾರನು. ನಿಯೋಗಸಾಮರ್ಥ್ಯದಿಂದ ಕಾಣದ್ದನ್ನೂ ಕಂಡುಕೊಳ್ಳಬಲ್ಲನು- ಎನ್ನುವದಾದರೆ ಅದು ತಸ್ಕರಕಂದುವಿನಂತಾಗುವದು.

ವಿದಿತೇತರಾತಿರೇಕಿತ್ವಾತ್ ಬ್ರಹ್ಮರೂಪಾನುವಾದಿಭಿಃ |
ನಿಯೋಗಗರ್ಭವಚನೈಃ ಪಶ್ಯೇದಿತಿ ವಿರುಧ್ಯತೇ ||

೬೮೦. ಬ್ರಹ್ಮವು ವಿದಿತಕ್ಕಿಂತಲೂ ಬೇರೆಯಾದ್ದರಿಂದ ಬ್ರಹ್ಮರೂಪಾನುವಾದಿಗಳಾದ ನಿಯೋಗ(ದಂತಿರುವ 'ಪಶ್ಯೇತ್' ಎಂಬ) ವಚನಗಳಿಂದ ತಿಳಿಸಿದರೆ ಅದುಕೂಡ ವಿರುದ್ಧವಾಗುವದು.

ವಿಜ್ಞಾತಾರಮರೇ ಕೇನ ವಿಜಾನೀಯಾದಿತಿ ಶ್ರುತಿಃ |
ನ ದೃಷ್ಟೇರಿತಿ ದೃಶ್ಯತ್ವಂ ನಿಯೋಗೈರೇವ ವಾರ್ಯತೇ

೬೮೧. 'ವಿಜ್ಞಾತಾರಮರೇ ಕೇನ ವಿಜಾನೀಯಾತ್' ಎಂಬ ಶ್ರುತಿಯೂ 'ನ ದೃಷ್ಟೇರ್ದ್ರಷ್ಟಾರಂ ಪಶ್ಯೇಃ' ಎಂಬ ನಿಯೋಗರೂಪವಾದ ಶ್ರುತಿಯೂ ದೃಶ್ಯತ್ವವನ್ನೂ ನಿರಾಕರಿಸುತ್ತದೆ. ಆದ್ದರಿಂದ ಬ್ರಹ್ಮಸ್ವರೂಪಬೋಧಕವಾಕ್ಯದಲ್ಲಿ ನಿಯೋಗವಾಚಿಪದವಿದ್ದರೂ ಅದರಲ್ಲಿ ತಾತ್ಪರ್ಯವಿರುವದಿಲ್ಲ.

ಸದಾವಗತಿರೂಪಸ್ಯ ಜ್ಯೋತಿಶ್ಚಕ್ರಾವಭಾಸಿನಃ |
ಸ್ವಯಂಜ್ಯೋತಿಃ ಸ್ವಭಾವಸ್ಯ ನ್ಯಾಯ್ಯಂ ತಸ್ಮಾನ್ನ ದರ್ಶನಮ್ ||

೬೮೨. ಜ್ಯೋತಿಶ್ಚಕ್ರವನ್ನು ಬೆಳಗುವ, ಯಾವಾಗಲೂ ಬೋಧಸ್ವರೂಪವಾದ ಸ್ವಯಂಜ್ಯೋತಿಃಸ್ವಭಾವದ ಬ್ರಹ್ಮವನ್ನು ಕಾಣುವದೆಂಬುದು ನ್ಯಾಯವಲ್ಲ.

ದ್ರಷ್ಟ್ರಾ ಚೇದ್ ದೃಶ್ಯತೇ ದೃಶ್ಯಂ ಪ್ರತ್ಯಕ್ಷಾವಿಷಯಃ ಕಥಮ್ |
ಕರ್ಮಕರ್ತೃತ್ವಮೇಕಸ್ಯ ದೋಷೋ ಬ್ರಹ್ಮಾತ್ಮದರ್ಶನೇ ||

೬೮೩. ನೋಡುವವನಿಂದ ನೋಡಲ್ಪಡತಕ್ಕದ್ದು ನೋಡಲ್ಪಡುತ್ತದೆ- ಎಂದರೆ ಅದು ಪ್ರತ್ಯಕ್ಷವಿಷಯವಲ್ಲದೆ ಹೋಗುವದು ಹೇಗಾದೀತು ? ಆದ್ದರಿಂದ ಬ್ರಹ್ಮವಾಗಿ ಆತ್ಮನನ್ನು ಕಂಡುಕೊಳ್ಳಬೇಕು- ಎಂದು ಅಕ್ಷರಾರ್ಥವನ್ನು ಮಾಡಿದರೆ ಒಂದೇ ವಸ್ತುವನ್ನು ಕರ್ಮವಾಗಿಯೂ ಕರ್ತೃವಾಗಿಯೂ ಕಲ್ಪಿಸಿದ ದೋಷವು ಬರುವದು.

ಅದೃಷ್ಟಂ ತದಕರ್ಮತ್ವಾತ್ ಕೌಟಸ್ಥ್ಯಾನ್ನಾಪಿ ದೃಷ್ಟಿಕೃತ್ |
ಜನ್ಮಾದಿವಿಕ್ರಿಯಾಷಟ್ಕನಿಷೇಧೋಽಪ್ಯೇವಮರ್ಥವಾನ್ ||

೬೮೪. ಆ ಬ್ರಹ್ಮವು ಕರ್ಮವಲ್ಲದ್ದರಿಂದ ದೃಶ್ಯವಲ್ಲ. ಕೂಟಸ್ಥವಾದ್ದರಿಂದ ದ್ರಷ್ಟೃವೂ ಅಲ್ಲ. ಹೀಗೆಯೇ ಬ್ರಹ್ಮಕ್ಕೆ ಜನ್ಮಾದಿವಿಕಾರಗಳಿಲ್ಲ- ಎಂಬ ವಾಕ್ಯವನ್ನೂ ಅರ್ಥಮಾಡಿಕೊಳ್ಳಬೇಕು.

ಪ್ರಮಾತೃತ್ವಾದಿಭೇದೇನ ಯತ್ಸ್ವರೂಪಂ ಪ್ರತೀಯತೇ |
ತತ್ಪ್ರಕಾಶ್ಯತ ಇತ್ಯಾಹುರಪ್ರಕಾಶಸ್ವರೂಪತಃ ||

೬೮೫. ಪ್ರಮಾತೃವೇ ಮುಂತಾದ ಭೇದದಿಂದ ಯಾವ ಸ್ವರೂಪವು ತೋರುತ್ತಿರುವದೋ ಅದನ್ನು ಅಪ್ರಕಾಶ(ಜಡ)ವಸ್ತುಗಳ ಅಪೇಕ್ಷೆಯಿಂದ ಗೌಣವಾಗಿ ಪ್ರಕಾಶಿಸುತ್ತದೆ- ಎನ್ನಲಾಗಿದೆ.

ಪ್ರಮಾತ್ರೈವ ಪ್ರಮೇಯಂ ಚೇತ್ ಪ್ರಮಾಣಂ ಪ್ರಮಿತಿಸ್ತಥಾ |
ಸ್ವರೂಪಾಚ್ಚೈಕರೂಪತ್ವಾನ್ನ ತದೇಭಿರ್ನಿರುಚ್ಯತೇ ||

೬೮೬. ಪ್ರಮಾತೃವೇ ಪ್ರಮೇಯವೂ ಪ್ರಮಾಣವೂ ಪ್ರಮಿತಿಯೂ ಆಗಿರುವಲ್ಲಿ ಸ್ವರೂಪವೊಂದೇ. ಅದು ಏಕರೂಪವೇ- ಎಂದಾಗಿ ಈ ಶಬ್ದಗಳಿಂದ ಅದು ಹೇಳಲ್ಪಡುವದಿಲ್ಲ.

ಪ್ರಾಮಾಣ್ಯಮನುವಾದಾನಾಂ ನ ಚೇತ್ ಸ್ವವಿಷಯೇ ಮತಮ್ |
ಪಯೋಗುಣಸ್ಯ ಸಂಬಂಧೋ ನ ಪ್ರಾಪ್ನೋತಿ ಜುಹೋತಿನಾ ||

೬೮೭. ಅರ್ಥವಾದರೂಪವಾದ ಅನುವಾದಶಬ್ದಗಳಿಗೆ ಆಯಾ ಸ್ವವಿಷಯಗಳಲ್ಲಿ ಪ್ರಾಮಾಣ್ಯವಿಲ್ಲವೆಂದಾಗಿಬಿಟ್ಟರೆ 'ಪಯಸಾ ಜುಹೋತಿ' ಮುಂತಾದ ವಾಕ್ಯಗಳಲ್ಲಿ ವಿಧಿಯಿಲ್ಲದ್ದರಿಂದ ಪ್ರಾಮಾಣ್ಯವಿಲ್ಲದಂತಾಗಿಬಿಡುವದು.

ಸ್ವರ್ಗೇಣೈವಾಭಿಸಂಬಂಧಃ ಪಯಸಶ್ಚೇದನುತ್ತರಮ್ |
ಸ್ವರ್ಗಸ್ಯ ಸಿದ್ಧಯೇ ನಾಲಂ ದ್ರವ್ಯಮಾತ್ರಂ ಪಯೋ ಯತಃ ||

೬೮೮. ಪಯಸಾ ಜುಹೋತಿ- ಮುಂತಾದವುಗಳಲ್ಲಿ ಪಯಆದಿಗಳಿಗೆ ಸ್ವರ್ಗದೊಡನೆಯೇ ಸಂಬಂಧವೇ ಹೊರತು 'ಜುಹೋತಿ' ಎಂಬುದರೊಡನೆ ಅಲ್ಲ- ಎನ್ನುವದಾದರೆ ಅದು ಉತ್ತರವಲ್ಲ. ಏಕೆಂದರೆ ಸ್ವರ್ಗವು ದೊರಕಬೇಕಾದರೆ ಕೇವಲ ದ್ರವ್ಯವಾದ ಪಯಸ್ಸಿನಿಂದ ಆಗುವದಿಲ್ಲ. ಏಕೆಂದರೆ ಅದು ಬರಿಯ ವಸ್ತುವು. ಆದ್ದರಿಂದ 'ಜುಹೋತಿ' ಎಂಬಿದೇ ಸ್ವರ್ಗಸಾಧನವಾದೀತು.

ಪ್ರಣಯಃ ಸಾಧನತ್ವಂ ಚ ಪ್ರಾಪ್ತಂ ತಸ್ಮಾದನೂದ್ಯತೇ |
ವಿಶಿಷ್ಟೋಽಪಾಶ್ರಯಂ ದ್ರವ್ಯಮತೋಽಲಂ ಪಶುಸಿದ್ಧಯೇ ||

೬೪೯. ನೀರನ್ನು ತರುವ ಕರ್ಮದಲ್ಲಿ ಚಮಸವೆಂಬ ಪಾತ್ರೆಯು ಸಾಧನವಾಗಿದ್ದರೂ ಪಶುಕಾಮನಾದವನು ಗೋದೋಹನಪಾತ್ರೆಯಲ್ಲಿ ಪ್ರಣಯನಮಾಡಬೇಕೆಂದು ಹೇಳಿದೆಯಷ್ಟೆ. ಹೀಗೆ ವಿಶಿಷ್ಟವಾದ ಆಶ್ರಯವುಳ್ಳ ದ್ರವ್ಯವು ಪಶುಪ್ರಾಪ್ತಿಗೆ ಸಾಧನವಾಗಿದೆ. ಆದ್ದರಿಂದ ಅಪ್‌ಪ್ರಣಯನವೆಂಬ ವಿಶಿಷ್ಟಕರ್ಮವನ್ನೇ ಪಶುಕಾಮನ ವಾಕ್ಯದಲ್ಲಿ ಅನುವಾದಮಾಡಿದೆ. ಹೀಗೆ ಕ್ರಿಯಾಸಂಬಂಧವನ್ನು ಆಶ್ರಯಿಸಿಯೇ ವಸ್ತುವು ಪುರುಷಾರ್ಥಸಾಧನವೆನಿಸುತ್ತದೆ.

ಗೋದೋಹನಸ್ಯ ಭಿನ್ನತ್ವಾತ್ ಭಿನ್ನಂ ಚೇತ್ ಸಾಧನಂ ಮತಮ್ |
ಪ್ರಾಪ್ತಾ ಪ್ರಣಯತೀತ್ಯಸ್ಯ ಸಾಧ್ಯಭೇದಾದ್ ವಿಭಿನ್ನತಾ ||

೬೫೦. ಗೋದೋಹನವೆಂಬ ಕ್ರಿಯೆಯು ಪ್ರಣಯನಕ್ಕಿಂತ ಬೇರೆಯಾದ್ದರಿಂದ ಸಾಧನವೂ ಬೇರೆಯಾಗಿರಬೇಕಲ್ಲವೆ ? ಎಂದರೆ ಹಾಗಲ್ಲ. ಏಕೆಂದರೆ ಆಗ ಸ್ವರ್ಗ, ಪಶುಪ್ರಾಪ್ತಿ–ಎಂಬ ಸಾಧ್ಯಗಳೂ ಬೇರೆಬೇರೆಯಾಗಬೇಕಾಗುವದು.

ಹಾನೋಪಾದಾನಶೂನ್ಯತ್ವಾದಪ್ರಾಮಾಣ್ಯಂ ಮತಂ ಯದಿ |
ಬ್ರಹ್ಮಾಸ್ಮೀತಿ ಪರಿಜ್ಞಾನಮಪ್ರಮಾಣಂ ಪ್ರಸಜ್ಯತೇ ||

೬೫೧. ವಸ್ತುಬೋಧಕವಾಕ್ಯದಲ್ಲಿ ಹಾನೋಪಾದಾನಗಳಿಲ್ಲದ್ದರಿಂದ ಅಪ್ರಮಾಣವು ಸಂಭವಿಸುತ್ತದೆ–ಎನ್ನುವದಾದರೆ ಅಹಂ ಬ್ರಹ್ಮಾಸ್ಮಿ ಎಂಬ ಜ್ಞಾನವೂ ಅಪ್ರಮಾಣವೆಂದು ಪ್ರಸಕ್ತವಾಗುವದು.

ಆತ್ಮತ್ವಾದನುಪಾದೇಯಮನನ್ಯತ್ವಾದಹೇಯತಾ |
ಅಭಿಧಾಶ್ರುತೇಶ್ಚೇದೇತತ್ ಸ್ಯಾತ್ ಕಿಮನ್ಯತ್ ಪ್ರಾರ್ಥ್ಯತೇ ವಿಧೇಃ ||

೬೫೨. ಬ್ರಹ್ಮವು ಆತ್ಮನಾದ್ದರಿಂದ ಅನುಪಾದೇಯವಾಗಿದೆ. ಹಾಗೆಯೇ ಆತ್ಮನಿಗಿಂತ ಅನ್ಯವಲ್ಲವಾದ್ದರಿಂದ ಅಹೇಯವೂ ಆಗಿದೆ. ಈ ಕಾರ್ಯವು ಅಭಿಧಾಶ್ರುತಿಯಿಂದಲೇ ಆಗುವದಾದರೆ ವಿಧಿಯನ್ನು ಪ್ರಾರ್ಥಿಸಿಕೊಳ್ಳುವದಾದರೂ ಏನಿದೆ ?

ಅನೂಕ್ತೇರಪಿ ಮಾನತ್ವಂ ನೈವ ಧ್ವಾಂಕ್ಷೈರ್ವಿಲುಪ್ಯತೇ |
ನಿಯೋಗಾನುಪ್ರವಿಷ್ಟತ್ವಾತ್ ಯಥೈವೇಹಾಭಿಧಾಶ್ರುತೇಃ ||

೬೫೩. ಅಭಿಧಾಶ್ರುತಿಗೆ ಪ್ರಾಮಾಣ್ಯವು ನಿಯೋಗದ ಹಂಗಿಲ್ಲದೆ ಸಿದ್ಧವಾಗುವದು ಬಗಟಹುದಾದರೆ ಅನುವಾದವಾಕ್ಯಗತವಾದ ಪದಗಳಿಗೂ ಆಯಾ ಪದಾರ್ಥಗಳ ಬೋಧನೆಯಲ್ಲಿ ಪ್ರಾಮಾಣ್ಯವು ಸಿದ್ಧವಾಗುವದನ್ನು ಯಾವ ಮೀಮಾಂಸಕನೆಂಬ ಕಾಗೆಯೂ ನಿವಾರಿಸಲಾರನು.

ಏವಂ ಚ ಸತಿ ದೃಷ್ಟಾಂತೋ ಭವತಾಂ ನೋಪಪದ್ಯತೇ |
ನಿಯೋಗಾಪೇಕ್ಷವಿಜ್ಞಾನಮಿತ್ಯೇವಂ ನಿಯಮಃ ಕುತಃ ||

೬೫೪. ಹೀಗೆ ಅನುವಾದವಾಕ್ಯಗತವಸ್ತುವಿಗೆ ನಿಯೋಗವಿಲ್ಲದೆ ಪ್ರಾಮಾ ಣ್ಯವು ಸಿದ್ಧಿಸುವದಾದರೆ ನಿಯೋಗಕ್ಕೆ ಒಳಪಟ್ಟದ್ದು ಮಾತ್ರವೇ ಪ್ರಮಾಣವು ಎಂಬಿದಕ್ಕೆ ದೃಷ್ಟಾಂತವಿಲ್ಲವಾಗುವದು. ಆದ್ದರಿಂದ ನಿಯೋಗದಿಂದಲೇ ವಿಜ್ಞಾನವು ಎಂಬ ನಿಯಮವೇಕೆ ?

ವಾದಾನುವಾದಯೋರರ್ಥೋ ಯದಿ ಭಿನ್ನಃ ಪ್ರತೀಯತೇ |
ಅಗತಾರ್ಥಾಧಿಗಂತೃತ್ವಾದಸ್ತ್ವನೂಕ್ತೇಃ ಪ್ರಮಾಣತಾ ||

೬೫೫. (ವಿಧಿ)ವಾದ, ಅನುವಾದಗಳಿಗೆ ಅರ್ಥವು ಬೇರೆಬೇರೆಯಾಗಿ ಕಂಡು ಬಂದಲ್ಲಿ ಹೇಳದೆ ಇರುವ ಅರ್ಥವನ್ನು ತಿಳಿಸಿದ್ದರಿಂದ ಅನುವಾದಕ್ಕೂ ಪ್ರಾಮಾ ಣ್ಯವು ಉಂಟಾಗಲಿ ; (ಏಕಾಗಬಾರದು ?)

ಅನ್ವಕ್ಷಂ ಭಿನ್ನರೂಪಾ ಧೀರಿಹ ವಾದಾನುವಾದಯೋಃ |
ಅಪೂರ್ವಾಧಿಗತಿಃ ಪೂರ್ವಮಿಹ ಬುದ್ಧ್ವಾಪಬೋಧನಮ್ ||

೬೫೬. ಇಲ್ಲಿ ವಾದ-ಅನುವಾದಗಳಿಗೆ ಆಯಾ ಇಂದ್ರಿಯ(ಪ್ರತ್ಯಕ್ಷಾನು ಸಾರವಾಗಿ) ಭಿನ್ನರೂಪವಾದ ಜ್ಞಾನವು ಇರುತ್ತದೆ. ಅಪೂರ್ವವಾದದ್ದರ ತಿಳುವಳಿಕೆಯುಂಟಾಗುವದು ಹಿಂದೆ ಹೇಳಿದ್ದು. ಇಲ್ಲಿಯಾದರೊ ತಿಳಿದದ್ದನ್ನೇ ತಿಳಿಯತಕ್ಕದ್ದಾಗಿದೆ.

ಮೃಗತೋಯಾದಿವನ್ಮಿಥ್ಯಾ ಯದ್ಯನೂಕ್ತೇರ್ಭವೇನ್ಮತಿಃ |
ವಿಧೇರ್ನಿರ್ವಿಷಯತ್ವಂ ವಃ ಸರ್ವತ್ರೈವ ಪ್ರಸಜ್ಯತೇ ||

೬೫೭. ಪದದಿಂದುಂಟಾದ ಬುದ್ಧಿಯು ಬಿಸಿಲುಗುದುರೆ ನೀರಿನಂತೆ ಮಿಥ್ಯೆ ಯೆಂದಾದರೆ ಆಗ ನಿಯೋಗವು ನಿರ್ವಿಷಯವೆಂದಾಗುವದು. ಇದು ಎಲ್ಲಾ ಕಡೆಯಲ್ಲೂ ಪ್ರಾಪ್ತವಾಗುವದು.

ಸ್ವಾಭಿಧೇಯಂ ನಿರಾಕಾಂಕ್ಷೋ ಹ್ಯನುವಾದಃ ಪ್ರಬೋಧಯೇತ್ |
ತತ್ರ ಚೇದಪ್ರಮಾಣಂ ಸ್ಯಾತ್ ಸ್ಯಾತ್ತದುಚ್ಚಾರಣಂ ವೃಥಾ ||

೬೫೮. ಅನುವಾದವು ತಾನು ಹೇಳಬೇಕಾದದ್ದನ್ನು ನಿರಾಕಾಂಕ್ಷವಾಗಿ ತಿಳಿಸಬೇಕಾಗಿರುತ್ತದೆ. ಅಲ್ಲಿ ಅದು ಪ್ರಮಾಣವಲ್ಲವೆಂದಾದರೆ ಅದನ್ನು ಉಚ್ಚಾ ರಣೆಮಾಡಿದ್ದೇ ವ್ಯರ್ಥವೆಂದಾಗುವದು.

ಸಾಕಾಂಕ್ಷತ್ವಾನುವಾದತ್ವೇ ಕುತಶ್ಚಾವಗತೇ ತ್ವಯಾ |
ಅಪ್ರಾಮಾಣ್ಯಾನ್ನ ಚೇತ್ತಾಭ್ಯಾಂ ವಿಧೇಯಪ್ರಕ್ಷಯಾದ್ವಿಧೇಃ ||

೬೫೯. ಇನ್ನು ನೀನು ಸಾಕಾಂಕ್ಷತ್ವ, ಅನುವಾದತ್ವಗಳನ್ನು ಪದದಿಂದಲೊ, ವಿಧಿಯಿಂದಲೊ-ಎಲ್ಲಿಂದ ತಿಳಿದವನಾದೆ ? ಪದಪ್ರಾಮಾಣ್ಯವನ್ನು ಒಪ್ಪಿಲ್ಲವಾಗಿ ಇದು ತಿಳಿಯಲಾರದು. ಹಾಗಿಲ್ಲವಾದರೆ ವಿಧಿವಶನಾಗಿಯೇ ತಿಳಿದಿದ್ದರೆ ವಿಧಿಯು ಅರ್ಥವನ್ನು ಹೇಳುವದರಿಂದ ಉಪಕ್ಷೀಣವಾಗಿದ್ದು ತಿಳಿಯುವದಾಗಲಾರದು.

ಸ್ವಶಬ್ದಾನಭಿಧೇಯಂ ಯತ್ತದೇವಾಪೇಕ್ಷತೇ ಪದಮ್ |
ಸ್ವಾರ್ಥೇ ತದಪ್ರಮಾಣಂ ಚೇತ್ ವಾಕ್ಯಾರ್ಥಸ್ಯಾನ್ವಯಃ ಕುತಃ ||

೨೦೦. ಪದವು ಸ್ವಶಬ್ದದಿಂದ ಹೇಳಲ್ಪಡದಿರುವದನ್ನೇ ಬಯಸುತ್ತದೆ. ಆದರೆ ಅದು ನಿರಾಕಾಂಕ್ಷವಾಗಿ ಪದಾರ್ಥದ ವಿಷಯದಲ್ಲಿ ಪ್ರಮಾಣವಲ್ಲದೆ ಹೋದರೆ ವಾಕ್ಯಾರ್ಥದ ಅನ್ವಯವು ಹೇಗಾದೀತು ?

ಅಪ್ರಮಾಣಮಿತಿ ಜ್ಞಾನಂ ಕಸ್ಮಾದಜ್ಞಾಯಿ ಕಥ್ಯತಾಮ್ |
ವಿದ್ಯಮಾನೋಪಲಂಭಾನಿ ನ ಹ್ಯಭಾವಂ ಪ್ರಮಿಣ್ವತೇ ||

೨೦೧. ಪದವು ಅಪ್ರಮಾಣವು ಎಂಬ ಜ್ಞಾನವು ಏತರಿಂದ ತಿಳಿಯಿತು ? ಎಂಬಿದನ್ನು ಹೇಳುವವನಾಗು. ಪ್ರತ್ಯಕ್ಷದಿಂದಾದರೆ ಇದ್ದುದನ್ನು ಕಾಣುವ ಅದು ಅಭಾವವನ್ನು ತಿಳಿಸಲಾರದು.

ಪರಸ್ವಭಾವವಿಧ್ವಂಸವರ್ತ್ಮನೈವಾತ್ಮವಸ್ತುನಃ |
ವಕ್ಷ್ಯತ್ಯವಗತಿಂ ಚೋರ್ಧ್ವಂ ವಿಧಿನೈವೇತಿ ದುಃಸ್ಥಿತಮ್ ||

೨೦೨. ಅನಾತ್ಮಸ್ವಭಾವದ ಅನ್ನಮಯಾದಿಗಳ ಪ್ರತಿಷೇಧದ್ವಾರದಿಂದಲೇ ಆತ್ಮವಸ್ತುವಿನ ಜ್ಞಾನವನ್ನು ಮುಂದೆ ಹೇಳಲಾಗುವದು. ಆದ್ದರಿಂದ ವಿಧಿಯಿಂದಲೇ ಜ್ಞಾನವೆಂದು ಹೇಳುವದು ಕಷ್ಟಕರವಾಗಿರುವದು.

ವ್ಯಾವೃತ್ತಿಃ ಪರತೋಽಭಾವೋ ನ ಚ ತಸ್ಯೇಂದ್ರಿಯೇಣ ಹಿ |
ಸಂಬಂಧೋಽಸ್ತಿ ತತೋ ಭೇದಃ ಪ್ರಮಾಣೈರ್ನೋಪಲಭ್ಯತೇ ||

೨೦೩. ಮತ್ತೊಂದರಿಂದ ವ್ಯಾವೃತ್ತಿಯೆಂಬುದು ಅಭಾವವೆಂದಾದರೆ ಅದು ಇಂದ್ರಿಯದಿಂದ ಅಲ್ಲ. ಏಕೆಂದರೆ ಅಭಾವಕ್ಕೆ ಇಂದ್ರಿಯಸಂಬಂಧವಿಲ್ಲ. ಅನಂತರ ಭೇದವು ಉಳಿದ ಪ್ರಮಾಣಗಳಿಂದಲೂ ಕಂಡುಬರುವದಿಲ್ಲ.

ಪ್ರಮಾಭಾವಸ್ವರೂಪತ್ವಾತ್ ನಾಪ್ಯಭಾವಾದ್ ಭಿದೇಷ್ಯತೇ |
ಸಂವಿತ್ತ್ಯಭಾವೋ ನೈವೇಹ ಪ್ರಕಾಶಯತಿ ಕಿಂಚನ ||

೨೦೪. ಪ್ರಮಾಭಾವಸ್ವರೂಪವಾದ ಅಭಾವದಿಂದ ಭೇದವು ಸಿದ್ಧವಾಗುವದಿಲ್ಲ. ಜ್ಞಾನದ ಅಭಾವವು ಯಾವ ವಸ್ತುವನ್ನೂ ಬೆಳಗಲಾರದು.

ಇತಿ ಸ್ವಾಭಿಮತಂ ಸರ್ವಂ ತೇನ ಚಾಸ್ಯ ವಿರುದ್ಧತಾ |
ವಸ್ತುವೃತ್ತಾನುರೋಧೇನ ವ್ಯಾಪಾರಃ ಫಲವಾನಿಹ ||

೨೦೫. ಹೀಗೆ ಆಕ್ಷೇಪಕನ ಅಭಿಪ್ರಾಯವೆಲ್ಲವೂ ಪ್ರಮಾಣವಿದಂಗೆ ವಿರೋಧವಾಗಿದ್ದು– ಆತ್ಮವಸ್ತುವಿನ ಸ್ವಭಾವಕ್ಕನುಗುಣವಾದ ವ್ಯಾಪಾರವೇ ಇಲ್ಲಿ ಫಲಪ್ರದವಾಗಿರುವದು.

ನ ಕುಲಾಲವಶಾದ್ ವ್ಯೋಮ ಶರಾವಾಯೋಪ್ಯಲಂ ಯತಃ |
ಆತ್ಮಜ್ಞಾನಂ ಪ್ರಸಿದ್ಧಂ ಚೇತ್ ವಿಧೇರೇವ ವಿಧಿಃ ಕುತಃ |
ಅಥಾಪ್ರಸಿದ್ಧಂ ನಿತರಾಂ ವಿಧಿರ್ನೈವೋಪಪದ್ಯತೇ ||

೭೦೬. ಆಕಾಶವು ಶರಾವವನ್ನು ಮಾಡಲು ಯೋಗ್ಯವಲ್ಲವಾಗಿದ್ದು ಕುಂಬಾರನ ಕಡೆಯಿಂದ ಅದು ಶರಾವನಿರ್ಮಾಣಕ್ಕೆ ತಕ್ಕದ್ದಾಯಿತೆಂದು ಹೇಳಲಾಗುವದಿಲ್ಲ. ಹಾಗೆಯೇ ಆತ್ಮಜ್ಞಾನವು ಪ್ರಸಿದ್ಧವೇ ಆಗಿದ್ದರೆ ವಿಧಿಯು ಬೇಕಿರುವದಿಲ್ಲ. ಹಾಗಲ್ಲದೆ ಸರ್ವಥಾ ಅಪ್ರಸಿದ್ಧವಾಗಿದ್ದರೆ ವಿಧಿಯು ಹೊಂದುವದೇ ಇಲ್ಲ.

ಕೈವಲ್ಯಕಾರಿತಾ ಬುದ್ಧೇರ್ನಿಯೋಗಾದೇವ ಚೇದ್ ಭವೇತ್ |
ನಿಯೋಗಾರ್ಥಾವಗತಯೇ ನಿಯೋಗೋಽನ್ಯೋಽಪಿ ಮೃಗ್ಯತಾಮ್ ||

೭೦೭. ಜ್ಞಾನಕ್ಕೆ ಮೋಕ್ಷವನ್ನುಂಟುಮಾಡುವ ಶಕ್ತಿಯು ನಿಯೋಗದಿಂದಲೇ ಆಗಬೇಕೆನ್ನುವದಾದರೆ ನಿಯೋಗದ ಅರ್ಥವನ್ನು ಅರಿತುಕೊಳ್ಳಲು ಮತ್ತೊಂದು ನಿಯೋಗವನ್ನು ಹುಡುಕೋಣವಾಗಲಿ.

ತತ್ತ್ವಮಸ್ಯಾದಿವಾಕ್ಯೋತ್ಥಂ ವಿಜ್ಞಾನಂ ಸ್ವಫಲಂ ಸ್ವತಃ |
ಅತೋಽವಗಮ್ಯತೇಽಸ್ಮಾಭಿಃ ತೃಪ್ತ್ಯಾಖ್ಯಫಲವತ್ ಭುಜೇಃ ||

೭೦೮. ತತ್ತ್ವಮಸಿ– ಮುಂತಾದ ವಾಕ್ಯದಿಂದುಂಟಾದ ವಿಜ್ಞಾನವು ತಾನೇ ಫಲರೂಪವಾಗಿರುವದರಿಂದ ಊಟದ ಫಲವಾದ ತೃಪ್ತಿಯಂತೆ ಅದೇ ಸಾಕಾಗಿರುತ್ತದೆ– ಎಂದು ನಾವು ತಿಳಿಯುತ್ತೇವೆ.

ಸ್ವಾಧ್ಯಾಯೋಽಧ್ಯೇತವ್ಯ ಇತಿ ವಿಧ್ಯಂತರಮೃತೇ ಯಥಾ |
ವಿಧ್ಯರ್ಥಾವಗಮಸ್ತದ್ವತ್ ಅಸ್ತ್ವಿಹಾಪ್ಯಭಿಧಾಶ್ರುತೇಃ ||

೭೦೯. 'ಸ್ವಾಧ್ಯಾಯೋಽಧ್ಯೇತವ್ಯಃ' ಎಂಬ ವಿಧಿವಾಕ್ಯಕ್ಕೆ ಬೇರೊಂದು ವಿಧಿವಾಕ್ಯದ ಹಂಗಿಲ್ಲದೆ ಹೇಗೆ ವಿಧ್ಯರ್ಥಬೋಧವಾಗುವದೋ ಹಾಗೆಯೇ ಇಲ್ಲಿಯೂ ಅಭಿಧಾಶ್ರುತಿಗೆ ಬೋಧವು ಆಗಲಿ.

ನಿಯೋಗವಿರಹಾದಸ್ಯ ಯದ್ಯರ್ಥಾವಗಮೋ ಮೃಷಾ |
ಇಹಾಪಿ ತದಮಾನತ್ವಮಭಿಧಾನಶ್ರುತೇರಿವ ||

೭೧೦. ನಿಯೋಗವಿಲ್ಲಷ್ಟರಿಂದ ಅಭಿಧಾಶ್ರುತಿಯ ಅರ್ಥಜ್ಞಾನವು ಆಗುವದಿಲ್ಲವಾಗಿ ಅದು ಸುಳ್ಳು ಎನ್ನುವದಾದರೆ ಅಭಿಧಾಶ್ರುತಿಯಂತೆಯೇ 'ಸ್ವಾಧ್ಯಾಯೋಽಧ್ಯೇತವ್ಯಃ' ಎಂಬಲ್ಲಿಯೂ ಬೇರೊಂದು ವಿಧಿವಾಕ್ಯವಿಲ್ಲವಾದ್ದರಿಂದ ಅಪ್ರಮಾಣವೆಂದಾಗಲಿ.

ಭವೇದ್ವಿಧ್ಯನುಕೂಲಾ ವಾ ಅಭಿಧಾ ಯದಿ ವಾ ವಿಧಿಃ |
ಅಭಿಧಾವರ್ತ್ಮಯಾಯಿಾ ಸ್ಯಾತ್ತತ್ರ ದೋಷಗುಣಾವಿಮೌ ||

೭೧೧. ಅಭಿಧಾವಾಕ್ಯವು ವಿಧ್ಯನುಗುಣವಾಗಿರಲಿ, ಅಥವಾ ವಿಧಿಯೇ ಅಭಿಧಾನುಗುಣವಾಗಿರಲಿ–ಈ (ಕೆಳಗಿನ) ಗುಣದೋಷಗಳುಂಟಾಗುತ್ತವೆ.

ಸ್ಯಾದ್ದ್ಯುಲೋಕಾಗ್ನಿವತ್ ಜ್ಞಾನಂ ಯದಿ ವಿಧ್ಯನುರೋಧಿನೀ |
ಅಭಿಧಾಶ್ರುತಿ ದೃಷ್ಟಾರ್ಥಾ ಸಮ್ಯಗ್ಜ್ಞಾನಂ ತು ದುರ್ಲಭಮ್ ||

೭೧೨. ಅಭಿಧಾವಾಕ್ಯವು ವಿಧ್ಯನುಗುಣವಾದಲ್ಲಿ–ದ್ಯುಲೋಕವೇ ಅಗ್ನಿ ಎಂಬಂತೆ ಜ್ಞಾನವಾಗಬೇಕಾಗುವದು. ಏಕೆಂದರೆ ಅಭಿಧಾಶ್ರುತಿಯು ದೃಷ್ಟಾರ್ಥವಾಗಿರುತ್ತದೆ. ಸಮ್ಯಗ್ಜ್ಞಾನವಂತೂ ದುರ್ಲಭವೇ ಸರಿ.

ಅಥಾಭಿಧಾನುರೋಧೀ ಸ್ಯಾನ್ನಿಯೋಗೋಽಯಂ ತಥಾಪಿ ಚ |
ಅಭಿಧಾನುವಿಧಾಯಿತ್ವಾತ್ ವಿಧ್ಯರ್ಥೋಽತ್ರ ಸುದುರ್ಲಭಃ ||

೭೧೩. ಇನ್ನು ವಿಧಿಯೇ ಅಭಿಧಾವಾಕ್ಯಾನುರೋಧಿಯಾದರೆ ಅದು ಅಭಿಧೆಯನ್ನನುಸರಿಸುವದರಿಂದ ವಿಧ್ಯರ್ಥವು ದುರ್ಲಭವೇ ಸರಿ.

ಪ್ರಾಕ್ತು ವಾಕ್ಯಾರ್ಥವಿಜ್ಞಾನಾತ್ತನ್ನಿವಿಷ್ಟಪದಾರ್ಥಯೋಃ |
ಅನ್ವಯವ್ಯತಿರೇಕಾಖ್ಯವಿವೇಕಾಯ ವಿಧಿರ್ಭವೇತ್ ||

೭೧೪. ವಾಕ್ಯಾರ್ಥವಿಜ್ಞಾನವುಂಟಾಗುವ ಮುಂಚೆ ಆ ವಾಕ್ಯಗತವಾದ ಪದಗಳಲ್ಲಿ ಅನ್ವಯ–ವ್ಯತಿರೇಕರೂಪವಾದ ವಿವೇಕಕ್ಕಾಗಿ ವಿಧಿಯು ಬೇಕಾಗುವದು.

ವಾಕ್ಯಾರ್ಥಾಪ್ರತಿಪತ್ತೌ ಹಿ ಪದಾರ್ಥಾಜ್ಞಾನಮೇವ ಚ |
ಪ್ರತಿಬಂಧೋ ಯತಸ್ತಸ್ಮಾದನ್ವಯಾದ್ಯವಲೋಕನಮ್ ||

೭೧೫. ವಾಕ್ಯಾರ್ಥವು ತಿಳಿಯದೆ ಇರುವದಕ್ಕೆ ಪದಾರ್ಥಗಳ ಅಜ್ಞಾನವೇ ಅಡ್ಡಿಯಾಗಿರುತ್ತದೆ. ಆದ್ದರಿಂದ ಅನ್ವಯವ್ಯತಿರೇಕಗಳನ್ನು ಅಪೇಕ್ಷಿಸಲಾಗಿದೆ.

ವಾಕ್ಯಾರ್ಥಜ್ಞಾನಕಾಲೇ ಯಃ ಪದಾರ್ಥೋ ನೈವ ವಿದ್ಯತೇ |
ಕರ್ತವ್ಯಃ ಕಾರಕಾಪೇಕ್ಷೋ ವಿಧೇಯಃ ಸ ನ ಸಂಶಯಃ ||

೭೧೬. ವಾಕ್ಯಾರ್ಥಜ್ಞಾನಕಾಲಕ್ಕೆ ಯಾವ (ಯಾಗಾದಿ) ಪದಾರ್ಥವು ಇರುವದೇ ಇಲ್ಲವೋ ಅದು ಕಾರಕಗಳ ಸಹಾಯದಿಂದ ಉಂಟುಮಾಡಲ್ಪಡತಕ್ಕದ್ದಾಗಿದೆ. ಈ ವಿಷಯದಲ್ಲಿ ಸಂಶಯವಿಲ್ಲ.

ವಿಪರೀತಸ್ತತೋ ಯಸ್ತು ವಾಕ್ಯಾದೇವಾವಗಮ್ಯತೇ |
ನಿತ್ಯೋ ಕರ್ಮವಿಮುಕ್ತಃ ಸನ್ನ ವಿಧೇಯಃ ಕಥಂಚನ ||

೭೧೭. ಆದರೆ ಕರ್ಮಕ್ಕೆ ವಿಪರೀತವಾದ ಯಾವ ಜ್ಞಾನವಿದೆಯೋ ಅದು ವಾಕ್ಯದಿಂದಲೇ ತಿಳಿದುಬರುತ್ತದೆ. ನಿತ್ಯನೂ ಕರ್ಮವಿಮುಕ್ತನೂ ಆದ ಆತ್ಮನು ಹೇಗೂ ವಿಧೇಯನಾಗಲಾರನು.

ಸ್ವಸಿದ್ಧೇಃ ಕಾರಣಂ ನಾನ್ಯತ್ ಜ್ಞಾನಮಜ್ಞಾನಹಾನಯೇ |
ಯಸ್ಮಾದಪೇಕ್ಷತೇ ತಸ್ಮಾತ್ ನ ನಿದಿಧ್ಯಾಸನಾಯ ತತ್ ||

೭೧೮. ಅಜ್ಞಾನವನ್ನು ಕಳೆಯುವದಕ್ಕಾಗಿ ಆಗುವ ಜ್ಞಾನವು ಸಿದ್ಧಿಗೆ ಬೇರೆಯ ಕಾರಣವನ್ನು ಬಯಸುವದಿಲ್ಲ. ಹೀಗೆ ಅದು ಬಯಸದಿರುವದ ರಿಂದಲೇ ನಿದಿಧ್ಯಾಸನ ಶೇಷವಾಗಿ ಆಗಲಾರದು.

ಸಿದ್ಧಮಪ್ಯಾತ್ಮಕಾರ್ಯಸ್ಯ ಕಾರಣಂ ಸಿದ್ಧಯೇ ನ ಚೇತ್ |
ವಿಧ್ಯಪೇಕ್ಷಂ ತದೇವ ಸ್ಯಾನ್ನ ಸ್ವಸಿದ್ಧಿಪ್ರಕಾಶಕಮ್ ||

೭೧೯. ಜ್ಞಾನವು ತನ್ನ ಕಾರ್ಯವಾದ ಅಜ್ಞಾನನಿವೃತ್ತಿಗಾಗಿಯೇ ಸಿದ್ಧ ವಾಗಿದ್ದರೂ ಅದು ತನ್ನ ಕಾರ್ಯಸಿದ್ಧಿಯನ್ನು ಪಡೆಯಲಿಲ್ಲವೆಂದಾದರೆ ಅದು ವಿಧಿಯನ್ನು ಬಯಸಿದಮೇಲೂ ಸಹ ಸ್ವಕಾರ್ಯಸಿದ್ಧಿಯನ್ನು ಹೊಂದಲಾರದು. (ಸ್ವತಃ ಇಲ್ಲದ ಗುಣವು ಬೇರೊಂದರ ಸಹಕಾರದಿಂದಲೂ ಬರಲಾರದು).

ತಸ್ಮಾತ್ ಕೂಟಸ್ಥವಿಜ್ಞಾನಂ ಪ್ರತ್ಯಾಖ್ಯಾತಾಖಿಲದ್ವಯಮ್ |
ಆನಂದಂ ಬ್ರಹ್ಮಣೋ ವಿದ್ವಾನ್ ನ ಬಿಭೇತಿ ಕುತಶ್ಚನ ||

೭೨೦. ಆದ್ದರಿಂದ ಕಿತ್ತೊಗೆಯಲ್ಪಟ್ಟ ಎಲ್ಲಾ ದ್ವೈತವುಳ್ಳ ಕೂಟಸ್ಥ ವಿಜ್ಞಾನವು ಬ್ರಹ್ಮವು; ಬ್ರಹ್ಮದ ಈ ಆನಂದಸ್ವರೂಪವನ್ನು ಬಲ್ಲವನು ಯಾವ ದಕ್ಕೂ ಭಯಪಡುವವನಾಗಿರುವದಿಲ್ಲ.

ಬ್ರಹ್ಮಣೋ ಬ್ರಾಹ್ಮಣಸ್ಯೇತಿ ಭೇದಶ್ಚಾತ್ರೌಪಚಾರಿಕಃ |
ರಾಹೋಃ ಶಿರೋವನ್ಮುಖ್ಯಸ್ತು ನೈವ ಸ್ಯಾನ್ನಿರ್ಗುಣತ್ವತಃ ||

೭೨೧. ಬ್ರಹ್ಮದ ಆನಂದವನ್ನು ಎಂದು ಹೇಳಿದ್ದರಿಂದ ಬ್ರಹ್ಮ, ಆನಂದ ಗಳು ಬೇರೆಬೇರೆಯೆಂದು ತಿಳಿಯಬಾರದು. ಎರಡೂ ಒಂದೇ. ಇಲ್ಲಿ ಭೇದವನ್ನು ಹೇಳಿರುವದು ಉಪಚಾರಮಾತ್ರವಾಗಿದೆ. ಏಕೆಂದರೆ ಬ್ರಹ್ಮವು ನಿರ್ಗುಣವಾದ್ದ ರಿಂದ ಮುಖ್ಯಾರ್ಥವು (ಬ್ರಹ್ಮ, ಆನಂದಗಳು ಎರಡು) ಎಂಬಿದು ಹೊಂದ ಲಾರದು. ಆದರೆ ರಾಹುವಿನ ಶಿರಸ್ಸು—ಎಂಬಲ್ಲಿ ಹೇಗೆ ರಾಹುವೇ ಶಿರಸ್ಸೋ ಶಿರಸ್ಸೆಂಬುದೇ ರಾಹುವೋ ಹಾಗೆಯೇ ಇಲ್ಲಿಯೂ ತಿಳಿಯಬೇಕು.

ಮಹಿಮಾ ಬ್ರಾಹ್ಮಣಸ್ಯೈಷ ಹಾನಿವೃದ್ಧಿವಿವರ್ಜಿತಃ |
ಸ್ವತಃ ಸಿದ್ಧೇರ್ವಿಜಾನಂಸ್ತಂ ನ ಬಿಭೇತಿ ಕುತಶ್ಚನ ||

೭೨೨. ಹಾನಿವೃದ್ಧಿಗಳಿಲ್ಲದ ಈ ಮಹಿಮೆಯು ಬ್ರಾಹ್ಮಣನದು-ಎಂಬಲ್ಲಿ ಹೇಳಿರುವಂತೆ (ಈ ಮಹಿಮೆಯು) ಸ್ವತಃ ಸಿದ್ಧವಾದುದೆಂದು ತಿಳಿದವನಾಗಿ ಏತರಿಂದಲೂ ಭಯಪಡುವದಿಲ್ಲ.

ವಿದ್ವಾನ್ ಸನ್ ನ ಬಿಭೇತೀತಿ ವಿದ್ಯಾಕಾಲಂ ಭವೇತ್ ಫಲಮ್ |
ನ ತು ಸ್ವರ್ಗಾದಿವತ್ ಪ್ರಾಪ್ಯಂ ಭುಂಜಾನಸ್ತೃಪ್ಯತೀತಿವತ್ ||

೭೨೩. ಅರಿತವನಾಗಿ ಭಯವನ್ನು ಹೊಂದುವದಿಲ್ಲ-ಎಂದು ಅರಿವಿನ ಸಮಕಾಲದಲ್ಲಿಯೇ ಫಲವನ್ನು ಹೇಳಲಾಗಿದೆ. ಭೋಜನ ಮಾಡುತ್ತಾ ತೃಪ್ತಿಯನ್ನು ಹೊಂದುತ್ತಾನೆ-ಎಂದಂತೆ ಇದನ್ನು ತಿಳಿಯಬೇಕು. ಆದರೆ ಸ್ವರ್ಗಾದಿಗಳಂತೆ ಈ ಜ್ಞಾನಫಲವು ಹೊಸದಾಗಿ ಹೊಂದತಕ್ಕದ್ದಲ್ಲ.

ಯತೋಽವಿದ್ಯಾತಿರೇಕೇಣ ಪ್ರತಿಬಂಧೋ ನ ವಿದ್ಯತೇ |
ತನ್ನಾಶಾನಂತರಾಂ ಮುಕ್ತಿಂ ವಿದ್ವಾನಿತಿ ತತೋಽವದತ್ ||

೭೨೪. ಏಕೆಂದರೆ ಅವಿದ್ಯೆಗಿಂತ ಬೇರೆಯಾಗಿ ಯಾವದೂ ಪ್ರತಿಬಂಧಕವು ಮುಕ್ತಿಗೆ ಇರುವದಿಲ್ಲ. ಆದ್ದರಿಂದ ಅವಿದ್ಯೆಯ ನಾಶಸಮಕಾಲದಲ್ಲಿಯೇ ಮುಕ್ತಿಯನ್ನು ವಿದ್ವಾನ್-ನ ಬಿಭೇತಿ ಎಂದು ವರ್ಣಿಸಲಾಗಿದೆ.

ಭಯಹೇತುರ್ದ್ವಯಂ ಯಸ್ಮಾತ್ ತಚ್ಚಾವಿದ್ಯಾಸಮುದ್ಭವಮ್ |
ಪ್ಲುಷ್ಟಾಯಾಂ ವಿದ್ಯಯಾ ತಸ್ಯಾಂ ನ ಕುತಶ್ಚನ ಭೀರ್ಭವೇತ್ ||

೭೨೫. ದ್ವೈತವೇ ಭಯಕ್ಕೆ ಕಾರಣವಾಗಿರುವದರಿಂದಲೂ ಅದು ಅವಿದ್ಯೆಯಿಂದುಂಟಾದದ್ದಾದ್ದರಿಂದಲೂ ವಿದ್ಯೆಯಿಂದ ಅವಿದ್ಯೆಯು ತೊಳೆದುಹಾಕಲ್ಪಡಲಾಗಿ ಎಂದೆಂದಿಗೂ ಎಲ್ಲಿಂದಲೂ ಭಯವಾಗಲಾರದು.

ಪರಮಾತ್ಮಧಿಯೈತಸ್ಮಿನ್ ಪ್ರತ್ಯಗಾತ್ಮನಿ ಕೇವಲೇ |
ನಿರಸ್ತಾಯಾಮವಿದ್ಯಾಯಾಂ ಭಯಂ ನಾಸ್ತಿ ಕುತಶ್ಚನ ||

೭೨೬. ಕೇವಲನಾದ ಈ ಪ್ರತ್ಯಗಾತ್ಮನಲ್ಲಿ ಪರಮಾತ್ಮಬುದ್ಧಿಯನ್ನು ಮಾಡುವದರಿಂದ ಅವಿದ್ಯೆಯು ನಾಶವಾಗಲು ಏತರಿಂದಲೂ ಎಲ್ಲಿಂದಲೂ ಭಯವಿಲ್ಲ.

ನಿರ್ಧೂತಪದವಾಕ್ಯಾರ್ಥಮಿತ್ಯೇವಂ ಪ್ರತಿಪತ್ತಯೇ |
ಯತೋ ವಾಚೋ ನಿವರ್ತಂತ ಇತ್ಯೇವಂ ವಚನಂ ಶ್ರುತೇಃ ||

೭೨೭. ಬ್ರಹ್ಮವು, ಪದ, ವಾಕ್ಯ, ಅರ್ಥಗಳನ್ನು ಕೊಡವಿಹಾಕಿ ಸ್ವತಃ ಸಿದ್ಧವಾಗಿ ಇದೆ-ಎಂಬ ಅರ್ಥದಲ್ಲಿ ಶ್ರುತಿಯ 'ಯತೋ ವಾಚೋ ನಿವರ್ತಂತೇ' ಎಂಬ ಮಾತು ಬಂದಿದೆ.

ತಥಾ ಮನೋವಿಕಲ್ಪಾನಾಂ ನಿಷೇಧಾಯ ಪರಾತ್ಮನಿ |
ಧಿಯಾ ಸಹೇತ್ಯತೋ ವಕ್ತಿ ಶ್ರುತಿರ್ಯಾಥಾತ್ಮ್ಯಬೋಧಿನೀ ||

೭೨೮. ಹಾಗೆಯೇ ಮನೋವಿಕಲ್ಪಗಳೆಲ್ಲವನ್ನೂ ಪರಮಾತ್ಮನಲ್ಲಿ ನಿಷೇಧ ಮಾಡುವದಕ್ಕಾಗಿ 'ಧಿಯಾ ಸಹ' (ಮನಸಾ ಸಹ) ಎಂದು ಶ್ರುತಿಯಲ್ಲಿ ಹೇಳಿದೆ.

ನಿಷಿಧ್ಯ ನಾಯಮಾತ್ಮೇತಿ ಭಿನ್ನಮಾತ್ಮೋಪಲಂಭನಮ್ |
ಅನನ್ಯಾನುಭವಂ ಬ್ರಹ್ಮ ಯಮೇವೇತ್ಯಾಹ ನಃ ಶ್ರುತಿಃ ||

೭೨೯. ಈ ಆತ್ಮನು ಪ್ರವಚನಕ್ಕೆ ಸಿಗುವದಿಲ್ಲ– ಮುಂತಾಗಿ ನಿಷೇಧಮಾಡಿ ಆತ್ಮಪ್ರಾಪ್ತಿಗೆ ಪ್ರವಚನಾದಿಗಳಿಗಿಂತ ಬೇರೆಯಾದ ಅನನ್ಯಾನುಭವವನ್ನು ಯಮೇವೈಷಃ....ಎಂಬಲ್ಲಿ ಶ್ರುತಿಯು ಹೇಳಿರುತ್ತದೆ.

ಪ್ರತ್ಯಗ್ಬ್ರಹ್ಮಾವಸಾಯಿತ್ವಾತ್ ಭೇದಾನಾಂ ರಜ್ಜುಸರ್ಪವತ್ |
ಉದಾಹಾರಿ ತತಃ ಶ್ರುತ್ಯಾ ಹ್ಯಯಂ ಶ್ಲೋಕೋ ಮನೋಮಯೇ ||

೭೩೦. ಅನ್ನಮಯಾದಿ ಕೋಶಾತ್ಮರುಗಳೆಲ್ಲ ಹಗ್ಗದಲ್ಲಿ ಕಲ್ಪಿಸಿದ ಹಾವಿನಂತೆ ಕಲ್ಪಿತರಾಗಿದ್ದು ಕಡೆಗೆ ಪ್ರತ್ಯಗಾತ್ಮನಾದ ಬ್ರಹ್ಮವನ್ನೇ ಸೇರಿ ಲಯವಾಗುತ್ತಾರೆ–ಎಂಬ ವಿಷಯವನ್ನು ತಿಳಿಸುವದಕ್ಕಾಗಿ ಈ 'ಯತೋ ವಾಚಃ' ಎಂಬ ಶ್ಲೋಕವು ಮನೋಮಯಕೋಶದಲ್ಲಿ ಶ್ರುತಿಯಿಂದ ಉದಾಹರಿಸಲ್ಪಟ್ಟಿತು.

ವಿದ್ವಾನೇವ ಪರಂ ಬ್ರಹ್ಮ ಆತ್ಮನಾತ್ಮಾನಮದ್ವಯಮ್ |
ನ ಬಿಭೇತ್ಯೇಕಲೋಽದ್ವಂದ್ವೋ ಭಯಹೇತೋರಸಂಭವಾತ್ ||

೭೩೧. ಜ್ಞಾನಿಯೇ ಪರಬ್ರಹ್ಮನು. ಬ್ರಹ್ಮವು ಆತ್ಮನಾಗಿದೆ. ಅದ್ವಯನಾದ ಆತ್ಮನನ್ನು ಆತ್ಮನಲ್ಲಿಯೇ ಕಂಡುಕೊಂಡದ್ದರಿಂದ ಭಯಕ್ಕೆ ಕಾರಣವಾದ ದ್ವಿತೀಯವಸ್ತುವಿಲ್ಲವಾಗಿ ಏಕನೂ ಅದ್ವಂದ್ವನೂ ಆದ ಆತ್ಮನಲ್ಲಿ ಭಯವಾಗಲಿ ಭಯಹೇತುವಾಗಲಿ ಸಂಭವಿಸುವದಿಲ್ಲ.

ನನು ಸಾಧ್ವಕ್ರಿಯಾಹೇತುಃ ಪಾಪಾನುಷ್ಠಾನಮೇವ ಚ |
ಇತ್ಯೇತಸ್ಯ ನಿಷೇಧಾರ್ಥಮೇತಂ ಹೇತ್ಯುಚ್ಯತೇಽಧುನಾ ||

೭೩೨. ಒಳ್ಳೆಯದನ್ನು ಮಾಡದಿರುವ ಕಾರಣದಿಂದಲಾಗಲಿ, ಪಾಪವನ್ನು ಮಾಡಿದ್ದರಿಂದಾಗಲಿ ಜ್ಞಾನಿಗೆ ತಾಪವಾಗುವದಿಲ್ಲ–ಪಾಪಪುಣ್ಯಗಳೆರಡೂ ಅವನಿಗೆ ಇಲ್ಲ– ಎಂದು ನಿಷೇಧಿಸಿ ತಿಳಿಸುವದಕ್ಕಾಗಿ 'ಏತಂ ಹ ವಾವ' ಎಂದು ಈಗ ಶ್ರುತಿಯು ಹೇಳುತ್ತಿದೆ.

ನೈತಮೇವಂವಿದಂ ಯಸ್ಮಾತ್ ದ್ವಾವೇತೀಹಾವಧಾರಣೇ |
ನ ತಪತ್ಯಂತಕಾಲೇ ತಮಕರ್ತೃತ್ವಾತ್ಮವೇದಿನಮ್ ||

೭೩೩. ಈ ಆತ್ಮಜ್ಞನನ್ನು ಕಡೆಯಕಾಲದಲ್ಲಿ ಈ ಪಾಪಪುಣ್ಯಗಳ ಕರ್ತವ್ಯಾಕರ್ತವ್ಯಗಳೆರಡೂ ಸೋಂಕುವದಿಲ್ಲ ಹಾಗೂ ತಪಿಸುವದಿಲ್ಲ– ಎಂದು ನಿಶ್ಚಿತವಾಗಿ ತಿಳಿಸಲು ಈ ಮಂತ್ರಗಳು ಬಂದಿವೆ. ಆತ್ಮನು ಅಕರ್ತನು– ಎಂದು ತಿಳಿದವನೇ ಇಂಥ ಆತ್ಮಜ್ಞನೆನಿಸುವನು.

ಕ್ರಿಯಾಫಲಸ್ಯ ಸರ್ವಸ್ಯ ಕರ್ತೃಗಾಮಿತ್ವಕಾರಣಾತ್ |
ಧಿಙ್ ಮಾಂ ಯೋಽಹಂ ಶುಭಂ ಕರ್ಮ ಜೀವನ್ನಾಕರವಂ ಕ್ವಚಿತ್ |
ಅಕಾರ್ಷಂ ಚ ಸದಾ ಪಾಪಂ ಹ್ಯತೋ ಭಯಮುಪಸ್ಥಿತಮ್ ||

೭೩೪–೭೩೫. ಎಲ್ಲಾ ಕ್ರಿಯಾಫಲವೂ ಕರ್ತೃವನ್ನೇ ಬಂದುಸೇರುವದರಿಂದ 'ಅಯ್ಯೊ, ನಾನು ಹಾಳಾದೆನು ; ನನಗೆ ಧಿಕ್ಕಾರವಿರಲಿ ; ಏಕೆಂದರೆ ಯಾವ ನಾನು ಬದುಕಿರುವಾಗ ಎಲ್ಲಿಯೂ ಯಾವಾಗಲೂ ಶುಭಕಾರ್ಯಗಳನ್ನು ಮಾಡಲಿಲ್ಲ. ಸದಾ ಪಾಪಕರ್ಮವನ್ನೇ ಮಾಡಿದೆನು ; ಆದ್ದರಿಂದ ಈಗ ಭಯವು ಪ್ರಾಪ್ತವಾಗಿದೆ'– (ಎಂದು ಅಜ್ಞಾನಿಯು ದುಃಖಿಸುವನು.)

ಅಸ್ಮಾದ್ಧೇತೋರ್ಮಹಾಂಸ್ತಾಪೋಽವಿದ್ಯಾಸಂವೀತಚೇತಸಾಮ್ |
ಜಾಯತೇ ಮೃತಿಕಾಲೇ ಹಿ ಹಿಕ್ಕಿಕಾವಶವರ್ತಿನಾಮ್ ||
ಫಲಸ್ಯಾಯಂ ಸ್ವಭಾವೋ ಹಿ ಯತ್ ಸ್ವಕರ್ತ್ರನುಗಾಮಿತಾ |
ಅತೋ ನ ತಪತೋ ಜ್ಞೋಽತ್ಥಾವಕರ್ತಾರಂ ಶುಭಾಶುಭೌ ||

೭೩೬–೭೩೭. ಅವಿದ್ಯೆಯಿಂದ ಕೂಡಿದ ಚಿತ್ತವುಳ್ಳವರಿಗೆ ಸಾಯುವ ಕಾಲದಲ್ಲಿ ಬಿಕ್ಕಳಿಕೆಗೆ ತುತ್ತಾಗಿರುವಾಗ ಶುಭಕರ್ಮವನ್ನು ಮಾಡಲಿಲ್ಲ– ಎಂಬ ಕಾರಣದಿಂದ ಸಂತಾಪವು ಹುಟ್ಟುತ್ತದೆ. ಫಲವು ತನ್ನ ಕರ್ತೃವನ್ನು ಹೋಗಿ ಸೇರುವ ಸ್ವಭಾವದ್ದಾಗಿದೆ. ಆದ್ದರಿಂದ ನಾನು ಅಕರ್ತನು ಎಂಬ ಜ್ಞಾನಿಯಲ್ಲಿ ಈ ಶುಭಾಶುಭಕರಣಾಕರಣರೂಪವಾದ ತಾಪಗಳು ಹುಟ್ಟಲಾರವು. ತಪಿಸಲೂ ಆರವು.

ಕಸ್ಮಾನ್ನ ತಪತಸ್ತೌ ಚೇತ್ ಧರ್ಮಾಧರ್ಮೌ ವಿಪಶ್ಚಿತಮ್ |
ಕೌಟಸ್ಥ್ಯಾದದ್ವಯತ್ವಾಚ್ಚ ಪ್ಲುಷ್ಯತ್ಯೇವ ಶುಭಾಶುಭೇ ||

೭೩೮. ಜ್ಞಾನಿಯನ್ನು ಧರ್ಮಾಧರ್ಮಗಳು ಏತಕ್ಕಾಗಿ ತಪಿಸುವದಿಲ್ಲ ? ಎಂದರೆ ಅವನು ತಿಳಿದಿರುವ ಆತ್ಮನು ಕೂಟಸ್ಥನೂ ಅದ್ವಯನೂ ಆಗಿರುವದರಿಂದ ಶುಭಾಶುಭಗಳು ದಗ್ಧವಾಗಿಯೇ ತೀರುತ್ತವೆ.

ಸ ಯ ಏವಂ ಯಥೋಕ್ತಾರ್ಥಂ ವಿದ್ವಾನೇತಿ ಶುಭಾಶುಭೇ |
ಸಾಧುಕರ್ಮಕ್ರಿಯಾ ಯಾ ಚ ಪಾಪಾನುಷ್ಠಾನಮೇವ ಚ ||
ಅಕರ್ತಾಸ್ಮೀತಿ ವಿಜ್ಞಾನಹುತಾಶೇನಾಂಜಸಾ ದ್ರುತವಾನ್ |

ದಗ್ಧ್ವಾ ನಿರನ್ವಯೇ ಕೃತ್ವಾ ಹ್ಯಾತ್ಮಾನಂ ಸ್ಪೃಣುತೇ ಯತಃ |
ಸ್ಪೃಣೋತಿರ್ಬಲಕರ್ಮಾಯಮಾತ್ಮಾನಂ ಬಲಯತ್ಯತಃ ||

೭೩೯–೭೪೧. ಈ ಹಿಂದೆ ಹೇಳಿದ ಅರ್ಥವುಳ್ಳ ತತ್ತ್ವವನ್ನು ಬಲ್ಲವನು ಶುಭಾಶುಭಗಳನ್ನೂ ಸಾಧುಕರ್ಮವನ್ನೂ ಪಾಪಕರ್ಮದ ಅನುಷ್ಠಾನವನ್ನೂ–ತಾನು ಅಕರ್ತನು– ಎಂಬ ವಿಜ್ಞಾನರೂಪವಾದ ಅಗ್ನಿಯಿಂದ ಜಾಗ್ರತೆಯಾಗಿ ಸುಟ್ಟವನಾಗಿ ಅವುಗಳನ್ನು ಬೇರಿಲ್ಲದಂತೆ ಮಾಡಿ ತನ್ನನ್ನು ತಾನು ಬಲಗೊಳಿಸಿಕೊಳ್ಳುತ್ತಾನೆ. ಸ್ಪೃಣೋತಿ ಎಂಬ ಕ್ರಿಯಾಪದವು ಬಲವೆಂಬ ಕರ್ಮವನ್ನು ಹೇಳುವದರಿಂದ ಈ ಜ್ಞಾನಿಯು ತನ್ನ ಆತ್ಮನನ್ನು ಬಲಗೊಳಿಸಿಕೊಳ್ಳುತ್ತಾನೆ.

ಅವಿದ್ಯಾಸಂಶ್ರಯಾದಾತ್ಮಾ ಬಲೀಯಾನಪಿ ದುರ್ಬಲಃ |
ಅವಿದ್ಯಾ ರಾಜಯಕ್ಷ್ಮಾಽಸ್ಯ ಕಾರ್ಶ್ಯಮೇತಿ ತಯಾ ಯುತಃ |
ಧ್ವಸ್ತಾಯಾಂ ವಿದ್ಯಯಾ ತಸ್ಯಾಮಾತ್ಮಾನಂ ಬಲಯತ್ಯತಃ ||

೭೪೨. ಆತ್ಮನು ಸ್ವತಃ ಬಲಿಷ್ಠನೇ ಆಗಿದ್ದರೂ ಅವಿದ್ಯೆಯನ್ನಾಶ್ರಯಿಸಿರುವಾಗ ದುರ್ಬಲನಾಗಿರುವನು. ಅವಿದ್ಯೆಯಿಂದ ಅವನು ಸಣಕಲನಾಗುವದರಿಂದ ಅದು ಇವನಿಗೆ ಕ್ಷಯರೋಗಸಮಾನವಾಗಿರುವದು. ವಿದ್ಯೆಯಿಂದ ಆ (ಅವಿದ್ಯಾರೋಗವು) ನಾಶವಾಗಲಾಗಿ ತನ್ನ ಆತ್ಮನನ್ನು ಬಲಗೊಳಿಸಿಕೊಳ್ಳುತ್ತಾನೆ.

ಬೋಧೇನೈವ ನಿರಸ್ತಾಯಾಂ ನಿದ್ರಾಯಾಂ ಸ್ವಪ್ನದರ್ಶನಮ್ |
ಬುದ್ಧಾತ್ಮಶೇಷತಾಮೇತಿ ತಥೇಹ್ಯೈಕಲಶೇಷತಾಮ್ ||

೭೪೩. ಹೇಗೆ ನಿದ್ರೆಯಲ್ಲಿದ್ದವನನ್ನು ಎಚ್ಚರಗೊಳಿಸಿದಾಗ ಸ್ವಪ್ನವನ್ನು ಕಂಡದ್ದು ಆತ್ಮನ ಅನುಭವಶೇಷವಾಗಿ ಉಳಿಯುವದೋ ಹಾಗೆಯೇ ಶ್ರುತಿವಾಕ್ಯದಿಂದ ಎಚ್ಚರಿಸಲ್ಪಟ್ಟ ಅನಂತರ ದ್ವೈತವನ್ನು ಬಾಧಿಸಿ ತಾನೊಬ್ಬನೇ ಉಳಿಯುವನು.

ಅಥವಾ ಏಷ ಏವೋಭೇ ಸತ್ಯಾದೃಶ್ಯಾದಿಲಕ್ಷಣಃ |
ಶುಭಾಶುಭೇ ಯತಸ್ತಸ್ಮಾದಾತ್ಮಾನಂ ಬಲಯತ್ಯಯಮ್ ||

೭೪೪. ಅಥವಾ ಸತ್ಯ ಅದೃಶ್ಯಾದಿಲಕ್ಷಣನಾದ ಇವನೇ ಈ ಶುಭಾಶುಭಗಳೂ ಆಗಿರುವನಾದ್ದರಿಂದ ಜ್ಞಾನಿಯು ಈ ಎರಡನ್ನೂ ಮಾಡಿದರೂ ಆತ್ಮನನ್ನೇ ಬಲಗೊಳಿಸಿಕೊಂಡವನಾಗುತ್ತಾನೆ.

ಲಿಂಗದೇಹಾಶ್ರಿತಂ ಕಾರ್ಶ್ಯಂ ತಚ್ಚ ಕರ್ಮನಿಬಂಧನಮ್ |
ಕರ್ಮ ಕರ್ತ್ರಾದಿಸಂಭೂತಂ ಕರ್ತ್ರಾದ್ಯಜ್ಞಾನಹೇತುಕಮ್ ||
ಅಹಂ ಬ್ರಹ್ಮೇತ್ಯತೋ ಜ್ಞಾನಾತ್ ಧ್ವಸ್ತಾಯಾಂ ಪ್ರತ್ಯಗಾತ್ಮನಿ |
ಕಾರ್ಶ್ಯಹೇತಾವವಿದ್ಯಾಯಾಂ ಏಕತ್ವಾತ್ ಬಲಯತ್ಯಯಮ್ ||

೭೪೫-೭೪೬. ಕೃಶತೆಯು ಲಿಂಗದೇಹವನ್ನಾಶ್ರಯಿಸಿರುತ್ತದೆ. ಆ ಲಿಂಗ ದೇಹವಾದರೊ, ಕರ್ಮಸಿದ್ಧವಾಗಿದೆ. ಕರ್ಮವಾದರೊ, ಕರ್ತ್ರಾದಿಕಾರಕಗಳಿಂದ ಉಂಟಾದದ್ದಾಗಿದೆ. ಕರ್ತೃತ್ವವಾದರೊ, ಅಜ್ಞಾನದಿಂದಾಗಿದೆ. ಆದ್ದರಿಂದ ನಾನೇ ಬ್ರಹ್ಮವು ಎಂಬ ಜ್ಞಾನದಿಂದ ಕೃಶತೆಗೆ ಕಾರಣವಾದ ಪ್ರತ್ಯಗಾತ್ಮವಿಷಯಕ ವಾದ ಅಜ್ಞಾನವು ನಾಶವಾಗಲಾಗಿ ಏಕತ್ವವು ಸಿದ್ಧಿಸುವದರಿಂದ ಇವನು ಆತ್ಮ ನನ್ನು ಬಲಗೊಳಿಸುತ್ತಾನೆ.

ಸ್ವತೋ ಬುದ್ಧಂ ಸ್ವತಃಶುದ್ಧಂ ಸ್ವತೋ ಮುಕ್ತಂ ಯಥೋದಿತಮ್ |
ವೇದೈವಂ ಯಃ ಸ್ವಮಾತ್ಮಾನಂ ಫಲಂ ತಸ್ಯೇದೃಶಂ ಸ್ಮೃತಮ್ ||

೭೪೭. ಸ್ವಭಾವದಿಂದಲೇ ಬುದ್ಧವೂ, ಶುದ್ಧವೂ, ಮುಕ್ತವೂ ಆಗಿರುವ ಈವರೆಗೆ ವರ್ಣಿಸಲ್ಪಟ್ಟ ಆತ್ಮನನ್ನು ಯಾವನು ತನ್ನ ಸ್ವರೂಪವಾಗಿ ಅರಿಯು ತ್ತಾನೋ ಅವನಿಗೆ ಫಲವು ಈ ರೀತಿಯಾದದ್ದಾಗಿರುವದು.

ಇತೀತ್ಯುಕ್ತಪರಾಮರ್ಶೋ ಬ್ರಹ್ಮಣೋಽದ್ವಯರೂಪಿಣಃ |
ಸಾಕ್ಷಾತ್ ತದ್ಬೋಧಹೇತುತ್ವಾತ್ ವಲ್ಲೀ ಹ್ಯುಪನಿಷತ್ ಭವೇತ್ ||

೭೪೮. ಇತಿ-ಎಂಬಿದು ಹಿಂದೆ ಹೇಳಿದ್ದ ಅದ್ವಯರೂಪವಾದ ಬ್ರಹ್ಮದ ಪರಾಮರ್ಶವು. ಆ ಬ್ರಹ್ಮದ ನೇರಾದ ತಿಳಿವಳಿಕೆಗೆ ಕಾರಣವಾಗಿರುವದರಿಂದ ವಲ್ಲಿಯನ್ನು ಉಪನಿಷತ್ ಎಂದು ಕರೆಯಲಾಗಿದೆ.

ವಿದ್ಯೈವೋಪನಿಷತ್ ಜ್ಞೇಯಾ ತಯೈವೋಪೇತ್ಯ ನಿರ್ದ್ವಯಮ್ |
ವಿಂದತೇ ನಿರ್ಭಯಾತ್ಮಾನಂ ತಸ್ಮಾದುಪನಿಷತ್ ಸ್ಮೃತಾ ||

೭೪೯. ವಿದ್ಯೆಯನ್ನೇ ಉಪನಿಷತ್ ಎಂದು ತಿಳಿಯಬೇಕು. ಏಕೆಂದರೆ ಅದರಿಂದಲೇ ಅದ್ವಯನೂ, ನಿರ್ಭಯನೂ ಆದ ಆತ್ಮನನ್ನು ಸಾಧಕನು ಅರಿಯು ತ್ತಾನೆ. ಆದ್ದರಿಂದ ಬ್ರಹ್ಮವಿದ್ಯೆಯು ಉಪನಿಷತ್ತೆನಿಸಿದೆ.

ಇಮಾಂ ವಲ್ಲೀಂ ತು ತಾದರ್ಥ್ಯಾತ್ ಪರಬ್ರಹ್ಮವಿದೋ ಗುಣಾತ್ |
ಸದೋಪನಿಷದಿತ್ಯೂಚುಃ ತ್ಯಕ್ತಸರ್ವೈಷಣಾಃ ಶುಭಮ್ ||

೭೫೦. ಉಪನಿಷದರ್ಥವನ್ನೇ ತಿಳಿಸುವದರಿಂದಲೂ ಬ್ರಹ್ಮವಿದ್ಯೆಯ ಗುಣ ವಿರುವದರಿಂದಲೂ ಶುಭವಾದ ಈ ವಲ್ಲಿಯನ್ನು ಎಲ್ಲಾ ಆಸೆಗಳನ್ನೂ ಪರಿತ್ಯಾಗ ಮಾಡಿದ ಮಹನೀಯರು ಯಾವಾಗಲೂ ಉಪನಿಷತ್ ಎಂದೇ ಕರೆದಿರುತ್ತಾರೆ.

|| ಇತಿ ಬ್ರಹ್ಮವಲ್ಲೀವಾರ್ತಿಕಾನಿ ||

ಭೃಗುವಲ್ಲಿ

ಸತ್ಯಂ ಜ್ಞಾನಮನಂತಂ ಯದ್ಬ್ರಹ್ಮೋಕ್ತಂ ಪ್ರತ್ಯಗಾತ್ಮನಿ |
ತದಭಿನ್ನಂ ಪರಂ ಜ್ಞಾನಮುಕ್ತಂ ಮೋಹಾಪನೋದಿ ಯತ್ ||

೧. ಸತ್ಯಜ್ಞಾನಾನಂತರೂಪವಾದ ಯಾವ ಬ್ರಹ್ಮವನ್ನು ತನ್ನ ಒಳಗಿನ (ಆತ್ಮರೂಪದಲ್ಲಿ ಅಭಿನ್ನವಾಗಿ ಕಂಡುಕೊಳ್ಳುವ ಮೋಹವನ್ನು ಹೋಗಲಾಡಿಸುವ ಹೆಚ್ಚಿನ ಜ್ಞಾನವು ಹೇಳಲ್ಪಟ್ಟಿತು.

ಅಭಿಧಿತ್ಸುರಥೇದಾನೀಂ ಯಥೋಕ್ತಜ್ಞಾನಸಿದ್ಧಯೇ |
ಯತ್ಸಾಧಕತಮಂ ತಸ್ಯ ಪ್ರಾಪ್ತ್ಯೈ ಪ್ರವವೃತೇ ಶ್ರುತಿಃ ||

೨. ಈಗ ಆ ಹಿಂದೆ ಹೇಳಿದ ಜ್ಞಾನದ ಸಿದ್ಧಿಗಾಗಿ ಯಾವದು ಹೆಚ್ಚಿನ ಸಾಧನವಾಗಿದೆಯೋ ಆದನ್ನು ಪಡೆಯುವದಕ್ಕಾಗಿ– ಎಂದರೆ ಸಾಧನವನ್ನು ಹೇಳುವದಕ್ಕಾಗಿ ಶ್ರುತಿಯು ಹೊರಟಿರುತ್ತದೆ.

ಗುರುದ್ವಾರೈವ ವಿದ್ಯೇಯಂ ಆಚಾರ್ಯಾದ್ಧೇತಿ ನಃ ಶ್ರುತಿಃ |
ಶಿಷ್ಯೋಪಾಧ್ಯಾಯರೂಪೇಯಮತ ಆಖ್ಯಾಯಿಕೋಚ್ಯತೇ ||

೩. ಈ ಬ್ರಹ್ಮವಿದ್ಯೆಯು ಗುರುವಿನ ಮೂಲಕವೇ ಲಭಿಸತಕ್ಕದ್ದು. ಶ್ರುತಿಯೂ 'ಆಚಾರ್ಯಾತ್ ಹ' ಎಂದು ಹೇಳುತ್ತಿದೆ. ಇದು ಶಿಷ್ಯೋಪಾಧ್ಯಾಯ ಸಂವಾದರೂಪವಾಗಿದೆ. ಆದ್ದರಿಂದ ಕಥೆಯನ್ನು ಹೇಳಲಾಗುತ್ತದೆ.

ಅಧೀಹಿ ಭಗವೋ ಬ್ರಹ್ಮೇತ್ಯೇತನ್ಮಂತ್ರಾಭಿಶಬ್ದಿತಮ್ |
ಅಂತರ್ಣೀತಣಿಜರ್ಥಸ್ಯ ಹ್ಯಧೀಹೀತಿ ಭವೇದ್ಯತಃ ||

೪. 'ಅಧೀಹಿ ಭಗವೋ ಬ್ರಹ್ಮ' (ಪೂಜ್ಯನೆ, ಬ್ರಹ್ಮವನ್ನು ಅಧ್ಯಯನ ಮಾಡಿಸು) ಎಂಬ ಮಂತ್ರದಿಂದ ಹೇಳಲ್ಪಟ್ಟ ಅಧೀಹಿ–ಶಬ್ದವು ಣಿಚ್‌ಪ್ರತ್ಯಯದ ಅರ್ಥವನ್ನೊಳಗೊಂಡ ಶಬ್ದವಾಗಿದೆ.

ಜಿಜ್ಞಾಸುಃ ಪರಮಂ ಬ್ರಹ್ಮ ಶ್ರದ್ಧಾಭಕ್ತಿಪುರಸ್ಸರಃ |
ಉಪಸೀದೇದ್ ಗರೀಯಾಂಸಂ ಮಂತ್ರೇಣಾನೇನ ಶುದ್ಧಧೀಃ ||

೫. ಪರಬ್ರಹ್ಮವನ್ನು ತಿಳಿಯಲಿಚ್ಛಿಸುವವನಾದವನು ಶ್ರದ್ಧಾಭಕ್ತಿಗಳಿಂದೊಡಗೂಡಿದವನಾಗಿ ಪೂಜ್ಯನಾದವನನ್ನು ಶುದ್ಧಮನಸ್ಕನಾಗಿ ಈ ಮಂತ್ರದಿಂದ ಬಳಿಸಾರಬೇಕು.

ಮೋಕ್ಷಾದರ್ವಾಕ್ಷು ಭೋಗೇಷು ವ್ಯಾವೃತ್ತಕರಣೋ ಭೃಗುಃ |
ಅಧ್ಯಾಪಯ ಪರಂ ಬ್ರಹ್ಮೇತ್ಯಪೃಚ್ಛದ್ವರುಣಂ ಗುರುಮ್ ||

೬. ಮೋಕ್ಷಕ್ಕಿಂತ ಕೆಳಗಿನ ಭೋಗಗಳಲ್ಲಿ ಹಿಂದಿರುಗಿದ ಇಂದ್ರಿಯಗಳುಳ್ಳ ಭೃಗುವು ಗುರುವಾದ ವರುಣನನ್ನು ಕುರಿತು 'ಪರಬ್ರಹ್ಮವನ್ನು ಅಧ್ಯಯನ ಮಾಡಿಸು' ಎಂದು ಕೇಳಿದನು.

ಅನ್ನಂ ಪ್ರಾಣಮಿತೀತ್ಯಾದಿ ವರುಣೋ ಭೃಗವೇಽವದತ್ ।
ದೇಹಕಾರಣಮನ್ನಂ ಸ್ಯಾತ್ ಪ್ರಾಣಃ ಪ್ರಾಣಾದಿಕಾರಣಮ್ ॥
ಚಕ್ಷುಃ ಶ್ರೋತ್ರಂ ಮನೋ ವಾಕ್ಚ ಕರಣಾನ್ಯುಪಲಬ್ಧಯೇ ॥

೭. ವರುಣನು ಭೃಗುವನ್ನು ಕುರಿತು ಅನ್ನ, ಪ್ರಾಣ, ಮನಸ್ಸು, ವಾಕ್ಕು, ಕಣ್ಣು, ಕಿವಿ– ಇವುಗಳೇ ಜ್ಞಾನದ್ವಾರಗಳೆಂದೂ ದೇಹಕ್ಕೆ ಅನ್ನವೇ ಕಾರಣ ವೆಂದೂ ಘ್ರಾಣಾದಿಪ್ರಾಣಗಳಿಗೆ ಮುಖ್ಯಪ್ರಾಣನೇ ಕಾರಣವೆಂದೂ ತಿಳಿಸಿದನು. ಮತ್ತು ಇವುಗಳನ್ನು ವಿಚಾರಮಾಡಬೇಕೆಂದನು.

ಅನ್ವಯವ್ಯತಿರೇಕೋಕ್ತಿರ್ಬ್ರಹ್ಮಣೋ ಹ್ಯುಪಲಬ್ಧಯೇ ।
ಅನಿರ್ದೇಶ್ಯಸ್ಯ ವಾ ಭೂಮ್ನೋ ಲಕ್ಷಣಸ್ಯ ಪ್ರವೃತ್ತಯೇ ।
ಅನ್ನಂ ಪ್ರಾಣಮಿತೀತ್ಯಾದಿ ಪ್ರತ್ಯಗ್ಧರ್ಮೋಽಪದಿಶ್ಯತೇ ॥

೮–೯. ಅನ್ನಾದಿಗಳು (ಹಾವಿನಂತೆ) ಸ್ವರೂಪವನ್ನು ಬದಲಾಯಿಸುವದ ರಿಂದಲೂ ಬ್ರಹ್ಮವು (ಹಗ್ಗದಂತೆ) ಬದಲಾವಣೆಯಿಲ್ಲದ ವಸ್ತುವಾದ್ದರಿಂದಲೂ ಬ್ರಹ್ಮದ ಪ್ರಾಪ್ತಿಗೆ ಈ ಅನ್ವಯವ್ಯತಿರೇಕಗಳಿಂದ ದಾರಿಯು ಸುಗಮವಾಗುವದ ರಿಂದಲೂ ವರುಣನು ಅನಿರ್ದೇಶ್ಯವೂ ಭೂಮವೂ ಆದ ಬ್ರಹ್ಮದ ಲಕ್ಷಣವನ್ನು ಕಂಡುಹಿಡಿಯಲು 'ಅನ್ನಂ ಪ್ರಾಣಮ್' ಮುಂತಾಗಿ ಒಂದಕ್ಕಿಂತ ಮತ್ತೊಂದು ಒಳಗಿನ ವಸ್ತುಗಳನ್ನು ಉಪದೇಶಮಾಡಿರುತ್ತಾನೆ.

ಪ್ರಾಣಸ್ಯ ಪ್ರಾಣಮಿತ್ಯೇವಂ ಶ್ರುತಿರಪ್ಯಾಶ್ರಿತಾ ಭವೇತ್ ।
ಕರ್ಮಶ್ರುತಿಶ್ಚ ಬ್ರಹ್ಮತ್ವೇ ವಾಚಮಿತ್ಯಾದಿ ಯುಜ್ಯತೇ ॥

೧೦. ಶ್ರುತಿಯೂ ಕೂಡ ಬ್ರಹ್ಮನಿರ್ದೇಶವನ್ನು 'ಪ್ರಾಣಸ್ಯ ಪ್ರಾಣಮ್' ಎಂದೇ ಮಾಡಿರುವದರಿಂದ ಅದನ್ನೂ ಅನುಸರಿಸಿದಂತಾಯಿತು; ವಾಕ್ಕೆಂಬ ಕರ್ಮೇಂದ್ರಿಯಕ್ಕೂ ವಾಕ್ಕಾಗಿರುವ ಎಂಬ ರೀತಿಯಿಂದ ಬ್ರಹ್ಮವನ್ನು ಕಂಡುಹಿಡಿ ಯಲು ವಾಕ್ಕು ದ್ವಾರವಾಗಿರುವದರಿಂದಲೂ ಈ ನಿರ್ದೇಶವು ಯೋಗ್ಯವಾಗಿದೆ.

ಅನ್ನಾದಯಃ ಪದಾರ್ಥಾ ವಾ ಅನ್ವಯವ್ಯತಿರೇಕಯೋಃ ।
ಇಹೋಚ್ಯನ್ತೇ ಪ್ರವೃತ್ತ್ಯರ್ಥಂ ಸೌಕರ್ಯಂ ಸ್ಯಾತ್ ಕಥಂ ನ್ವಿತಿ ॥

೧೧. ಅಥವಾ ಅನ್ನಾದಿಪದಾರ್ಥಗಳು ಬ್ರಹ್ಮವನ್ನರಿಯಲು ಅನ್ವಯ ವ್ಯತಿರೇಕಗಳ ಮೂಲಕ ಸೌಕರ್ಯವನ್ನೊದಗಿಸುವವಾದ್ದರಿಂದ ಬ್ರಹ್ಮವಿಚಾರ ದಲ್ಲಿ ಪ್ರವೃತ್ತಿಯುಂಟಾಗಲು ಇಲ್ಲಿ ಹೇಳಲಾಗಿದೆ.

ಉತ್ಪತ್ತಿಸ್ಥಿತಿನಾಶೇಷು ಬ್ರಹ್ಮಾದಿಸ್ಥಾವರಾವಧಿ |
ನಾತ್ಯೇತಿ ಬ್ರಹ್ಮರೂಪಂ ಯತ್ ತದ್ಬ್ರಹ್ಮೇತಿ ಪ್ರತೀಯತಾವಸ್ ||

೧೨. ಬ್ರಹ್ಮನಿಂದಾರಂಭಿಸಿ ಸ್ಥಾವರದವರೆಗಿನ ವಸ್ತುಗಳು ತಮ್ಮ ಉತ್ಪತ್ತಿಸ್ಥಿತಿನಾಶಗಳಲ್ಲಿ ಯಾವ ಬ್ರಹ್ಮರೂಪವನ್ನು ಮೀರಿರಲಾರವೋ ಅದು ಬ್ರಹ್ಮವೆಂದು ತಿಳಿಯಿರಿ.

ವಿಜಿಜ್ಞಾಸಸ್ವ ತದ್ಬ್ರಹ್ಮ ಯದೇವಂಲಕ್ಷಣಂ ಭವೇತ್ |
ಅನುತ್ಪನ್ನಮಹೀನಂ ಚ ಜಗದುತ್ಪತ್ತಿಹಾನಿಭಿಃ |

೧೩. ಯಾವದು ಈಗ ಹೇಳಿದಂಥ ಲಕ್ಷಣವುಳ್ಳದ್ದೋ ಅದು ಬ್ರಹ್ಮವು. ಅದನ್ನು ವಿಚಾರಮಾಡು. ಅದು ಹುಟ್ಟುನಾಶಗಳಿಲ್ಲದ್ದು. ಜಗತ್ತಿನ ಉತ್ಪತ್ತಿನಾಶಗಳೊಡನೆ ಅದು ಸಂಬಂಧವಿಲ್ಲದ್ದಾಗಿದೆ.

ತಪಶ್ಚಚಾರ ತಚ್ಛ್ರುತ್ವಾ ಭೃಗುರ್ಬ್ರಹ್ಮೋಪಲಬ್ಧಯೇ |
ಪ್ರತಿಪೇದೇ ತಪೋಽನುಕ್ತಂ ಸಾವಶೇಷೋಕ್ತಿಕಾರಣಾತ್ ||

೧೪. ಭೃಗುವು ಬ್ರಹ್ಮವನ್ನು ಪಡೆದುಕೊಳ್ಳುವದಕ್ಕಾಗಿ ಆಚಾರ್ಯರ ಮಾತನ್ನು ಕೇಳಿದ ಅನಂತರ ತಪಸ್ಸನ್ನಾಚರಿಸಿದನು. ತಂದೆಯು ತಪಸ್ಸನ್ನಾಚರಿಸುವಂತೆ ಹೇಳದಿದ್ದರೂ ಅದು ಬ್ರಹ್ಮಪ್ರತಿಪತ್ತಿಗೆ ಸಾಧನವೆಂತ ಗೊತ್ತಾದದ್ದರಿಂದ ತಪಸ್ಸುಮಾಡಿದನು.

ಶೃಂಗಗ್ರಾಹಿಕಯೋಕ್ತ್ವಾಪಿ ಹ್ಯನ್ನಂ ಬ್ರಹ್ಮೇತಿ ಲಕ್ಷಣಮ್ |
ಪಿತೋವಾಚ ಯತಸ್ತಸ್ಮಾತ್ ತಪೋ ಭೇಜೇ ಸ್ವಯಂ ಭೃಗುಃ ||

೧೫. ಅನ್ನ, ಪ್ರಾಣ–ಇತ್ಯಾದಿಗಳಿಗಿಂತ ಒಳಗಿರುವದೇ ಬ್ರಹ್ಮವೆಂದು ಹೇಳಿದಮೇಲೂ 'ಏತರಿಂದ ಈ ಭೂತಗಳೆಲ್ಲವೂ ಹುಟ್ಟುತ್ತವೆಯೋ' ಎಂದು ಬ್ರಹ್ಮಲಕ್ಷಣವನ್ನೂ ತಂದೆಯು (ಆಚಾರ್ಯನು) ಹೇಳಿದ್ದರಿಂದ ಭೃಗುವು ತಾನೇ ತಪಸ್ಸನ್ನು ಆಚರಿಸಿಕೊಂಡನು.

ಬ್ರಹ್ಮ ಸಾಕ್ಷಾನ್ನ ನಿರ್ದಿಷ್ಟಂ ಲಕ್ಷಣೋಕ್ತೇರತೋ ಭೃಗುಃ |
ನೂನಮಾಕಾಂಕ್ಷತೇ ಯೋಗ್ಯಂ ಸಾಧನಂ ಬ್ರಹ್ಮವಿತ್ತಯೇ ||

೧೬. ಬ್ರಹ್ಮಕ್ಕೆ ಲಕ್ಷಣವನ್ನು ಮಾತ್ರ ಹೇಳಲಾಗಿದೆಯೇ ಹೊರತು ನೇರಾಗಿ ಬ್ರಹ್ಮವನ್ನೇ ನಿರ್ದೇಶಮಾಡಿಲ್ಲ. ಆದ್ದರಿಂದ ಬ್ರಹ್ಮವನ್ನು ಅರಿಯುವದಕ್ಕಾಗಿ ಯೋಗ್ಯವಾದ ಸಾಧನವು ಬಯಸತಕ್ಕದ್ದಾಗಿದೆ.

ತಪೋ ವಿಶೇಷಾದಿತ್ಸಾ ಸ್ಯಾತ್ ತತ್ಸಾಧನಮತತ್ತ್ವತಃ |
ಯದ್ದುಸ್ತರಂ ಯದ್ದುರಾಪಂ ಇತಿ ಸ್ಮೃತ್ಯನುಶಾಸನಾತ್ ||

೧೭. ತತ್ತ್ವಕ್ಕಿಂತ ಅನ್ಯವಾದ– ಆದರೆ ತತ್ತ್ವಪ್ರಾಪ್ತಿಗೆ ಸಾಧನವಾದ ತಪೋವಿಶೇಷವು ಸ್ವೀಕಾರಾರ್ಹವಾಗಿದೆ. ಏಕೆಂದರೆ ದುಸ್ತರವಾದದ್ದನ್ನು ಪಡೆಯಲು ಕಷ್ಟಸಾಧ್ಯವಾದದ್ದನ್ನೂ ಕೂಡ ತಪಸ್ಸಿನಿಂದ ಹೊಂದಬಹುದು– ಎಂದು ಸ್ಮೃತಿಯ ಅನುಶಾಸನವಿರುವದರಿಂದ ಭೃಗುವು ತಪಸ್ಸುಮಾಡಿದನು.

ಮನಸಶ್ಚೇಂದ್ರಿಯಾಣಾಂ ಚೈಕ್ಯೈಮೇವಮಾಧ್ಯಾತ್ಮಿಕಂ ತಪಃ |
ಇಹ ನ್ಯಾಯ್ಯಂ ಪ್ರಸಿದ್ಧಂ ತು ಹ್ಯಾರಾದುಪಕರೋತಿ ನಃ ||

೧೮. ಮನಸ್ಸು ಮತ್ತು ಇಂದ್ರಿಯಗಳ ಏಕಾಗ್ರತೆಯೇ ಅಧ್ಯಾತ್ಮತಪಸ್ಸೆನಿಸುವದು. ಇದು ಯೋಗ್ಯವೂ ಪ್ರಸಿದ್ಧವೂ ಹೌದು. ಇದು ಪರಂಪರೆಯಿಂದ ಉಪಕಾರಕವಾಗಿದೆ.

ಅನ್ವಯವ್ಯತಿರೇಕಾದಿಚಿಂತನಂ ವಾ ತಪೋ ಭವೇತ್ |
ಅಹಂ ಬ್ರಹ್ಮೇತಿವಾಕ್ಯಾರ್ಥಬೋಧಾಯಾಲಮಿದಂ ಯತಃ ||

೧೯. ಇನ್ನು ಅನ್ವಯವ್ಯತಿರೇಕಚಿಂತನೆಯೂ ತಪಸ್ಸಾಗಬಹುದು. 'ಅಹಂ ಬ್ರಹ್ಮಾಸ್ಮಿ' ಎಂಬ ವಾಕ್ಯಾರ್ಥಜ್ಞಾನಕ್ಕೆ ಇದು ಸಾಕಾಗಿರುತ್ತದೆ.

ಕೋಽಹಂ ಕಸ್ಯ ಕುತೋ ವೇತಿ ಕಃ ಕಥಂ ವಾ ಭವೇದಿತಿ ||
ಪ್ರಯೋಜನಮತಿರ್ನಿತ್ಯಂ ಏವಂ ಮೋಕ್ಷಾಶ್ರಮಿಣಾ ಭವೇತ್ |
ವ್ಯಾಸಃ ಪ್ರಾಹಾತ ಏವೇದಂ ಮುಮುಕ್ಷೋರ್ಮೋಕ್ಷಯೇ ತಪಃ ||

೨೦. ನಾನು ಯಾರು? ಯಾರವನು? ಎಲ್ಲಿಂದ ಬಂದೆನು? ಯಾವದು ಹೇಗೆ ಸಂಭವಿಸೀತು? ಹೀಗೆ ಚಿಂತಿಸುತ್ತಾ ಮೋಕ್ಷಪ್ರಯೋಜನದ ಉದ್ದೇಶವುಳ್ಳವನಾಗಿ ಮುಮುಕ್ಷುವು ಇದ್ದುಕೊಂಡಿರಬೇಕು. ಹೀಗೆಂದು ವ್ಯಾಸರು ಹೇಳಿರುತ್ತಾರೆ. ಆದ್ದರಿಂದ ತಪಸ್ಸೆಂಬುದು ಮುಮುಕ್ಷುವಿಗೆ ಮೋಕ್ಷಕ್ಕಾಗಿ ಹೇಳಲ್ಪಟ್ಟಿರುತ್ತದೆ.

ಯತೋ ವಾ ಇತಿ ಚೈವಂ ಸ್ಯಾತ್ ಉಕ್ತಮೇವ ಪರಂ ತಪಃ |
ಉಕ್ತಲಕ್ಷಣಸಂಪನ್ನಂ ತಪಸ್ತಪ್ತ್ವಾ ಪ್ರಯತ್ನವಾನ್ |
ಅನ್ನಂ ಬ್ರಹ್ಮೇತಿ ಭೂತಾನಾಮುತ್ಪತ್ತ್ಯಾದಿಸಮನ್ವಯಾತ್ ||

೨೧–೨೨. ಅಥವಾ 'ಯತೋ ವಾ ಇಮಾನಿ' ಎಂಬೀ ರೀತಿಯ ಚಿಂತನೆಯೇ ತಪಸ್ಸೆಂದೂ ಆಗಬಹುದು. ಇದು ಈಗಾಗಲೇ ಪರಮತಪಸ್ಸೆಂದೂ ಹೇಳಲ್ಪಟ್ಟಿದೆ. (ಭೃಗುವು) ಈಗ ಹೇಳಿದ ಲಕ್ಷಣವುಳ್ಳ ತಪಸ್ಸನ್ನು ಮಾಡಿ ಪ್ರಯತ್ನಶೀಲನಾಗಿ– ಪ್ರಾಣಿಗಳ ಉತ್ಪತ್ತ್ಯಾದಿಗಳು ಹೊಂದುವವಾದ್ದರಿಂದ ಅನ್ನವು ಬ್ರಹ್ಮವು– ಎಂದು ಅರಿತುಕೊಂಡನು.

ಉಕ್ತಾನ್ಯನ್ನಮಯಾದೀನಿ ಯಾನಿ ತೇಷಾಂ ತು ಕಾರಣಮ್ |
ಅನ್ನಾದಿ ಪ್ರತಿಪತ್ತವ್ಯಂ ನ ಹಿ ಕಾರ್ಯೇಽಸ್ತಿ ಲಕ್ಷಣಮ್ ||

೨೩. ಅನ್ನಮಯನೇ ಮುಂತಾದ ಆತ್ಮರುಗಳಿಗೆ ಕಾರಣವಾದ ಯಾವ ಅನ್ನಾದಿಗಳಿವೆಯೋ ಅವುಗಳನ್ನು ಬ್ರಹ್ಮವೆಂದರಿಯಬೇಕು. ಏಕೆಂದರೆ ಅನ್ನಮಯಾದಿ ಕಾರ್ಯಾತ್ಮರುಗಳಲ್ಲಿ ಬ್ರಹ್ಮಲಕ್ಷಣವಿರುವದಿಲ್ಲ.

ಶುಂಗಂ ಹ್ಯನ್ನಮಯಾದ್ಯೇತದನ್ನಾದೇರುಪಜಾಯತೇ |
ಕಾರ್ಯಪ್ರವಿಲಯಶ್ರುತ್ಯಾ ಕಾರಣಾನಂದಮೇತ್ಯತಃ ||

೨೪. ಅನ್ನಮಯವೇ ಮುಂತಾದವು ಕಾರ್ಯಗಳು. ಏಕೆಂದರೆ ಇವು ಅನ್ನಾದಿಗಳಿಂದ ಹುಟ್ಟುತ್ತವೆ. ಕಾರ್ಯವು ಕಾರಣದಲ್ಲಿ ಪ್ರವಿಲಯವಾಗುವದೆಂದು ಶ್ರುತಿಯಿರುವದರಿಂದ ಮುಂದೆ ಕಾರಣವಾದ ಆನಂದವನ್ನು ಹೊಂದುವನು.

ಕಾರ್ಯಾಣಿ ಕಾರಣೇಷ್ವೇವಂ ತಾನಿ ಚೈವೋತ್ತರೋತ್ತರಮ್ |
ಪ್ರವಿಲಾಪ್ಯ ಪರಾನಂದಂ ಯಾಯಾದ್ ವಾಚಾಮಗೋಚರಮ್ ||

೨೫. ಹೀಗೆ ಕಾರ್ಯಗಳು ಕಾರಣಗಳಲ್ಲಿಯೂ ಅವು ತಮ್ಮತಮ್ಮ ಹಿಂದಿನ ಕಾರಣಗಳಲ್ಲಿಯೂ ಲಯವಾಗುವವು. ಹೀಗೆ ಪ್ರವಿಲಾಪನಮಾಡಿ ವಾಙ್ಮನಸ್ಸುಗಳಿಗೆ ಅಗೋಚರವಾದ ಪರಾನಂದವನ್ನು ಸೇರುವನು.

ಅನ್ನಂ ಬ್ರಹ್ಮೇತಿ ವಿಜ್ಞಾಯ ಕಾರ್ಯತ್ವಂ ತಸ್ಯ ವೀಕ್ಷ್ಯ ಸಃ |
ಸಂಶಯೋಚ್ಛಿತ್ತಯೇ ಭೂಯೋ ಗತ್ವಾಪೃಚ್ಛದ್ ಗುರುಂ ಭೃಗುಃ ||

೨೬. ಅನ್ನವನ್ನು ಬ್ರಹ್ಮವೆಂದು ತಿಳಿದ ಭೃಗುವು ಅನಂತರ ಅದು ಕಾರ್ಯವೆಂಬುದನ್ನು ಕಂಡುಕೊಂಡು ಸಂಶಯಪರಿಹಾರಕ್ಕಾಗಿ ಮತ್ತೆ ಗುರುವನ್ನು ಬಳಿಸಾರಿ ಕೇಳಿದನು.

ಅನ್ನಾದೇರ್ಬ್ರಹ್ಮಣಶ್ಚೈವಂ ದೋಷಂ ದೃಷ್ಟ್ವಾ ಸ ಕಾರ್ಯತಾಮ್ |
ಭೂಯೋ ಭೂಯಃ ಪರಂ ಬ್ರಹ್ಮ ಪಪ್ರಚ್ಛಾತೃಣ್ಣಿವರ್ತನಾತ್ ||

೨೭. ಅನ್ನವೇ ಮುಂತಾದ ಬ್ರಹ್ಮಗಳಲ್ಲಿ ಕಾರ್ಯತ್ವವೆಂಬ ದೋಷವನ್ನು ಕಂಡು ತನ್ನ ಜಿಜ್ಞಾಸೆಯ ದಾಹವು ಪೂರೈಸುವವರೆಗೂ ಮತ್ತೆಮತ್ತೆ ಕೇಳಿದನು.

ಯಾವತ್ ಸಾಕ್ಷಾತ್ ಪರಂ ಬ್ರಹ್ಮ ಕರವಿನ್ಯಸ್ತಬಿಲ್ವವತ್ |
ನ ವೇತ್ತಿ ನಿರ್ಬುಭುತ್ಸುಃ ಸನ್ನ ತಾವದ್ವಿನಿವರ್ತತೇ ||

೨೮. ಎಲ್ಲಿಯವರೆಗೆ ಪರಬ್ರಹ್ಮವನ್ನು ಅಂಗೈನಲ್ಲಿರುವ ಬಿಲ್ವಫಲದಂತೆ ಅರಿಯುವದಿಲ್ಲವೋ ಅಲ್ಲಿಯವರೆಗೂ ಚೆನ್ನಾಗಿ ಅದನ್ನು ಕಂಡುಕೊಳ್ಳುವದಕ್ಕಾಗಿ ಆತನು ಹಿಂದಿರುಗದೆ ಇದ್ದನು.

ವಿಜಿಜ್ಞಾಸಸ್ವ ತದ್ಬ್ರಹ್ಮ ತಪಸೇತಿ ಪುನಃ ಪುನಃ |
ಬ್ರುವನ್ ಜ್ಞಾಪಯತೀಹಾಸ್ಮಾನ್ ತಪಸೈವಾತ್ಮವೀಕ್ಷಣಮ್ ||

೨೯. ಆ ಬ್ರಹ್ಮವನ್ನು ಮತ್ತೆಮತ್ತೆ ತಪಸ್ಸಿನಿಂದ ವಿಚಾರಮಾಡುವವನಾಗು–ಎಂದು ಹೇಳುತ್ತಾ ಶ್ರುತಿಯು ತಪಸ್ಸಿನಿಂದಲೇ ಆತ್ಮನನ್ನು ಕಂಡುಕೊಳ್ಳಬೇಕೆಂದು ನಮಗೆ ನೆನಪುಕೊಡುತ್ತಿದೆ.

ಅನ್ವಯವ್ಯತಿರೇಕಾಭ್ಯಾಮೇವಂ ಸ ಶನಕೈರ್ಭೃಗುಃ |
ತಪಸೈವ ಪರಂ ಬ್ರಹ್ಮ ವಿಜಿಜ್ಞೌ ಪ್ರತ್ಯಗಾತ್ಮನಿ ||

೩೦. ಈ ರೀತಿಯಾಗಿ ಅನ್ವಯವ್ಯತಿರೇಕಗಳಿಂದ ಮೆಲ್ಲಮೆಲ್ಲನೆ ಭೃಗುವು ತನ್ನ ಪ್ರತ್ಯಗಾತ್ಮನಲ್ಲಿಯೇ ಪರಬ್ರಹ್ಮವನ್ನು ತಪಸ್ಸಿನಿಂದ ಅರಿತುಕೊಂಡನು.

ಯಸ್ಮಾದೇವಮತಃ ಕಾರ್ಯಂ ಸಂಸಾರಂ ಪ್ರಜಿಹಾಸುಭಿಃ |
ಪ್ರತ್ಯಗ್ಬ್ರಹ್ಮಾವಬೋಧಾಯ ಸದಾ ನಿಷ್ಕಲ್ಮಷಂ ತಪಃ ||

೩೧. ಆದ್ದರಿಂದ ಸಂಸಾರವನ್ನು ತ್ಯಾಗಮಾಡಲಿಚ್ಛಿಸುವವರು ಪ್ರತ್ಯಗಾತ್ಮನಾದ ಬ್ರಹ್ಮವನ್ನು ಅರಿತುಕೊಳ್ಳುವದಕ್ಕಾಗಿ ಯಾವಾಗಲೂ ನಿಷ್ಕಲ್ಮಷವಾದ ತಪಸ್ಸನ್ನು ಮಾಡಬೇಕು.

ವ್ಯುತ್ಥಾಯಾಖ್ಯಾಯಿಕಾರೂಪಾತ್ ತನ್ನಿರ್ವೃತ್ತಮಥಾಧುನಾ |
ಶ್ರುತಿಃ ಸ್ವೇನೈವ ರೂಪೇಣ ವ್ಯಾಚಷ್ಟೇಽರ್ಥಂ ಪ್ರಯತ್ನತಃ ||

೩೨. ಕಥೆಯರೂಪದಿಂದ ಹೇಳುವದನ್ನು ಬಿಟ್ಟು ಈಗ ಆ ಕಥೆಯಿಂದ ಸಿದ್ಧವಾದ ಅರ್ಥವನ್ನು ಶ್ರುತಿಯು ಪ್ರಯತ್ನಪೂರ್ವಕವಾಗಿ ತನ್ನ ಮಾತಿನಿಂದಲೇ ಹೇಳುತ್ತಿದೆ.

ಭೃಗುಣಾ ವಿದಿತಾ ಯಸ್ಮಾದ್ ಭಾರ್ಗವೀಯಂ ಭವೇದತಃ |
ವಾರುಣೀ ವರುಣೋಕ್ತತ್ವಾತ್ ವಿದ್ಯಾ ಸ್ಯಾದ್ ಬ್ರಹ್ಮವೇದನಾತ್ ||

೩೩. ಈ ವಿದ್ಯೆಯು ಭೃಗುವಿನಿಂದ ತಿಳಿಯಲ್ಪಟ್ಟದ್ದೂ ವರುಣನಿಂದ ಹೇಳಲ್ಪಟ್ಟದ್ದೂ ಬ್ರಹ್ಮವನ್ನು ತಿಳಿಸಿಕೊಡತಕ್ಕದ್ದೂ ಆಗಿರುವದರಿಂದ ಭಾರ್ಗವೀ ವಾರುಣೀ, ವಿದ್ಯಾ– ಎಂದು ಪ್ರಸಿದ್ಧವಾಗಿದೆ.

ಯುಷ್ಮದಸ್ಮದ್ವಿಭಾಗೋಽಯಂ ಯತ್ರ ವ್ಯಾವರ್ತತೇಽಞ್ಜಸಾ |
ಸ ಆತ್ಮಾ ತತ್ಪರಂ ವ್ಯೋಮ ತತ್ರ ವಿದ್ಯಾ ಪ್ರತಿಷ್ಠಿತಾ ||

೩೪. ನೀನು, ನಾನು ಎಂಬ ಭೇದವು ಎಲ್ಲಿ ಪೂರ್ಣವಾಗಿ ತೊಲಗಿರುವದೋ ಅವನೇ ಆತ್ಮನು; ಅದೇ ಪರಮವ್ಯೋಮವು. ಆತ್ಮವಿದ್ಯೆಯು ಅಲ್ಲಿ ನೆಲೆಗೊಂಡಿರುವದು.

ಆತ್ಮತಾ ಬ್ರಹ್ಮಣೋ ಯತ್ರ ಆತ್ಮನೋ ಬ್ರಹ್ಮತಾ ತಥಾ |
ಅಹಂ ಬ್ರಹ್ಮೇತ್ಯವಾಕ್ಯಾರ್ಥಮೇವಂ ವಾಕ್ಯಾತ್ ಪ್ರಪದ್ಯತೇ ||

೩೫. ಎಲ್ಲಿಗೆ ಬ್ರಹ್ಮಕ್ಕೆ ಆತ್ಮತ್ವವೂ ಆತ್ಮನಿಗೆ ಬ್ರಹ್ಮತ್ವವೂ ಸಿದ್ಧವಾಗುವದೋ ಅಲ್ಲಿ 'ನೀನೇ ಬ್ರಹ್ಮವು' ಎಂಬ ರೀತಿಯ ವಾಕ್ಯಾರ್ಥವನ್ನು ವಿಚಾರಿದ ಬೋಧವಾಗುವದು. ಹೀಗೆ ವಾಕ್ಯದಿಂದ ಬ್ರಹ್ಮವನ್ನು ಅರಿಯುವನು.

ಅನ್ಯೋಽಪಿ ಭೃಗುವತ್ ತಪ್ತ್ವಾ ತಪ ಐಕಾಗ್ರ್ಯಲಕ್ಷಣಮ್ |
ಕೋಶಾನ್ನಿರಸ್ಯ ಪಂಚಾಪಿ ಪ್ರತಿಷ್ಠಾಂ ಲಭತೇ ಪರಾಮ್ ||

೩೬. ಹೀಗೆಯೇ ಬೇರೊಬ್ಬನೂ ಭೃಗುವಿನಂತೆ ಏಕಾಗ್ರತಾರೂಪವಾದ ತಪಸ್ಸನ್ನಾಚರಿಸಿ ಐದು ಕೋಶಗಳನ್ನೂ ನಿರಾಕರಣೆಮಾಡಿದನಾದರೆ ಪರಮವಾದ ಸ್ಥಾನವನ್ನು ಹೊಂದುವನು.

ಬ್ರಹ್ಮ ಪುಚ್ಛಂ ಪ್ರತಿಷ್ಠೇತಿ ವಲ್ಲ್ಯಾಮುಕ್ತಂ ಪೂರ್ವಯಾ ತು ಯತ್ |
ತಸ್ಯಾಮೇವ ಪ್ರತಿಷ್ಠಾಯಾಂ ವಿದ್ವಾನ್ ಸಂಪ್ರತಿತಿಷ್ಠತಿ ||

೩೭. ಹಿಂದಿನ ವಲ್ಲಿಯಲ್ಲಿ ಹೇಳಿದ 'ಬ್ರಹ್ಮ ಪುಚ್ಛಂ ಪ್ರತಿಷ್ಠಾ' ಎಂಬುದು ಯಾವದಿದೆಯೋ ಅದೇ ಸ್ವರೂಪದಲ್ಲಿ ಜ್ಞಾನಿಯು ನೆಲೆಗೊಳ್ಳುತ್ತಾನೆ.

ಅನ್ನಾದ್ಯುಪಾಸಕಾನಾಂ ವಾ ಫಲಮೇತದಿಹೋಚ್ಯತೇ |
ನ್ಯಾಯ್ಯಂ ನಾವಾಪ್ತಕಾಮಾನಾಂ ಅನ್ನಾದಿಫಲಕೀರ್ತನಮ್ ||

೩೮. ಇನ್ನು ಅನ್ನಾದಿಗಳನ್ನು ಬ್ರಹ್ಮವೆಂದು ಉಪಾಸನೆಮಾಡುವವರಿಗೆ ಈ ಮುಂದೆ ಫಲವನ್ನು ಹೇಳಲಾಗುವದು. ಏಕೆಂದರೆ ಈ ಅನ್ನಾದಿಫಲಕೀರ್ತನೆಯು ಆಪ್ತಕಾಮರಾದ ಬ್ರಹ್ಮವಿದರಿಗೆ ಹೊಂದಲಾರದು.

ಭೂಯೋಽನ್ನವಾನ್ ದೀಪ್ತವಹ್ನಿರ್ಮಹಾಂಶ್ಚ ಸ್ಯಾತ್ ಪ್ರಜಾದಿಭಿಃ |
ಶಾಂತಿದಾಂತ್ಯಾದಿಹೇತುಸ್ತ್ವಿಡ್ ಬ್ರಹ್ಮವರ್ಚಸಮುಚ್ಯತೇ ||

೩೯. ಅನ್ನಬ್ರಹ್ಮೋಪಾಸಕನು ಹೆಚ್ಚಿನ ಅನ್ನವಂತನೂ ಜೀರ್ಣಶಕ್ತಿಯುಳ್ಳವನೂ ಪ್ರಜಾದಿಸಂಪತ್ತುಗಳಿಂದ ಮಹಾಂತನೂ ಆಗುವನು. ಬ್ರಹ್ಮವರ್ಚಸ್ಸಿನಿಂದಲೂ ಸಂಪನ್ನನಾಗುವನು. ಶಾಂತಿದಾಂತಿಗಳಿಗೆ ಕಾರಣವಾದ ಕಾಂತಿಯನ್ನು ಬ್ರಹ್ಮವರ್ಚಸ್ಸೆನ್ನುವರು.

ಅನ್ನಮೇವ ಗುರುರ್ನ್ಯಾಯ್ಯಮುತ್ತರಜ್ಞಾನಹೇತುತಃ |
ಅನ್ನಂ ನ ನಿಂದ್ಯಾತ್ ತೇನಾದೌ ವ್ರತಂ ಸ್ಯಾತ್ತದುಪಾಸಿತುಃ ||

೪೦. ಮುಂದುಮುಂದಿನ ಜ್ಞಾನಕ್ಕೆ ಕಾರಣವಾಗಿರುವದರಿಂದ ಅನ್ನವು ಪೂಜ್ಯವೆಂಬುದು ಯೋಗ್ಯವಾಗಿದೆ. ಆದ್ದರಿಂದ ಅನ್ನಬ್ರಹ್ಮವನ್ನು ಉಪಾಸನೆ ಮಾಡುವವರಿಗೆ ಅನ್ನವನ್ನು ದೂಷಿಸಬಾರದು— ಎಂಬಿದು ವ್ರತವಾಗಿದೆ.

ಅನ್ಯೋಽನ್ಯಸ್ಥಿತಿಹೇತುತ್ವಾದನ್ನಾನ್ನಾದತ್ವಮುಚ್ಯತೇ |
ಶರೀರಪ್ರಾಣಯೋರೇವಮುತ್ತರೇಷ್ವಪಿ ನಿರ್ಣಯಃ ||

೪೧. ಶರೀರ–ಪ್ರಾಣಗಳು ಒಂದಕ್ಕೊಂದು ಬದುಕಿಗೆ ಕಾರಣವಾಗಿರುವದರಿಂದ ಅವು ಪರಸ್ಪರವಾಗಿ ಅನ್ನಾನ್ನಾದಗಳೆನಿಸಿವೆ. ಹೀಗೆಯೇ ಮುಂದಿನ ಪರ್ಯಾಯಗಳಲ್ಲಿಯೂ ತಿಳಿಯಬೇಕು.

ಪ್ರಾಪ್ತಂ ನ ಪರಿಚಕ್ಷೀತ ತ್ವನ್ನವ್ರತಮಿದಂ ಭವೇತ್ |
ಅನ್ನಂ ಸುಬಹು ಕುರ್ವೀತ ತಥೈವೇಹೋತ್ತರಂ ವ್ರತಮ್ ||

೪೨. ಬಂದೊದಗಿದ ಅನ್ನವನ್ನು ತಿರಸ್ಕರಿಸಬಾರದು. ಇದೊಂದು ಅನ್ನವ್ರತವು. ಇನ್ನು ಅನ್ನವನ್ನು ಬಹುವಾಗಿ ವೃದ್ಧಿಗೊಳಿಸಬೇಕೆಂಬುದೂ ಮತ್ತೊಂದು ವ್ರತವಾಗಿರುವದು.

ವಸತ್ಯರ್ಥಂ ತಥಾಯಾತಂ ಪ್ರತ್ಯಾಚಕ್ಷೀತ ನೈವ ತಮ್ |
ವಸತೇ ಚಾನ್ನದಾನಾರ್ಥಂ ಕುರ್ಯಾದನ್ನಂ ಗೃಹೀ ಬಹು ||

೪೩. ವಸತಿಗಾಗಿ ಬಂದಿರುವ ಅತಿಥಿಯನ್ನು ನಿರಾಶೆಗೊಳಿಸಬಾರದು. ಇನ್ನು ವಸತಿಯನ್ನು ಕೊಟ್ಟ ಅನಂತರ ಅವನಿಗೆ ಅನ್ನವನ್ನೂ ಕೊಡಬೇಕಾಗುವದು. ಆದ್ದರಿಂದ ಗೃಹಸ್ಥನು ಬಹುವಾಗಿ ಅನ್ನವನ್ನು ಸಂಪಾದನೆಮಾಡಿಕೊಳ್ಳಬೇಕು.

ಏತದ್ವೈ ಮುಖತ ಇತಿ ಸತ್ಕಾರೋಕ್ತಿಸ್ತ್ರಿಧಾ ಭವೇತ್ |
ವಯೋಽವಸ್ಥಾ ತ್ರಿಧಾ ವಾ ಸ್ಯಾತ್ ಅನ್ನದಾನವಿವಕ್ಷಯಾ ||

೪೪. 'ಏತದ್ವೈ ಮುಖತಃ' ಎಂಬೀ ರೀತಿಯಲ್ಲಿ ಸತ್ಕಾರದ ಮಾತುಗಳು ಮೂರು ವಿಧವಾಗಿವೆ. ಅಥವಾ ವಯಸ್ಸು, ಅವಸ್ಥೆಗಳನ್ನೂ ಸೇರಿಸಿದರೆ ಅನ್ನದಾನವು ಮೂರು ವಿಧವಾಗಿರುವದು– ಎಂದಾದರೂ ಅರ್ಥಮಾಡಬಹುದು:

ರಾದ್ಧಂ ಸಿದ್ಧಂ ಭವೇದನ್ನಂ ಪಾತ್ರೇಭ್ಯೋ ಯಸ್ಯ ತಸ್ಯತು |
ಯಥಾ ಸತ್ಕಾರವಯಸೀ ಅನ್ನದಾನಫಲಂ ಭವೇತ್ ||

೪೫. ರಾದ್ಧಂ– ಎಂದರೆ ಸಿದ್ಧವಾದ ಅನ್ನವು. ಯಾವ ಪಾತ್ರದಲ್ಲಿ ಯಾವ ರೀತಿಯ ಸತ್ಕಾರದಿಂದ ಯಾವ ವಯಸ್ಸಿನಲ್ಲಿ ದಾನಮಾಡುವದೋ ಆ ರೀತಿಯಲ್ಲಿ ಅನ್ನದಾನದ ಫಲವುಂಟಾಗುವದು.

ಗೃಹಿಣೋ ಹ್ಯನ್ನವಂತೋಽಪಿ ಯತ ಆಚಕ್ಷತೇ ಸದಾ |
ಅರಾಧಿ ಸಿದ್ಧಮೇವಾನ್ನಮತಿಥ್ಯರ್ಥಂ ನ ಸಂಶಯಃ ||
ಯತ ಏವಮತಃ ಕಾರ್ಯಂ ಬಹ್ವನ್ನಂ ಯತ್ನತಃ ಸದಾ ||

೪೬. ಅನ್ನವುಳ್ಳಂಥ ಗೃಹಸ್ಥರು 'ಸಿದ್ಧವಾಗಿದೆ ; ಅತಿಥಿಗಳಿಗಾಗಿ ಅನ್ನವು ಸಿದ್ಧವಿದೆ' ಎಂದು ಹೇಳುತ್ತಾರೆ. ಈ ಬಗ್ಗೆ ಸಂಶಯವಿಲ್ಲ. ಹೀಗೆ ಆಚಾರವಿರುವದರಿಂದ ಬಹಳವಾದ ಅನ್ನವನ್ನು ಪ್ರಯತ್ನದಿಂದ ಸಂಪಾದಿಸಿಕೊಳ್ಳಬೇಕು.

ಅಪಿ ಚಾನ್ನಸ್ಯಮಾಹಾತ್ಮ್ಯಮಿದಮನ್ಯದ್ಯಥಾವಯಃ |
ಯಥಾ ಶ್ರದ್ಧಂ ಯಥಾಕಾಲಂ ಯಥಾಸತ್ಕಾರಮೇವ ಚ |
ಅನ್ನಂ ದದದವಾಪ್ನೋತಿ ತತ್ತಥೈವ ನ ಸಂಶಯಃ ||

೪೭-೪೮. ಮತ್ತು ಇದುಕೂಡ ಮತ್ತೊಂದು ಅನ್ನಮಾಹಾತ್ಮ್ಯವು. ಏನೆಂದರೆ ಶ್ರದ್ಧೆಗೆ ಅನುಗುಣವಾಗಿ, ಕಾಲಕ್ಕೆ ಅನುಗುಣವಾಗಿ, ಸತ್ಕಾರಕ್ಕೆ ಅನುಗುಣವಾಗಿ ಅನ್ನವನ್ನು ದಾನಮಾಡಿದವನು ಹಾಗೆಯೇ ಅನ್ನವನ್ನು ಪಡೆಯುತ್ತಾನೆ. ಈ ಬಗ್ಗೆ ಸಂಶಯವಿಲ್ಲ.

ಉಪಾತ್ತರಕ್ಷಣಂ ಕ್ಷೇಮೋ ಬ್ರಹ್ಮೈತದ್ವಾಚಿ ಸಂಶ್ರಿತಮ್ |
ಕ್ಷೇಮಹೇತುರ್ಯತೋ ವಾಕ್ಯಂ ತದುಪಾಸೀತ ವಾಚ್ಯತಃ ||

೪೯. ಪಡೆದದ್ದನ್ನು ಕಾಪಾಡಿಕೊಳ್ಳುವದು ಕ್ಷೇಮವು. ಇಂಥ ವಾಕ್ಕಿನಲ್ಲಿ ಬ್ರಹ್ಮವು ಇದ್ದುಕೊಂಡಿರುವದು. ಮಾತೆಂಬುದು ಕ್ಷೇಮಕ್ಕೆ ಕಾರಣವಾದ್ದರಿಂದ್ಮ ಮಾತಿನಲ್ಲಿ ಕ್ಷೇಮವೆಂದು ಬ್ರಹ್ಮವನ್ನು ಚಿಂತಿಸಬೇಕು.

ಅಪ್ರಾಪ್ತಪ್ರಾಪಣಂ ಯೋಗಃ ಕ್ಷೇಮಶ್ಚೋಭಯರೂಪಭೃತ್ |
ಪ್ರಾಣಾಪಾನಾಶ್ರಯಂ ಬ್ರಹ್ಮ ತದುಪಾಸೀತ ತೌ ಹ್ಯತಃ ||

೫೦. ಪಡೆಯದೆಇದ್ದದ್ದನ್ನು ಪಡೆದುಕೊಳ್ಳುವದು ಯೋಗವು. ಕ್ಷೇಮವೆಂದರೆ (ಕಾಪಾಡಿಕೊಳ್ಳುವದು). ಹೀಗೆ ಪ್ರಾಣಾಪಾನಗಳನ್ನಾಶ್ರಯಿಸಿರುವ ಬ್ರಹ್ಮವು ಎರಡು ರೂಪವಾಗಿದೆ. ಆದ್ದರಿಂದ ಆವೆರಡನ್ನೂ ಬ್ರಹ್ಮವೆಂದು ಚಿಂತಿಸಬೇಕು.

ಯೋಗಕ್ಷೇಮಾತ್ಮಕಂ ಬ್ರಹ್ಮ ಪ್ರಾಣಾಪಾನಸಮಾಶ್ರಯಮ್ |
ಕರ್ಮೇತಿ ಹಸ್ತಯೋಸ್ತದ್ವದುಪಾಸೀತಾಪ್ರಮಾದವಾನ್ ||

೫೧. ಪ್ರಾಣಾಪಾನಗಳನ್ನಾಶ್ರಯಿಸಿರುವ ಬ್ರಹ್ಮವು ಯೋಗಕ್ಷೇಮಾತ್ಮಕವಾಗಿದೆ. ಹಾಗೆಯೇ ಹಸ್ತಗಳನ್ನಾಶ್ರಯಿಸಿರುವ ಬ್ರಹ್ಮವನ್ನು ಕರ್ಮವೆಂದು ಉಪಾಸನೆಮಾಡಬೇಕು.

ತಥಾ ಗತಿರಿತಿ ಧ್ಯೇಯಂ ಪಾದಯೋರ್ಬ್ರಹ್ಮ ಸರ್ವದಾ |
ವಿಮುಕ್ತಿರಿತಿ ಪಾಯೌ ಚ ಸಮಾಜ್ಞಾ ಮಾನುಷೀಃ ಸ್ಮೃತಾಃ ||

೫೨. ಹಾಗೆಯೇ ಪಾದಗಳನ್ನಾಶ್ರಯಿಸಿರುವ ಬ್ರಹ್ಮವನ್ನು ಗತಿಯೆಂದು ಚಿಂತಿಸಬೇಕು. ಪಾಯ್ವಿಂದ್ರಿಯಾಶ್ರಿತವಾದ ಬ್ರಹ್ಮವನ್ನು ಮುಕ್ತಿಯೆಂದು ಧ್ಯಾನಿಸಬೇಕು. ಹೀಗೆ ಮಾನುಷೋಪಾಸನೆಗಳನ್ನು ಹೇಳಿದ್ಧಾಯಿತು.

ಮನುಷ್ಯವಿಷಯಾ ಯಸ್ಮಾದಾಜ್ಞಾ ವಿಷ್ಣೋರಿಯಂ ತತಃ |
ಸಮಾಜ್ಞಾ ಮಾನುಷೀಸ್ತ್ವೇವಂ ಸದ್ಭಿರ್ವಾಚಕ್ಷತೇ ಬುಧಾಃ ||

೫೩. ಈ ಮನುಷ್ಯವಿಷಯವಾದ ಉಪಾಸನೆಗಳನ್ನು ಕುರಿತ ಅಪ್ಪಣೆಗಳು ವಿಷ್ಣುವಿನವುಗಳಾದ್ದರಿಂದ ಬಲ್ಲವರು ಇವುಗಳನ್ನು ಮಾನುಷೀಸಮಾಜ್ಞೆಗಳೆನ್ನುವರು.

ಅಥ ದೈವೀಃ ಸಮಾಜ್ಞಾಸ್ತು ಉಪಾಸೀತ ಯಥಾಕ್ರಮಮ್ |
ವೃಷ್ಟೌ ತೃಪ್ತಿರಿತಿ ಧ್ಯೇಯಂ ತೃಪ್ತೇರ್ವೃಷ್ಟಿಸಮನ್ವಯಾತ್ ||

೫೪. ಇನ್ನು ದೈವೋಪಾಸನೆಗಳು. ಮಳೆಯನ್ನು ತೃಪ್ತಿಯೆಂದು ಚಿಂತಿಸಬೇಕು. ಏಕೆಂದರೆ ತೃಪ್ತಿಯು ವೃಷ್ಟಿಯನ್ನಾಶ್ರಯಿಸಿದೆ.

ತೇನ ತೇನಾತ್ಮನಾ ತದ್ವದುತ್ತರೇಷ್ವಪಿ ಚಿಂತಯೇತ್ |
ಬ್ರಹ್ಮೋಪಸ್ಥ ಉಪಾಸೀತ ಪ್ರಜಾತ್ಯಾದಿ ಗುಣಾತ್ಮಕಮ್ ||

೫೫. ಮುಂದಿನ ಪರ್ಯಾಯಗಳಲ್ಲಿಯೂ ಆಯಾ ರೂಪದಿಂದ ಧ್ಯಾನಿಸಬೇಕು. ಉಪಸ್ಥೇಂದ್ರಿಯದಲ್ಲಿ ಪ್ರಜಾತ್ಯಾದಿಗುಣಗಳಿಂದ ಕೂಡಿ ಬ್ರಹ್ಮವನ್ನು ಚಿಂತಿಸಬೇಕು.

ಪ್ರಜಾತಿಃ ಪುತ್ರಪೌತ್ರಾದಿರಮೃತತ್ವಂ ತತಃ ಪಿತುಃ |
ಆನಂದಃ ಪುರುಷಾರ್ಥೋಽತ್ರ ಸೋಽಪ್ಯುಪಸ್ಥಾಶ್ರಯೋ ಭವೇತ್ ||

೫೬. ಪ್ರಜಾತಿ ಎಂದರೆ ಪುತ್ರಪೌತ್ರಾದಿಗಳು ; ತಂದೆಗೆ ಅದರಿಂದಾಗುವ ಎಲ್ಲಾ ಆನಂದವೂ ಪುರುಷಾರ್ಥವೂ ಉಪಸ್ಥವನ್ನಾಶ್ರಯಿಸಿರುವದರಿಂದ ಅಲ್ಲಿ ಪ್ರಜಾತಿ, ಅಮೃತ, ಆನಂದಗುಣಗಳಿಂದ ಬ್ರಹ್ಮವನ್ನು ಚಿಂತಿಸಬೇಕು.

ಆಕಾಶೇ ಸರ್ವಮಿತ್ಯೇವಂ ಬ್ರಹ್ಮೋಪಾಸ್ಯಂ ಸಮಾಹಿತೈಃ |
ಸರ್ವಾಶ್ರಯಂ ತದಾಕಾಶ ಉಪಾಸೀನಸ್ಯ ಶಿಷ್ಯತೇ ||

೫೭. ಸರ್ವವೂ ಆಕಾಶದಲ್ಲಿ ಅಡಕವಾಗಿದ್ದುಕೊಂಡಿದೆ-ಎಂದು ಭಾವಿಸಿ (ಆಕಾಶವನ್ನೇ) ಬ್ರಹ್ಮವೆಂದು ಸಮಾಹಿತರಾಗಿ ಚಿಂತಿಸಬೇಕು. ಹೀಗೆ ಉಪಾಸನೆ ಮಾಡುವವರಿಗೆ ಸರ್ವಾತ್ಮತ್ವವೆಂಬ ಫಲವು ದೊರಕುತ್ತದೆ.

ತತ್ಪ್ರತಿಷ್ಠೇತ್ಯುಪಾಸೀತ ಪ್ರತಿಷ್ಠಾವಾನಸೌ ಭವೇತ್ |
ಉಪಾಸನಾನುರೂಪಂ ಸ್ಯಾತ್ ಫಲಂ ಯಾದೃಗಿದಂ ತಥಾ ||

೫೮. ಆದನ್ನು ಪ್ರತಿಷ್ಠಾ–ಎಂದು ಉಪಾಸನೆಮಾಡಿದವನು ಪ್ರತಿಷ್ಠಾವಂತನಾಗುತ್ತಾನೆ. ಉಪಾಸನೆಗನುಗುಣವಾಗಿ ಫಲವಾಗುವದು ಹೇಗೋ ಹಾಗೆಯೇ ಇಲ್ಲಿಯೂ ತಿಳಿಯಬೇಕು.

ತದ್ಬ್ರಹ್ಮ ಮಹ ಇತ್ಯೇವಮುಪಾಸೀತ ತತಃ ಫಲಮ್ |
ಪ್ರಜಾದಿಭಿರ್ಮಹಾನ್ ಸ ಸ್ಯಾತ್ ತಂ ಯಥೇತಿ ಶ್ರುತಿಸ್ತಥಾ ||

೫೯. ಆ ಬ್ರಹ್ಮವನ್ನು ಮಹಃ ಎಂದೂ ಉಪಾಸನೆಮಾಡಬೇಕು. ಆದರ ಫಲವೇನೆಂದರೆ: ಉಪಾಸಕನು ಪ್ರಜಾದಿಸಂಪತ್ತುಗಳಿಂದ ಮಹಾನ್ ಎನಿಸುವನು. ಶ್ರುತಿಯು ಕೂಡ ಹೇಗೆ ಹೇಗೆ ಉಪಾಸಿಸುವರೋ ಹಾಗೆ ಫಲವಾಗುವದೆಂದು ಹೇಳುತ್ತಿದೆ.

ತನ್ಮನ ಇತ್ಯುಪಾಸೀತ ಮನಸ್ವೀ ಮಾನವಾನ್ ಭವೇತ್ |
ಪ್ರಹ್ವೀಭಾವೋ ನಮೋಽರ್ಥಃ ಸ್ಯಾತ್ ಫಲಮ್ ತಸ್ಯೇದಮುಚ್ಯತೇ ||

೬೦. ಆ ಬ್ರಹ್ಮವನ್ನು ಮನಃ– ಎಂದುಪಾಸನೆಮಾಡಿದರೆ ಮನಸ್ವಿಯೂ ಮಾನವಂತನೂ ಆಗುವನು. ಇನ್ನು ನಮಃ– ಎಂದುಪಾಸನೆಮಾಡಿದರೆ ಭೋಗಗಳನ್ನುಂಟುಮಾಡುವ ವಿಷಯುಗಳು ಈ ಉಪಾಸಕನಿಗೆ ನಮಿಸುವವು–ಎಂದರೆ ತಲೆಬಾಗುವವು. ಏಕೆಂದರೆ ಪ್ರಹ್ವೀಭಾವವೇ ನಮಃಶಬ್ದದ ಅರ್ಥವಾಗಿರುತ್ತದೆ.

ಯಸ್ತು ಬ್ರಹ್ಮೇತಿ ತದ್ಬ್ರಹ್ಮ ಹ್ಯುಪಾಸೀತ ಯಥೋದಿತಮ್ |
ಫಲಂ ತಸ್ಯ ತದೇವ ಸ್ಯಾದಿತಿ ಪೂರ್ವಮವಾದಿಷಮ್ |
ಬ್ರಹ್ಮಣೋ ಬ್ರಾಹ್ಮಣಸ್ಯೈವ ಪರಿಮರಂ ಬ್ರಹ್ಮ ತತ್ತದಾ ||

೬೧–೬೨. ಇನ್ನು ಯಾವನು ಆ ಬ್ರಹ್ಮವನ್ನು ಬ್ರಹ್ಮವೆಂದೇ ಚಿಂತಿಸುವನೋ ಅವನಿಗೆ ಬ್ರಹ್ಮಭಾವವೇ ಫಲವೆಂದು ಹಿಂದೆಯೇ ಹೇಳಿದ್ದಾಗಿದೆ. ಇನ್ನು ಬ್ರಹ್ಮದ ಪರಿಮರವೆಂಬ ಗುಣವನ್ನು ಚಿಂತಿಸುವವನಿಗೆ ಮುಂದೆ ಹೇಳುವ ಫಲವಾಗುತ್ತದೆ.

ವಿದ್ಯುತ್ ವೃಷ್ಟಿಶ್ಚಶೀ ಭಾನುರಗ್ನಿಶ್ಚೇತಿ ಯತಃ ಶ್ರುತಿಃ |
ವಾಯೌ ಮ್ರಿಯನ್ತ ಇತ್ಯಾಹ ಪರಿಮರಸ್ತೇನ ಕೀರ್ತ್ಯತೇ ||
ಅನನ್ಯಶ್ಚಾಯಮಾಕಾಶೋ ವಾಯುನಾ ಬ್ರಹ್ಮಣಾ ಚ ಖಮ್ |
ದ್ವಿಷನ್ತಶ್ಚಾದ್ವಿಷನ್ತಶ್ಚ ಮ್ರಿಯನ್ತೇ ತಸ್ಯ ಶತ್ರವಃ ||

೬೩–೬೪. ಮಿಂಚು, ಮಳೆ, ಚಂದ್ರ, ಸೂರ್ಯ, ಅಗ್ನಿ– ಐದೂ ವಾಯುವಿನಲ್ಲಿ ಲಯವಾಗುತ್ತವೆ. ಆದ್ದರಿಂದ ವಾಯುವನ್ನು ಪರಿಮರವೆನ್ನುವರು. ಈ ವಾಯುವೂ ಆಕಾಶವೂ ಅನನ್ಯಗಳಾದ್ದರಿಂದ ಮತ್ತು ಆಕಾಶವು ಬ್ರಹ್ಮಕ್ಕಿಂತ

ಅನನ್ಯವಾದ್ದರಿಂದ ಬ್ರಹ್ಮವನ್ನೇ ಪರಿಮರವೆಂದು ಚಿಂತಿಸಬೇಕೆಂದು ಹೇಳಿದೆ. ಈ ಉಪಾಸಕನಿಗೆ ಇದರ ಫಲವಾಗಿ ಇವನನ್ನು ದ್ವೇಷಿಸುವ ಅಥವಾ ದ್ವೇಷಿಸದೆ ಇದ್ದರೂ ಶತ್ರುಗಳಾಗಿ ವರ್ತಿಸುವವರೆಲ್ಲರೂ ನಾಶವಾಗುತ್ತಾರೆ.

ಪ್ರಾಣೋ ವಾ ಅನ್ನಮಿತ್ಯಾದಿವಿಯದನ್ತಸ್ಯ ಪೂರ್ವಯಾ |
ಅನ್ನಾನ್ನಾದತ್ವಂ ಶ್ರುತ್ಯೋಕ್ತಂ ಕಾರ್ಯತ್ವಾತ್ ಸಂಹತಸ್ಯ ಹಿ |
ಅನ್ನಾನ್ನಾದತ್ವಮಸ್ಯೈವ ಕಥಂ ನಾಮ ಪ್ರತೀಯತೇ ||

೬೫. ಪ್ರಾಣೋ ವಾ ಅನ್ನಮ್-ಎಂಬುದರಿಂದಾರಂಭಿಸಿ ಆಕಾಶದವರೆಗಿನ ವಸ್ತುಗಳಿಗೆ ಅನ್ನಾನ್ನಾದತ್ವವನ್ನು ಶ್ರುತಿಯಲ್ಲಿ ಹೇಳಲಾಯಿತು. ಏಕೆಂದರೆ ಸಂಹತವಾದದ್ದೆಲ್ಲವೂ ಕಾರ್ಯವಾಗಿರುತ್ತದೆ. ಈ ಅನ್ನಾನ್ನಾದತ್ವವು ಕಾರ್ಯ ವಸ್ತುಗಳಿಗೇ ಹೊರತು (ಆತ್ಮನಿಗಲ್ಲ). ಆದರೆ ಭ್ರಾಂತಿಯಿಂದ ಇದು ಆತ್ಮನಲ್ಲಿ ಕಾಣಿಸಿಕೊಳ್ಳುತ್ತದೆ.

ಮಾ ಭೂದ್ ಬ್ರಹ್ಮಣಿ ತತ್ಸಕ್ತಿಃ ಮನೋವಾಚಾಮಗೋಚರೇ |
ಅವಿದ್ಯಾವಿಷಯಸ್ತಸ್ಮಾದ್ ಭೋಕ್ತೃಭೋಜ್ಯಾದಿಲಕ್ಷಣಃ |
ವ್ಯವಹಾರೋಽವಸೇಯಃ ಸ್ಯಾನ್ನ ತು ಸತ್ಯಾದಿಲಕ್ಷಣೇ ||

೬೬-೬೭. ಮನೋವಾಕ್ಕುಗಳಿಗೆ ಗೋಚರವಲ್ಲದ ಬ್ರಹ್ಮದಲ್ಲಿ (ಈ ಅನ್ನಾನ್ನಾದವ್ಯವಹಾರವು) ಸಂಭವಿಸದೆ ಇರಲೆಂದು ಹೀಗೆ ವಿಂಗಡಿಸಿ ಹೇಳಿದೆ. ಏಕೆಂದರೆ ಭೋಕ್ತೃಭೋಜ್ಯಾದಿವ್ಯವಹಾರಗಳು ಅವಿದ್ಯಾವಿಷಯಕವಾಗಿವೆ. ಅದು ಕಾರ್ಯಪ್ರಪಂಚದಲ್ಲೇ ಕಂಡುಬರಬೇಕೇ ಹೊರತು ಸತ್ಯಾದಿಲಕ್ಷಣವಾದ ಬ್ರ ಇರಲಾರದು.

ಅವಿದ್ಯೋತ್ಥಂ ದ್ವಯಾಭಾಸಂ ಭೋಜ್ಯಭೋಕ್ತೃತ್ವಲಕ್ಷಣಮ್ |
ಯತ್ರ ಹಿ ದ್ವೈತಮಿತ್ಯಾದ್ಯಾ ಶ್ರುತಿರ್ನಃ ಪ್ರತ್ಯಪೀಪದತ್ ||

೬೮. ಭೋಜ್ಯಭೋಕ್ತೃರೂಪವಾದ ದ್ವೈತಾಭಾಸವು ಅವಿದ್ಯೆಯಿಂದಾದದ್ದಾಗಿದೆ. ಈ ವಿಷಯವನ್ನು ನಮಗೆ 'ಯತ್ರ ಹಿ ದ್ವೈತಮಿವ' ಮುಂತಾದ ಶ್ರುತಿಯು ಪ್ರತಿಪಾದಿಸಿ ತೋರಿಸಿರುತ್ತದೆ.

ಯತ್ರ ತ್ವಸ್ಯೇತಿ ವಿಧ್ವಸ್ತಸರ್ವಾವಿದ್ಯಾತಿಲಕ್ಷಣೇ |
ನಿಷೇಧತಿ ಸದಾವಿದ್ಯಾಧ್ಯಸ್ತಂ ದ್ವೈತಮಿಹಾತ್ಮನಿ ||

೬೯. ಎಲ್ಲಾ ವಿಧವಾದ ಅವಿದ್ಯೆಯನ್ನೂ ಮೀರಿದ (ಬ್ರಹ್ಮದಲ್ಲಿ) 'ಯತ್ರ ತ್ವಸ್ಯ' ಎಂಬ ಶ್ರುತಿಯು ದ್ವೈತವನ್ನು ನಿಷೇಧಿಸುತ್ತಿದೆ-ಹೀಗೆ ಆತ್ಮನಲ್ಲಿ ದ್ವೈತವು ಯಾವಾಗಲೂ ಅಧ್ಯಸ್ತವಾಗಿಯೇ ಇದೆ.

ಏಕತ್ವಾಚ್ಚ ನ ಸಂಸಾರಃ ಕ್ರಿಯಾಕಾರಕಲಕ್ಷಣಃ |
ಕುತಸ್ತದಿತಿ ಚೇತ್ತತ್ರ ಸ ಯಶ್ಚಾಯಮಿತೀರ್ಯತೇ ||

೭೦. ಕ್ರಿಯಾಕಾರಕರೂಪವಾದ ಸಂಸಾರವು ಒಬ್ಬನೇ ಆಗಿರುವ ಆತ್ಮನಲ್ಲಿ ಹೊಂದುವಂತಿಲ್ಲ. ಅದೇಕೆ ? ಎಂದರೆ 'ಸ ಯಶ್ಚಾಯಂ' ಎಂದು ಈಗ ಹೇಳ ಲಾಗುವದು.

ಸಹ ಬ್ರಹ್ಮಣೇತಿ ಯಚ್ಚೋಕ್ತಂ ನಿರ್ಣಯಸ್ತಸ್ಯ ಸಾಂಪ್ರತಮ್
ಕಥಂ ನು ಸಕಲಾನ್ ಕಾಮಾನಶ್ನುತೇ ಯುಗಪದ್ ಬುಧಃ |
ಪ್ರತಿಪತ್ತ್ಯೈಽಸ್ಯಾರ್ಥಸ್ಯ ಶ್ರುತಿಃ ಪ್ರವವೃತೇ ಪರಾ

೭೧. 'ಬ್ರಹ್ಮದೊಡನೆ' ಎಂದು ಹಿಂದೆ ಹೇಳಿದ್ದರ ನಿರ್ಣಯವು ಈಗ ಪ್ರಸ್ತಾಪಿಸಲ್ಪಡುತ್ತದೆ. ಜ್ಞಾನಿಯು ಎಲ್ಲಾ ಕಾಮಗಳನ್ನೂ ಏಕಕಾಲದಲ್ಲಿ ಅನುಭವಿಸುತ್ತಾನೆಂದರೆ ಹೇಗೆ ? ಎಂಬಿದರ ತಿಳಿವಳಿಕೆಗಾಗಿ ಮುಂದಿನ ಶ್ರುತಿಯು ಹೊರಟಿರುತ್ತದೆ.

ನ ಸಹಾರ್ಥೇ ತೃತೀಯೇಯಂ ನ್ಯಾಯೋಽತ್ರ ಪ್ರಾಕ್ ಸಮೀರಿತಃ |
ಯತೋಽತೋಽತ್ರ ತೃತೀಯೇಯಂ ಗ್ರಾಹ್ಯೇತ್ಥಂ ಭೂತಲಕ್ಷಣಾ ||

೭೨. 'ಬ್ರಹ್ಮಣಾ ಸಹ' ಎಂಬಲ್ಲಿ ಸಹಾರ್ಥದಲ್ಲಿ ತೃತೀಯಾವಿಭಕ್ತಿಯು ಬಂದಿರುವದಿಲ್ಲ. ಈ ವಿಷಯದಲ್ಲಿ ಹಿಂದೆ ನ್ಯಾಯವನ್ನು ಹೇಳಲಾಗಿದೆ. ಹೀಗಿರು ವದರಿಂದ ಇಲ್ಲಿ ಇತ್ಥಂಭೂತಲಕ್ಷಣಾರ್ಥದಲ್ಲಿ ತೃತೀಯಾವಿಭಕ್ತ್ಯರ್ಥವನ್ನು ಗ್ರಹಿಸಬೇಕು.

ಹೇತ್ವರ್ಥಾ ವಾ ಭವೇದೇಷಾ ತೃತೀಯಾ ಬ್ರಹ್ಮಣೇತಿ ಯಾ |
ಸರ್ವಕಾಮಾಶನಂ ಯಸ್ಮಾತ್ ಬ್ರಹ್ಮಣ್ಯೇವೋಪಪದ್ಯತೇ ||

೭೩. ಅಥವಾ ಈ ತೃತೀಯಾವಿಭಕ್ತಿಯು ಹೇತ್ವರ್ಥದಲ್ಲಿ ಬಂದಿದೆ-ಎಂದಾದರೂ ಆಗಬಹುದು. ಏಕೆಂದರೆ ಎಲ್ಲಾ ಕಾಮಗಳನ್ನೂ ಒಟ್ಟಿಗೆ ಅನುಭವಿ ಸುವದೆಂಬುದು ಬ್ರಹ್ಮವೇ ತಾನಾದಲ್ಲಿ ಮಾತ್ರ ಹೊಂದುತ್ತದೆ.

ನಿರಾತ್ಮಕಸ್ಯ ಸರ್ವಸ್ಯ ಬ್ರಹ್ಮಾತ್ಮಾ ಯೇನ ತತ್ಪರಮ್ |
ಸತ್ಯಜ್ಞಾನಾದಿರೂಪತ್ವಾತ್ತದೇತದಧುನೋಚ್ಯತೇ ||

೭೪. ನಿರಾತ್ಮಕವಾದ ಎಲ್ಲಕ್ಕೂ ಬ್ರಹ್ಮವೇ ಆತ್ಮನು. ಆದ್ದರಿಂದ ಅದು ಹೆಚ್ಚಿನದೆನಿಸಿದೆ. ಹಾಗೂ ಸತ್ಯಜ್ಞಾನಾದಿರೂಪವಾಗಿದೆ. ಅದನ್ನೇ ಈಗ ಹೇಳ ಲಾಗುವದು.

ಸ ಯಶ್ಚಾಯಮಿತಿ ಹ್ಯುಕ್ತಿಃ ಅನ್ನಾನ್ನಾದಾದಿಕಸ್ಯ ಹಿ |
ಗ್ರಂಥಸ್ಯ ಗ್ರಸನಾರ್ಥಾಯ ಬ್ರಹ್ಮವಿದ್ಯಾಪರಸ್ಯ ತು ||

೭೫. ಅನ್ನಾನ್ನಾದಿರೂಪವಾದ ಜಗತ್ತಿನ ಗ್ರಸನವೆಂದರೆ ಜ್ಞಾನಬಲದಿಂದ ಬಾಧಿಸುವಿಕೆಯು- ಪ್ರಕೃತವಾದ್ದರಿಂದ 'ಸ ಯಶ್ಚಾಯಂ' ಎಂಬ ಮಾತು ಬ್ರಹ್ಮವಿದ್ಯಾಪ್ರಕಾಶನಪರವಾಗಿ ಬಂದಿರುವದು.

ಸಂಕ್ರಮ್ಯ ವಿದ್ಯಯಾ ಸರ್ವಾನವಿದ್ಯೋತ್ಥಾನನಾತ್ಮನಃ |
ಆತ್ಮನಾತ್ಮಾನಮಾಪನ್ನಃ ಸತ್ಯಾದ್ಯದೃಶ್ಯಾದಿಲಕ್ಷಣಮ್ ||

೭೬. ಅವಿದ್ಯೆಯಿಂದ ಹೊರತೋರಿಕೊಂಡಿದ್ದ ಅನಾತ್ಮಗಳೆಲ್ಲವನ್ನೂ ವಿದ್ಯೆಯಿಂದ ದಾಟಿ ತಾನೇ ತಾನಾಗಿ ನೆಲೆನಿಂತವನಾಗಿ ಸತ್ಯಜ್ಞಾನಾದಿ ಹಾಗೂ ಅದೃಶ್ಯತ್ವಾದಿಲಕ್ಷಣಗಳ ಬ್ರಹ್ಮವಾಗಿ ಆಗುವನು.

ಉತ್ಕೃಷ್ಟೇತರಹೀನಃ ಸನ್ ಇಮಾನ್ ಲೋಕಾನ್ ಕ್ರಿಯೋದ್ಭವಾನ್ |
ಕಾಮಾನ್ನೀ ಕಾಮರೂಪೀ ಸನ್ ಉಪಾಧೀನನುಸಂಚರನ್ ||

೭೭. ಉತ್ಕರ್ಷಾಪಕರ್ಷಗಳಿಲ್ಲದವನಾಗಿ ಕರ್ಮಗಳಿಂದಾದ ಈ ಲೋಕಗಳನ್ನು ಕಾಮಾನ್ನವುಳ್ಳವನಾಗಿಯೂ ಕಾಮರೂಪಿಯಾಗಿಯೂ ಪ್ರತಿಭಾಸಮಾನವಾದ ಉಪಾಧಿಗಳನ್ನು ಅನುಸರಿಸಿ ಸಂಚರಿಸುವನು.

ನ ಹಿ ಸಂಚರಣಂ ಸಾಕ್ಷಾದ್ ಬ್ರಹ್ಮಣೋಽಸ್ತ್ಯವಿಕಾರಿಣಃ |
ಯತ್ರ ಹಿ ಧ್ಯಾಯತೀವೇತಿ ತಥಾ ಚ ಶ್ರುತಿಶಾಸನಮ್ ||

೭೮. ಅವಿಕಾರಿಯಾದ ಬ್ರಹ್ಮಕ್ಕೆ ಸಾಕ್ಷಾತ್ತಾಗಿ ಯಾವ ಸಂಚಾರವೂ ಇಲ್ಲ. ಹಾಗೆಂದೇ 'ಯತ್ರ ಹಿ ದ್ವೈತಮಿವ' ಎಂದೂ 'ಧ್ಯಾಯತೀವ' ಎಂದೂ ಶ್ರುತಿಯಲ್ಲಿ ಇವಕಾರದಿಂದ ಕ್ರಿಯಾದಿಗಳಿಲ್ಲವೆಂದು ಶ್ರುತಿಯಲ್ಲಿ ತಿಳಿಸಿದೆ.

ಸರ್ವಾತ್ಮತ್ವಾದಿಮಾನ್ ಲೋಕಾನ್ ಪಶ್ಯನ್ನಾತ್ಮತಯಾ ಬುಧಃ |
ಏತದ್ ಬ್ರಹ್ಮ ಸಮಂ ಸಾಮ ಗಾಯನ್ನಾಸ್ತೇ ಕೃತಾರ್ಥತಃ ||

೭೯. ಜ್ಞಾನಿಯು ಸರ್ವಾತ್ಮನಾಗಿಬಿಡುವದರಿಂದ ಈ ಎಲ್ಲಾ ಲೋಕಗಳನ್ನೂ ಆತ್ಮನಾಗಿಯೇ ಕಂಡುಕೊಂಡವನಾಗಿ ಬ್ರಹ್ಮವು ಸಮವೆಂದು ಅರಿತು (ತಾನೂ ಬ್ರಹ್ಮನಾಗಿ) ಕೃತಾರ್ಥನಾದವನಾಗಿ ಈ ಸಾಮವನ್ನು ಹಾಡುತ್ತಿರುವನು.

ದ್ವೇಧಾ ಭಿನ್ನಮಿದಂ ಸರ್ವಮನ್ನಮನ್ನಾದ ಏವ ಚ |
ಸತ್ಯಾದ್ಯದೃಶ್ಯಾದಿರೂಪಾತ್ಮಾ ಅಹಮೇವೈತದೀಕ್ಷ್ಯತಾಮ್ ||

೮೦. ಇದೆಲ್ಲವೂ ಅನ್ನ–ಅನ್ನಾದ–ಎಂಬ ರೂಪದಿಂದ ಎರಡು ವಿಧವಾಗಿ ಕಾಣುತ್ತಿರುವದು. ಇದು ನಿಜವಾಗಿ ಸತ್ಯವೂ, ಅದೃಶ್ಯವೂ ಆದ ಆತ್ಮನೇ, ಅದೇ ನಾನು– ಹೀಗೆಂದು ಕಂಡುಕೊಳ್ಳಿರಿ.

ತಯೋಃ ಶ್ಲೋಕಸ್ಯ ಸಂಬಂಧೋ ಭೋಜ್ಯಭೋಕ್ತೃತ್ವಲಕ್ಷಣಃ |
ಅಹಮೇವ ಯಥೋಕ್ತಾತ್ಮಾ ನ ಮತ್ತೋಽನ್ಯಃ ತತೋಽಸ್ತಿ ಹಿ ||

೮೧. ಭೋಜ್ಯಭೋಕ್ತೃಗಳ ರೂಪವಾದ ಅವೆರಡರ ಸಂಬಂಧವೂ ಶ್ಲೋಕವೂ ನಾನೇ. ಹಿಂದೆ ಹೇಳಿದ ಲಕ್ಷಣವುಳ್ಳ ಆತ್ಮನು ನಾನೇ. ನನಗಿಂತ ಬೇರೆ ಯಾರೂ ಇರುವದೇ ಇಲ್ಲ.

ಕ್ರಿಯಾಕಾರಕನಿರ್ಮುಕ್ತಂ ಪಶ್ಯನ್ನಾತ್ಮಾನಮಾತ್ಮನಿ |
ತ್ರಿರಹೋ ಇತಿ ಭವೇತ್ ಸ್ತೋಭೋ ವಿಸ್ಮಯಾರ್ಥಸ್ಯ ಸ ಸ್ಮೃತಃ ||

೮೨. ಕ್ರಿಯಾಕಾರಕರಹಿತವಾದ ಬ್ರಹ್ಮವು ತಾನೇ ಎಂದು ತನ್ನಲ್ಲಿ ಕಂಡುಕೊಂಡು 'ಹಾ' ಎಂದು ಅಹೋ-ಎಂಬರ್ಥದಲ್ಲಿ ಮೂರುಬಾರಿ ಹಾಡಿರುತ್ತಾನೆ. ಇದು ಸ್ತೋಭವೆನಿಸುತ್ತದೆ. ಇದಕ್ಕೆ ವಿಸ್ಮಯಾರ್ಥವೂ ಇದೆ.

ತ್ರಿರುಕ್ತಿಶ್ಚಾದರಾರ್ಥೇಯಮಹಮನ್ನಮಿತೀಷ್ಯತೇ |
ಅಶ್ರದ್ದಧಾನಲೋಕಸ್ಯ ಪ್ರತಿಪತ್ತ್ಯರ್ಥಮುಚ್ಯತೇ ||

೮೩. ಮೂರುಮೂರು ಬಾರಿ ಹೇಳಿರುವ 'ಅಹಮನ್ನಮ್' ಇತ್ಯಾದಿ ಉಕ್ತಿಗಳು ಆದರಾರ್ಥವಾಗಿ ಬಂದಿವೆ. ಇವು ಶ್ರದ್ಧೆಯಿಲ್ಲದವರಿಗೆ ನಂಬಿಕೆಯನ್ನುಂಟುಮಾಡಲು ಹೇಳಿರುವವುಗಳಾಗಿವೆ.

ಮೂರ್ತಾಮೂರ್ತಾತ್ಮಕಸ್ಯಾಸ್ಯ ಹ್ಯನ್ನಾನ್ನಾದತ್ವರೂಪಿಣಃ |
ಅತದ್ವಾನಗ್ರಜೋಽಹಂ ವೈ ನ ತದಶ್ನಾತಿ ಹಿ ಶ್ರುತಿಃ ||

೮೪. ಮೂರ್ತಾಮೂರ್ತಾತ್ಮಕವೂ ಅನ್ನಾನ್ನಾದರೂಪವೂ ಆಗಿರುವ ಈ ಪ್ರಪಂಚಕ್ಕಿಂತ ಹಿರಿಯನಾದ ನಾನು (ಜ್ಞಾನಿಯು) ಆ ಸಂಸಾರಧರ್ಮಗಳಿಲ್ಲದವನಾಗಿರುವೆನು. 'ನ ತದಶ್ನಾತಿ' ಎಂಬ ಶ್ರುತಿಯೂ ಬ್ರಹ್ಮವನ್ನು ಯಾವನೂ ತಿನ್ನಲಾರನೆಂದು ತಿಳಿಸುತ್ತಿರುವದು.

ದೇವೇಭ್ಯಃ ಪೂರ್ವಮೇವಾಹಂ ನಾಭಿರಸ್ಮ್ಯಮೃತಸ್ಯ ಚ |
ಕಾರಣತ್ವಾತ್ ಭವೇನ್ನಾಭಿರ್ಮನ್ನಿಷ್ಠಾ ವಾಽಮೃತಾತ್ಮತಾ ||

೮೫. ನಾನು ದೇವತೆಗಳಿಗಿಂತ ಹಿಂದಿನವನಾಗಿರುವೆನು. ಅಮೃತಕ್ಕೆ ನಾಭಿ ಎಂದರೆ ಮುಖ್ಯಸ್ಥಾನನಾಗಿರುವೆನು. ಏಕೆಂದರೆ ನಾನು ಎಲ್ಲರಿಗೂ ಕಾರಣನಾಗಿರುವದರಿಂದಲೂ ಅಮೃತತ್ವವು ನನ್ನಲ್ಲಿರುವದರಿಂದಲೂ ಹೀಗೆನ್ನುತ್ತೇನೆ.

ಅದತ್ವಾನ್ನಂ ತು ಪಾತ್ರೇಭ್ಯೋ ಯೋ ಮಾಮಶ್ನಾತಿ ಘಸ್ಮರಃ |
ಅಹಮನ್ನಮದಂತಂ ತಂ ಪ್ರತ್ಯದ್ಮೀಹಾನ್ನಮನ್ನರಮ್ ||

೮೬. ಯೋಗ್ಯರಾದವರಿಗೆ ಅನ್ನದಾನಮಾಡದೆ ಯಾವ ತಿಂಡಿಪೋತನು ನನ್ನನ್ನು ತಿನ್ನುತ್ತಾನೋ ಹಾಗೆ ತಿನ್ನುವ ಆ ನರನನ್ನು ನಾನು ಅನ್ನದಂತೆ ಮತ್ತೆ ತಿಂದುಹಾಕುವೆನು.

ಯೋ ಮಾಂ ದದಾತಿ ಪಾತ್ರೇಭ್ಯೋ ದೇಶಕಾಲಸಮನ್ವಿತಮ್ |
ದದದಿತ್ಥಮಸಾವನ್ನಂ ಮಾಮವತ್ಯೇವ ಸರ್ವದಾ ||

೮೭. ಯಾವನು ನನ್ನನ್ನು ದೇಶಕಾಲಗಳೊಡನೆ-ಎಂದರೆ ಸರಿಯಾದ ದೇಶ-ಸಮಯ ಹಾಗೂ ಪಾತ್ರಗಳಲ್ಲಿ ದಾನಮಾಡುವನೋ-ಅವನು ಹೀಗೆ ದಾನಮಾಡುವ ಮೂಲಕ ಯಾವಾಗಲೂ ನನ್ನನ್ನು ಕಾಪಾಡುವವನಾಗುವನು.

ಸತ್ಯಜ್ಞಾನಾದಿರೂಪೋಽಹಮವಿದ್ಯೋತ್ಥಮಶೇಷತಃ ।
ಅಹಂ ಹ್ಯಭಿಭವಾಮ್ಯೇಕೋ ದಿನಕೃಚ್ಛಾರ್ವರಂ ಯಥಾ ॥

೮೮. ಸತ್ಯಜ್ಞಾನಾದಿರೂಪನಾದ ನಾನು ಅವಿದ್ಯೆಯಿಂದ ತೋರಿದ್ದ ದ್ವೈತವನ್ನೆಲ್ಲ– ಹೇಗೆ ಸೂರ್ಯನು ರಾತ್ರಿಯ ಕತ್ತಲೆಯನ್ನು ಕಳೆಯುವನೋ ಹಾಗೆ– ನಾನೊಬ್ಬನೇ ಎದುರಿಸುವೆನು, ಹಿಮ್ಮೆಟ್ಟಿಸುವೆನು.

ಧ್ಯಾನೈಕತಾನನಿಬಿಡಾಹಿತಚೇತಸೋಽಜಂ
ಪ್ರಧ್ವಸ್ತಕೃತ್ಸ್ನನಿಜಮೋಹಸಮಸ್ತದೋಷಮ್ ।
ಪ್ರತ್ಯಕ್ತಯಾ ಶುಭಧಿಯೋ ಯತಯೋಽಭ್ಯುಪೇತ್ಯ
ಯಂ ದೇವಮೇಕಮಮಲಂ ಪ್ರವಿಶನ್ತಿ ಸೋಽವ್ಯಾತ್ ॥

೮೯. ಅಜನೂ ಆತ್ಮವಿಷಯಕವಾದ ಅಜ್ಞಾನವೇ ಮೊದಲಾದ ಸಮಸ್ತ ದೋಷಗಳನ್ನೂ ನಾಶಗೊಳಿಸಿದವನೂ ಆದ, ಏಕನೂ ಪರಿಶುದ್ಧನೂ ಆಗಿರುವ ಯಾವ ದೇವನನ್ನು ಧ್ಯಾನನಿಷ್ಠರಾದ ಹಾಗೂ ದೃಢವಾದ ಚಿತ್ತದಿಂದ (ಬ್ರಹ್ಮದಲ್ಲಿ) ನೆಲೆಗೊಂಡಿರುವವರೂ ಆದ, ಶುಭಮತಿಗಳಾದ ಯತಿಗಳು ಬಳಿಸಾರಿದವರಾಗಿ ಅವನನ್ನೇ ಪ್ರವೇಶಿಸುವರೋ ಆ ದೇವನು (ನಮ್ಮನ್ನು) ಕಾಪಾಡಲಿ.

ತೈತ್ತಿರೀಯಕಸಾರಸ್ಯ ವಾರ್ತಿಕಾಮೃತಮುತ್ತಮಮ್ ।
ಮಸ್ಕರೀಂದ್ರಪ್ರಣೀತಸ್ಯ ಭಾಷ್ಯಸ್ಯೈತದ್ವಿವೇಚನಮ್ ॥

೯೦. ತೈತ್ತಿರೀಯೋಪನಿಷತ್ತಿನ ವಿವರಣರೂಪವಾದ ಈ ವಾರ್ತಿಕಾಮೃತವು ಸಂನ್ಯಾಸಿಶ್ರೇಷ್ಠರಾದ (ಶ್ರೀಶಂಕರಭಗವತ್ಪಾದರ) ಭಾಷ್ಯವನ್ನು ಕುರಿತ ವಿವೇಚನರೂಪವಾಗಿದೆ.

ಮುಮುಕ್ಷುಸಾರ್ಥವಾಹಸ್ಯ ಭವನಾಮಭೃತೋ ಯತೇಃ ।
ಶಿಷ್ಯಶ್ಚಕಾರ ತದ್ಭಕ್ತ್ಯಾ ಸುರೇಶಾಖ್ಯೋ ಮಹಾರ್ಥವಿತ್ ॥

೯೧. ಮುಮುಕ್ಷುಗಳ ಗುಂಪಿನ ಯಜಮಾನನೂ ಪರಮೇಶ್ವರನ ಹೆಸರನ್ನು ಧರಿಸಿರುವವನೂ ಯತಿಯೂ ಆದ ಶ್ರೀಶಂಕರಾಚಾರ್ಯರ ಶಿಷ್ಯನಾದ ಮಹಾರ್ಥವಿದನಾದ ಸುರೇಶ್ವರನೆಂಬವನು ಆ ಗುರುವಿನಲ್ಲಿ ಭಕ್ತಿಯುಳ್ಳವನಾಗಿ ಈ ಗ್ರಂಥವನ್ನು ರಚಿಸಿದನು.

ಇತಿ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯ ಶ್ರೀಮಚ್ಛಂಕರ
ಭಗವತ್ಪೂಜ್ಯಪಾದಶಿಷ್ಯಸ್ಯ ಶ್ರೀಮತ್ಸುರೇಶ್ವರಾಚಾರ್ಯಸ್ಯ
ಕೃತಿಷು ತೈತ್ತಿರೀಯಕೋಪನಿಷದ್ಭಾಷ್ಯವಾರ್ತಿಕಂ
ಸಂಪೂರ್ಣಮ್

ಓಂ ತತ್ಸತ್